ಹುಬ್ಬಳ್ಳಿ
ಬುಧವಾರ, 24 ಜೂನ್ 2026
ಸಂಪುಟ 16, ಸಂಚಿಕೆ 91, ಪುಟಗಳು 14
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಜುಲೈನಲ್ಲಿ ಭಾರತ-ಅಮೆರಿಕ ಬಿಟಿಎ ಅಂತಿಮ | ೦೭
2030ರೊಳಗೆ ಇವಿ ಸ್ವದೇಶೀಕರಣ | ೦೭
ವಿಶ್ವಕಪ್‌ನಲ್ಲಿ 18 ಗೋಲು, ಮೆಸ್ಸಿ ದಾಖಲೆ | ೧೧

ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ದಶಮಿ, ನಕ್ಷತ್ರ: ಚಿತ್ರೆ

ದಿನದ ಮಾತು

ಅಹಿಂಸೆ, ಸತ್ಯ, ಆಸ್ತೇಯ, ನೈರ್ಮಲ್ಯ, ಇಂದ್ರಿಯ ನಿಗ್ರಹ- ಈ ಎಲ್ಲರೂ ಆಚರಿಸಬೇಕಾದ ಧರ್ಮ.
▲ಮನುಸ್ಮೃತಿ

ಭಾರತೀಯ ದರ್ಶನಗಳಲ್ಲಿ ಜಗತ್ತಿನ ಸ್ವರೂಪ
ಪದ ಸಂಚಲನ
◆ ಡಾ.ವಿಶ್ವನಾಥ ಸುಂಕಸಾಳ
◆ ಪುಟ ೬

ಕಿರುಸುದ್ದಿ

ಇಂದು ಬೆಂಗಳೂರಿಗೆ ಸಿಎಂ ಯೋಗಿ ಆದಿತ್ಯನಾಥ್

◆ **ಬೆಂಗಳೂರು:** ಉತ್ತರ ಪ್ರದೇಶದಲ್ಲಿ ಹೂಡಿಕೆ ಹಾಗೂ ವ್ಯವಹಾರ ಅವಕಾಶಗಳ ಕುರಿತು ಉದ್ಯಮಿಗಳನ್ನು ಆಕರ್ಷಿಸುವ ಸಲುವಾಗಿ ರೋಡ್ ಶೋನಲ್ಲಿ ಭಾಗವಹಿಸಿಲು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ರಾಜ್ಯಕ್ಕೆ ಬುಧವಾರ ಸಂಜೆ ಆಗಮಿಸಲಿದ್ದಾರೆ.
➡ಪುಟ ೪

ಕೇಂದ್ರ ಸಚಿವ ಜಾರ್ಜ್ ಕುರಿಯನ್ ರಾಜೀನಾಮೆ

◆ **ಕೊಟ್ಟಾಯಂ:** ಜಾರ್ಜ್ ಕುರಿಯನ್ ರಾಜ್ಯಸಭಾ ಅವಧಿ ಕೊನೆಗೊಂಡಿದ್ದು, ಮಂಗಳವಾರ ಕೇಂದ್ರ ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. ಕೇರಳದ ಹಿರಿಯ ಬಿಜೆಪಿ ನಾಯಕ ಕುರಿಯನ್ ಸಲ್ಲಿಸಿದ ರಾಜೀನಾಮೆ ಪತ್ರವನ್ನು ರಾಷ್ಟ್ರಪತಿ ಸ್ವೀಕರಿಸಿದ್ದಾರೆ. ಕೇಂದ್ರ ಸಂಪುಟದಿಂದ ಹೊರಬಂದ ಕುರಿಯನ್ ಬಿಜೆಪಿ ಹೈಕಮಾಂಡ್‌ಗಾಗಿ ಕೇರಳದಲ್ಲಿ ಸೇವೆ ಸಲ್ಲಿಸುವ ಸಾಧ್ಯತೆಯಿದೆ.

ಸದಾ ಸುದ್ದಿಯಲ್ಲಿರಲು ಪ್ರಿಯಾಂಕ್ ಖರ್ಗೆ ಆರೆಸ್ಸೆಸ್ ಬಗ್ಗೆ ಮಾತು: ಶೋಭಾ
◆ ಪುಟ ೫

ಭಾರತದತ್ತ ತೈಲ, ಅನಿಲ ಹೊತ್ತ 11 ನೌಕೆಗಳು
◆ ಪುಟ ೭

ಕತಾರ್ ಸ್ಫೋಟ: ಮೃತರಲ್ಲಿ 12 ಭಾರತೀಯರು
◆ ಪುಟ ೭

ನಮ್ಮ ಗೈಡ್ ಆನ್‌ಲೈನ್ ವೇದಿಕೆ ಆರಂಭಕ್ಕೆ ಚಿಂತನೆ
◆ ಪುಟ ೫



ಲಯನ್ಸ್ ರೇಂಜ್ ಮತ್ತೆ ಅಬ್ಬರ?
◆ ಪುಟ ೭
ಸುದ್ದಿ ಸಮಗ್ರ

ಎಫ್‌ಸಿಆರ್‌ಎ ಹೊಸ ನೀತಿ | ಎನ್‌ಜಿಒಗಳಿಗೆ ಕೇಂದ್ರದ ಬಿಗಿ ಕ್ರಮ

ವಿದೇಶಿ ದೇಣಿಗೆಯಲ್ಲಿ ಮತಾಂತರಕ್ಕೆ ಅಂಕುಶ

◆ **ಹೊಸದಿಲ್ಲಿ:** ವಿದೇಶಿ ದೇಣಿಗೆ ಬಳಸಿಕೊಂಡು ಮತಾಂತರ ಅಥವಾ ಮತಪ್ರಚಾರ ಚಟುವಟಿಕೆ ನಡೆಸುವುದಕ್ಕೆ ಕಡಿವಾಣ ಹಾಕಿರುವ ಕೇಂದ್ರ ಸರಕಾರ, ಸ್ವಯಂಸೇವಾ ಸಂಸ್ಥೆಗಳು ಹಾಗೂ ಇತರ ಸಂಘಟನೆಗಳಿಗೆ ವಿದೇಶಿ ನಿಧಿ ಸ್ವೀಕಾರ ಮತ್ತು ಬಳಕೆಯ ನಿಯಮಗಳನ್ನು ಮತ್ತಷ್ಟು ಬಿಗಿಗೊಳಿಸಿದೆ.

ಕೇಂದ್ರ ಗೃಹ ಸಚಿವಾಲಯವು ಸೋಮವಾರ ಗೆಜೆಟ್‌ನಲ್ಲಿ ಪ್ರಕಟಿಸಿರುವ ವಿದೇಶಿ ದೇಣಿಗೆ ನಿಯಂತ್ರಣ ತಿದ್ದುಪಡಿ ನಿಯಮಗಳು-2026ರ ಪ್ರಕಾರ, ಧಾರ್ಮಿಕ, ಸಾಂಸ್ಕೃತಿಕ, ಆರ್ಥಿಕ, ಶೈಕ್ಷಣಿಕ ಮತ್ತು ಸಾಮಾಜಿಕ ವಲಯಗಳಿಗೆ ಸಂಬಂಧಿಸಿದ ಒಟ್ಟು 105 ನಿರ್ದಿಷ್ಟ ಚಟುವಟಿಕೆಗಳಿಗೆ ಮಾತ್ರ ವಿದೇಶಿ ಹಣ ಬಳಸಬಹುದಾಗಿದೆ. ಆದರೆ ಧಾರ್ಮಿಕ ಮತಾಂತರ,



ಮತಪ್ರಚಾರ ಅಥವಾ ಅನ್ಯಮತಕ್ಕೆ ಸೆಳೆಯುವ ಯಾವುದೇ ಚಟುವಟಿಕೆಗೆ ವಿದೇಶಿ ನಿಧಿ ಬಳಸುವಂತಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ.

ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಯಲ್ಲಿ ವಿದೇಶಿ ಹಣ ಪಡೆಯಲು ಬಯಸುವ ಪ್ರತಿ ಸಂಘಟನೆಗೂ ಕೇಂದ್ರ ಗೃಹ ಸಚಿವಾಲಯದ ನೋಂದಣಿ ಅಥವಾ ಪೂರ್ವಾನುಮತಿ ಕಡ್ಡಾಯವಾಗಿದೆ. ಇನ್ನು ಮುಂದೆ ಪರವಾನಗಿಗಾಗಿ ಅರ್ಜಿ ಸಲ್ಲಿಸುವ ಸಂಸ್ಥೆಗಳು ತಾವು ವಿದೇಶಿ ಹಣವನ್ನು ಯಾವ ಉದ್ದೇಶಕ್ಕೆ ಮತ್ತು ಯಾವ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿ ವೆಚ್ಚ ಮಾಡಲಿವೆ ಎಂಬುದನ್ನು ನಿರ್ದಿಷ್ಟವಾಗಿ ತಿಳಿಸಬೇಕಾಗಿದೆ.
➡ಪುಟ ೪

ವಿದೇಶಿಯರು ಪ್ರಮುಖ ಹುದ್ದೆಯಲ್ಲಿದ್ದರೆ ಪರವಾನಗಿ ಕಷ್ಟ

ಭಾರತೀಯ ಮೂಲದವರನ್ನು ಹೊರತುಪಡಿಸಿ ವಿದೇಶಿ ಪ್ರಜೆಗಳನ್ನು ಪ್ರಮುಖ ಪದಾಧಿಕಾರಿಗಳು ಅಥವಾ ನಿರ್ವಹಣಾ ಮುಖ್ಯಸ್ಥರನ್ನಾಗಿ ಹೊಂದಿರುವ ಸಂಘಟನೆಗಳನ್ನು ವಿದೇಶಿ ದೇಣಿಗೆ ನೋಂದಣಿ ಅಥವಾ ಪೂರ್ವಾನುಮತಿಗಾಗಿ ಸಾಮಾನ್ಯವಾಗಿ ಪರಿಗಣಿಸಲಾಗುವುದಿಲ್ಲ ಎಂದು ನಿಯಮಗಳಲ್ಲಿ ತಿಳಿಸಲಾಗಿದೆ.
➡ಪುಟ ೪

105
ಚಟುವಟಿಕೆಗಳಿಗೆ ಮಾತ್ರ ವಿದೇಶಿ ನಿಧಿ ಬಳಕೆ
- ಹಣದ ಉದ್ದೇಶ, ಕಾರ್ಯ ನಿರ್ವಹಿಸುವ ರಾಜ್ಯದ ವಿವರ ಕಡ್ಡಾಯ
- ನಿಷ್ಕ್ರಿಯ ಸಂಸ್ಥೆಗಳ ಪರವಾನಗಿ ರದ್ದತಿಗೆ ಕನಿಷ್ಠ ವೆಚ್ಚದ ಮಿತಿ



ಐದು ವಿಭಾಗಗಳಲ್ಲಿ 105 ಚಟುವಟಿಕೆ

ವಿದೇಶಿ ಹಣ ಪಡೆಯಲು ಅರ್ಜಿ ಸಲ್ಲಿಸುವ ಸಂಸ್ಥೆಗಳು ಹೊಸ ನಿಯಮಗಳಲ್ಲಿ ಪಟ್ಟಿ ಮಾಡಿರುವ ಚಟುವಟಿಕೆಗಳನ್ನಷ್ಟೇ ಆಯ್ಕೆ ಮಾಡಬೇಕು.


ಧಾರ್ಮಿಕ ಚಟುವಟಿಕೆಗಳು	16
ಸಾಂಸ್ಕೃತಿಕ ಚಟುವಟಿಕೆಗಳು	18
ಆರ್ಥಿಕ ಚಟುವಟಿಕೆಗಳು	19
ಶೈಕ್ಷಣಿಕ ಚಟುವಟಿಕೆಗಳು	22
ಸಾಮಾಜಿಕ ಚಟುವಟಿಕೆಗಳು	30

ಶೇ.75 ಬಳಕೆ ಬಳಿಕ ಮುಂದಿನ ಕಂತು

ಪೂರ್ವಾನುಮತಿಯಲ್ಲಿ ವಿದೇಶಿ ಹಣ ಪಡೆಯುವ ಸಂಸ್ಥೆಗಳಿಗೆ 2ನೇ ಅಥವಾ ನಂತರದ ಕಂತನ್ನು ಬಿಡುಗಡೆ ಮಾಡುವ ಮುನ್ನ ಹಿಂದಿನ ಕಂತಿನ ಕನಿಷ್ಠ ಶೇ.75ರಷ್ಟು ಹಣ ಬಳಸಿರುವುದು ಕಡ್ಡಾಯ.
➡ಪುಟ ೪

ಎರಡು ವರ್ಷದಲ್ಲಿ ಕನಿಷ್ಠ 10 ಲಕ್ಷ ರೂ. ವೆಚ್ಚ ಕಡ್ಡಾಯ

ನಿಷ್ಕ್ರಿಯ ಸ್ವಯಂಸೇವಾ ಸಂಸ್ಥೆಗಳು ವಿದೇಶಿ ದೇಣಿಗೆ ಪರವಾನಗಿಯನ್ನು ಅನಿರ್ದಿಷ್ಟವಾಗಿ ಉಳಿಸಿಕೊಳ್ಳುವುದನ್ನು ತಡೆಯಲು ಕೇಂದ್ರ ಸರಕಾರ ಕನಿಷ್ಠ ವೆಚ್ಚದ ಮಿತಿ ಜಾರಿಗೊಳಿಸಿದೆ. ಪರವಾನಗಿ



ನವೀಕರಿಸಿಕೊಳ್ಳಲು ಅಥವಾ ಪರವಾನಗಿ ರದ್ದಾಗುವುದನ್ನು ತಪ್ಪಿಸಿಕೊಳ್ಳಲು ಸಂಸ್ಥೆಯು ಕಳೆದ ಎರಡು ಹಣಕಾಸು ವರ್ಷಗಳಲ್ಲಿ ಕನಿಷ್ಠ 10 ಲಕ್ಷ ರೂ. ವಿದೇಶಿ ದೇಣಿಗೆಯನ್ನು ತಾನು ಆಯ್ಕೆ ಮಾಡಿಕೊಂಡಿರುವ ಅನುಮೋದಿತ ಚಟುವಟಿಕೆಗಳಿಗೆ ವೆಚ್ಚ ಮಾಡಿರಬೇಕು.

ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಭೇಟಿಯಾದ ರಾಜ್ಯ ನಾಯಕರ ತಂಡ

ಬಿಜೆಪಿ ವರಿಷ್ಠರಿಗೆ ಅಡ್ಡ ಮತದಾನದ ಮಾಹಿತಿ

◆ **ಬೆಂಗಳೂರು:** ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿ ಶಾಸಕರು ಅಡ್ಡ ಮತದಾನ ಮಾಡಿರುವ ವಿಷಯ ಈಗ ಬಿಜೆಪಿ ವರಿಷ್ಠರ ಅಂಗಳ ತಲುಪಿದೆ. ಬಿಜೆಪಿ ರಾಜ್ಯ ನಾಯಕರ ತಂಡ ಮಂಗಳವಾರ ದಿಲ್ಲಿಯಲ್ಲಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರನ್ನು ಭೇಟಿಯಾಗಿದೆ.

ನಿತಿನ್ ನವೀನ್ ಅವರನ್ನು ಭೇಟಿ ಮಾಡಿದ ಬಿ.ವೈ. ವಿಜಯೇಂದ್ರ, ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ, ಚುನಾವಣಾ ಜವಾಬ್ದಾರಿ ವಹಿಸಿದ್ದ



ವಿಧಾನಪರಿಷತ್ ಪ್ರತಿಪಕ್ಷ ಮುಖ್ಯ ಸಚೇತಕ ಎನ್.ರವಿಕುಮಾರ್ ಅವರು ವಸ್ತುಸ್ಥಿತಿ ವಿವರಿಸಿದ್ದಾರೆ. ಕಳೆದ ಗುರುವಾರ ವಿಧಾನಸಭೆಯಿಂದ ವಿಧಾನಪರಿಷತ್ತಿಗೆ ನಡೆದ ಏಳು ಸ್ಥಾನಗಳ ದ್ವೈವಾರ್ಷಿಕ ಚುನಾವಣೆಯಲ್ಲಿ ಬಿಜೆಪಿಯಿಂದಲೂ ಅಡ್ಡ ಮತದಾನವಾಗಿದೆ. ಪಕ್ಷದ ಮೂರ್‍ನಾಲ್ಕು ಶಾಸಕರು ಪಕ್ಷದ ವಿಪ್ ಉಲ್ಲಂಘಿಸಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗೆ ಮತ ಚಲಾಯಿಸಿದ್ದಾರೆ. ಈ ಕುರಿತು ಈ ತಂಡ ತಮ್ಮದೇ ಮೂಲದಿಂದ ಸಂಗ್ರಹಿಸಿದ ಪ್ರಾಥಮಿಕ ವರದಿಯನ್ನು ರಾಷ್ಟ್ರೀಯ ಅಧ್ಯಕ್ಷರಿಗೆ ಸಲ್ಲಿಸಿದೆ.

ಮೂವರ ತಂಡದಿಂದ ವರದಿ: ಅಡ್ಡ ಮತದಾನದ ಕುರಿತು ಕೂಲಂಕಷವಾಗಿ ಪರಿಶೀಲಿಸಿ, ಸಮಗ್ರ ವರದಿ ನೀಡಲು ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ ಅವರ ನೇತೃತ್ವದಲ್ಲಿ ರಾಜ್ಯಾಧ್ಯಕ್ಷರು ಮೂವರ ತಂಡ ರಚಿಸಿದ್ದಾರೆ.
➡ಪುಟ ೪

> **ವಿಧಾನಪರಿಷತ್ ಚುನಾವಣೆಯಲ್ಲಿ ಬಿಜೆಪಿಯವರಿಂದ ಅಡ್ಡ ಮತದಾನ ವಿಚಾರಕ್ಕೆ ಸಂಬಂಧಿಸಿ ಪಕ್ಷ ಸಮಿತಿ ರಚಿಸಿದೆ. ಇದು ಹಿರಿಯರ ಮತ್ತು ಹೈಕಮಾಂಡ್ ಗಮನಕ್ಕೆ ಬಂದಿದೆ. ತಾಯಿಗೆ ಮೋಸ ಮಾಡುವಂಥ ಕೆಲಸ ಮಾಡಿದವರನ್ನು ಕ್ಷಮಿಸಬಾರದು. ಇಬ್ಬರು ಶಾಸಕರು ಮುಕ್ತವಾಗಿ ಕಾಂಗ್ರೆಸ್ ಬೆಂಬಲಿಸಿದ್ದು, ಅವರು ಪಕ್ಷ ಬಿಟ್ಟು ಹೊರಹೋಗಲಿ.**
> ■ **ಶೋಭಾ ಕರಂದ್ಲಾಜೆ,** ಕೇಂದ್ರ ಸಚಿವೆ



ರಾಷ್ಟ್ರೀಯ ಅಧ್ಯಕ್ಷರಿಗೆ ಮಾಹಿತಿ ಕೊಟ್ಟಿದ್ದೇವೆ: ವಿಜಯೇಂದ್ರ

ವಿಧಾನಪರಿಷತ್ ಚುನಾವಣೆಯಲ್ಲಿ ಬಿಜೆಪಿಯ ಕೆಲವು ಶಾಸಕರು ಅಡ್ಡ ಮತದಾನ ಮಾಡಿ ವಿಪ್ ಉಲ್ಲಂಘಿಸಿದ ಬಗ್ಗೆ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರಿಗೆ ವಿಸ್ತೃತ ಮಾಹಿತಿ ನೀಡಿದ್ದೇವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ. ನಿತಿನ್ ನವೀನ್ ಅವರ ಭೇಟಿಯ ಬಳಿಕ ಮಂಗಳವಾರ ಹೊಸದಿಲ್ಲಿಯಲ್ಲಿ ಮಾತನಾಡಿದ ಅವರು ಪ್ರಶ್ನೆಗೆ ಉತ್ತರಿಸಿದ್ದಾರೆ. ಅಧ್ಯಕ್ಷರಿಗೂ ಅವರದೇ ಆದ ಮಾಹಿತಿ ಇತ್ತು. ಈ ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಂಡಿದ್ದೇವೆ. ಯಾರು ಅನ್ಯಾಯ ಮಾಡಿದ್ದಾರೋ, ದ್ರೋಹ ಎಸಗಿದ್ದಾರೋ ಅವರ ವಿರುದ್ಧ ಕಠಿಣ ನಿರ್ಣಯ ಮಾಡಲೇಬೇಕಾಗುತ್ತದೆ ಎಂದು ಹೇಳಿದ್ದಾರೆ.
➡ಪುಟ ೪





ರಾಷ್ಟ್ರಪತಿ ಭವನದಲ್ಲಿ ಮಂಗಳವಾರ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಖ್ಯಾತ ಬಹುಭಾಷಾ ನಟ ಮಮ್ಮೂಟ್ಟಿ, ಖ್ಯಾತ ಗಾಯಕಿ ಅಲ್ಕಾ ಯಾಗ್ನಿಕ್ ಪದ್ಮಭೂಷಣ ಪ್ರಶಸ್ತಿ ಸ್ವೀಕರಿಸಿದರು.

ಒಕ್ಕಲೆಬ್ಬಿಸಬಾರದೆಂಬುದು ಸರ್ಕಾರದ ನಿಲುವು: ಪರಮೇಶ್ವರ್

ರೈತರ ವಿಶ್ವಾಸದೊಂದಿಗೇ ಟೌನ್‌ಶಿಪ್

◆ **ಬೆಂಗಳೂರು:** ಬಿಡದಿ ಟೌನ್‌ಶಿಪ್ ವಿಚಾರವಾಗಿ ರೈತರನ್ನು ಒಕ್ಕಲೆಬ್ಬಿಸುವುದು ಬೇಡ ಎನ್ನುವುದು ನಮ್ಮ ಸರ್ಕಾರದ ಉದ್ದೇಶವೂ ಆಗಿದೆ. ರೈತರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಅವರ ಪೂರ್ಣ ಒಪ್ಪಿಗೆಯ ಮೇಲೆ ಯೋಜನೆ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ ಎಂದು ಉಪ ಮುಖ್ಯಮಂತ್ರಿ



ಡಾ.ಜಿ.ಪರಮೇಶ್ವರ್ ಸ್ಪಷ್ಟಪಡಿಸಿದ್ದಾರೆ.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಲವು ರೈತರು ನಮ್ಮದು ಒಣ ಭೂಮಿ ಇದೆ. ಇದರಿಂದ ನಮಗೆ ಅನುಕೂಲ ಇಲ್ಲ. ಈ ಭೂಮಿಯನ್ನು ನಾವು ಕೊಡಲು ಸಿದ್ಧರಿದ್ದೇವೆ. ನಮಗೆ ಹೆಚ್ಚು ಹಣ ಕೊಡಿ ಎಂದು ಕೇಳುತ್ತಾರೆ. ನಾವು ಅಂಥವರಿಗೆ ಅವರ ಬೇಡಿಕೆ ನೋಡಿ ಸಮಾಧಾನಕರ ಪರಿಹಾರದ ಹಣ ನೀಡಿದರೆ ಅವರು ಬೇರೆ ಕಡೆ ಜಮೀನು ತೆಗೆದುಕೊಳ್ಳುತ್ತಾರೆ. ಅವರು ಕೃಷಿಯಲ್ಲಿ ಮುಂದುವರಿಯುತ್ತಾರೆ. ನಾವು ಈ ದೃಷ್ಟಿಕೋನದಲ್ಲಿ ಮುಂದುವರಿಯುತ್ತಿದ್ದೇವೆ. ಆದರೆ ಅವರು ರಾಜಕೀಯ ಮಾಡಲು ಹೊರಟರೆ ಕಷ್ಟ ಎಂದರು. ಟೌನ್‌ಶಿಪ್ ಬಗ್ಗೆ ಈಗಾಗಲೇ ಸಂಪುಟದಲ್ಲಿ ಚರ್ಚೆ ಆಗಿದೆ.
➡ಪುಟ ೪

> **ಕುಮಾರಸ್ವಾಮಿ ಅವರು ರಾಜಕೀಯ ಬಿಟ್ಟು ಸಲಹೆ ನೀಡಲಿ. ಆಗ ನಾವು ಸಹ ಅವರ ಅನುಮಾನಗಳಿಗೆ, ಆರೋಪಗಳಿಗೆ ಉತ್ತರಿಸುತ್ತೇವೆ. ಈ ತೀರ್ಮಾನ ಕೈಗೊಳ್ಳಲು ಕಾರಣವೇನು ಎಂಬುದನ್ನು ತಿಳಿಸಲು ಸರ್ಕಾರ ಸಿದ್ಧವಿದೆ. ಆದರೆ ಬೀದಿಗಿಳಿದು ಹೋರಾಟ ಮಾಡುತ್ತೇವೆ ಎಂದರೆ ರಾಜಕೀಯ ಕಾರಣಕ್ಕಾಗಿ ಮಾಡುತ್ತೀರಿ ಎಂದರ್ಥ**
> ■ **ಡಾ.ಜಿ.ಪರಮೇಶ್ವರ್,** ಉಪ ಮುಖ್ಯಮಂತ್ರಿ

ಮತ್ತೋರ್ವ ಶಂಕಿತ ಉಗ್ರನ ಸೆರೆ

◆ **ದಾವಣಗೆರೆ:** ಪೇಂಟಿಂಗ್ ಕೆಲಸ ಮಾಡುವ ನೆಪದಲ್ಲಿ ಜಿಲ್ಲೆಯ ಹರಿಹರ ತಾಲೂಕು ಬನ್ನಿಕೋಡು ಗ್ರಾಮದಲ್ಲಿ ಕಳೆದ 20 ದಿನಗಳಿಂದ ವಾಸವಾಗಿದ್ದ ಶಂಕಿತ ಉಗ್ರನನ್ನು ಮಂಗಳವಾರ ಬೆಳಗಿನ ಜಾವ ಪೊಲೀಸರು ಬಂಧಿಸಿದ್ದಾರೆ. ಉತ್ತರ ಪ್ರದೇಶ ರಾಜ್ಯದ ಸಹರಾನಪುರ ಜಿಲ್ಲೆ ಗಂಗೋಹ್ ತಾಲೂಕು ಲಖ್ನೋತಿ ಗ್ರಾಮ ಮೂಲದ ಸೊಹೇಲ್ ತಂದೆ ಲಿಯಾಖತ್(22) ಬಂಧಿತ ಶಂಕಿತ ಉಗ್ರ. ಸಮೀಪದ ಬೆಳ್ಳೂಡಿಯ ಕಾರ್ಖಾನೆಯೊಂದರಲ್ಲಿ ಉತ್ತರ ಪ್ರದೇಶದ ಏಳೆಂಟು ಕೆಲಸಗಾರರು ಪೇಂಟಿಂಗ್ ಕೆಲಸ ಮಾಡುತ್ತಿದ್ದರು. ರೆಡ್ ಆಕ್ಸೈಡ್ ಪೇಂಟಿಂಗ್ ಕೆಲಸ ಮಾಡುತ್ತಿದ್ದ ಈ ಕಾರ್ಮಿಕರ ಪೈಕಿ ಓರ್ವನ ಸಹೋದರನಾಗಿರುವ ಸೊಹೇಲ್, ಬನ್ನಿಕೋಡು ಗ್ರಾಮದ ಹೊರ ವಲಯದಲ್ಲಿ ಏನೂ ಅರಿಯದವನಂತೆ ವಾಸವಾಗಿದ್ದ. ಈತನ ಜನ್ಮ ಜಾಲಾಡಿದ್ದ ಕೇಂದ್ರ ಗುಪ್ತಚರ ಇಲಾಖೆ ಮಾಹಿತಿ ಆಧರಿಸಿ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಇನ್ಸ್ಟಾಗ್ರಾಂನಲ್ಲಿ ಪಾಕಿಸ್ತಾನ ಉಗ್ರರ ಜತೆಗೆ ನಿರಂತರ ಸಂಪರ್ಕ, ಪಾಕ್ ಮೂಲದ ಭಾರತ ವಿರೋಧಿ ವಾಟ್ಸಪ್ ಗ್ರೂಪ್ ಆದ ರಾಣಾದಲ್ಲಿ ಸೊಹೇಲ್ ಸಕ್ರಿಯನಾಗಿದ್ದ.
➡ಪುಟ ೪

ವಾಯುಪಡೆ ತಿರುಗೇಟು | ಪಾಕ್ ಸುಳ್ಳು ಸಾಬೀತು

ಭಾರತದ 36 ರಾಫೆಲ್ ಸುರಕ್ಷಿತ



◆ **ಹೊಸದಿಲ್ಲಿ:** ಆಪರೇಷನ್ ಸಿಂದೂರ ಕಾರ್ಯಾಚರಣೆ ವೇಳೆ ಭಾರತದ ಹಲವು ರಾಫೆಲ್ ಯುದ್ಧವಿಮಾನಗಳನ್ನು ಹೊಡೆದುರುಳಿಸಿದ್ದೇವೆ ಎಂಬ ಪಾಕಿಸ್ತಾನದ ನಿರಂತರ ಪ್ರಚಾರವನ್ನು ಭಾರತೀಯ ವಾಯುಪಡೆ(ಐಎಎಫ್)ಯ ಅಧಿಕೃತ ದಾಖಲೆಯೊಂದು ಮತ್ತೊಮ್ಮೆ ಸುಳ್ಳಾಗಿಸಿದೆ. ಭಾರತದ ಬಳಿ ಇರುವ ಎಲ್ಲ 36 ರಾಫೆಲ್ ಯುದ್ಧವಿಮಾನಗಳೂ ಸೇವೆಯಲ್ಲಿವೆ ಎಂಬುದು ವಾಯುಪಡೆ ಹೊರಡಿಸಿರುವ ಪ್ರಸ್ತಾವನಾ ಕೋರಿಕೆಯಿಂದ ದೃಢಪಟ್ಟಿದೆ.

ವಾಯುಪಡೆ ಪ್ರಧಾನ ಕಚೇರಿ ಜೂನ್‌ನಲ್ಲಿ ಹೊರಡಿಸಿರುವ ಪ್ರಸ್ತಾವನಾ ಕೋರಿಕೆ(ಆರ್‌ಎಫ್‌ಪಿ) ಯಲ್ಲಿ ಎಲ್ಲ 36 ರಾಫೆಲ್ ವಿಮಾನಗಳಿಗೆ 5 ತಿಂಗಳ ಮಧ್ಯಂತರ ನಿರ್ವಹಣಾ ನೆರವು ಒದಗಿಸಲು ಬಿಡ್‌ಗಳನ್ನು ಆಹ್ವಾನಿಸಲಾಗಿದೆ. ಭಾರತವು 2016ರಲ್ಲಿ ಫ್ರಾನ್ಸ್ ಜತೆ ಮಾಡಿಕೊಂಡ ಒಪ್ಪಂದದಲ್ಲಿ ಒಟ್ಟು 36 ರಫೇಲ್ ವಿಮಾನಗಳನ್ನು ಖರೀದಿಸಿತ್ತು.
➡ಪುಟ ೪

- ಭಾರತದ ಎಲ್ಲ 36 ರಾಫೆಲ್ ಯುದ್ಧವಿಮಾನಗಳೂ ಸೇವೆಯಲ್ಲಿ
- 36 ವಿಮಾನಗಳ ನಿರ್ವಹಣೆಗೆ ವಾಯುಪಡೆಯಿಂದ ಪ್ರಸ್ತಾವನಾ ಆಹ್ವಾನ
- ಆಪರೇಷನ್ ಸಿಂದೂರದಲ್ಲಿ ರಾಫೆಲ್ ನಷ್ಟವಾಗಿದೆ ಎಂಬ ಪಾಕ್ ವಾದ ಸುಳ್ಳು
- ಐದು ತಿಂಗಳಲ್ಲಿ 2,250 ಗಂಟೆಗಳ ಹಾರಾಟ ಯೋಜನೆ
- ದೀರ್ಘಾವಧಿಯ ನಿರ್ವಹಣಾ ಒಪ್ಪಂದದವರೆಗೆ ಮಧ್ಯಂತರ ವ್ಯವಸ್ಥೆ
- ಪಾಕಿಸ್ತಾನದ ಅಪಪ್ರಚಾರಕ್ಕೆ ಅಧಿಕೃತ ದಾಖಲೆ ತಿರುಗೇಟು
- ಇನ್ನೂ 114 ರಾಫೆಲ್ ಖರೀದಿಗೆ ಭಾರತದ ಚಿಂತನೆ
- 18 ವಿಮಾನ ನೇರ ಖರೀದಿ, ಉಳಿದವನ್ನು ಭಾರತದಲ್ಲೇ ತಯಾರಿಸುವ ಯೋಜನೆ

ಎಲ್ಲ ಕಡತಗಳೂ ದೇಶದ ಜನಹಿತಕ್ಕೆ ಅಗತ್ಯ: ಮೋದಿ

◆ **ಹೊಸದಿಲ್ಲಿ:** ಪ್ರತಿ ಕಡತವೂ ದೇಶದ ಅಸಂಖ್ಯ ನಾಗರಿಕರ ಬದುಕು, ಜನರ ಬವಣೆಗಳು, ಆಶೋತ್ತರಗಳನ್ನು ಪ್ರತಿಬಿಂಬಿಸುತ್ತದೆ. ಹಾಗಾಗಿ ಜನಹಿತಕ್ಕೆ ಪ್ರಾಧಾನ್ಯತೆಯಿರುವಂತೆ ಯಾವುದೇ ನಿರ್ಧಾರ ಕೈಗೊಳ್ಳುವಂತೆ ಪ್ರಧಾನಿ ಮೋದಿ ಯುವ ಐಎಎಸ್ ಅಧಿಕಾರಿಗಳಿಗೆ ಕರೆ ನೀಡಿದ್ದಾರೆ. ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಸಹಾನುಭೂತಿ, ಸ್ಪಂದನೆ, ಸಮಸ್ತರ ಒಳಗೊಳ್ಳುವಿಕೆ ಯಂತಹ ಅಂಶಗಳಿಗೆ ಪ್ರಾಮುಖ್ಯತೆ ಕೊಡುವಂತೆಯೂ ಪ್ರಧಾನಿ ಸಲಹೆ ಮಾಡಿದ್ದಾರೆ. ಅಭಿವೃದ್ಧಿಗೆ ಸಂಬಂಧಿತ ಪ್ರಮುಖ ಸವಾಲುಗಳನ್ನು ಪ್ರತ್ಯೇಕವಾಗಿ ಬಗೆಹರಿಸಲಾಗದು. ಅರ್ಥಪೂರ್ಣ ಅಂತಿಮ ಫಲಿತಾಂಶಗಳನ್ನು ಪಡೆಯಲು ವಿವಿಧ ಇಲಾಖೆಗಳು ಪರಸ್ಪರ ಸಮನ್ವಯದಿಂದ ಶ್ರಮಿಸುವುದು ಅತ್ಯವಶ್ಯ ಎಂದರು.
◆ ವಿವರ ಪುಟ ೭

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: **2,45,000**(2,50,000) ಅಪರಂಜಿ ಚಿನ್ನ: **1,44,200**(1,46,510) ಆಭರಣ ಚಿನ್ನ: **1,32,550**(1,34,300) ಚಿನ್ನ10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ **76,200**(893↓) ಎನ್‌ಎಸ್‌ಇ **23,824**(278↓)

$1 = ₹94.68

ಕಿರುಸುದ್ದಿ

ಆರೋಗ್ಯ ಉಚಿತ ತಪಾಸಣೆ



• **ಹುಬ್ಬಳ್ಳಿ:** ಇಲ್ಲಿಯ ವಿದ್ಯಾನಗರ ಕೆಎಲ್ಇ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಮಹಿಳಾ ಸಬಲೀಕರಣ ಘಟಕ ವತಿಯಿಂದ ಇನ್ನರ್ ವೀಲ್ ಕ್ಲಬ್ ಆಫ ಹುಬ್ಬಳ್ಳಿ ನಾರ್ಥ ಹಾಗೂ ಕೆಎಲ್ಇ ಟೆಕ್ ಐಇಇಇ ಸ್ಟೂಡೆಂಟ್ ಬ್ರ್ಯಾಂಚ್ ಸಹಯೋಗದಲ್ಲಿ ವಿಶ್ವವಿದ್ಯಾಲಯದ ಮಹಿಳಾ ಬೋಧಕ ಮತ್ತು ಸಿಬ್ಬಂದಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಸಲಾಯಿತು. ಕೆಎಲ್ಇ ಟೆಕ್‌ನ ಮಹಿಳಾ ಸಬಲೀಕರಣ ಘಟಕದ ಡಾ. ಉಮಾ ಮುಡೆಗುಂಡಿ ಹಾಗೂ ಡಾ. ಮಿನಾಲ್ ಸಲೂಂಕೆ ಅವರು ನೇತೃತ್ವ ವಹಿಸಿದ್ದರು. ವೈದ್ಯಕೀಯ ಸೇವೆಗಳು ಮತ್ತು ತಜ್ಞರ ಸಲಹೆಗಳನ್ನು ಐಎಂಎ ಲೇಡೀಸ್ ವಿಂಗ್‌ನ ಕಾರ್ಯದರ್ಶಿ ಡಾ. ವರ್ಷಾ ಬಂಗಾರಶೆಟ್ಟರ್, ನವನಗರದ ಕ್ಯಾನ್ಸರ್ ಆಸ್ಪತ್ರೆಯ ಡಾ. ಉಮೇಶ್ ಹಳ್ಳಿಕೇರಿ ಹಾಗೂ ಅವರ ತಂಡ, ಮತ್ತು ಅಶೋಕ ಆಸ್ಪತ್ರೆಯ ವೈದ್ಯಕೀಯ ತಂಡ ಸೇವೆ ಒದಗಿಸಿತು. ಈ ಶಿಬಿರದಲ್ಲಿ 100ಕ್ಕೂ ಹೆಚ್ಚು ಮಹಿಳಾ ಬೋಧಕ ಹಾಗೂ ಸಿಬ್ಬಂದಿ ಸದಸ್ಯರು ಭಾಗವಹಿಸಿ ಉಚಿತ ಆರೋಗ್ಯ ತಪಾಸಣೆಯ ಸೌಲಭ್ಯವನ್ನು ಪಡೆದುಕೊಂಡರು. ಹಿಮೋಗ್ಲೋಬಿನ್, ರಕ್ತದೊತ್ತಡ, ರಕ್ತದಲ್ಲಿನ ಸಕ್ಕರೆ ಪ್ರಮಾಣ, ಥೈರಾಯ್ಡ್ ಪ್ರೊಫೈಲ್, ಇಸಿಜಿ ಕಣ್ಣಿನ ತಪಾಸಣೆ, ಬ್ರೀಥ್ ಈಸಿ ಡಯಾಗ್ನೋಸಿಸ್, ಪ್ಯಾಪ್ ಸ್ಮಿಯರ್ ಹಾಗೂ ಮ್ಯಾಮೋಗ್ರಾಂ ಸೇರಿದಂತೆ ವಿವಿಧ ಆರೋಗ್ಯ ತಪಾಸಣೆ ನಡೆಸಲಾಯಿತು.

ವಿದ್ಯುತ್ ವ್ಯತ್ಯಯ ಇಂದು

• **ಹುಬ್ಬಳ್ಳಿ:** ಅಣ್ಣಿಗೇರಿಯ 110/11ಕೆವಿ ವಿದ್ಯುತ್ ಸ್ವೀಕರಣಾ ಕೇಂದ್ರದಿಂದ ಹೊರಡುವ ಎಫ್-04 ಕೋಳಿವಾಡ ಎನ್.ಜೆ.ವೈ ಫೀಡರ್ ಹಾಗೂ ಅಣ್ಣಿಗೇರಿ ವಿತರಣಾ ಕೇಂದ್ರದಿಂದ ಹೊರಡುವ ವಿವಿಧ 11 ಕೆ.ವಿ ಮಾರ್ಗಗಳ ತುರ್ತು ನಿರ್ವಹಣಾ ಕಾರ್ಯದ ನಿಮಿತ್ತ ಜೂ.24 ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ. ಅಂದು ಬೆಳಗ್ಗೆ 10 ರಿಂದ ಸಂಜೆ 5ರವರೆಗೆ ಕೋಳಿವಾಡ, ಮಲ್ಲಿಗವಾಡ, ಇಂಗಳಹಳ್ಳಿ, ಉಮಚಗಿ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳು, ಅಣ್ಣಿಗೇರಿ ಶಹರ, ಮಜ್ಜಿಗುಡ್ಡ, ನಲವಡಿ, ಕೊಂಡಿಕೊಪ್ಪ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಹೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಖಾಸಗೀಕರಣಕ್ಕೆ ವಿರೋಧ



• **ಅಳ್ನಾವರ:** ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿದ್ಯುತ್ ಕಂಪನಿಗಳನ್ನು ಖಾಸಗಿ ವ್ಯಕ್ತಿಗಳಿಗೆ ನೀಡಲು ಸರ್ಕಾರ ಹೊರಟಿದೆ ಎಂದು ಆರೋಪಿಸಿ ತಾಲೂಕಿನ ರೈತರು ತಹಶೀಲ್ದಾರ್ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ರೈತ ಮುಖಂಡ ಭರತೇಶ ಪಾಟೀಲ ಮಾತನಾಡಿ, ರಾಜ್ಯದಲ್ಲಿ ಕೃಷಿಯೇ ಮೂಲ ಉದ್ಯೋಗವಾಗಿದ್ದು, ರೈತರ ಪಂಪಸೆಟ್‌ಗಳಿಗೆ ಸದ್ಯ ಉಚಿತ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಜೊತೆಗೆ ವಿವಿಧ ಯೋಜನೆಗಳ ಮೂಲಕ ಸಾರ್ವಜನಿಕರಿಗೆ ಉಚಿತ ವಿದ್ಯುತ್ ಒದಗಿಸಲಾಗುತ್ತಿದೆ. ಖಾಸಗೀಕರಣ ಮಾಡುವಯದರಿಂದ ಹೆಚ್ಚಿನ ಹಣ ನೀಡಿ ವಿದ್ಯುತ್ ಪಡೆಯುವ ಅನಿವಾರ್ಯತೆ ಎದುರಾಗುತ್ತದೆ. ಬಡವರಿಗಾಗಿ ಇರುವ ಯೋಜನೆಗಳು ಸ್ಥಗಿತಗೊಳ್ಳುತ್ತವೆ. ಹಾಗಾಗಿ ರಾಜ್ಯದ ವಿದ್ಯುತ್ ಸರಭರಾಜು ವ್ಯವಸ್ಥೆಯನ್ನು ಖಾಸಗಿ ವ್ಯಕ್ತಿಗಳಿಗೆ ನೀಡಬಾರದೆಂದರು.ಉಪ ತಹಶೀಲ್ದಾರ್ ಮಲ್ಲಿಕಾರ್ಜುನ ಬಿರಾದಾರ ಮನವಿ ಸ್ವೀಕರಿಸಿದರು. ಶಿವಾಜಿ ಡೊಳ್ಳಿನ,ನಾಗರಾಜ ಬುಡರಕಟ್ಟಿ,ಲಿಂಗರಾಜ ಮೂಲಿಮನಿ, ತಾನಾಜಿ ಬಾಲಗೇರಿ, ಮಲ್ಲಪ್ಪ ಗಾಣಿಗೇರ, ನಾರಾಯಣ ಮೋರೆ, ಅನಂತ ರವಳಪ್ಪನವರ, ಸೋಮು ಕಂಗಳೇಕರ ಇತರರಿದ್ದರು.

ಯೋಗದಿಂದ ಉತ್ತಮ ಆರೋಗ್ಯ



• **ಧಾರವಾಡ:** ದವಳಗಿರಿ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಅಭಿಯಾಂತ್ರಿಕ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಒಳಾಂಗಣ ಕ್ರೀಡಾ ಸಂಕೀರ್ಣದಲ್ಲಿ 12ನೇ ವಿಶ್ವ ಯೋಗ ದಿನಾಚರಣೆ ಜರುಗಿತು. ಯೋಗತಜ್ಞ ಮುತ್ತಪ್ಪ ನಲವಡಿ ಅವರು ಆಯುಷ್ ಸಚಿವಾಲಯದ ಯೋಗ ಶಿಷ್ಟಾಚಾರದ ಪ್ರಕಾರದ ಪ್ರಮುಖ ಯೋಗದ ಆಸನಗಳು ಮಾಡಿಸಿದರು. ಯೋಗತಜ್ಞ ಮುತ್ತಪ್ಪ ನಲವಡಿ ಮಾತನಾಡಿ, ಉತ್ತಮ ಆರೋಗ್ಯಕರ ಜೀವನ ಶೈಲಿಗೆ ಯೋಗ ಅಗತ್ಯ. ನಿತ್ಯವೂ ಯೋಗಭ್ಯಾಸ ಮಾಡುವುದರಿಂದ ಪ್ರತಿ ವ್ಯಕ್ತಿಯೂ ರೋಗಮುಕ್ತ ಜೀವನ ನಡೆಸಬಹುದೆಂದು ಹೇಳಿದರು. ಪ್ರಾಚಾರ್ಯ ಪ್ರೊ. ರಮೇಶ ಚಕ್ರಸಾಲಿ ಮಾತನಾಡಿ, ಯೋಗವು ಕೇವಲ ದೈಹಿಕ ಕಸರತ್ತಲ್ಲ, ಅದು ಮನಸ್ಸು ಮತ್ತು ದೇಹ ಬೆಸೆಯುವ ಒಂದು ಅದ್ಭುತ ಕಲೆ ಎಂದರು. ಪಿಆರ್‌ಓ ಪ್ರೊ. ಎಸ್.ಎಸ್.ಕೆರೂರ, ದೈಹಿಕ ನಿರ್ದೇಶಕ ಡಾ.ಮಂಜುನಾಥ ಬಿ., ಎನ್ನೆಸ್ಸೆಸ್ ಅಧಿಕಾರಿ ಪ್ರೊ. ಆನಂದ ವೈದ್ಯ, ಬೋಧಕ ಹಾಗೂ ಬೋಧಕೇರ ಸಿಬ್ಬಂದಿ ಪಾಲ್ಗೊಂಡಿದ್ದರು.



ಕಲಘಟಗಿ: ತಾಲೂಕಿನ ಕಾಮಧೇನು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು. ವಿದ್ಯಾರ್ಥಿಗಳಿಗೆ ಯೋಗದ ಬಗ್ಗೆ ಮಾಹಿತಿಯನ್ನು ತಿಳಿಸಲಾಯಿತು. ಈ ಸಂದರ್ಭದಲ್ಲಿ ಎಸ್‌ಡಿಎಂಸಿ ಅಧ್ಯಕ್ಷರು, ಉಪಾಧ್ಯಕ್ಷರು, ಸರ್ವ ಸದಸ್ಯರು, ಮುಖ್ಯೋಪಾಧ್ಯಾಯರು, ಶಿಕ್ಷಕವೃಂದ ಹಾಗೂ ಗ್ರಾಮದ ಯುವಕರು ಪಾಲ್ಗೊಂಡಿದ್ದರು.

ಮೊರಹಂ ಹಬ್ಬ ಸೌಹಾರ್ದತೆಯಿಂದ ಆಚರಿಸಿ

• **ಧಾರವಾಡ:** ಜಿಲ್ಲಾ ಪೊಲೀಸ್ ಅಧೀಕ್ಷಕ ಗುಂಜನ್ ಆರ್ಯ ಅವರ ಅಧ್ಯಕ್ಷತೆಯಲ್ಲಿ ಜೂ.26ರಂದು ನಡೆಯುವ ಮೊಹರಂ ಹಬ್ಬದ ಪ್ರಯುಕ್ತ ನಗರದ ಎಸ್ಪಿ ಕಚೇರಿಯಲ್ಲಿ ಮೊಹರಂ ಹಬ್ಬದ ಶಾಂತಿಯುತ ಆಚರಿಸಲು ಪೂರ್ವಭಾವಿ ಸಭೆ ಜರುಗಿತು. ಹಬ್ಬದ ವೇಳೆಯಲ್ಲಿ ಸಾರ್ವಜನಿಕರು ಮತ್ತು ವಿವಿಧ ಸಮುದಾಯಗಳ ಮುಖಂಡರು ಕಾನೂನು ಸುವ್ಯವಸ್ಥೆ ಕಾಪಾಡಲು ಕೈಜೋಡಿಸಬೇಕು. ಸೌಹಾರ್ದತೆ ಹಾಗೂ ಸಡಗರದಿಂದ ಹಬ್ಬ ಆಚರಿಸಲು ಸಭೆಯಲ್ಲಿ ಸೂಚನೆ ನೀಡಲಾಯಿತು. ಮೊಹರಂ ಭಾವೈಕ್ಯತೆಯ ಸಂಕೇತ. ಎಲ್ಲ ಧರ್ಮದವರು ಶಾಂತಿಯುತವಾಗಿ ಆಚರಿಸಬೇಕು. ಮೆರವಣಿಗೆ ಮಾರ್ಗಗಳಲ್ಲಿ ಯಾವುದೇ ಘಟನೆ ನಡೆಯದಂತೆ ಮುಂಜಾಗ್ರತಾ ಕ್ರಮವಾಗಿ ಪೊಲೀಸ್ ಬಂದೋಬಸ್ತ್ ನಿಯೋಜಿಸುವ ಭರವಸೆ ನೀಡಿದರು. ಸುಳ್ಳು ವದಂತಿಗಳಿಗೆ ಕಿವಿಗೊಡದಂತೆ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಪ್ರಚೋದನಾಕಾರಿ ಸಂದೇಶಗಳು ಹರಡದಂತೆ ನಿಗಾ ವಹಿಸಬೇಕು. ಯಾವುದೇ ಸಂಶಯಾಸ್ಪದ ವ್ಯಕ್ತಿಗಳು ಅಥವಾ ವಸ್ತುಗಳು ಕಂಡಲ್ಲಿ ಮಾಹಿತಿ ನೀಡುವಂತೆ ಕೋರಿದರು. ಮೆರವಣಿಗೆಯ ಹಾದಿಯಲ್ಲಿ ವಿದ್ಯುತ್ ತಂತಿಗಳ ನಿರ್ವಹಣೆ, ರಸ್ತೆ ದುರಸ್ತಿ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವಂತೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದರು. ಸಭೆಯಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳು, ಮುಸ್ಲಿಂ ಬಾಂಧವರ ಜೊತೆಗೆ ಹಿಂದೂ ಸಮುದಾಯದ ಮುಖಂಡರು ಹಾಗೂ ಶಾಂತಿ ಸಮಿತಿಯ ಸದಸ್ಯರು ಸೇರಿ ಹಬ್ಬವನ್ನು ಅತ್ಯಂತ ಶಾಂತಿಯುತವಾಗಿ ಆಚರಿಸಲು ಒಮ್ಮತದ ನಿರ್ಧಾರ ಕೈಗೊಂಡರು.



ಧಾರವಾಡ: ವಿಧಾನ ಪರಿಷತ್ ನೂತನ ಸದಸ್ಯ ಲಿಂಗರಾಜ ಪಾಟೀಲ ಧಾರವಾಡ ಮುರುಘಾಮಠಕ್ಕೆ ಮಂಗಳವಾರ ಭೇಟಿ ನೀಡುವ ಮೂಲಕ ಮೃತ್ಯುಂಜಯಪ್ಪಗಳ ಕರ್ತೃ ಗದ್ದುಗೆಗೆ ನಮಿಸಿದರು. ನಂತರ ಪ್ರಸ್ತುತ ಪೀಠಾಧಿಪತಿ ಡಾ.ಮಲ್ಲಿಕಾರ್ಜುನ ಸ್ವಾಮೀಜಿ ಪಾದಗಳಿಗೆ ನಮಿಸಿ, ಆಶೀರ್ವಾದ ಪಡೆದರು. ಮೋಹನ ರಾಮದುರ್ಗ, ಸಿದ್ದು ಕಲ್ಯಾಣಶೆಟ್ಟಿ, ಸಂಜಯ ಪಾಲನಕರ, ಮುತ್ತು ಬೆಂತೂರ, ಭೀಮರಾವ ಸವಣೂರ, ಎಸ್.ಆರ್.ಹಿರೇಮಠ ಇದ್ದರು.

ಜ್ಯುಬ್ಲಿ ಸರ್ಕಲ್‌ಗೆ ಟ್ರಾಫಿಕ್ ಕಿರಿಕಿರಿ | ಪರ್ಯಾಯ ಧರಣಿ ಸ್ಥಳ ಯಾವುದು?

ಹೈವೇ ಹಾದಿಗೆ ತಪ್ಪದ ಧರಣಿ ಬಿಸಿ

▸ **ಮಹಾಂತೇಶ ಕಣವಿ**

ದಿಗಂತ ವಿಶೇಷ

• **ಧಾರವಾಡ:** ವಿದ್ಯಾನಗರಿ ಧಾರವಾಡದಲ್ಲಿ ಇತ್ತೀಚಿನ ದಿನಗಳಲ್ಲಿ ಧರಣಿ, ಸತ್ಯಾಗ್ರಹ ಹಾಗೂ ಪ್ರತಿಭಟನೆಗಳ ಅಬ್ಬರ ಜೋರಾಗಿದೆ. ಆದರೆ ಇಂತಹ ಧರಣಿಗಳಿಗೆ ನಮ್ಮ ಧರಣಿಕಾರರು ಆಯ್ದುಕೊಳುವ ಸ್ಥಳ ಮಾತ್ರ ಇದೀಗ ಸಾರ್ವಜನಿಕರ ಕೆಂಗಣ್ಣಿಗೆ ಗುರಿಯಾಗಿದೆ.

ನಗರದ ಹೃದಯ ಭಾಗದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಹಾಗೂ ಜ್ಯುಬ್ಲಿ ಸರ್ಕಲ್ ಸುತ್ತಮುತ್ತಲೇ ಸದಾ ಹತ್ತಾರು ಸಂಘಟನೆಗಳು ಜಮಾಯಿಸುವುದರಿಂದಾಗಿ ಇಡೀ ನಗರದ ಸಂಚಾರ ವ್ಯವಸ್ಥೆ ಸಂಪೂರ್ಣವಾಗಿ ಹಳಿ ತಪ್ಪುವ ಜತೆ ಜನರಿಗೆ ಕಿರಿಕಿರಿ ಉಂಟಾಗಲಿದೆ. ಪ್ರತಿಭಟನೆ ಮಾಡುವುದು ಪ್ರತಿಯೊಬ್ಬರ ಸಾಂವಿಧಾನಿಕ ಹಕ್ಕು ಹೌದಾದರೂ ಅದರಿಂದ ದಿನನಿತ್ಯದ ಬದುಕಿಗೆ ಹೋರಾಡುವ ಜನಸಾಮಾನ್ಯರಿಗೆ ಆಗುತ್ತಿರುವ ತೊಂದರೆ ಅಷ್ಟಿಷ್ಟಲ್ಲ. ಇದೆಲ್ಲ ಧರಣಿಕಾರರ ಗಮನಕ್ಕೆ ಬರುವುದಲ್ಲವೇ? ಎಂಬುದು ಯಕ್ಷಪ್ರಶ್ನೆ.

ಚಿಕಿತ್ಸೆಗೆ ಸಂಚಕಾರ: ಜ್ಯುಬ್ಲಿ ಸರ್ಕಲ್ ಪ್ರಮುಖ ಆಸ್ಪತ್ರೆಗಳಿಗೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆ. ಇಲ್ಲಿ ರಸ್ತೆ ತಡೆ ಅಥವಾ ಧರಣಿ ನಡೆದಾಗ ಸೈರನ್ ಹಾಕಿ, ಬರುವ ಅಂಬ್ಯುಲೇನ್ಸ್‌ಗಳು ಟ್ರಾಫಿಕ್‌ನಲ್ಲಿ ಸಿಲುಕಿದಾಗ ರೋಗಿಗಳ ಪ್ರಾಣದ ಜೊತೆಗೆ ಆಟವಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ರಸ್ತೆ ತಡೆ ಸಲ್ಲ: ಮನವಿ ಪತ್ರ ನೀಡಲು ಬರುವ ಸಂಘಟನೆಗಳಿಗೆ ಡಿಸಿ ಆಫೀಸ್ ಆವರಣದೊಳಗೆ ನಿರ್ದಿಷ್ಟ ಜಾಗ ನೀಡಬೇಕು ಅಥವಾ ಸಾರ್ವಜನಿಕರಿಗೆ ತೊಂದರೆಯಾಗದಂತೆ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು. ಜ್ಯುಬ್ಲಿ ಸರ್ಕಲ್‌ನಂತಹ ಸೂಕ್ಷ್ಮ ಜಾಗಗಳಲ್ಲಿ ಯಾವುದೇ ಕಾರಣಕ್ಕೂ ರಸ್ತೆ ತಡೆಗೆ ಅವಕಾಶ ನೀಡದಿರಲು ಧಾರವಾಡ ಜನತೆ ಒತ್ತಾಯಿಸಿದೆ.

ವಿದ್ಯಾರ್ಥಿಗಳ ಪರದಾಟ

ಧಾರವಾಡಕ್ಕೆ ನಿತ್ಯ ಸುತ್ತಮುತ್ತಲಿನ ಹಳ್ಳಿಗಳಿಂದ ಸಾವಿರಾರು ಶಾಲಾ-ಕಾಲೇಜು ವಿದ್ಯಾರ್ಥಿಗಳು ಬರುತ್ತಾರೆ. ಸಕಾಲಕ್ಕೆ ಬಸ್ ಸಿಗದೆ, ಸಿಕ್ಕರೂ ಟ್ರಾಫಿಕ್ ಜಾಮ್‌ಗೆ ಸಿಲುಕಿ ಪರೀಕ್ಷೆ ಹಾಗೂ ತರಗತಿಗೆ ನಿಗದಿತ ಸಮಯಕ್ಕೆ ತಲುಪಲು ಹರಸಾಹಸ ಪಡುತ್ತಿದ್ದಾರೆ.

ಆದಾಯಕ್ಕೆ ಕತ್ತರಿ

ದಿನಗೂಲಿ ನಂಬಿ ನಗರಕ್ಕೆ ಬರುವ ಬಡ ಕಾರ್ಮಿಕರು ಹಾಗೂ ತರಕಾರಿ ವ್ಯಾಪಾರಿಗಳು ಈ ಟ್ರಾಫಿಕ್ ಕಿರಿಕಿರಿಯಿಂದಾಗಿ ಕೆಲಸದ ಸ್ಥಳಕ್ಕೆ ತಡವಾಗಿ ತಲುಪುತ್ತಿದ್ದಾರೆ. ಇದರಿಂದಾಗಿ ಅವರ ಅಂದಿನ ಅವರ ಗಳಿಕೆಗೂ ಕತ್ತರಿ ಬೀಳುತ್ತಿದೆ.

ಸಾರ್ವಜನಿಕರ ಆಗ್ರಹ



- ಬೆಂಗಳೂರಿನಲ್ಲಿ ಪ್ರತಿಭಟನೆಗಳಿಗಾಗಿಯೇ ಫ್ರೀಡಂ ಪಾರ್ಕ್ ಎಂಬ ಪ್ರತ್ಯೇಕ ಜಾಗ ನಿಗದಿಪಡಿಸಲಾಗಿದೆ. ಅದೇ ಮಾದರಿಯಲ್ಲಿ ಧಾರವಾಡದಲ್ಲೂ ಪ್ರತಿಭಟನೆ ನಡೆಸಲು ಜಿಲ್ಲಾಡಳಿತ ಸೂಕ್ತ ಮತ್ತು ಪ್ರತ್ಯೇಕ ಸ್ಥಳ ನಿಗದಿಪಡಿಸುವುದು ತುರ್ತು ಅಗತ್ಯ
- ಪ್ರತಿಭಟನಾಕಾರರು ತಮ್ಮ ಬೇಡಿಕೆಗಳಿಗಾಗಿ ಹೋರಾಟ ಮಾಡಲಿ. ಆದರೆ ಜಿಲ್ಲಾಧಿಕಾರಿ ಕಚೇರಿ ಎದುರೇ ರಸ್ತೆ ತಡೆಯಿಂದ ನಮಗೆ ಏಕೆ ಶಿಕ್ಷೆ?
- ಜಿಲ್ಲಾಡಳಿತ ಸಂಚಾರಕ್ಕೆ ತೊಂದರೆಯಾಗದ ಸೂಕ್ತ ಜಾಗ ಧರಣಿಗಾಗಿ ನಿಗದಿಪಡಿಸಲಿ
- ಜಿಲ್ಲಾಡಳಿತ ಹಾಗೂ ಜಿಲ್ಲಾ ಪೊಲೀಸ್ ಇಲಾಖೆ ಅಧಿಕಾರಿಗಳು ಈ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಂಡು ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಲಿ

ಆರೋಗ್ಯ ವೃದ್ಧಿಗೆ ಯೋಗ ಸಹಾಯಕ

• **ಕುಂದಗೋಳ:** ಪಟ್ಟಣದ ಹರಭಟ್ಟ ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ 12ನೇ ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಯಿತು.

ಅಧ್ಯಕ್ಷತೆ ವಹಿಸಿದ್ದ ಶಿಕ್ಷಣ ಸಮಿತಿ ಚೇರಮನ್ ಅರವಿಂದ ಕಟಗಿ ಮಾತನಾಡಿ, ಭಾರತವು ಜಗತ್ತಿಗೆ ಯೋಗದ ಮಹತ್ವವನ್ನು ಪರಿಚಯಿಸಿದ ರಾಷ್ಟ್ರವಾಗಿದ್ದು, ಅದನ್ನು ವಿಶ್ವಾದ್ಯಂತ ಪರಿಚಯಿಸುಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಪಾತ್ರ ಮಹತ್ವದ್ದಾಗಿದೆ. ಯೋಗವು ದೈಹಿಕ ಹಾಗೂ ಮಾನಸಿಕ ಆರೋಗ್ಯ ವೃದ್ಧಿಗೆ ಅತ್ಯುತ್ತಮ ಸಾಧನವಾಗಿದೆ ಎಂದರು.

ದೈಹಿಕ ಶಿಕ್ಷಣ ಉಪನ್ಯಾಸಕ ಎಸ್.ಯು.ಅಕ್ಕಿ ಅವರು ಯೋಗದ ಮಹತ್ವ ವಿವರಿಸಿ, ವಿದ್ಯಾರ್ಥಿಗಳಿಗೆ ವೃಕ್ಷಾಸನ, ಪಾರ್ಶ್ವಕೋಣಾಸನ, ಅರ್ಧಕಟಿಚಕ್ರಾಸನ, ಪಾದಹಸ್ತಾಸನ, ವೀರಭದ್ರಾಸನ, ಪಶ್ಚಿಮೋತ್ತಾಸನ ಹಾಗೂ ಪದ್ಮಾಸನ ಸೇರಿದಂತೆ ವಿವಿಧ ಯೋಗಾಸನಗಳ ಪ್ರಾತ್ಯಕ್ಷಿಕೆ ನಡೆಸಿದರು. ಬಳಿಕ ಪ್ರಾಣಾಯಾಮ ಮತ್ತು ಧ್ಯಾನಾಭ್ಯಾಸಕ್ಕೂ ಮಾರ್ಗದರ್ಶನ ನೀಡಿದರು. ಎಲ್.ಎಸ್. ಕೊನೇರಿ ಹಾಗೂ ಎಸ್.ಪಿ. ನಾಯಕ ಅವರು ಯೋಗದ ಉಪಯೋಗಗಳು ಮತ್ತು ಆರೋಗ್ಯಕರ ಜೀವನದಲ್ಲಿ ಅದರ ಪಾತ್ರದ ಕುರಿತು ಮಾತನಾಡಿದರು. ಶಿಕ್ಷಣ ಸಮಿತಿ ನಿರ್ದೇಶಕರಾದ ಶೇಖಣ್ಣ ಬಾಳಿಕಾಯಿ, ಭರಮಣ್ಣ ಸೊರಟೂರ, ಎಸ್.ಜಿ. ಅವಾರಿ, ಶ್ರೀಕಾಂತ ಕಲಾಲ, ಮುಖ್ಯೋಪಾಧ್ಯಾಯರಾದ ಎಂ.ಎ. ಮುಲ್ಲಾ, ಸಿ.ಎಚ್. ಕುದರಿ, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಇದ್ದರು. ಪ್ರಾಚಾರ್ಯ ಎಲ್.ಎಲ್. ಲಮಾಣಿ ಸ್ವಾಗತಿಸಿದರು. ಎಂ.ಸಿ. ದಂಡಿನ ವಂದಿಸಿದರು. ಜೆ.ಸಿ. ಹಂಚಿನಾಳ ಕಾರ್ಯಕ್ರಮ ನಿರೂಪಿಸಿದರು.

ಕಾಯಿಲೆ ದೂರ

ಆರೋಗ್ಯವೇ ನಿಜವಾದ ಸಂಪತ್ತು. ನಿಯಮಿತ ಯೋಗಾಭ್ಯಾಸದಿಂದ ದೇಹ ಸದೃಢವಾಗುವುದರ ಜೊತೆಗೆ ಮನಸ್ಸಿನ ಏಕಾಗ್ರತೆ, ಆತ್ಮವಿಶ್ವಾಸ ಹಾಗೂ ಚೇತನವೂ ವೃದ್ಧಿಯಾಗುತ್ತದೆ. ಯೋಗವನ್ನು ಜೀವನದ ಅವಿಭಾಜ್ಯ ಅಂಗವನ್ನಾಗಿ ಮಾಡಿಕೊಂಡರೆ ಅನೇಕ ಕಾಯಿಲೆಗಳಿಂದ ದೂರವಿರಬಹುದು ಎಂದು ಶಿಕ್ಷಣ ಸಮಿತಿ ಚೇರಮನ್ ಅರವಿಂದ ಕಟಗಿ ಹೇಳಿದರು.



ಅರ್ಹ ಮತದಾರರ ಹೆಸರು ಕೈಬಿಡದಿರಲಿ: ಪಾಟೀಲ

• **ನವಲಗುಂದ:** ಬಿಜೆಪಿ ನವಲಗುಂದ ಮಂಡಲ ವತಿಯಿಂದ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ಅಂಗವಾಗಿ ಮೊರಬ ಮತ್ತು ತಿರ್ಲಾಪುರ ಮಹಾಶಕ್ತಿ ಕೇಂದ್ರದ ಶಿರೂರು, ಗುಮ್ಮಗೋಳ, ಮೊರಬ, ತಲೆಮೊರಬ, ಜಾವೂರ, ಹಾಲಕುಸುಗಲ್, ಅಳಗವಾಡಿ, ಬೆಳವಟಗಿ ಮತ್ತು ಕಾಲವಾಡ ಶಕ್ತಿ ಕೇಂದ್ರದ ಬೂತ್ ಅಧ್ಯಕ್ಷರ, ಬಿಎಲ್ಎ-2 ಗಳ ಹಾಗೂ ಶಕ್ತಿ ಕೇಂದ್ರದ ಪ್ರಮುಖರ, ಶಕ್ತಿ ಕೇಂದ್ರ ಉಸ್ತುವಾರಿಗಳ ಸಭೆ ಜರುಗಿತು.

ಮತದಾರರ ಪರಿಷ್ಕರಣೆ ಬಗ್ಗೆ ಸಮಗ್ರ ಮಾಹಿತಿ ನೀಡಿ, ಪ್ರಕ್ರಿಯೆಯು ನಕಲಿ ಮತದಾರರನ್ನು ತೆಗೆದುಹಾಕಲು ಮತ್ತು ಹೊಸ ಮತದಾರರನ್ನು ಸೇರಿಸಲು ಅವಕಾಶವನ್ನು ಕಲ್ಪಿಸಿದ್ದು,ಬೂತ್ ಮಟ್ಟದ ಏಜೆಂಟರ್‌ಗಳು ನಿರ್ವಹಿಸಬೇಕಾದ ಕಾರ್ಯಗಳು ಹಾಗೂ ಜವಾಬ್ದಾರಿಗಳ ಬಗ್ಗೆ ಚರ್ಚಿಸಲಾಯಿತು.

ನವಲಗುಂದ -69 ಮತಕ್ಷೇತ್ರದ ಎಸ್ಐಆರ್ ಬಿಎಲ್ಎ -1 ಸಿದ್ದನಗೌಡ ಪಾಟೀಲ ಮಾತನಾಡಿ, ಎಸ್ಐಆರ್ ಒಂದು ಮಹತ್ವದ ಕಾರ್ಯವಾಗಿದ್ದು, ಮತದಾರರ ಪಟ್ಟಿಯಲ್ಲಿ ಅನರ್ಹರನ್ನು ಕೈಬಿಡುವುದು ಎಷ್ಟು ಮುಖ್ಯವೋ, ಅರ್ಹ ಮತದಾರರ ಹೆಸರು ಮತದಾರರ ಪಟ್ಟಿಯಿಂದ ಕೈಬಿಟ್ಟು ಹೋಗದಂತೆ ನೋಡಿಕೊಳ್ಳುವುದು ಅಷ್ಟೆ ಮುಖ್ಯ. ಈ ಕುರಿತು ಬಿಜೆಪಿ ಶಕ್ತಿ ಕೇಂದ್ರದ ಮುಖಂಡರು ಮುಂಜಾಗ್ರತೆ ವಹಿಸಬೇಕು ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ಪಕ್ಷದ ಪ್ರಮುಖರಾದ, ಷಣ್ಮುಖ ಗುರಿಕಾರ, ಸಿದ್ದಣ್ಣ ಕಿಟಿಗೇರಿ, ಎಸ್.ಎನ್. ಬಾಳನಗೌಡ್ರ, ಬಸಣ್ಣ ಬೆಳವಣಕಿ, ಗುರಪ್ಪ ಅವರಾದಿ, ಬಿ.ಎಲ್.ಪೂಜಾರ, ಆನಂದ ಜಕ್ಕನಗೌಡ್ರ, ಗೌಡಪ್ಪಗೌಡ್ರ ಪಾಟೀಲ, ಅರುಣ ಮೇಣಸಿನಕಾಯಿ, ರವಿಕುಮಾರ ಸವದತ್ತಿ, ಶ್ರೀಧರ ಪಟ್ಟಣಶೆಟ್ಟಿ, ರಾಮನಗೌಡ ಸಂಕನಗೌಡ್ರ ಮತ್ತು ಪಕ್ಷದ ಪದಾಧಿಕಾರಿಗಳು, ಪಕ್ಷದ ಬೂತ್ ಅಧ್ಯಕ್ಷರು, ಬಿಎಲ್ಎ -2 ಗಳು, ಮಹಾಶಕ್ತಿ ಕೇಂದ್ರದ ಪ್ರಮುಖರು, ಶಕ್ತಿ ಕೇಂದ್ರದ ಪ್ರಮುಖರು ಹಾಗೂ ಉಸ್ತುವಾರಿಗಳು ಉಪಸ್ಥಿತರಿದ್ದರು.

ಪಟ್ಟಿ ಪರಿಶೀಲಿಸಿ

ಶಕ್ತಿ ಕೇಂದ್ರದ ಪ್ರಮುಖರು ಪ್ರತಿಯೊಂದು ಬೂತ್‌ಗಳಿಗೆ ತೆರಳಿ ಮತದಾರರ ಈ ಹಿಂದಿನ ಪಟ್ಟಿ ಪರಿಶೀಲಿಸಬೇಕು. ಅನರ್ಹ ಮತದಾರರು ಪಟ್ಟಿಯಲ್ಲಿರದಂತೆ ಮತ್ತು ಅರ್ಹ ಮತದಾರರು ಪಟ್ಟಿಯಿಂದ ಹೊರಗುಳಿಯದಂತೆ ನೋಡಿಕೊಳ್ಳಬೇಕು ಎಂದು ಮಂಡಲ ಅಧ್ಯಕ್ಷ ಗಂಗಪ್ಪ ಮನಮಿ ಹೇಳಿದರು.



ವಿದ್ಯುತ್ ಖಾಸಗೀಕರಣ, ಬಿಡದಿ ಯೋಜನೆ ವಿರೋಧಿಸಿ ಪ್ರತಿಭಟನಾ ಮೆರವಣಿಗೆ

• **ಕಲಘಟಗಿ:** ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಖಾಸಗೀಕರಣ ವಿರೋಧಿಸಿ ಕುರುಬೂರು ಶಾಂತಕುಮಾರ ಬಣದ ಕಬ್ಬು ಬೆಳೆಗಾರರ ಸಂಘಟನೆ ಹಾಗೂ ರೈತ ಮುಖಂಡರು ಪ್ರತಿಭಟನಾ ಮೆರವಣಿಗೆ ನಡೆಸಿ ತಹಶೀಲ್ದಾರ್ ಬಸವರಾಜ ಹೊಂಕಣ್ಣವರ ಅವರಿಗೆ ಮನವಿ ಸಲ್ಲಿಸಿದರು.

ತಹಶೀಲ್ದಾರ್ ಮುಖಾಂತರ ಮುಖ್ಯಮಂತ್ರಿಗಳಿಗೆ ಹಾಗೂ ಎಇಇ ಮುಖಾಂತರ ಕೆ.ಇ.ಆರ್.ಸಿಗೆ ಮನವಿ ಸಲ್ಲಿಸಿ ಮಾತನಾಡಿದ ಪ್ರಧಾನ ಕಾರ್ಯದರ್ಶಿ ಪರಶುರಾಮ ಎತ್ತಿನಗುಡ್ಡ, ಕರ್ನಾಟಕ ರಾಜ್ಯದಲ್ಲಿ ಕೆ.ಇ.ಆರ್.ಸಿ ವತಿಯಿಂದ ವಿದ್ಯುತ್ ವಿತರಣೆ ಪರವಾನಗಿಯನ್ನು ಟಾಟಾ ಕಂಪನಿಯವರಿಗೆ ನೀಡದಂತೆ ಮತ್ತು ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣಗೊಳಿಸದಂತೆ ಮತ್ತು ಟಾಟಾ ಕಂಪನಿಯವರು ಸಲ್ಲಿಸಿರುವ ಅರ್ಜಿಯನ್ನು ತಿರಸ್ಕರಿಸಬೇಕು ಎಂದು ಒತ್ತಾಯಿಸಿದರು.

ಜಿಲ್ಲಾಧ್ಯಕ್ಷ ಮಹೇಶ್ ಬೆಳಗಾವಕರ ಮಾತನಾಡಿ, ಬಿಡದಿ ರೈತರ ಫಲವತ್ತಾದ ಜಮೀನು ಸರ್ಕಾರ ವಶಪಡಿಸಿಕೊಳ್ಳುದನ್ನು ತಕ್ಷಣ ಹಿಂಪಡೆದುಕೊಳ್ಳಬೇಕು. ರಾಜ್ಯದಲ್ಲಿ ಬಿಡದಿ ಸುತ್ತಮುತ್ತ ಕೃಷಿ ಮಾಡುವ ರೈತರ ಫಲವತ್ತಾದ ಜಮೀನನ್ನು ವಶಪಡಿಸಿಕೊಳ್ಳುವ ಆದೇಶವನ್ನು ರದ್ದುಪಡಿಸಿ ಭೂ ಮಾಫಿಯಾ ಹಾವಳಿಯಿಂದ ರೈತರು ಭೂಮಿ ಕಳೆದುಕೊಂಡು ಬೀದಿಪಾಲಾಗುತ್ತಿದ್ದಾರೆ. ಆದ್ದರಿಂದ ತಕ್ಷಣ ರೈತರ ಪರವಾನಗಿ ಇಲ್ಲದೆ ಬಲವಂತವಾಗಿ ಭೂಮಿ ಕಸಿದುಕೊಳ್ಳಲು ಕರ್ನಾಟಕ ರಾಜ್ಯ ರೈತ ಸಂಘಟನೆ ಒಕ್ಕೂಟ ಹಾಗೂ ಕಬ್ಬು ಬೆಳೆಗಾರರ ಸಂಘಟನೆ ಒಕ್ಕೂಟ ಬಿಡದಿ ರೈತರಿಗೆ ಸಂಪೂರ್ಣ ಬೆಂಬಲ ನೀಡುತ್ತೇವೆ ಎಂದರು.



ಈ ಸಂದರ್ಭದಲ್ಲಿ ಉಳುವಪ್ಪ ಬಳಿಗೇರ, ನಾಗೇಶ್ ಇಟಗಿ, ವಸಂತ ಡಾಕಪ್ಪನವರ, ಶಂಭು ಬಳಿಗೇರ, ಬಸವರಾಜ ಹಟಗಾರ, ಸಾಗರ ಕಾಮಧೇನು, ಬಸವಣ್ಣೆಪ್ಪ ಆದರಗುಂಚಿ, ಮೂರುಸಾವಿರಪ್ಪ, ಶಿವು ತಡಸ, ಬಸನಗೌಡ ಸಿದ್ದನಗೌಡ, ಚನ್ನಬಸಪ್ಪ ಅಸುಂಡಿ, ಗೌಡಯ್ಯ ಮಾಡ್ಲಿ, ಯಲ್ಲಪ್ಪ ಹೊಸಮನಿ, ಸಿದ್ದಪ್ಪ ಹಡಪದ, ಸುರೇಶ ಬೇರುಡಗಿ, ಸಹದೇವ ಕುಂಬಾರ, ಸುಭಾಸ ಮುಡಿಗೌಡರ್, ಚನ್ನಯ್ಯ ಹಿರೇಮಠ, ಶಂಕರ ಗಾಯಗೊಂಡೆ, ಮನಪ್ಪ ಹೊನ್ನಿಹಳ್ಳಿ ರೈತರು ಇದ್ದರು.

ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಓರಿಯಂಟೇಶನ್ ಸಮಾರಂಭ

• **ಹುಬ್ಬಳ್ಳಿ:** ಇಲ್ಲಿಯ ಕೊಟಗೊಂಡಹುಣಸಿಯ ಕೆಎಲ್ಇ ಪ್ರೇರಣಾ ರೆಸಿಡೆನ್ಸಿಯಲ್ ಪಿಯು ಕಾಲೇಜನ್‌ನಲ್ಲಿ 2026-27 ನೇ ಸಾಲಿನ ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಓರಿಯಂಟೇಶನ್ ಸಮಾರಂಭ ನಡೆಯಿತು.

ಕೆಎಲ್ಇ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯ ಮಹಾಂತೇಶ ಕವಟಗಿಮಠ ಮಾತನಾಡಿ, ಶಿಸ್ತು, ಸಂಸ್ಕಾರ ಮತ್ತು ಕಠಿಣ ಪರಿಶ್ರಮ ಇದ್ದರೆ ಮಾತ್ರ ಯಶಸ್ಸು ಸಾಧ್ಯ. ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೂ ನಗರದ ವಿದ್ಯಾರ್ಥಿಗಳಿಗೆ ಸಮನಾದಶಿಕ್ಷಣಸಿಗಬೇಕು ಎಂದರು. ವಿದ್ಯಾರ್ಥಿಗಳು ಮೊಬೈಲ್‌ಗೆ ದಾಸರಾಗದೆ ಪುಸ್ತಕಕ್ಕೆ ಸ್ನೇಹಿತರಾಗಿ. ನಿಮ್ಮ ಗುರಿ ದೊಡ್ಡದಿರಲಿ, ಅದನ್ನು ತಲುಪಲು ಇಂದಿನಿಂದಲೇ ತಯಾರಿ ನಡೆಸಿ. ಸಹಕಾರಿ ಕ್ಷೇತ್ರದ ತಮ್ಮ ಅನುಭವ ಹಂಚಿಕೊಂಡು ಪ್ರಾಮಾಣಿಕತೆ ಮತ್ತು ಸೇವಾ ಮನೋಭಾವ ಜೀವನದಲ್ಲಿ ನಿಮ್ಮನ್ನು ಎತ್ತರಕ್ಕೆ ಕೊಂಡೊಯ್ಯುತ್ತದೆ ಎಂದರು.



ಮಹೇಶ ಮಾಸಾಳ ಮಾತನಾಡಿ, ವೈಫಲ್ಯವೇ ಯಶಸ್ಸಿನ ಮೆಟ್ಟಿಲು. ಒಮ್ಮೆ ಸೋತರೆ ಕುಗ್ಗಬೇಡಿ. ಪಿಯುಸಿ ಎಂದರೆ ಜೀವನದ ತಿರುವು. ಇಲ್ಲಿ ಹಾಕುವ ಅಡಿಪಾಯವೇ ನಿಮ್ಮ ಭವಿಷ್ಯ ನಿರ್ಧರಿಸುತ್ತದೆ. ಸಮಯ ಪಾಲನೆ, ಗುರಿ ನಿಗದಿ ಮತ್ತು ನಿರಂತರ ಅಭ್ಯಾಸ ರೂಢಿಸಿಕೊಳ್ಳಿ ಎಂದರು. ಆವಂತಿ ಕೋ-ಆರ್ಡಿನೇಟರ್ ಪ್ರದೀಪ್ ಶೆಟ್ಟಿ ಮಾತನಾಡಿ, ದಿನಕ್ಕೆ ಹೆಚ್ಚಿನ ಸಮಯವನ್ನು ಓದಿಗಾಗಿ ಮೀಸಲಿಡಿ. ಕಠಿಣ ವಿಷಯಗಳಿಗೆ ಹೆಚ್ಚು ಸಮಯ ಕೊಡಿ. ಸಂಶಯಗಳನ್ನು ತಕ್ಷಣ ಶಿಕ್ಷಕರ ಬಳಿ ಕೇಳಿ ಪರಿಹರಿಸಿಕೊಳ್ಳಿ, ಗುಂಪು ಚರ್ಚೆ ಮಾಡಿ, ಒಬ್ಬರಿಗೊಬ್ಬರು ಕಲಿತು ಕಲಿಸಿ ಎಂದರು. ಪ್ರಾಚಾರ್ಯ ಶ್ರೀನಿವಾಸ್ ಲಿಕ್ಕಿ, ಕನ್ನಡ ಉಪನ್ಯಾಸಕ ಮಂಜುನಾಥ ಕಿತ್ತೂರ ನಿರೂಪಿಸಿದರು. ಅನಿತಾ ಈಳಗೇರ ಮುಖ್ಯ ಅತಿಥಿಗಳನ್ನು ಪರಿಚಯಿಸಿದರು. ಐಶ್ವರ್ಯ ಹಾವಣಗಿ ಪ್ರಶಸ್ತಿ ಪ್ರದಾನ ನಡೆಸಿಕೊಟ್ಟರು. ರೇಖಾ ಹತ್ತಿ ವಂದಿಸಿದರು.

ಜು.3ಕ್ಕೆ ಡೆಡ್ಲಿ ಕಿಲ್ಲರ್ ಸಿನೆಮಾ ಬಿಡುಗಡೆ



• **ಹುಬ್ಬಳ್ಳಿ:** ಸಾಹಸ ನಿರ್ದೇಶಕ ಥ್ರಿಲ್ಲರ್ ಮಂಜು ಅವರ ನಿರ್ದೇಶನದ ಕನ್ನಡ ಡೆಡ್ಲಿ ಕಿಲ್ಲರ್ ಸಿನಿಮಾ ಜು.3 ರಂದು ರಾಜ್ಯಾದ್ಯಂತ 100ಕ್ಕೂ ಹೆಚ್ಚು ಸಿನೆಮಾ ಮಂದಿರಗಳಲ್ಲಿ ಬಿಡುಗಡೆಯಾಗಲಿದೆ.

ಈ ಕುರಿತು ನಿರ್ದೇಶಕ ಥ್ರಿಲರ್ ಮಂಜು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕೀರ್ತಿ ಸಿಲ್ವರ್ ಸ್ಕಿನ್ ಹಾಗೂ ವೇದಿಕ್ ಕಾಸ್ಮಾಸ್ ಬ್ಯಾನರ್ ಅಡಿ ಪ್ರಶಾಂತ್ ಟಿ. ತಂಬ್ರಳ್ಳಿಮಠ ಅವರು ಈ ಚಿತ್ರವನ್ನು ನಿರ್ಮಿಸಿದ್ದಾರೆ. ಇದೊಂದು ಕ್ರೈಂ ಹಾಗೂ ಥ್ರಿಲ್ಲರ್ ಸಿನೆಮಾ ಆಗಿದ್ದು, ಹೊಸ ನಟ ಅಭಯ್‌ವೀರ್ ಹಾಗೂ ನಟಿ ನಿವಿಕ್ಷಾ ನಾಯಕ ಮುಖ್ಯ ಪಾತ್ರದಲ್ಲಿ ಭಾಗವಹಿಸಿದ್ದಾರೆ. ಈ ಚಿತ್ರವೀಗ ಸೆನ್ಸಾರ್ ಪ್ರಕ್ರಿಯೆ ಮುಗಿಸಿಕೊಂಡು ಬಿಡುಗಡೆಗೆ ಸಿದ್ಧವಾಗಿದೆ ಎಂದರು. ಸಿನೆಮಾದಲ್ಲಿ 3 ಹಾಡುಗಳಿವೆ. ವಿನು ಮನಸು ಅವರು ಸಂಗೀತ ಸಂಯೋಜನೆ, ಮಲ್ಲಿಕಾರ್ಜುನ್ ಅವರ ಛಾಯಾಗ್ರಹಣ, ದೀಪು ಅವರ ಸಂಕಲನ ಚಿತ್ರಕ್ಕಿದೆ ಎಂದರು.

ನಟ ಅಭಯವೀರ ಮಾತನಾಡಿ, ಸಿನೆಮಾ ಮಾಡಬೇಕು ಎಂದು 15 ವರ್ಷ ಕಷ್ಟ ಪಟ್ಟಿದ್ದೇನೆ. ಉತ್ತರ ಕರ್ನಾಟಕ ಭಾಗ ಹುಬ್ಬಳ್ಳಿಯವನಾದ ನಾನು ಮೊದಲ ಸಿನಿಮಾ ಮಾಡಿದ್ದೇನೆ. ಉತ್ತರ ಕರ್ನಾಟಕ ಭಾಗದ ಜನರು ನಮ್ಮ ಸಿನೆಮಾ ಪ್ರೋತ್ಸಾಹಿಸಬೇಕು ಎಂದರು. ನಿವೀಕ್ಷಾ ನಾಯಕ ಮಾತನಾಡಿ, ಸಿನೆಮಾದಲ್ಲಿ ನಾನು ಹಿರೋ ಅಭಯವೀರ ಅವರ ಪತ್ನಿ ಪಾತ್ರದಲ್ಲಿ ನಟಿಸಿದ್ದು, ನನ್ನದು ಮುಗ್ಧತೆ ಪಾತ್ರವಾಗಿದೆ ಎಂದರು. ನಿರ್ಮಾಪಕ ಪ್ರಶಾಂತ್ ಟಿ. ತಂಬ್ರಳ್ಳಿಮಠ ಮಾತನಾಡಿದರು.

ದೇಹದಾನ ಮಾಡಿದ ಕುಟುಂಬಕ್ಕೆ ಕೃತಜ್ಞರಾಗಿ

• **ಧಾರವಾಡ:** ಸತ್ತೂರಿನ ಎಸ್‌ಡಿಎಂ ವೈದ್ಯಕೀಯ ಕಾಲೇಜಿನಲ್ಲಿ ಕಿವಿ, ಮೂಗು ಮತ್ತು ಗಂಟಲು ಚಿಕಿತ್ಸಾ ವಿಭಾಗದ ವತಿಯಿಂದ ವೈದ್ಯಕೀಯ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಎರಡು ದಿನಗಳ ಟೆಂಪರಲ್ ಬೋನ್ ಡಿಸೆಕ್ಷಣ ಕಾರ್ಯಾಗಾರ ಜರುಗಿತು.

ಕಾರ್ಯಾಗಾರ ಉದ್ಘಾಟಿಸಿದ ಎಸ್‌ಡಿಎಂ ಉಪಕುಲಪತಿ ಡಾ.ನಿರಂಜನಕುಮಾರ್ ಮಾತನಾಡಿ, ವೈದ್ಯಕೀಯ ವಿದ್ಯಾರ್ಥಿಗಳಿಗೆ ಟೆಂಪರಲ್ ಬೋನ್ ಡಿಸೆಕ್ಷಣ ಮತ್ತು ಅದರ ಅಧ್ಯಯನ ಅಗತ್ಯ. ದೇಹದಾನ ಮಾಡಿದ ಕುಟುಂಬಗಳಿಗೆ ಕೃತಜ್ಞರಾಗಿರಲು ಹೇಳಿದರು. ವೈದ್ಯರು ತಮ್ಮಲ್ಲಿನ ಜ್ಞಾನ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡುವ ಮೂಲಕ ಸಂತೃಪ್ತಿ ಹೊಂದಬಹುದು. ಆದರೆ ವಿದ್ಯಾರ್ಥಿಗಳು ಗುರುವಿನ ಸನ್ಮಾರ್ಗದಲ್ಲಿ ನಡೆದ ಉನ್ನತ ಹುದ್ದೆಯನ್ನು ಅಲಂಕರಿಸುವ ಮೂಲಕ ಸಂತೃಪ್ತಿ ಹೊಂದಬೇಕು. ವೈದ್ಯಕೀಯ ವಿದ್ಯಾರ್ಥಿಗಳು ನಿರಂತರ ಕಾರ್ಯಾಗಾರದಲ್ಲಿ ಪಾಲ್ಗೊಳ್ಳಬೇಕು. ಅತ್ಯಂತ ಜಾಗೂರುಕತೆಯಿಂದಲೇ ಅಧ್ಯಯನ ಮಾಡಬೇಕು. ವೃತ್ತಿ ಬದ್ಧತೆ ಎಂದಿಗೂ ಮರೆಯಬಾರದು. ವೈದ್ಯರ ಕಠಿಣ ಶ್ರಮ, ರೋಗಿ ಗುಣಪಡಿಸಲಿದೆ ಎಂದರು.

ಸಹ ಉಪಕುಲಪತಿ ವಿ.ಜೀವಂದರಕುಮಾರ್, ಹಣಕಾಸು ಅಧಿಕಾರಿ ವಿ.ಜಿ.ಪ್ರಭು, ಪ್ರಾಚಾರ್ಯ ಡಾ.ವಿಜಯ ಕುಲಕರ್ಣಿ, ವೈದ್ಯಕೀಯ ಅಧೀಕ್ಷಕ ಕಿರಣ ಹೆಗ್ಡೆ, ಡಾ. ಕಿರಣ ಐತಾಳ್, ವಿಭಾಗದ ಪ್ರಾಧ್ಯಾಪಕ ಡಾ.ಕೆ.ಸಿ.ಪ್ರಸಾದ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು. ಡಾ. ರಘುನಾಥ ಶಾನಭಾಗ್ ಸ್ವಾಗತಿಸಿದರು. ಡಾ. ಅಭಿಜ್ಞಾ ಶೆಟ್ಟಿ ನಿರೂಪಿಸಿದರು. ಡಾ. ಮಂಜುನಾಥ ವಂದಿಸಿದರು.



ಅಂತಾರಾಷ್ಟ್ರೀಯ ಯೋಗ ದಿನಾಚರಣೆ



• **ಹುಬ್ಬಳ್ಳಿ:** ನೈರುತ್ಯ ರೈಲ್ವೆ ವತಿಯಿಂದ ಗದಗ ರಸ್ತೆಯಲ್ಲಿರುವ ಚಾಲುಕ್ಯ ರೈಲ್ವೆ ಇನ್‌ಸ್ಟಿಟ್ಯೂಟ್‌ನಲ್ಲಿ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು. ರೈಲ್ವೆ ಅಧಿಕಾರಿಗಳು, ಸಿಬ್ಬಂದಿ ಹಾಗೂ ಅವರ ಕುಟುಂಬಸ್ಥರು ಸಕ್ರಿಯವಾಗಿ ಪಾಲ್ಗೊಂಡಿದ್ದರು.

ಖ್ಯಾತ ಯೋಗ ತರಬೇತುಗಾರ್ತಿ ಹಾಗೂ ರಾಜ್ಯ ಮಟ್ಟದ ಚಿನ್ನದ ಪದಕ ವಿಜೇತರಾದ ಉಷಾ ಮೋದ ಅವರು ಯೋಗಸನ ತರಬೇತಿ ನೀಡಿದರು. ನಿಯಮಿತ ಯೋಗ ಅಭ್ಯಾಸದಿಂದಾಗುವ ಪ್ರಯೋಜನಗಳನ್ನು ವಿವರಿಸಿದ ಅವರು, ಯೋಗವು ದೈಹಿಕ ಆರೋಗ್ಯ, ಮಾನಸಿಕ ನೆಮ್ಮದಿ ಮತ್ತು ಒಟ್ಟಾರೆ ಫಿಟ್‌ನೆಸ್ ಅನ್ನು ಸುಧಾರಿಸಲು ಸಹಾಯ ಮಾಡುತ್ತದೆ ಎಂದರು.

ನೈರುತ್ಯ ರೈಲ್ವೆಯ ಪ್ರಧಾನ ವ್ಯವಸ್ಥಾಪಕ (ಜಿಎಂ) ಪಿ. ಅನಂತ್, ಹೆಚ್ಚುವರಿ ಪ್ರಧಾನ ವ್ಯವಸ್ಥಾಪಕ ರಾಮ ಮೋಹನ ರೆಡ್ಡಿ, ಪ್ರಧಾನ ಇಲಾಖಾ ಮುಖ್ಯಸ್ಥರು, ಹಿರಿಯ ಅಧಿಕಾರಿಗಳು, ನೈರುತ್ಯ ರೈಲ್ವೆ ಮಹಿಳಾ ಕಲ್ಯಾಣ ಸಂಘಟನೆಯ ಸದಸ್ಯರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಆರ್‌ಪಿಎಫ್ ಸಿಬ್ಬಂದಿ ಹಾಗೂ ರೈಲ್ವೆ ನೌಕರರು ಉಪಸ್ಥಿತರಿದ್ದರು.

ಯೋಗಕ್ಕೆ ಪ್ರತಿದಿನ ಸಮಯ ಮೀಸಲಿಡಿ

• **ಧಾರವಾಡ:** ಜೈನ ಮಿಲನ್ -ಧಾರವಾಡ ಮತ್ತು ಜನತಾ ಶಿಕ್ಷಣ ಸಮಿತಿಯಿಂದ ಅಂತಾರಾಷ್ಟ್ರೀಯ 12ನೇ ಯೋಗ ದಿನಾಚರಣೆ ಅಂಗವಾಗಿ ಏರ್ಪಡಿಸಿದ ಆರು ದಿನಗಳ ಯೋಗ ತರಬೇತಿ ಶಿಬಿರ ಮುಕ್ತಾಯ ಸಮಾರಂಭ ಜರುಗಿತು.

ಉದ್ಘಾಟಿಸಿದ ಸಂಸ್ಥೆಯ ಕಾರ್ಯದರ್ಶಿ ಡಾ.ಅಜಿತ ಪ್ರಸಾದ ಮಾತನಾಡಿ, ನಮ್ಮ ಮಕ್ಕಳು, ಯುವಜನಾಂಗ ಮೊಬೈಲ್ ಬಿಟ್ಟು, ಮ್ಯಾಟ್ ಹಿಡಿಯಬೇಕು. ಅಂದಾಗ ಮನುಷ್ಯನ ಜೊತೆ ಸಮಾಜದ ಆರೋಗ್ಯವೂ ಸುಧಾರಿಸಲಿದೆ ಎಂದರು. ದಿನಕ್ಕೆ 30 ನಿಮಿಷ ಮೊಬೈಲ್, ಟಿವಿ, ಲ್ಯಾಪ್‌ಟಾಪ್‌ನಿಂದ ದೂರವಿರಬೇಕು. ಯೋಗ ಮತ್ತು ದೈಹಿಕ ಚಟುವಟಿಕೆಗಳಿಗೆ ಸಮಯ ನೀಡಿದದಾಗಲೇ ಮನಸ್ಸಿಗೆ ಶಾಂತಿ, ದೇಹಕ್ಕೆ ಶಕ್ತಿ ಮತ್ತು ಏಕಾಗ್ರತೆ ಹೆಚ್ಚಲಿದೆ ಎಂದರು.

ಯೋಗ ಗುರು ಮಂಜುನಾಥ ಹೂಗಾರ, ಭಾರತಿ ಹೂಗಾರ, ಮಹಾವೀರ ಉಪಾದ್ಯೆ, ಜ್ಯೋತಿ ಕಟಗಿ, ಭರ್ಮಪ್ಪ ಭಾವಿ, ಅಶೋಕ ಬಾಳಿಕಾಯಿ, ನಾಗರಾಜ ಶೆಟ್ಟಿ, ಸಯಿಗೀತ ಉಪಾದ್ಯೆ, ಬ್ರಹ್ಮ ಪ್ರಕಾಶ ಸೇರಿದಂತೆಅನೇಕರಿದ್ದರು. ಈ ವೇಳೆ 'ವಿಶ್ವ ತಂದೆ' ದಿನಾಚರಣೆ ಆಚರಿಸಲಾಯಿತು. ಅನುಷಾ ಸ್ವಾಗತಿಸಿದರು. ಡಾ.ಜಿನ್ನಪ್ಪ ಕುಂದಗೋಳ ನಿರೂಪಿಸಿದರು. ರತ್ನಾಕರ ಹೊಳ್ಳೆ ಪ್ರಮಾಣಪತ್ರ ವಿತರಿಸಿದರು. ಮೋಹನ ಗೋಗಿ ವಂದಿಸಿದರು.



ಟಿಬಿ ಡ್ಯಾಂ ಕ್ರಸ್ಟ್ ಗೇಟ್‌ಗಳ ಲೋಕಾರ್ಪಣೆಗೆ ಭರ್ಜರಿ ಸಿದ್ಧತೆ



ಕೊಪ್ಪಳ: ಉತ್ತರ ಕರ್ನಾಟಕದ ಜೀವನದಿ ತುಂಗಭದ್ರಾ ಜಲಾಶಯದ ನೂತನ ಕ್ರಸ್ಟ್ ಗೇಟ್‌ಗಳ ಲೋಕಾರ್ಪಣೆ ಸಮಾರಂಭಕ್ಕೆ ಕ್ಷಣಗಣನೆ ಆರಂಭವಾಗಿದೆ.

ಜೂ.25ರಂದು ಕಾರ್ಯಕ್ರಮ ನಿಗದಿಯಾಗಿದ್ದು, ಕೊಪ್ಪಳ ಜಿಲ್ಲೆಯ ಮುನಿರಾಬಾದ್ ಗ್ರಾಮದ ಪ್ರೌಢ ಶಾಲಾ ಆವರಣದಲ್ಲಿ ಬೃಹತ್ ವೇದಿಕೆಯು ಸಿದ್ಧವಾಗುತ್ತಿದೆ. ಈ ಕಾರ್ಯಕ್ರಮಕ್ಕೆ ಕರ್ನಾಟಕ, ತೆಲಂಗಾಣ ಮತ್ತು ಆಂಧ್ರಪ್ರದೇಶ ಮೂರು ರಾಜ್ಯಗಳ ಮುಖ್ಯಮಂತ್ರಿಗಳು ಸೇರುತ್ತಿರುವುದು ವಿಶೇಷತೆಯಾಗಿದೆ. ಜೊತೆಗೆ ಮೂರೂ ರಾಜ್ಯಗಳ ಸಚಿವರು, ಶಾಸಕರು, ಸರ್ಕಾರದ ಉನ್ನತ ಮಟ್ಟದ ಅಧಿಕಾರಿಗಳು ಸಹ ಆಗಮಿಸುತ್ತಿದ್ದಾರೆ.

ಮೂರು ರಾಜ್ಯಗಳ ಮುಖ್ಯಮಂತ್ರಿಗಳು ಭಾಗವಹಿಸುತ್ತಿರುವ ಮಹತ್ವದ ಈ ಕಾರ್ಯಕ್ರಮವು ಶಿಸ್ತುಬದ್ಧವಾಗಿ ನಡೆಯುವ ದಿಶೆಯಲ್ಲಿ ಸೂಕ್ತ ಭದ್ರತೆ ಮತ್ತು ಮುನ್ನೆಚ್ಚರಿಕೆ ಕ್ರಮಗಳು ವೇಗವಾಗಿ ನಡೆಯುತ್ತಿವೆ. ರಾಜ್ಯದ ಜಲ ಸಂಪನ್ಮೂಲ ಸಚಿವರು, ತುಂಗಭದ್ರಾ ಅಣೆಕಟ್ಟಿನ ಅಚ್ಚುಕಟ್ಟು ಪ್ರದೇಶದ ಸಂಸದರು ಹಾಗೂ ಶಾಸಕರು ಹಲವು ಸಭೆಗಳನ್ನು ನಡೆಸಿ ಕಾರ್ಯಕ್ರಮದ ಸಿದ್ಧತೆಗಾಗಿ ಅಧಿಕಾರಿಗಳಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ. ಬಳ್ಳಾರಿ ವಲಯದ ಐಜಿಪಿ ಡಾ.ಹರ್ಷ ಪಿಎಸ್, ಕೊಪ್ಪಳ ಜಿಲ್ಲೆಯ ಜಿಲ್ಲಾಧಿಕಾರಿಗಳಾದ ಡಾ.ಸುರೇಶ ಇಟ್ನಾಳ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಡಾ.ರಾಮ್ ಅರಸಿದ್ದಿ ಜೊತೆಗೆ ವಿಜಯನಗರ ಹಾಗೂ ಬಳ್ಳಾರಿ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಒಗ್ಗೂಡಿ, ಅಧಿಕಾರಿಗಳೊಂದಿಗೆ ಈಗಾಗಲೇ ಹತ್ತಾರು ಸುತ್ತಿನ ಸಭೆಗಳನ್ನು ನಡೆಸಿ, ಹಲವಾರು ನಿರ್ದೇಶನಗಳನ್ನು ನೀಡಿ ಕಾರ್ಯಪ್ರವೃತ್ತರಾಗಿದ್ದಾರೆ.

ಐಜಿಪಿ ಹರ್ಷ ಅವರಿಂದ ಸಭೆ ಕಳೆದ 15 ದಿನಗಳಿಂದ ಮೇಲಿಂದ ಮೇಲೆ ಡ್ಯಾಮ್ ಪ್ರದೇಶಕ್ಕೆ ಭೇಟಿ ನೀಡುತ್ತಿರುವ ಬಳ್ಳಾರಿ ವಲಯದ ಐಜಿಪಿ ಡಾ.ಪಿ.ಎಸ್. ಹರ್ಷ ಅವರು ಜೂನ್ 23ರಂದು ಸಹ ಮುನಿರಾಬಾದ್ ಶಾಲಾ ಮೈದಾನದಲ್ಲಿ ಕೊಪ್ಪಳ, ವಿಜಯನಗರ, ಬಳ್ಳಾರಿ ಜಿಲ್ಲೆಗಳ ಎಸ್ಪಿ, ಡಿವೈಎಸ್ಪಿ, ಸಿಪಿಐ, ಪಿಎಸ್‌ಐ ಸೇರಿದಂತೆ ಖಾಕಿ ಪಡೆಯೊಂದಿಗೆ ಸಭೆ ನಡೆಸಿ ಭದ್ರತಾ ಕ್ರಮಗಳಿಗೆ ಸಂಬಂಧಿಸಿದಂತೆ ಕೆಲ ಪ್ರಮುಖ ನಿರ್ದೇಶನಗಳನ್ನು ನೀಡಿದರು.

ಸ್ವಾಗತ ಕಮಾನುಗಳು: ಕಾರ್ಯಕ್ರಮಕ್ಕೆ ಆಗಮಿಸಲಿರುವ ರಾಜ್ಯದ ಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ, ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು, ತೆಲಂಗಾಣ ಮುಖ್ಯಮಂತ್ರಿ ಎ ರೇವಂತ ರೆಡ್ಡಿ ಸೇರಿದಂತೆ, ಉಪ ಮುಖ್ಯಮಂತ್ರಿಗಳು, ಸಚಿವರು, ಸಂಸದರು, ಶಾಸಕರು ಮತ್ತು ಇನ್ನಿತರ ಗಣ್ಯರ ಭಾವಚಿತ್ರದ ಕಮಾನುಗಳು ಕಾರ್ಯಕ್ರಮದ ಸುತ್ತಲಿನ ಪ್ರದೇಶದಲ್ಲಿ ಹಾಗೂ ಕೊಪ್ಪಳ ಮತ್ತು ಹೊಸಪೇಟೆಯ ಪ್ರಮುಖ ರಸ್ತೆಗಳಲ್ಲಿ ಕಾಣುತ್ತಿವೆ.

ತುಂಗೆಯ ಅಂಗಳದಲ್ಲಿ ಸಿಂಗಾರ: ಸಿಎಂ ಕಾರ್ಯಕ್ರಮ ಹಿನ್ನೆಲೆಯಲ್ಲಿ ತುಂಗಭದ್ರಾ ಡ್ಯಾಮನ ಸುತ್ತಲು ಸುಗಮ ರಸ್ತೆ ಸಂಚಾರಕ್ಕಾಗಿ ಹಲವಾರು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ತುಂಗೆಯ ತಟದಲ್ಲಿರುವ ಹಸಿರು ಸಿರಿಯ ಗ್ರಾಮ ಮುನಿರಾಬಾದನಲ್ಲಿನ ಪ್ರಮುಖ ರಸ್ತೆಗಳನ್ನು ಅಗಲೀಕರಣಗೊಳಿಸಲಾಗಿದೆ. ಮುಖ್ಯ ರಸ್ತೆಯಲ್ಲಿನ ರಸ್ತೆ ವಿಭಜಕಗಳಿಗೆ ಸುಣ್ಣ-ಬಣ್ಣ ಬಳಿಯಲಾಗುತ್ತಿದೆ. ಮುನಿರಾಬಾದ್ ಸೇರಿದಂತೆ ತುಂಗೆಯ ಅಂಗಳದಲ್ಲಿ ಎಲ್ಲೆಡೆ ಹಬ್ಬದ ಸಂಭ್ರಮ ಕಾಣುತ್ತಿದೆ.

ರೈತರ ಮೊಗದಲ್ಲಿ ಸಂತಸ

ಕೊಪ್ಪಳ, ವಿಜಯನಗರ, ಬಳ್ಳಾರಿ ಹಾಗೂ ರಾಯಚೂರು ಜಿಲ್ಲೆಯ ಸಾವಿರಾರು ಎಕರೆ ಭೂಮಿಗೆ ನೀರುಣಿಸುವ ತುಂಗಭದ್ರಾ ಜಲಾಶಯಕ್ಕೆ ಹೊಸ ಗೇಟಗಳನ್ನು ಅಳವಡಿಸಿರುವುದು ಈ ಭಾಗದ ರೈತರ ಮೊಗದಲ್ಲಿ ಸಂತಷ ಮೂಡಿಸಿದೆ. ತುಂಗಭದ್ರೆಯು ಈ ವರ್ಷವೂ ತುಂಬಿಕೊಂಡು ಈ ಭಾಗದಲ್ಲಿ ಎಂದಿನಂತೆ ಎಲ್ಲೆಡೆ ಹಸಿರು ಕಾಣಲಿ ಎಂಬುದು ಈ ನೆಲದ ಜನರ ಆಶಯವಾಗಿದೆ.

- ತುಂಗೆಯ ಅಂಗಳದಲ್ಲಿ ಹಬ್ಬದ ಸಂಭ್ರಮ
- ಟಿಬಿ ಡ್ಯಾಮ್, ಮುನಿರಾಬಾದನಲ್ಲಿ ಖಾಕಿ ಪಡೆಯಿಂದ ಸರ್ಪಗಾವಲು
- ಕೊಪ್ಪಳ, ವಿಜಯನಗರ, ಬಳ್ಳಾರಿ, ರಾಯಚೂರು ಜಿಲ್ಲೆಗಳ ಅನ್ನದಾತರ ಮೊಗದಲ್ಲಿ ಹರ್ಷ
- ಉ.ಕ. ಜೀವನದಿ ತುಂಗಭದ್ರಾ ಜಲಾಶಯಕ್ಕೆ ಹೊಸ ಕಳೆ

ಮಳೆಗಾಲದಲ್ಲಿ ಸುಗಮ ರೈಲು ಸಂಚಾರಕ್ಕೆ ಇಲಾಖೆ ಕ್ರಮ

ನೈಋತ್ಯ ರೈಲ್ವೆ ಅಗತ್ಯ ಸಿದ್ಧತೆ



ಹುಬ್ಬಳ್ಳಿ: ರೈಲು ಸಂಚಾರಕ್ಕೆ ಮಳೆಗಾಲದಲ್ಲಿ ಎದುರಾಗುವ ಸವಾಲುಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ನೈಋತ್ಯ ರೈಲ್ವೆ ವಲಯ ಅಗತ್ಯ ಸಿದ್ಧತೆಗಳನ್ನು ಕೈಗೊಂಡಿದೆ.

ಹಿಂದಿನ ಪ್ರವಾಹದ ಇತಿಹಾಸವನ್ನು ಆಧರಿಸಿ ಗುರುತಿಸಲಾದ 15 ಪ್ರಮುಖ ಸೇತುವೆಗಳಲ್ಲಿ ನೀರಿನ ಮಟ್ಟ ನಿರ್ವಹಣಾ ಉಪಕರಣಗಳನ್ನು ಅಳವಡಿಸಲಾಗಿದೆ. ಈ ಸಾಧನಗಳು ನೈಜ ಸಮಯದಲ್ಲಿ ನೀರಿನ ಮಟ್ಟದ ಮಾಹಿತಿ ಒದಗಿಸುವುದರೊಂದಿಗೆ, ಅಧಿಕಾರಿಗಳಿಗೆ ದೈನಂದಿನ ಸ್ವಯಂಚಾಲಿತ ಎಸ್‌ಎಂಎಸ್ ಎಚ್ಚರಿಕೆಗಳನ್ನು ಕಳುಹಿಸಿ, ಸಕಾಲಿಕ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲು ಸಹಕಾರಿಯಾಗಿವೆ.

ನೀರು ನಿಲುಗಡೆಯ ಅಪಾಯವಿರುವ 48 ರಸ್ತೆ ಕೆಳಸೇತುವೆಗಳು ಗುರುತಿಸಲ್ಪಟ್ಟಿದ್ದು, ಅವುಗಳಲ್ಲಿ ಹೂಳು ತೆಗೆಯುವುದು, ಪ್ರವಾಹ ಮಟ್ಟ ಸೂಚಕಗಳನ್ನು ಅಳವಡಿಸುವುದು, ಎಚ್ಚರಿಕೆ ಫಲಕಗಳನ್ನು ಸ್ಥಾಪಿಸುವುದು ಹಾಗೂ ನಿರಂತರ ಮೇಲ್ವಿಚಾರಣೆ ಜಾರಿಗೊಳಿಸಲಾಗಿದೆ.

ಆಯ್ದ ಆರ್‌ಯುಬಿಗಳಲ್ಲಿ ಪ್ರಾಯೋಗಿಕವಾಗಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದ್ದು, ಬ್ರಿಡ್ಜ್ ಮ್ಯಾನೇಜ್‌ಮೆಂಟ್ ಸಿಸ್ಟಮ್ ಮೂಲಕ ನೈಜ ಸಮಯದ ಮೇಲ್ವಿಚಾರಣೆ ನಡೆಯುತ್ತಿದೆ. ಹೆಚ್ಚಿನ ಗಾಳಿಯ ಪರಿಸ್ಥಿತಿಗಳನ್ನು ಗಮನಿಸಲು ಮೈಸೂರು-ಅರಸೀಕೆರೆ ಮಾರ್ಗದ ಸಾಗರಕಟ್ಟೆ ಸಮೀಪ ಅನಿಮೋಮೀಟರ್ ಅನ್ನು ಸ್ಥಾಪಿಸಲಾಗಿದೆ.

ಹವಾಮಾನ ಸಂಬಂಧಿತ ತುರ್ತು ಪರಿಸ್ಥಿತಿಗಳಿಗೆ ತಕ್ಷಣ ಪ್ರತಿಕ್ರಿಯಿಸಲು ಹುಬ್ಬಳ್ಳಿಯಲ್ಲಿರುವ ಕೇಂದ್ರ ನಿಯಂತ್ರಣ ಕಚೇರಿ ಭಾರತ ಹವಾಮಾನ ಇಲಾಖೆಯಿಂದ ಎಚ್ಚರಿಕೆಗಳನ್ನು ಸ್ವೀಕರಿಸಿ, ಅವುಗಳನ್ನು ತಕ್ಷಣವೇ ಸಂಬಂಧಿತ ಕ್ಷೇತ್ರಾಧಿಕಾರಿಗಳಿಗೆ ರವಾನಿಸುತ್ತದೆ.

ಜತೆಗೆ, 52 ಮಳೆ ಮಾಪನ ಕೇಂದ್ರಗಳಿಂದ ಸಂಗ್ರಹಿಸಲಾದ ದೈನಂದಿನ ಮಳೆಯ ಮಾಹಿತಿಯನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡಲಾಗುತ್ತಿದೆ. ತುರ್ತು ಪರಿಸ್ಥಿತಿಗಳಲ್ಲಿ ತ್ವರಿತ ಪುನಃಸ್ಥಾಪನೆ ಕಾರ್ಯಗಳನ್ನು ಕೈಗೊಳ್ಳಲು ಬಂಡೆಗಳು ಮತ್ತು ಮರಳು ಚೀಲಗಳಂತಹ ಮಾನ್ಸೂನ್ ಮೀಸಲು ಸಾಮಗ್ರಿಗಳನ್ನು ಹುಬ್ಬಳ್ಳಿ ಮತ್ತು ಮೈಸೂರು ವಿಭಾಗಗಳ 7 ಪ್ರಮುಖ ಸ್ಥಳಗಳಲ್ಲಿ ಪೂರ್ವಭಾವಿಯಾಗಿ ಸಂಗ್ರಹಿಸಲಾಗಿದೆ. ಅಗತ್ಯವಿದ್ದಲ್ಲಿ ತಕ್ಷಣ ಬಳಸಲು ಅಗೆಯುವ ಯಂತ್ರಗಳು, ಕಂಪ್ರೆಸರ್‌ಗಳು ಸೇರಿದಂತೆ ವಿವಿಧ ಉಪಕರಣಗಳನ್ನೂ ಸಿದ್ಧವಾಗಿರಿಸಲಾಗಿದೆ.

ವೈದ್ಯಕೀಯ ನೆರವು

ತುರ್ತು ಸಂದರ್ಭಗಳಲ್ಲಿ ತಕ್ಷಣ ವೈದ್ಯಕೀಯ ನೆರವು ಒದಗಿಸಲು ಎಲ್ಲ ವಿಭಾಗಗಳಲ್ಲಿ ಸಂಪೂರ್ಣ ಸಜ್ಜಿತ ಸಹಾಯಕ ವೈದ್ಯಕೀಯ ಪರಿಹಾರ ರೈಲುಗಳು ಮತ್ತು ಸ್ವಯಂ ಚಾಲಿತ ಅಪಘಾತ ಪರಿಹಾರ ರೈಲುಗಳನ್ನು ಕಾರ್ಯತಂತ್ರದ ರೀತಿಯಲ್ಲಿ ನಿಯೋಜಿಸಲಾಗಿದೆ.

ಇಳಿಜಾರು ಪ್ರದೇಶಗಳ ಸ್ಥಿರತೆ ಹೆಚ್ಚಿಸಲು ಮಣ್ಣಿನ ನೈಲಿಂಗ್, ಬಂಡೆಗಳ ಅಳವಡಿಕೆ, ಮರದ ಕೊಂಬೆಗಳ ಕತ್ತರಿಸುವುದು, ಹುಲ್ಲಿನ ಬಲವರ್ಧನೆ ಹಾಗೂ ಗೇಬಿಯನ್ ಮತ್ತು ರಿಟೈನಿಂಗ್ ಗೋಡೆಗಳಂತಹ ರಕ್ಷಣಾತ್ಮಕ ಕಾಮಗಾರಿ ಕೈಗೊಳ್ಳಲಾಗಿದೆ.

ದುರ್ಬಲ ಘಾಟ್ ವಿಭಾಗಗಳಲ್ಲಿ ಸುರಂಗ ಪ್ರವೇಶ ಭಾಗಗಳನ್ನು ವಿಸ್ತರಿಸುವ ಮೂಲಕ ಬಂಡೆಗಳು ಹಳಿಗೆ ಬೀಳುವುದನ್ನು ತಡೆಯಲಾಗಿದೆ. ಪಕ್ಕದ ಚರಂಡಿಗಳು ಮತ್ತು ಕ್ಯಾಚ್‌ವಾಟರ್ ಡ್ರೈನ್‌ಗಳನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸಲಾಗಿದೆ. ಮಳೆಗಾಲದಲ್ಲಿ ಪೆಟ್ರೋಲಿಂಗ್ ವ್ಯವಸ್ಥೆ ತೀವ್ರಗೊಳಿಸಲಾಗಿದ್ದು, ಅಪಾಯದ ಪ್ರದೇಶಗಳಲ್ಲಿ ಕಾವಲುಗಾರರನ್ನು ನಿಯೋಜಿಸಲಾಗಿದೆ.

ನೀರಿನ ಮೂಲಗಳ ಅಚಾನಕ್ ಒಡೆತ ಅಥವಾ ಹೆಚ್ಚುವರಿ ನೀರಿನ ಬಿಡುಗಡೆಗಳಿಂದ ಉಂಟಾಗಬಹುದಾದ ಅಪಾಯಗಳನ್ನು ತಗ್ಗಿಸಲು ಸ್ಥಳೀಯ ಆಡಳಿತದೊಂದಿಗೆ ಜಂಟಿ ಪರಿಶೀಲನೆಗಳನ್ನು ನಡೆಸಲಾಗಿದೆ.

ಫೈರಿಂಗ್: ಇಬ್ಬರಿಗೆ ಗಾಯ


ಧಾರವಾಡ: ಚಿನ್ನದ ಅಂಗಡಿ ಬಳಿ ನಡೆದ ಗಲಾಟೆಯ ಸಮಯದಲ್ಲಿ ಮಾಲೀಕ ಇಬ್ಬರ ಮೇಲೆ ಗುಂಡು ಹಾರಿಸಿದ ಪ್ರಕರಣ ನಡೆದಿದ್ದು, ಇಬ್ಬರನ್ನು ಖಾಸಗಿ ಆಸ್ಪತ್ರೆಗೆ ರವಾನೆ ಮಾಡಲಾಗಿದೆ.

ಗರಗ ಗ್ರಾಮದ ಮೌನೇಶ ಬಡಿಗೇರ ಗುಂಡು ವ್ಯಕ್ತಿ ಎಂದು ತಿಳಿದಿದೆ. ಇವರ ಬಳಿ ಚಿನ್ನ ಅಡವಿಟ್ಟು ಮರಳಿ ಬಿಡಿಸಿಕೊಳ್ಳಲು ಬಂದಾಗ ಘಟನೆ ನಡೆದಿದೆ. ಸ್ಥಳಕ್ಕೆ ಗರಗ ಠಾಣೆಯ ಪೊಲೀಸರು ದೌಡಾಯಿಸಿದ್ದು, ಸಂಪೂರ್ಣವಾದ ಮಾಹಿತಿ ಸಿಗಬೇಕಿದೆ. ಗುಂಡು ಹಾರಿಸಿದ ವ್ಯಕ್ತಿಯನ್ನ ಪೊಲೀಸರು ವಶಕ್ಕೆ ಪಡೆದಿದ್ದಾರೆಂದು ತಿಳಿದು ಬಂದಿದೆ.

ಮಹಾರಾಷ್ಟ್ರದಲ್ಲಿ ಅಡಿಕೆ ಸಾಗಾಟದ ಲಾರಿಗಳ ವಶ ಖಂಡನೀಯ: ಶಾಸಕ ಹೆಬ್ಬಾರ್

ಯಲ್ಲಾಪುರ: ಮಹಾರಾಷ್ಟ್ರದ ಕೊಲ್ಲಾಪುರ, ಸೊಲ್ಲಾಪುರ, ಪುಣೆ ಹಾಗೂ ಮುಂಬೈ ಭಾಗಗಳಲ್ಲಿ ಎಲ್ಲ ಅಗತ್ಯ ದಾಖಲೆಗಳೊಂದಿಗೆ ಕಾನೂನು ಬದ್ಧವಾಗಿ ಸಾಗಾಟ ಮಾಡಲಾಗುತ್ತಿದ್ದ ಅಡಿಕೆ ತುಂಬಿದ ಲಾರಿಗಳನ್ನು ಆಹಾರ ಸುರಕ್ಷತಾ ನಿಯಮಗಳ ಉಲ್ಲಂಘನೆ ಎಂಬ ನೆಪದಲ್ಲಿ ಮಹಾರಾಷ್ಟ್ರ ಬಿಜೆಪಿ ಸರ್ಕಾರ ವಶಪಡಿಸಿಕೊಳ್ಳುತ್ತಿರುವುದು ಅತ್ಯಂತ ಖಂಡನೀಯ ಹಾಗೂ ರೈತ ವಿರೋಧಿ ಕ್ರಮವಾಗಿದೆ ಎಂದು ಶಾಸಕ ಶಿವರಾಮ ಹೆಬ್ಬಾರ್ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಉತ್ತರ ಕನ್ನಡ, ಶಿವಮೊಗ್ಗ ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳ ಸಾವಿರಾರು ಅಡಿಕೆ ಬೆಳೆಗಾರರು ಕಳೆದ ಎರಡು ವರ್ಷಗಳಿಂದ ಎಲ್ಲೆಚುಕ್ಕೆ ರೋಗದ ಹಾವಳಿಯಿಂದ ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ. ಬೆಳೆ ನಷ್ಟ, ಉತ್ಪಾದನೆ ಕುಸಿತ ಹಾಗೂ ಆರ್ಥಿಕ ಸಂಕಷ್ಟದಿಂದ ರೈತರು ಈಗಾಗಲೇ ಕಂಗೆಟ್ಟಿದ್ದು, ಇಂತಹ ಸಂದರ್ಭದಲ್ಲಿ ಮಹಾರಾಷ್ಟ್ರದ ಬಿಜೆಪಿ ಸರ್ಕಾರದ ಈ ಕ್ರಮ ರೈತರ ಗಾಯದ ಮೇಲೆ ಬರೆ ಎಳೆದಂತಾಗಿದೆ.



ಅಡಿಕೆ ಬೆಳೆಗಾರರು ಮತ್ತು ವ್ಯಾಪಾರಸ್ಥರು ಎಲ್ಲಾ ಕಾನೂನು ಬದ್ಧ ದಾಖಲೆಗಳನ್ನು ಹೊಂದಿದ್ದರೂ ಲಾರಿಗಳನ್ನು ವಶಪಡಿಸಿಕೊಳ್ಳುತ್ತಿರುವುದರಿಂದ ಮಾರುಕಟ್ಟೆಯಲ್ಲಿ ಭಾರೀ ಆತಂಕ ಉಂಟಾಗಿದೆ. ರೈತರು ತಮ್ಮ ಉತ್ಪನ್ನಕ್ಕೆ ನ್ಯಾಯಯುತ ಬೆಲೆ ಸಿಗದೆ ಆರ್ಥಿಕವಾಗಿ ಮತ್ತಷ್ಟು ಸಂಕಷ್ಟಕ್ಕೆ ಸಿಲುಕುವ ಪರಿಸ್ಥಿತಿ ನಿರ್ಮಾಣವಾಗಿದೆ.

ಅಡಿಕೆ ಬೆಳೆಗಾರರ ಜೀವನಾಧಾರಕ್ಕೆ ಧಕ್ಕೆ ತರುವ ಇಂತಹ ದಮನಕಾರಿ ಕ್ರಮಗಳನ್ನು ತಕ್ಷಣವೇ ನಿಲ್ಲಿಸಬೇಕು. ಕೇಂದ್ರ ಹಾಗೂ ಮಹಾರಾಷ್ಟ್ರದ ಬಿಜೆಪಿ ಸರ್ಕಾರ ರೈತರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಸಮಸ್ಯೆಯನ್ನು ತುರ್ತಾಗಿ ಪರಿಹರಿಸಬೇಕು. ರೈತರ ಬದುಕು ಮತ್ತು ಅವರ ಶ್ರಮದೊಂದಿಗೆ ಚೆಲ್ಲಾಟ ನಡೆಸುವ ಯಾವುದೇ ಕ್ರಮವನ್ನು ಸಹಿಸಲಾಗುವುದಿಲ್ಲ. ರಾಜ್ಯದ ಲಕ್ಷಾಂತರ ಅಡಿಕೆ ಬೆಳೆಗಾರರ ಹಿತಾಸಕ್ತಿ ಗೆ ಧಕ್ಕೆ ಉಂಟುಮಾಡುವ ಈ ವಿಚಾರದಲ್ಲಿ ಸರ್ಕಾ ರಗಳು ಕೂಡಲೇ ಮಧ್ಯಪ್ರವೇಶಿಸಿ ನ್ಯಾಯ ಒದಗಿಸಬೇಕು. ಇಲ್ಲವಾದಲ್ಲಿ ರೈತರು ಮತ್ತು ಅಡಿಕೆ ಬೆಳೆಗಾರರ ಪರವಾಗಿ ರಾಜ್ಯಾದ್ಯಂತ ಉಗ್ರ ಹೋರಾಟ ಹಮ್ಮಿಕೊಳ್ಳುವುದರ ಜೊತೆಗೆ ಪ್ರಜಾಸತ್ತಾತ್ಮಕ ಹೋರಾಟದ ಎಲ್ಲಾ ಮಾರ್ಗ ಗಳನ್ನು ಬಳಸಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಮೇಯರ್ ಚುನಾವಣೆ ಜು.4ಕ್ಕೆ

ಧಾರವಾಡ: ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ 25ನೇ ಅವಧಿ ಮೇಯರ್ ಮತ್ತು ಉಪಮೇಯರ್ ಸ್ಥಾನಗಳಿಗೆ ಜು.4ರಂದು ಬೆಳಗ್ಗೆ 9 ಗಂಟೆಗೆ ಪಾಲಿಕೆಯ ಸಭಾಭವನದಲ್ಲಿ ನಡೆಯಲಿದೆ. ಬೆಳಗ್ಗೆ 9ರಿಂದ 11ರವರೆಗೆ ನಾಮಪತ್ರಗಳ ಸಲ್ಲಿಕೆ ಬಳಿಕ ನಾಮಪತ್ರ ಪರಿಶೀಲನೆ, ನಾಮಪತ್ರ ಘೋಷಣೆ, ಉಮೇದುವಾರಿಕೆ ಹಿಂಪಡೆ, ಉಮೇದುವಾರರ ಪಟ್ಟಿ ಘೋಷಣೆ, ಅವಿರೋಧ ಆಯ್ಕೆಯಾದಲ್ಲಿ ಫಲಿತಾಂಶ ಘೋಷಣೆ, ಅಭ್ಯರ್ಥಿಯು ಒಬ್ಬರಕ್ಕಿಂತ ಹೆಚ್ಚಿಗೆ ಇದ್ದಲ್ಲಿ ಕೈ ಎತ್ತುವ ಮೂಲಕ ಮತದಾನ, ಮತಗಳ ಎಣಿಕೆ ಹಾಗೂ ಫಲಿತಾಂಶ ಘೋಷಣೆ ಪ್ರಕ್ರಿಯೆಗಳು ಜರುಗಲಿವೆ ಎಂದು ಪಾಲಿಕೆ ಆಯುಕ್ತ ಡಾ.ರುದ್ರೇಶ ಘಾಳಿ ತಿಳಿಸಿದ್ದಾರೆ.

ಬಡ ಜನರ ಧ್ವನಿ | ಸಂಘದ ಶಿಸ್ತಿನ ಸಿಪಾಯಿ | ಹಲವು ಹುದ್ದೆಗಳಲ್ಲಿ ಸೇವೆ

ಸಂಘಟನಾ ಚತುರ ಮಹೇಶ ಟೆಂಗಿನಕಾಯಿ



ಪಕ್ಷ ನಿಷ್ಠ, ಸಾಮಾನ್ಯ ಕಾರ್ಯಕರ್ತ ಹಾಗೂ ಪಕ್ಷಕ್ಕೆ ತಮ್ಮನ್ನು ತಾವು ಅರ್ಪಿಸಿಕೊಳ್ಳುವ ಮೂಲಕ ಸಂಘಟನೆಯಲ್ಲಿ ತೊಡಗಿಕೊಂಡರೆ, ಪಕ್ಷ ಅಂಥವರನ್ನು ಗುರುತಿಸಿ ಸ್ಥಾನಮಾನ ನೀಡುತ್ತದೆ ಎನ್ನುವುದಕ್ಕೆ ನಮ್ಮೆದುರು ಆದರ್ಶ ಉದಾಹರಣೆಯಾಗಿ ನಿಂತವರು ಹುಬ್ಬಳ್ಳಿ-ಧಾರವಾಡ ಸೆಂಟ್ರಲ್ ಕ್ಷೇತ್ರದ ಜನಪ್ರಿಯ ಶಾಸಕರಾದ, ಯುವ ನಾಯಕ ಶ್ರೀ ಮಹೇಶ ಟೆಂಗಿನಕಾಯಿ.

ಆಯ್ಕೆಯಾಗಿ ಮೊದಲ ವರ್ಷದಲ್ಲಿ ಜನಸಾಮಾನ್ಯರ ಸಮಸ್ಯೆಗಳು ಹಾಗೂ ಸರ್ಕಾರ ದುರಾಡಳಿತದ ಬಗ್ಗೆ ಅಧಿವೇಶನದಲ್ಲಿ ಬಯಲಿಗೆಳೆಯುವ ಮೂಲಕ ಬಡ ಜನರಿಗೆ ಧ್ವನಿಯಾಗಿದ್ದಾರೆ.

ಕ್ಷೇತ್ರದಲ್ಲಿ ಪ್ರವಾಸೋದ್ಯಮಕ್ಕೆ ಪ್ರೋತ್ಸಾಹ, ಮೂಲಸೌಕರ್ಯ ಸೇರಿದಂತೆ ಅಭಿವೃದ್ಧಿ ಕನಸು ಕಂಡಿರುವ ಶಾಸಕ ಮಹೇಶ ಟೆಂಗಿನಕಾಯಿ ಕಳೆದ ಮೂರು ವರ್ಷದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳಿಗೆ ಮುನ್ನುಡಿ ಬರೆದಿದ್ದಾರೆ. ಸಂಘಟನೆ, ಹೋರಾಟ, ಸಾಮಾಜಿಕ ಕಳಕಳಿಯ ಮೂಲಕ ಬಿಜೆಪಿಗೆ ಶಕ್ತಿ ತುಂಬುತ್ತಲೇ ಹುಬ್ಬಳ್ಳಿ-ಧಾರವಾಡ ಸೆಂಟ್ರಲ್ ಕ್ಷೇತ್ರದ ಅಭಿವೃದ್ಧಿಗೆ ನಿರಂತರ ತೊಡಗಿಕೊಂಡು ಯುವ ನಾಯಕರಿಗೆ ಮಾದರಿಯಾಗಿದ್ದಾರೆ.





ಜವಾಬ್ದಾರಿ ನಿರ್ವಹಣೆ

ಬಿಜೆಪಿ ಯುವ ಮೋರ್ಚಾ ರಾಷ್ಟ್ರೀಯ ಕಾರ್ಯಕಾರಿಣಿ ಸಮಿತಿ ಸದಸ್ಯರಾಗಿದ್ದಾಗ ರಾಷ್ಟ್ರ ಮಟ್ಟದ ರಾಜಕಾರಣಿಗಳ ಒಡನಾಟ ಮಹೇಶ ಟೆಂಗಿನಕಾಯಿ ಅವರಿಗೆ ಬೆಳೆಯಿತು. ರಾಜ್ಯದ ವಿವಿಧೆಡೆ ಮಾತ್ರವಲ್ಲದೆ, ವಿವಿಧ ರಾಜ್ಯಗಳಲ್ಲಿ ತಮಗೆ ವಹಿಸಿದ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸುವ ಮೂಲಕ ಪ್ರಮುಖರ ಗಮನ ಸೆಳೆದು, ಪಕ್ಷ ನೀಡಿ ಜವಾಬ್ದಾರಿ ಉತ್ತಮವಾಗಿ ನಿಭಾಯಿಸಿದ್ದಾರೆ.

ಪ್ರವಾಸೋದ್ಯಮಕ್ಕೆ ಪ್ರೋತ್ಸಾಹ

ಹು-ಧಾ ಸೆಂಟ್ರಲ್ ಕ್ಷೇತ್ರವನ್ನು ಪ್ರವಾಸೋದ್ಯಮ ಹಬ್ ಮಾಡಲು ನಿರ್ಧಸಿದ್ದು, ಇಲ್ಲಿಯ ಪುರಾತನ ದೇವಸ್ಥಾನವಾದ ಸಾಯಿನಗರ ಚಂದ್ರಮೌಳೇಶ್ವರ ಮಂದಿರದ ಅಭಿವೃದ್ಧಿಗೆ ಪಣ ತೊಟ್ಟಿದ್ದಾರೆ. ಈಗಾಗಲೇ ವಿಸ್ತೃತ ಯೋಜನಾ ವರದಿ ಸಿದ್ಧವಾಗಿದ್ದು, ಸರ್ಕಾರದಿಂದ 25 ಕೋಟಿ ಅನುದಾನಕ್ಕೆ ಬೇಡಿಕೆ ಇಟ್ಟಿದ್ದಾರೆ. ಅಷ್ಟೇ ಅಲ್ಲದೇ ಶಾಸಕರ ಅನುದಾನದಲ್ಲಿ 2 ಕೋಟಿ ಅಭಿವೃದ್ಧಿಗೆ ಮೀಸಲಿಟ್ಟಿದ್ದು, ಶೀಘ್ರದಲ್ಲಿಯೇ ಕಾಮಗಾರಿ ಆರಂಭಿಸಲಾಗುತ್ತದೆ.

ಇಂದಿರಾ ಗಾಜಿನ ಮನೆ, ಉಣಕಲ್ ಕೆರೆ ಹಾಗೂ ಉದ್ಯಾನವನ ಅಭಿವೃದ್ಧಿ ಮಾಡಲಾಗಿದೆ. ಉಣಕಲ್ ಕೆರೆ ಬೋಟಿಂಗ್ ಹಾಗೂ ಜೇಪ್‌ಲೈನ್ ಸಹ ಆರಂಭಿಸಲಾಗಿದೆ. ನೃಪತುಂಗ ಬೆಟ್ಟವನ್ನು 5 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಗೆ ಯೋಜನೆ ರೂಪಿಸಿದ್ದಾರೆ.






ಇಂದು ಜನ್ಮದಿನದ ಸಂಭ್ರಮ

ಪಕ್ಷಕ್ಕೆ ಸಕ್ರಿಯ ನಂಟು

ಕಳೆದ ಮೂರು ದಶಕದಿಂದ ಬಿಜೆಪಿಯ ಸಕ್ರಿಯ ನಂಟು ಹೊಂದಿರುವ ಮಹೇಶ ಟೆಂಗಿನಕಾಯಿ ಆಟೊಮೊಬೈಲ್ ಎಂಜಿನಿಯರಿಂಗ್ ಡಿಪ್ಲೋಮಾ ಶಿಕ್ಷಣ ಪೂರೈಸಿದ್ದಾರೆ. ಇವರು ಯಶಸ್ವಿ ಉದ್ಯಮಿಯೂ ಹೌದು. ಶಾಲಾ ದಿನಗಳಿಂದಲೂ ಮಹೇಶ ಟೆಂಗಿನಕಾಯಿ ಅವರು ರಾಷ್ಟ್ರೀಯ ಸ್ವಯಂಸೇವಕ ಸಂಘದ ಶಿಸ್ತಿನ ಸಿಪಾಯಿ. 90ರ ದಶಕದ ಆರಂಭದಲ್ಲಿ ನಾಯಕ ಎಲ್.ಕೆ.ಅಡ್ವಾಣಿ ಅವರ ನೇತೃತ್ವದಲ್ಲಿ ಹುಬ್ಬಳ್ಳಿಯ ಕಿತ್ತೂರು ಚನ್ನಮ್ಮ ಮೈದಾನದಲ್ಲಿ ನಡೆದ ರಾಷ್ಟ್ರಧ್ವಜರೋಹಣ ಹೋರಾಟದಲ್ಲಿ ಮಹೇಶ ಟೆಂಗಿನಕಾಯಿ ಅವರು ಮಹತ್ವದ ಪಾತ್ರ ವಹಿಸಿದ್ದರು. ದೇಶ ಸೇವೆಗೆ ತುಡಿಯುತ್ತಿದ್ದ ಮಹೇಶ ಟೆಂಗಿನಕಾಯಿ 1989ರಿಂದ 1992ರ ವರೆಗೆ ಬೂತ್ ಕಾರ್ಯಕರ್ತರಾಗಿ 1998ರಲ್ಲಿ ವಾರ್ಡ್ 42ರ ಅಧ್ಯಕ್ಷ ಸ್ಥಾನ ಅಲಂಕರಿಸಿದರು. ಬಳಿಕ ಹುಬ್ಬಳ್ಳಿ ನಗರ ಯುವ ಮೋರ್ಚಾದ ಉಪಾಧ್ಯಕ್ಷ, ಮೋರ್ಚಾದ ರಾಜ್ಯ ಉಪಾಧ್ಯಕ್ಷ, ಮೋರ್ಚಾದ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ಹಾಗೂ ರಾಜ್ಯ ಪ್ರಧಾನ ಕಾರ್ಯದರ್ಶಿ ಸೇರಿದಂತೆ ಅನೇಕ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಸರ್ಕಾರ ಹಾಗೂ ಪಕ್ಷ ಇವರ ಕಾರ್ಯಕ್ಷಮತೆಯನ್ನು ಗುರುತಿಸಿ ಕೆಪಿಎಸ್‌ಸಿ ಸದನ ಸಮಿತಿಗೆ ಸದಸ್ಯರಾಗಿ ಆಯ್ಕೆ ಮಾಡಿದೆ. ಇತ್ತೀಚೆಗೆ ನಡೆದ ಕೇರಳ ಹಾಗೂ ತೆಲಂಗಾಣ ರಾಜ್ಯಗಳ ವಿಧಾನ ಸಭಾಗಳ ಕೆಲವು ಕ್ಷೇತ್ರಗಳ ಚುನಾವಣೆ ಜವಾಬ್ದಾರಿಯನ್ನು ನಿಭಾಯಿಸಿದ್ದಾರೆ.

ಮಹತ್ವದ ತಿರುವು

ರಾಜಕೀಯವಾಗಿ ಮಹೇಶ ಟೆಂಗಿನಕಾಯಿ ರಾಷ್ಟ್ರ ಮಟ್ಟದಲ್ಲಿ ಪ್ರವರ್ಧಮಾನಕ್ಕೆ ಬಂದಿದ್ದು 2023ರ ರಾಜ್ಯ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ, ಬಿಜೆಪಿ ವರಿಷ್ಠರು ಹು-ಧಾ ಸೆಂಟ್ರಲ್ ವಿಧಾನಸಭೆ ಕ್ಷೇತ್ರದಿಂದ ಕಣಕ್ಕಿಳಿಸಿದಾಗ 36 ಸಾವಿರ ಮತಗಳ ಅಂತರದಿಂದ ಜಯಗಳಿಸಿ ಕ್ಷೇತ್ರದ ಇತಿಹಾಸದಲ್ಲಿಯೇ ಅತ್ಯಂತ ಹೆಚ್ಚಿನ ಅಂತರದ ಗೆಲುವನ್ನು ದಾಖಲಿಸಿದರು.



ಜಗ್ಗಲಗಿ ಹಬ್ಬದ ಶ್ರೇಯ

ಗಂಡುಮೆಟ್ಟಿನ ನಾಡು ಹುಬ್ಬಳ್ಳಿ ಸೇರಿದಂತೆ ಉತ್ತರ ಕರ್ನಾಟಕದ ಭಾಗದಲ್ಲಿ ಬಣ್ಣದ ಹಬ್ಬದ ಅಂಗವಾಗಿ ಕಳೆದ 13 ವರ್ಷದಿಂದ ಜಗ್ಗಲಗಿ(ಹಲಗಿ) ಹಬ್ಬವನ್ನು ಆಯೋಜಿಸಿಕೊಂಡು ಬರಲಾಗುತ್ತಿದೆ. ಸಾಕಷ್ಟು ಜನಪ್ರಿಯತೆ ಪಡೆದುಕೊಂಡಿರುವ ಈ ಹಬ್ಬವನ್ನು ಪ್ರತಿವರ್ಷವೂ ವ್ಯವಸ್ಥಿತವಾಗಿ ಸಂಘಟಿಸುತ್ತಿರುವ ಶ್ರೇಯಸ್ಸು ಶಾಸಕ ಮಹೇಶ ಟೆಂಗಿನಕಾಯಿ ಅವರಿಗೆ ಸಲ್ಲುತ್ತದೆ. ಕಣ್ಮರೆಯಾಗುತ್ತಿರುವ ಜನಪದ ಕಲೆಗಳನ್ನು ಪ್ರೋತ್ಸಾಹಿಸುವ ಮೂ ಉದ್ದೇಶ ಈ ಕಾರ್ಯಕ್ರಮದಾಗಿದೆ.



ಅಭಿವೃದ್ಧಿಗೆ ಮುನ್ನಡಿ

ಇವರು ಹು-ಧಾ ಸೆಂಟ್ರಲ್ ಕ್ಷೇತ್ರಕ್ಕೆ ಇಲ್ಲಿಯವರೆಗೆ ರಸ್ತೆ, ಗಟಾರು, ಒಳಚರಂಡಿ, ಶೌಚಾಲಯ ಸೇರಿದಂತೆ ಹಲವಾರು ಅಭಿವೃದ್ಧಿ ಕಾರ್ಯಗಳು ಲೋಕಾರ್ಪಣೆಗೊಂಡಿದ್ದು, ಇನ್ನೂ ಹಲವಾರು ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿವೆ. ಕಳೆದ ಮೂರು ವರ್ಷದಲ್ಲಿ 50 ಕೋಟಿ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾರ್ಯಗಳ ಮಾಡಿದ್ದಾರೆ. ಮುಂದೆಯೂ ಸಹ 100 ಕೋಟಿ ಅನುದಾನದಲ್ಲಿ 70-80 ಕಿ.ಮೀ. ರಸ್ತೆ ಅಭಿವೃದ್ಧಿಗೆ ಮಾಸ್ಟರ್ ಪ್ಲ್ಯಾನ್ ರೂಪಿಸಿದ್ದಾರೆ.







ಗೆಲುವೇ ಸಾಧನೆ

ಚುನಾವಣೆಯಲ್ಲಿ ಜಯ ಗಳಿಸಿದ ನಂತರ ಮೊದಲ ಬಾರಿಗೆ ವಿಧಾನಸಭೆಗೆ ಕಾಲಿಟ್ಟ ಸಂದರ್ಭದಲ್ಲಿ ಮಹೇಶ ಟೆಂಗಿನಕಾಯಿ ಅವರು ನಡೆದುಕೊಂಡ ರೀತಿ ಜನಮನ್ನಣೆಗೆ ಪಾತ್ರವಾಯಿತು. ಸದನದ ಕಲಾಪಗಳಲ್ಲಿ ಶ್ರದ್ಧೆಯಿಂದ ಪಾಲ್ಗೊಳ್ಳುತ್ತ ಜನಪರ ಕಾಳಜಿಯನ್ನು ತೋರಿಸಿಕೊಂಡು ಬಂದಿದ್ದಾರೆ. ಈ ಬಗ್ಗೆ ಶಾಸಕ ಮಹೇಶ ಟೆಂಗಿನಕಾಯಿ ಹೊಸದಿಗಂತಕ್ಕೆ ಮಾತನಾಡಿ, ಸರ್ಕಾರ ಗ್ಯಾರಂಟಿ ಯೋಜನೆಗಳ ಅವ್ಯವಹಾರಗಳ ಬಗ್ಗೆ ಧ್ವನಿ ಎತ್ತುವ ಮೂಲಕ ಸರ್ಕಾರ ತಲೆ ತಗ್ಗಿಸುವಂತೆ ಮಾಡಿದ್ದೇನೆ. ಈ ವಿಷಯ ದೇಶದಾದ್ಯಂತ ಸುದ್ದಿಯಾಗಿತ್ತು. ಗೃಹಲಕ್ಷ್ಮಿ 5 ಸಾವಿರ ಕೋಟಿ, ಅನ್ನಭಾಗ್ಯ 667 ಕೋಟಿ ಹಗರಣಗಳ ಬಗ್ಗೆ ಆಧಾರ ಸಮೇತ ಸದನದಲ್ಲಿ ಮಾತನಾಡಿ ಸರ್ಕಾರ ಕ್ಷಮೆಯಾಚಿಸುವಂತೆ ಮಾಡಿದ್ದೇನೆ. ಇನ್ನೂ ಅಂತರ ಜಾತಿ ವಿವಾಹದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ದೊರೆಯಬೇಕಾದ ಅನುದಾನದ ಬಗ್ಗೆ ಧ್ವನಿ ಎತ್ತುವ ಮೂಲಕ ಬಡ, ದಲಿತರ ಪರ ಧ್ವನಿ ಎತ್ತುವ ಮೂಲಕ ಸರ್ಕಾರವನ್ನು ಎಚ್ಚರಿಸುವ ಕಾರ್ಯ ಮಾಡಿದ್ದೇನೆ. ಎಫ್‌ಎಂಸಿಜಿ ಕ್ಲಸ್ಟರ್‌ಗೆ ಆದ್ಯತೆ ನೀಡಲು ಒತ್ತಾಯ. ಗಂಗೂಬಾಯಿ ಹಾನಗಲ್ ಗುರುಕುಲ ಟ್ರಸ್ಟ ಮುಚ್ಚುವುದರ ಕುರಿತು ಸಾಕಷ್ಟು ಹೋರಾಟ ಮಾಡಲಾಗಿದೆ ಎಂದರು. ಕಳೆದ ಮೂರು ವರ್ಷದಲ್ಲಿ ಒಂದು ಹಂತದ ಅಭಿವೃದ್ಧಿ ಯಶಸ್ವಿಯಾಗಿ ಮಾಡಿದ್ದೇನೆ. ಸರ್ಕಾರದಿಂದ ನಮಗೆ ಯಾವುದೇ ಸಹಕಾರ ದೊರೆಯದಿದ್ದರೂ ಕೇಂದ್ರ ಸರ್ಕಾರ ನೆರವಿನಿಂದ ಅಭಿವೃದ್ಧಿ ಕಾರ್ಯ ಮಾಡಲಾಗುತ್ತಿದೆ. ಸ್ವಚ್ಛ ಭಾರತ ಕಲ್ಪನೆಯೊಂದಿಗೆ ಕಳೆದ 17 ವಾರದಿಂದ ಜನರು ಹಾಗೂ ಕಾರ್ಯಕರ್ತರ ತೊಡಗಿಸಿಕೊಂಡು ಸ್ವಚ್ಛತಾ ಕಾರ್ಯ ಮಾಡಲಾಗುತ್ತಿದೆ. ಎಸ್‌ಸಿ ಹಾಗೂ ಎಸ್‌ಟಿ ಮೋರ್ಚಾ ವತಿಯಿಂದ ಆರೋಗ್ಯ ಭಾಗ್ಯ ಯೋಜನೆಯಡಿ ಆರೋಗ್ಯ ಶಿಬಿರ ಆರಂಭಿಸಲಾಗುತ್ತಿದೆ. ನಗರದ ಮೇಲ್ಸೇತುವೆ ಕಾಮಗಾರಿಗೆ ವೇಗ ಪಡೆಯುವಂತೆ ಮಾಡಿದ್ದು, ಶೇ. 85 ರಷ್ಟು ಕಾಮಗಾರಿ ಮುಗಿದಿದೆ. ಡಿಸೆಂಬರ್ ಅಷ್ಟೊತ್ತಿಗೆ ಪೂರ್ತಿ ಕಾಮಗಾರಿ ಮುಗಿಯಲಿದೆ. ಸೆಂಟ್ರಲ್ ಕ್ಷೇತ್ರದ ವತಿಯಿಂದ ಮೊಟ್ಟಮೊದಲ ಬಾರಿಗೆ ಪ್ರಗತಿ ಪರಿಶೀಲನಾ ಸಭೆ ಮಾಡಲಾಗಿದೆ. ಎಂಜಿಎಂವೈ ಯೋಜನೆ ಯಡಿ 35 ಕೋಟಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಯೋಜನೆ ರೂಪಿಸಲಾಗಿದೆ ಎಂದರು.







ರಾಷ್ಟ್ರಪತಿ ಭವನದಲ್ಲಿ ಮಂಗಳವಾರ ನಡೆದ ಸಮಾರಂಭದಲ್ಲಿ'ಲ್ಲಿ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದ ಸಾಧಕ ಡಾ.ಪ್ರಭಾಕರ್ ಬಸವಪ್ರಭು ಕೋರೆ, ಪ್ರಸಾರ ಭಾರತಿಯ ಸಾಧಕ ಶಶಿ ಶೇಖರ್ ವೇಂಪತಿ, ಹಿಮೋಫಿಲಿಯಾ ರೋಗಿಗಳ ಪಾಲಿನ ಆಶಾಕಿರಣ ಡಾ.ಸುರೇಶ್ ಹನಗವಾಡಿ, ಕಿಚನ್ ಮೊಗಲ್ ಟಿ.ಟಿ. ಜಗನ್ನಾಥನ್ ಅವರಿಗೆ ಮರಣೋತ್ತರ, ರಕ್ಷಣಾ ಮತ್ತು ವಿಮಾನಯಾನ ರಂಗದ ಹೆಮ್ಮೆಯ ವಿಜ್ಞಾನಿ ಡಾ.ಶುಭಾ ವೆಂಕಟೇಶ್ ಅಯ್ಯಂಗಾರ್ ಅವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಪದ್ಮಶ್ರೀ ಪ್ರಶಸ್ತಿ ಪ್ರದಾನ ಮಾಡಿದರು.

ರಾಜೇಶ್ ಎಕ್ಸ್‌ಪೋರ್ಟ್ ಮೇಲೆ ಇಡಿ ದಾಳಿ

• ಹೊಸದಿಲ್ಲಿ: ಚಿನ್ನ ಶುದ್ಧೀಕರಣ ಮತ್ತು ಆಭರಣ ತಯಾರಿಕಾ ಕ್ಷೇತ್ರದ ಪ್ರಮುಖ ಸಂಸ್ಥೆಯಾಗಿರುವ ಬೆಂಗಳೂರು ಮೂಲದ ರಾಜೇಶ್ ಎಕ್ಸ್‌ಪೋರ್ಟ್ ಲಿಮಿಟೆಡ್ ವಿರುದ್ಧ ಜಾರಿ ನಿರ್ದೇಶನಾಲಯ ಮಂಗಳವಾರ ದಾಳಿ ನಡೆಸಿದೆ. ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆಯಲ್ಲಿ ಬೆಂಗಳೂರು ಮತ್ತು ಮುಂಬೈನಲ್ಲಿರುವ ಕಂಪನಿಗೆ ಸಂಬಂಧಿಸಿದ ಒಟ್ಟು 9 ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆ ನಡೆಸಲಾಗಿದೆ. ಕಂಪನಿಯ ಹಣಕಾಸು ವ್ಯವಹಾರಗಳಲ್ಲಿ ಭಾರೀ ಅಕ್ರಮ ನಡೆದಿರುವ ಶಂಕೆ ವ್ಯಕ್ತಪಡಿಸಿ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ ತನಿಖೆ ಆರಂಭಿಸಿದ ಬೆನ್ನಲ್ಲೇ ಜಾರಿ ನಿರ್ದೇಶನಾಲಯವೂ ಕಾರ್ಯಪ್ರವೃತ್ತವಾಗಿದೆ. ವಿದೇಶಿ ವಿನಿಮಯ ಕಾಯ್ದೆ ಉಲ್ಲಂಘನೆ, ಬೇನಾಮಿ ವ್ಯಕ್ತಿಗಳ ಹೆಸರಿನಲ್ಲಿ ಕಂಪನಿಯ ಷೇರುಗಳ ವಹಿವಾಟು ಹಾಗೂ ವಿದೇಶಗಳಿಗೆ ಹಣ ವರ್ಗಾವಣೆ ಮಾಡಿರುವ ಆರೋಪಗಳ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

170 ಕೋಟಿ ರೂ.ಗೂ ಅಧಿಕ ಹಣ ವಿದೇಶಕ್ಕೆ? ಕಂಪನಿಯಿಂದ 2 ಕೋಟಿ ಅಮೆರಿಕನ್ ಡಾಲರ್‌ಗಿಂತಲೂ ಅಧಿಕ ಮೊತ್ತವನ್ನು ಅಕ್ರಮವಾಗಿ ವಿದೇಶಕ್ಕೆ ವರ್ಗಾಯಿಸಲಾಗಿದೆ ಎಂದು ಜಾರಿ ನಿರ್ದೇಶನಾಲಯ ಶಂಕಿಸಿದೆ. ಭಾರತೀಯ ರೂಪಾಯಿ ಮೌಲ್ಯದಲ್ಲಿ ಇದು ಸುಮಾರು 170 ಕೋಟಿ ರೂ.ಗೂ ಅಧಿಕವಾಗುತ್ತದೆ. ಕಂಪನಿಯ ಲೆಕ್ಕಪತ್ರಗಳಲ್ಲಿ ಘೋಷಿಸಿರುವ ಚಿನ್ನದ ದಾಸ್ತಾನು ಮತ್ತು ವಾಸ್ತವಿಕ ದಾಸ್ತಾನಿನ ನಡುವೆ ಶೇ.40ರಷ್ಟು ವ್ಯತ್ಯಾಸವಿದೆ ಎಂಬ ಆರೋಪವೂ ತನಿಖೆಯಲ್ಲಿದೆ. ಸುಮಾರು 3 ಸಾವಿರ ಕೋಟಿ ರೂ. ವ್ಯಾಪಾರ ಬಾಕಿಯನ್ನು ಕಾಲ್ಪನಿಕ ಚಿನ್ನದ ಆಮದಿಗೆ ಹೊಂದಾಣಿಕೆ ಮಾಡಿರುವ ಸಾಧ್ಯತೆಯಿದೆ. ಆದರೆ ಈ ಚಿನ್ನವನ್ನು ನಿಜವಾಗಿಯೂ ಪೂರೈಸಲಾಗಿದೆಯೇ ಎಂಬುದು ಅನುಮಾನಾಸ್ಪದವಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಹಿಂದೂ ಧರ್ಮ ಆರೆಸ್ಸೆಸ್ಸಿನ ಸೊತ್ತಲ್ಲ
– ಬಿ.ಕೆ.ಹರಿಪ್ರಸಾದ್
– ಖಂಡಿತ ಅಲ್ಲ, ಹಾಗಂತ ಅವರು ಹೇಳಿಯೂ ಇಲ್ಲ, ಆದರೆ ಆರೆಸ್ಸೆಸ್ ಇಲ್ಲವಾಗಿದ್ದಲ್ಲಿ ಭಾರತದಲ್ಲಿ ಹಿಂದುಗಳು ಹಿಂದುಗಳಾಗಿ ಬದುಕಲಾಗುತ್ತಿರಲಿಲ್ಲ ಎಂಬುದರಲ್ಲಿ ಸಂಶಯವಿಲ್ಲ!

ದಿನ ಭವಿಷ್ಯ

ಮೇಷ ವೃತ್ತಿಕ್ಷೇತ್ರದಲ್ಲಿ ನಿಮಗೆ ಪ್ರತಿಸ್ಪರ್ಧೆ ಹುಟ್ಟಿಕೊಳ್ಳಲಿದೆ. ನಿಮ್ಮ ನಿರ್ವಹಣೆ ಉತ್ತಮ ಪಡಿಸಿ. ಕೌಟುಂಬಿಕ ಸಾಮರಸ್ಯ, ಸೌಹಾರ್ದ.

ವೃಷಭ ಹರ್ಷತರುವ ಬೆಳವಣಿಗೆ. ಆದರೂ ನಿಮಗೆ ಆನಂದಿಸುವ ಮನಸ್ಸಿಲ್ಲ. ಪ್ರೀತಿಯಲ್ಲಿ ತೊಡಕು. ಖರ್ಚು ಹೆಚ್ಚಳದ ಆತಂಕ.

ಮಿಥುನ ನಿಮ್ಮ ಕೆಲಸ ನೀವು ಮಾಡುತ್ತಿರಿ. ಟೀಕೆಗೆ ಹೆದರಬೇಕಿಲ್ಲ. ಆರ್ಥಿಕ ತೊಡಕು ನಿವಾರಣೆ. ಬಸುರಿಯರು ಹೆಚ್ಚು ಎಚ್ಚರ ವಹಿಸಬೇಕು.

ಕಟಕ ಉದ್ಯೋಗವಕಾಶ ಲಭ್ಯ. ಸಂಬಂಧವನ್ನು ಜತನದಿಂದ ಕಾಪಾಡಿ. ವದಂತಿ ನಂಬಬೇಡಿ. ಹಿರಿಯರಿಗೆ ಉಸಿರಾಟದ ಸಮಸ್ಯೆ ಸಂಭವ.

ಸಿಂಹ ಇತರರ ಜತೆ ಸಂವಹನ ಸಾಧಿಸುವಲ್ಲಿ ಯಶಸ್ಸು. ಇದರಿಂದ ನಿಮ್ಮ ಕೆಲಸ ಸುಗಮ. ಆಪ್ತರ ಜತೆ ಪ್ರವಾಸ ಸಾಧ್ಯತೆ. ಆರ್ಥಿಕ ಉನ್ನತಿ.

ಕನ್ಯಾ ಕಾಲಮಿತಿಯಲ್ಲಿ ಕೆಲಸ ಪೂರೈಸಿ. ಟೀಕೆಗೆ ಎರವಾಗಬೇಡಿ. ವೃತ್ತಿ ಬದಲಾವಣೆಯ ಅವಕಾಶ ತೆರೆದಿದೆ. ಶೇರು ಹೂಡಿಕೆ ಒಳಿತು ತಾರದು.

ತುಲಾ ಪಾಲುದಾರಿಕೆ ಕಡಿದುಕೊಳ್ಳುವುದಿದ್ದರೆ ಸೌಹಾರ್ದದಿಂದ ಮಾಡಿ. ವಿರೋಧ ಕಟ್ಟಿಕೊಳ್ಳದಿರಿ. ಕೌಟುಂಬಿಕ ಸೌಹಾರ್ದ. ಆರ್ಥಿಕ ಪ್ರಗತಿ.

ವೃಶ್ಚಿಕ ನಿಮ್ಮ ಸುತ್ತ ಸೌಹಾರ್ದಮಯ ಪರಿಸರ. ನಿರೀಕ್ಷಿಸಿದ ಆರ್ಥಿಕ ಪ್ರಗತಿ ಸಾಧ್ಯವಾಗದು. ಗಾಯದ ಸಮಸ್ಯೆ ಸಂಭವ.

ಧನು ಆಪ್ತರ ಜತೆಗಿನ ಉದ್ವಿಗ್ನತೆ ಹೆಚ್ಚಲಿದೆ. ಮನಶ್ಯಾಂತಿ ದೂರ. ವೃತ್ತಿಯಲ್ಲಿ ಅಹಿತ ಪ್ರಸಂಗ ಎದುರಿಸುವಿರಿ. ಖರ್ಚು ಹೆಚ್ಚಲಿದೆ.

ಮಕರ ವೃತ್ತಿಯ ಒತ್ತಡವು ನೆಮ್ಮದಿ ಕೆಡಿಸುವುದು. ಆತ್ಮೀಯರ ಜತೆ ಕಾಲ ಕಳೆಯಿರಿ. ಖರ್ಚು ನಿಯಂತ್ರಿಸಲು ಸೂಕ್ತ ಕ್ರಮ ತೆಗೆದುಕೊಳ್ಳಿ.

ಕುಂಭ ಹಲವಾರು ಹೊಣೆ ನಿಮ್ಮ ಹೆಗಲೇರುವುದು. ಸೂಕ್ತ ನೆರವೂ ಲಭ್ಯ. ಹೊಟ್ಟೆ ಸಂಬಂಧಿ ಅಸೌಖ್ಯ ಕಾಡಬಹುದು. ಶೇರು ಹೂಡಿಕೆ ಲಾಭಕರ.

ಮೀನ ಸಣ್ಣ ವಿಷಯಕ್ಕೆ ಮನೆಯಲ್ಲಿ ವಾಗ್ವಾದ ನಡೆದೀತು. ಮಾತಿಗೆ ಮಾತು ಕೂಡಿಸಬೇಡಿ. ವೃತ್ತಿ ಒತ್ತಡ ನಿವಾರಣೆ, ಗುರಿ ಈಡೇರಿಕೆ.

ರಾಹುಕಾಲ: 12.00-1.30
ಗುಳಿಕಕಾಲ: 10.30-12.00

ಅದೃಷ್ಟ ಸಂಖ್ಯೆ : 3,7,0,2

ನಗರಾಭಿವೃದ್ಧಿಗೆ ಯೋಜನೆ ರೂಪಿಸಲು ಸಚಿವರಿಗೆ ತೇಜಸ್ವಿಸೂರ್ಯ ಪತ್ರ

ಹಳೆ ಯೋಜನೆ ಶೀಘ್ರ ಮುಗಿಸಿ



• ಬೆಂಗಳೂರು: ನಗರದ ಸಮಗ್ರ ಅಭಿವೃದ್ಧಿಗೆ ಯೋಜನೆ ರೂಪಿಸಿ ಜಾರಿ ಮಾಡುವಂತೆ ಬೆಂಗಳೂರು ನಗರಾಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅವರಿಗೆ ಪತ್ರ ಬರೆದಿರುವುದಾಗಿ ಸಂಸದ ತೇಜಸ್ವಿ ಸೂರ್ಯ ತಿಳಿಸಿದ್ದಾರೆ. ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಮಂಗಳವಾರ ಸುದ್ದಿಗೋಷ್ಠಿ ನಡೆಸಿದ ಅವರು, ಕೃಷ್ಣ ಬೈರೇಗೌಡ ಅವರನ್ನು ಭೇಟಿ ಮಾಡಿ ನಗರದ ಅಭಿವೃದ್ಧಿ ಮತ್ತು ನಾಗರಿಕರಿಗೆ ಅನುಕೂಲವಾಗುವ 15 ಅಂಶಗಳ ಬಗ್ಗೆ ವಿಸ್ತಾರವಾಗಿ ಚರ್ಚೆ ನಡೆಸಿರುವುದಾಗಿ ತಿಳಿಸಿದರು.

ನಗರದ ಜನರ ಜೀವನ ಮಟ್ಟ ಸುಧಾರಿಸುವ ಕ್ರಮಗಳಿಗೆ ಶೇ.100ರಷ್ಟು ಬೆಂಬಲವನ್ನು ಕೇಂದ್ರ ಸರ್ಕಾರದ ಮಟ್ಟದಲ್ಲಿ ನೀಡಲಾಗುವುದು. ಸಚಿವರಿಗೆ ಅಭಿವೃದ್ಧಿ ಸಂಬಂಧ ವಿವರವನ್ನು ಅಂಕಿ-ಅಂಶಗಳ ಸಮೇತ ನೀಡಿದ್ದೇನೆ. ರಾಜ್ಯ ಸರ್ಕಾರದ 30ಕ್ಕೂ ಹೆಚ್ಚು ಯೋಜನೆಗಳು ಬಾಕಿಯಿವೆ. ಹೊಸ ಯೋಜನೆ ಜಾರಿ ಮಾಡುವ ಮೊದಲು ಹಳೆಯ ಯೋಜನೆಗಳನ್ನು ಶೀಘ್ರ ಮುಗಿಸಬೇಕು ಎಂದು ತಿಳಿಸಿರುವುದಾಗಿ ವಿವರಿಸಿದರು.

ಬಿಎಂಆರ್‌ಸಿಎಲ್, ಬಿಡಿಎ, ಬಿಎಂಎಲ್‌ಟಿಎ, ಕೆಆರ್‌ಐಡಿಎಲ್ ಸೇರಿ 12ಕ್ಕೂ ಹೆಚ್ಚು ಮೂಲ ಸೌಕರ್ಯ ಏಜೆನ್ಸಿಗಳು ಬೆಂಗಳೂರಿನಲ್ಲಿವೆ. ಇವುಗಳ ನಡುವೆ ಅಂತರ ಸಮನ್ವಯ ಏಜೆನ್ಸಿಯಿಲ್ಲ. ಆದ್ದರಿಂದ ಬಿಎಂಎಲ್‌ಟಿಎಗೆ ಅಧ್ಯಕ್ಷರ ನೇಮಕ ಮಾಡಿ ನೋಡಲ್ ಏಜೆನ್ಸಿ ಮಾಡಬೇಕು. ಮೆಟ್ರೊ ವಿಸ್ತರಣೆ, ರಸ್ತೆ ಗುಂಡಿಗಳನ್ನು ಮುಚ್ಚುವುದು, ಪಾದಚಾರಿ ಮಾರ್ಗದ ಬಗ್ಗೆ ಚರ್ಚಿಸಿರುವುದಾಗಿ ಹೇಳಿದರು.

ಮೆಟ್ರೋ ಬೇಗ ಆರಂಭಿಸಿ: ನಾಲ್ಕುವರೆ ವರ್ಷಗಳಿಂದ ಹೊಸ ಮೆಟ್ರೊ ಕಾಮಗಾರಿ ಆರಂಭವಾಗಿಲ್ಲ. ಕೇಂದ್ರ ಸರ್ಕಾರ ಒಪ್ಪಿಗೆ ನೀಡಿರುವ ಮೆಟ್ರೊ ಮೂರನೇ ಹಂತದ ಆರೆಂಜ್ ಮಾರ್ಗಕ್ಕೆ ಎರಡು ವರ್ಷ ಆದರೂ ಟೆಂಡರ್ ಆಗಿಲ್ಲ. ಇದರ ವೆಚ್ಚ ಹೆಚ್ಚಳವಾಗುತ್ತಿದೆ. ವೆಚ್ಚ ಕಡಿಮೆ ಮಾಡಲು ನಿಲ್ದಾಣದ ಪ್ಲಾಟ್‌ಫಾರಂ ಉದ್ದ ಕಡಿಮೆ ಮಾಡಿದರೆ ಉಪಯೋಗ ಆಗದು. ಬೇರೆ ಮಹಾನಗರದಲ್ಲಿ ಮೆಟ್ರೊ ಓಡಾಟ ಮುಂಜಾನೆ ಬೇಗ ಆರಂಭವಾಗುತ್ತದೆ. ಅದೇ ರೀತಿ ಬೆಂಗಳೂರಿನಲ್ಲೂ ಆರಂಭ ಮಾಡಬೇಕು ಎಂದು ಮನವಿ ಮಾಡಿದ್ದೇನೆ ಎಂದು ವಿವರಿಸಿದರು.

ಶ್ವೇತಪತ್ರ ಬಿಡುಗಡೆ ಮಾಡಿ: ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಸಾವಿರಾರು ಕೋಟಿಯನ್ನು ಗುಂಡಿ ಮುಚ್ಚಲು ವ್ಯಯಿಸಿರುವುದಾಗಿ ಹೇಳಿದೆ. ಒಂದೇ ವರ್ಷದಲ್ಲಿ ಸಾವಿರಾರು ಕೋಟಿ ಹಣ ಘೋಷಣೆ ಮಾಡಿದ್ದಾರೆ. ಹಣ ಬಿಡುಗಡೆ ಸಹ ಮಾಡಿದ್ದೇವೆ ಎನ್ನುತ್ತಾರೆ. ಆದರೂ ಗುಂಡಿಗಳು ಮಾತ್ರ ಹಾಗೇ ಇವೆ. ಎನ್‌ಸಿಆರ್‌ಬಿ ಮಾಹಿತಿ ಪ್ರಕಾರ ಗುಂಡಿಗೆ ಬಿದ್ದು ಸಾಯುವವರ ಸಂಖ್ಯೆ ಹೆಚ್ಚುತ್ತಲೇ ಇದೆ. ಹಾಗಾದರೆ ಹಣ ಎಲ್ಲಿ ಹೋಗಿದೆ? ರಸ್ತೆ ಗುಂಡಿ ದುರಸ್ತಿಗೆ ಮೂರು ವರ್ಷದಲ್ಲಿ ಎಷ್ಟು ಹಣ ವ್ಯಯಿಸಿದ್ದೀರಿ ಎಂಬುದರ ಬಗ್ಗೆ 30 ದಿನಗಳೊಳಗೆ ಶ್ವೇತಪತ್ರ ಬಿಡುಗಡೆ ಮಾಡಬೇಕು ಎಂದು ಸಚಿವರಿಗೆ ಆಗ್ರಹಿಸಿದ್ದೇನೆ ಎಂದು ತೇಜಸ್ವಿ ಸೂರ್ಯ ತಿಳಿಸಿದರು.

ಬಿಜೆಪಿ ರಾಜ್ಯ ಮುಖ್ಯ ವಕ್ತಾರ ಅಶ್ವತ್ಥನಾರಾಯಣ್, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್. ಹರೀಶ್, ಮುಖಂಡ ಶ್ರೀಧರ್ ರೆಡ್ಡಿ ಸುದ್ದಿಗೋಷ್ಠಿಯಲ್ಲಿದ್ದರು.

ಬಿಜೆಪಿ ವರಿಷ್ಠರಿಗೆ ಅಡ್ಡ ಮತದಾನದ ಮಾಹಿತಿ

ಪುಟ ೧➜ ಈ ತಂಡವು ಜೂ. 25ರೊಳಗೆ ವರದಿ ನೀಡುವಂತೆಯೂ ಸೂಚನೆ ನೀಡಿದ್ದಾರೆ. ಶಿಸ್ತಿನ ಪಕ್ಷದಲ್ಲಿ ಇಂತಹ ಅಶಿಸ್ತು ಕಂಡುಬಂದಿರುವುದರಿಂದ ಅಂತಹ ಶಾಸಕರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕೆಂದು ಪಕ್ಷದ ನಾಯಕರು, ಕಾರ್ಯಕರ್ತರು ಆಗ್ರಹಿಸುತ್ತಿದ್ದಾರೆ.

ರಾಷ್ಟ್ರೀಯ ಅಧ್ಯಕ್ಷರಿಗೆ ಮಾಹಿತಿ ಕೊಟ್ಟಿದ್ದೇವೆ: ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ

ಪುಟ ೧➜ ಪಕ್ಷ ಬಲಪಡಿಸುವ ನಿಟ್ಟಿನಲ್ಲಿ ಸಂಘಟನಾತ್ಮಕ ಸಲಹೆಗಳನ್ನೂ ನೀಡಿದ್ದಾರೆ. ಮುಂದಿನ ದಿನಗಳಲ್ಲಿ ಪಕ್ಷ ರಾಜ್ಯದಲ್ಲಿ ಅಧಿಕಾರಕ್ಕೆ ಬರುವ ನಿಟ್ಟಿನಲ್ಲಿ ಒಟ್ಟಿಗೆ ಸೇರಿ ಕೆಲಸ ಮಾಡಲು ತಿಳಿಸಿದ್ದಾಗಿ ವಿವರಿಸಿದ್ದಾರೆ. ಪ್ರಕರಣದ ಕುರಿತು ಹಿರಿಯ ಮುಖಂಡ



ಸಿ.ಟಿ.ರವಿ ಅವರ ನೇತೃತ್ವದಲ್ಲಿ ಒಂದು ಸತ್ಯಶೋಧನಾ ಸಮಿತಿ ಮಾಡಿದ್ದೇವೆ. ಅವರು ನಮಗೆ ವರದಿ ಕೊಡಲಿದ್ದು, ಬಳಿಕ ಸಮಗ್ರ ವರದಿಯನ್ನು ರಾಷ್ಟ್ರೀಯ ಅಧ್ಯಕ್ಷರಿಗೆ ಕೊಡಲಿದ್ದೇವೆ ಎಂದು ತಿಳಿಸಿದ್ದಾರೆ. ಧರ್ಮಸ್ಥಳ ಶ್ರೀ ಕ್ಷೇತ್ರದಲ್ಲಿ ಬಿಜೆಪಿ ಶಾಸಕಾಂಗ ಪಕ್ಷದ ಸಭೆ ಕರೆಯುವುದು ಬೇಡ ಎಂಬ ಸಲಹೆಯ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ಆ ಬಗ್ಗೆ ನನ್ನ ಅಭಿಪ್ರಾಯ ತಿಳಿಸಿದ್ದೇನೆ. ಅಂತಿಮವಾಗಿ ಪ್ರತಿಪಕ್ಷ ನಾಯಕ ಆರ್.ಅಶೋಕ ಅವರು ಎಲ್ಲರ ಜತೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲಿ ಎಂದು ಹೇಳಿದ್ದಾರೆ. ಪ್ರತಿಪಕ್ಷ ನಾಯಕ ಆರ್.ಅಶೋಕ ಮಾತನಾಡಿ, ಅಡ್ಡ ಮತದಾನ ಸಂಬಂಧದ ಮಾಹಿತಿ ರಾಷ್ಟ್ರೀಯ ಅಧ್ಯಕ್ಷರ ಬಳಿ ಇದೆ. ನಾವು ಕೊಟ್ಟ ಮಾಹಿತಿ ಮೇರೆಗೆ ತಪ್ಪು ಮಾಡಿದವರ ವಿರುದ್ಧ ಸರಿಯಾದ ಸಮಯಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಪಕ್ಷಕ್ಕೆ ದ್ರೋಹ ಬಗೆದವರಿಗೆ, ಮೋಸ ಮಾಡಿದವರಿಗೆ ಸರಿಯಾದ ಪಾಠ ಕಲಿಸುವುದಾಗಿ ಸ್ಪಷ್ಟವಾಗಿ ಹೇಳಿದ್ದಾರೆಂದು ವಿವರಿಸಿದ್ದಾರೆ. ಪಕ್ಷವನ್ನು ಕರ್ನಾಟಕದ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಗೆಲ್ಲಿಸುವ ದೃಷ್ಟಿಯಿಂದ ಒಗ್ಗಟ್ಟಿನಿಂದ, ಒಳ್ಳೆಯ ರೀತಿಯಿಂದ ಮುನ್ನಡೆಯುವಂತೆ ತಿಳಿಸಿದ್ದಾರೆ. ಅಡ್ಡ ಮತದಾನ ಮಾಡಿದವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳುವುದಾಗಿ ಕೇಂದ್ರದ ನಾಯಕರು ತಿಳಿಸಿದ್ದಾರೆ ಎಂದಿದ್ದಾರೆ.

ವಿದೇಶಿ ದೇಣಿಗೆಯಲ್ಲಿ ಮತಾಂತರಕ್ಕೆ ಅಂಕುಶ

ಪುಟ ೧➜ ಈಗಾಗಲೇ ವಿದೇಶಿ ದೇಣಿಗೆ ಸ್ವೀಕರಿಸುವ ಪರವಾನಗಿ ಹೊಂದಿರುವ ಸಂಸ್ಥೆಗಳು ಕೂಡ ಒಂದು ವರ್ಷದೊಳಗೆ ಈ ಎಲ್ಲ ವಿವರಗಳನ್ನು ಕೇಂದ್ರ ಸರಕಾರಕ್ಕೆ ಸಲ್ಲಿಸಬೇಕು.

ಮತಾಂತರ ಹೊರತುಪಡಿಸಿ ಧಾರ್ಮಿಕ ಕಾರ್ಯಕ್ಕೆ ನೆರವು: ಹೊಸ ನಿಯಮಗಳಲ್ಲಿ ಧಾರ್ಮಿಕ ಕ್ಷೇತ್ರದ 16 ಚಟುವಟಿಕೆಗಳಿಗೆ ವಿದೇಶಿ ದೇಣಿಗೆ ಪಡೆಯಲು ಅವಕಾಶ ನೀಡಲಾಗಿದೆ. ಧಾರ್ಮಿಕ ಸ್ಥಳಗಳ ನಿರ್ಮಾಣ, ನವೀಕರಣ ಮತ್ತು ನಿರ್ವಹಣೆ, ಭಕ್ತಿಗೀತೆಗಳ ಪ್ರೋತ್ಸಾಹ, ಅಂತರ್ಧರ್ಮ ಸಂವಾದ, ಸ್ಮಶಾನ ಮತ್ತು ಸಮಾಧಿ ಸ್ಥಳಗಳ ಅಭಿವೃದ್ಧಿ ಹಾಗೂ ನಿರ್ವಹಣೆ, ಪವಿತ್ರ ಅವಶೇಷಗಳು, ಧಾರ್ಮಿಕ ಕ್ಷೇತ್ರಗಳು ಮತ್ತು ಪುರಾತತ್ವ ಧಾರ್ಮಿಕ ಪರಂಪರೆಯ ರಕ್ಷಣೆಗೆ ವಿದೇಶಿ ಹಣ ಬಳಸಬಹುದಾಗಿದೆ.

ಧಾರ್ಮಿಕ ತತ್ವಶಾಸ್ತ್ರದ ಅಧ್ಯಯನ, ದಾಖಲೀಕರಣ ಮತ್ತು ಸಂರಕ್ಷಣೆಯಲ್ಲಿ ತೊಡಗಿರುವ ಸಂಸ್ಥೆಗಳ ರಕ್ಷಣೆ, ಧಾರ್ಮಿಕ ಶಿಕ್ಷಣ, ಸತ್ಸಂಗ, ಪ್ರವಚನ, ಧ್ಯಾನ ಶಿಬಿರಗಳು ಹಾಗೂ ಸ್ಥಳೀಯ ನಂಬಿಕೆ ಮತ್ತು ಬುಡಕಟ್ಟು ಧಾರ್ಮಿಕ ಪದ್ಧತಿಗಳ ದಾಖಲೀಕರಣ ಮತ್ತು ಪುನರುಜ್ಜೀವನಕ್ಕೂ ನೆರವು ಪಡೆಯಬಹುದಾಗಿದೆ.

ಆದರೆ ಈ ಎಲ್ಲ ಚಟುವಟಿಕೆಗಳನ್ನು ಮತಪ್ರಚಾರ ಮತ್ತು ಮತಾಂತರ ಹೊರತುಪಡಿಸಿ ನಡೆಸಬೇಕು ಎಂದು ನಿಯಮಗಳಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಧಾರ್ಮಿಕ ಗ್ರಂಥಾಲಯಗಳು, ವಸ್ತುಸಂಗ್ರಹಾಲಯಗಳು ಮತ್ತು ದಾಖಲೆ ಭಂಡಾರಗಳ ಸ್ಥಾಪನೆ, ಧಾರ್ಮಿಕ ಆಧಾರಿತ ಸಮಾಲೋಚನಾ ಕೇಂದ್ರಗಳು, ಮಾದಕವಸ್ತು ವ್ಯಸನಮುಕ್ತಿ ಕೇಂದ್ರಗಳು ಮತ್ತು ಸಾಮಾಜಿಕ ಆರೈಕೆ ಕಾರ್ಯಕ್ರಮಗಳಿಗೂ ವಿದೇಶಿ ನಿಧಿ ಪಡೆಯಬಹುದಾಗಿದೆ. ವಿಗ್ರಹ ತಯಾರಿಕೆ, ಚರ್ಚ್ ಕಲೆ, ಧಾರ್ಮಿಕ ಗ್ರಂಥಗಳ ಲಿಪಿಕಲೆ ಮತ್ತು ಧಾರ್ಮಿಕ ಪ್ರತಿಮಾಶಾಸ್ತ್ರದಂತಹ ಸಾಂಪ್ರದಾಯಿಕ ಪವಿತ್ರ ಕಲೆಗಳ ತರಬೇತಿಗೂ ಅವಕಾಶ ಕಲ್ಪಿಸಲಾಗಿದೆ.

ಶೇ.75 ಬಳಕೆ ಬಳಿಕ ಮುಂದಿನ ಕಂತು

ಪುಟ ೧➜ ಹಣವನ್ನು ನಿಗದಿತ ಉದ್ದೇಶಕ್ಕೆ ಬಳಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಸ್ಥಳ ಪರಿಶೀಲನೆಯನ್ನೂ ನಡೆಸಲಾಗುತ್ತದೆ. ಪರಿಶೀಲನೆಯ ಬಳಿಕವೇ ಮುಂದಿನ ಕಂತಿನ ವಿದೇಶಿ ದೇಣಿಗೆ ಬಿಡುಗಡೆಗೆ ಅವಕಾಶ ದೊರೆಯಲಿದೆ.

ವಿದೇಶಿಯರು ಪ್ರಮುಖ ಹುದ್ದೆಯಲ್ಲಿದ್ದರೆ ಪರವಾನಗಿ ಕಷ್ಟ

ಪುಟ ೧➜ ಆದರೆ ನಿರ್ದಿಷ್ಟ ಪ್ರಕರಣಗಳಲ್ಲಿ ಕೇಂದ್ರ ಸರಕಾರವು ವಿಶೇಷ ಆದೇಶದ ಮೂಲಕ ವಿನಾಯಿತಿ ನೀಡಬಹುದಾಗಿದೆ. ಪ್ರಮುಖ ಪದಾಧಿಕಾರಿ ಎಂಬ ವ್ಯಾಖ್ಯಾನವನ್ನೂ ವಿಸ್ತರಿಸಲಾಗಿದ್ದು, ಕಂಪನಿಯ ನಿರ್ದೇಶಕರು, ಸಂಸ್ಥೆಯ ಪಾಲುದಾರರು, ಟ್ರಸ್ಟಿಗಳು, ಹಿಂದು ಅವಿಭಕ್ತ ಕುಟುಂಬದ ಕರ್ತೃ ಮತ್ತು ಸಂಘಟನೆಯ ನಿರ್ವಹಣೆಯ ಮೇಲೆ ನಿಯಂತ್ರಣ ಹೊಂದಿರುವ ಯಾವುದೇ ವ್ಯಕ್ತಿಯನ್ನು ಇದರ ವ್ಯಾಪ್ತಿಗೆ ತರಲಾಗಿದೆ.

ರೈತರ ವಿಶ್ವಾಸದೊಂದಿಗೇ ಟೌನ್‌ಶಿಪ್

ಪುಟ ೧➜ ಬಿಡಿಎ, ಹುಡ್ಕೊ ಇವುಗಳಿಂದ ಯಾವ ರೀತಿ ಅನುದಾನ ಒದಗಿಸಬೇಕು ಎಂಬ ಬಗ್ಗೆ ವಿಸ್ತೃತವಾಗಿ ಚರ್ಚೆ ಆಗಿದೆ. ಆದರೆ ಈ ಯೋಜನೆ ಈಗ ರಾಜಕೀಯ ತಿರುವು ಪಡೆಯುತ್ತಿರುವುದರಿಂದ ಇದನ್ನು ರಾಜಕೀಯದಿಂದ ದೂರ ಇಟ್ಟು ಯಾವ ರೀತಿ ಯೋಜನೆಯನ್ನು ಜಾರಿ ಮಾಡಬೇಕು ಎನ್ನುವ ಬಗ್ಗೆ ಸರ್ಕಾರ, ಮುಖ್ಯಮಂತ್ರಿಗಳು ಎಲ್ಲರೂ ಸೇರಿ ತೀರ್ಮಾನ ಮಾಡುತ್ತೇವೆ ಎಂದು ಪರಮೇಶ್ವರ್ ತಿಳಿಸಿದರು.

ಬಿಡಿದಿ ವಿಚಾರದಲ್ಲಿ ಇಬ್ಬರೂ ಬರೆದಿರುವ ಪತ್ರ ನೋಡಿದ್ದೇನೆ: ಬಿಡಿದಿ ಟೌನ್‌ಶಿಪ್ ವಿಚಾರದಲ್ಲಿ ಕುಮಾರಸ್ವಾಮಿ ಅವರಿಗೆ ಸಿಎಂ ಡಿಕೆಶಿ ಪತ್ರ ಬರೆದಿದ್ದಾರೆ. ಅದಕ್ಕೆ ಪ್ರತಿಯಾಗಿ ಕುಮಾರಸ್ವಾಮಿ ಉತ್ತರ ಕೊಟ್ಟಿದ್ದಾರೆ. ನೀವು ಬಿಡದಿಗೆ ಬನ್ನಿ, ಅಲ್ಲಿನ ರೈತರನ್ನು, ಸಂಬಂಧಪಟ್ಟವರನ್ನು ಕರೆದು, ಅಲ್ಲಿಯೇ ಚರ್ಚೆ ಮಾಡೋಣ ಎಂದು ಕರೆದಿದ್ದಾರೆ. ಆದರೆ 26ಕ್ಕೆ ಬೇಡ, ನನಗೆ ಪೂರ್ವ ನಿಯೋಜಿತ ಕಾರ್ಯಕ್ರಮ ಇದೆ, 27ಕ್ಕೆ ಬನ್ನಿ ಎಂದು ಕುಮಾರಸ್ವಾಮಿ ಅವರು ಕರೆದಿದ್ದಾರೆ. ಈ ಬಗ್ಗೆ ಮುಖ್ಯಮಂತ್ರಿಗಳು ಏನು ತೀರ್ಮಾನ ತೆಗೆದುಕೊಳ್ಳುತ್ತಾರೋ ನೋಡಬೇಕು ಎಂದು ಪರಮೇಶ್ವರ್ ತಿಳಿಸಿದರು.

ಭಾರತದ 36 ರಾಫೆಲ್ ಸುರಕ್ಷಿತ

ಪುಟ ೧➜ ಸೆಪ್ಟೆಂಬರ್ 2026ರ ನಂತರವೂ ರಾಫೆಲ್ ವಿಮಾನಗಳ ನಿರ್ವಹಣೆ, ತಾಂತ್ರಿಕ ನೆರವು ಮತ್ತು ಬಿಡಿಭಾಗಗಳ ಪೂರೈಕೆ ನಿರಂತರವಾಗಿ ನಡೆಯುವಂತೆ ಈ ವ್ಯವಸ್ಥೆ ರೂಪಿಸಲಾಗಿದೆ. ಐದು ತಿಂಗಳ ಅವಧಿಯಲ್ಲಿ ಸುಮಾರು 2,250 ಗಂಟೆಗಳ ಹಾರಾಟ ಯೋಜಿಸಲಾಗಿದೆ. ದೀರ್ಘಾವಧಿಯ ನಿರ್ವಹಣಾ ಒಪ್ಪಂದ ಅಂತಿಮಗೊಳ್ಳುವವರೆಗೆ ಕಾರ್ಯಾಚರಣೆಯಲ್ಲಿ ಯಾವುದೇ ಅಡಚಣೆ ಉಂಟಾಗದಂತೆ ಮಧ್ಯಂತರ ವ್ಯವಸ್ಥೆ ಕಲ್ಪಿಸಲಾಗುತ್ತಿದೆ.

ಜಾಲತಾಣಗಳಲ್ಲಿ ಸುಳ್ಳಿನ ಬಲೆ: ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತಿಯಾಗಿ ಭಾರತ ನಡೆಸಿದ ಆಪರೇಷನ್ ಸಿಂದೂರದ ವೇಳೆ ಹಲವು ರಾಫೆಲ್ ವಿಮಾನಗಳನ್ನು ಹೊಡೆದುರುಳಿಸಿದ್ದಾಗಿ ಪಾಕಿಸ್ತಾನ ಅಧಿಕೃತ ಹೇಳಿಕೆಗಳು ಮತ್ತು ಸಾಮಾಜಿಕ ಜಾಲತಾಣಗಳ ಮೂಲಕ ಪ್ರಚಾರ ನಡೆಸಿತ್ತು. ಆದರೆ ಯಾವುದೇ ವಿಮಾನ ನಷ್ಟವಾಗಿದ್ದರೆ ವಾಯುಪಡೆಯ ನಿರ್ವಹಣಾ ಪ್ರಸ್ತಾವನೆಯಲ್ಲಿ ವಿಮಾನಗಳ ಸಂಖ್ಯೆ 36ಕ್ಕಿಂತ ಕಡಿಮೆಯಾಗಬೇಕಿತ್ತು. ಎಲ್ಲ 36 ವಿಮಾನಗಳಿಗೂ ನೆರವು ಕೋರಿರುವುದು ಪಾಕಿಸ್ತಾನದ ವಾದವನ್ನು ಹುಸಿಗೊಳಿಸಿದೆ.

ಪಾಕ್ ಸಾಮಾಜಿಕ ಜಾಲತಾಣ ಖಾತೆಗಳು ನಾಶವಾಗಿವೆ ಎಂದು ಹೇಳಿದ್ದ ಕೆಲವು ರಾಫೆಲ್ ವಿಮಾನಗಳು ಬಳಿಕ ಕಾರ್ಯಾಚರಣೆಯ ಹಾರಾಟಗಳಲ್ಲಿ ಭಾಗವಹಿಸುತ್ತಿರುವ ಚಿತ್ರಗಳು ಮತ್ತು ದೃಶ್ಯಗಳೂ ಬಹಿರಂಗವಾಗಿದ್ದವು. ಪಾಕಿಸ್ತಾನ ನಡೆಸುತ್ತಿರುವುದು ಅಪಪ್ರಚಾರದ ಅಭಿಯಾನ ಎಂದು ಭಾರತ ಈ ಹಿಂದೆಯೇ ಸ್ಪಷ್ಟಪಡಿಸಿತ್ತು. ಆಪರೇಷನ್ ಸಿಂದೂರದಲ್ಲಿ ರಾಫೆಲ್ ಯುದ್ಧವಿಮಾನಗಳು ಪಾಕಿಸ್ತಾನದೊಳಗಿನ ಗುರಿಗಳ ಮೇಲೆ ನಿಖರ ದಾಳಿ ನಡೆಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದವು. ವಿಮಾನಗಳು ನಿರೀಕ್ಷೆಯಂತೆ ಕಾರ್ಯನಿರ್ವಹಿಸಿದ್ದು, ಯುದ್ಧದಲ್ಲಿ ಯಾವುದೇ ರಾಫೆಲ್ ವಿಮಾನ ನಷ್ಟವಾಗಿಲ್ಲ ಎಂದು ರಕ್ಷಣಾ ಅಧಿಕಾರಿಗಳು ಪ್ರತಿಪಾದಿಸಿದ್ದಾರೆ.

ಇನ್ನೂ 114 ರಾಫೆಲ್ ಖರೀದಿಗೆ ಚಿಂತನೆ: ಈ ನಡುವೆಯೇ ಬಹು ಸಾಮರ್ಥ್ಯದ ಯುದ್ಧವಿಮಾನ ಯೋಜನೆಯಲ್ಲಿ ಫ್ರಾನ್ಸ್‌ನ ಡಸಾಲ್ಟ್ ಸಂಸ್ಥೆಯಿಂದ ಇನ್ನೂ 114 ರಾಫೆಲ್ ವಿಮಾನ ಖರೀದಿಸುವ ಯೋಜನೆಯನ್ನು ಭಾರತ ಮುಂದುವರಿಸಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ನಡುವಿನ ಇತ್ತೀಚಿನ ಮಾತುಕತೆಯಲ್ಲೂ ಈ ವಿಷಯ ಚರ್ಚೆಯಾಗಿದೆ. ಯೋಜನೆಯಂತೆ 18 ವಿಮಾನಗಳನ್ನು ಹಾರಾಟಕ್ಕೆ ಸಿದ್ಧ ಸ್ಥಿತಿಯಲ್ಲಿ ಭಾರತಕ್ಕೆ ತರಲಾಗುತ್ತದೆ. ಉಳಿದ ವಿಮಾನಗಳನ್ನು ಸುಮಾರು ಶೇ.50ರಷ್ಟು ಸ್ವದೇಶಿ ಅಂಶಗಳೊಂದಿಗೆ ಭಾರತದಲ್ಲಿಯೇ ತಯಾರಿಸುವ ನಿರೀಕ್ಷೆಯಿದೆ.

20 ಲಕ್ಷ ರೂ.ಮಾದಕವಸ್ತು ಜಪ್ತಿ

• ಕಲಬುರಗಿ: ಕಲಬುರಗಿ ನಗರ ಪೊಲೀಸ್ ಆಯುಕ್ತಾಲಯದ ಅಧೀನದ ಪೊಲೀಸರು ನಡೆಸಿದ ವಿಶೇಷ ಕಾರ್ಯಾಚರಣೆಯಲ್ಲಿ 20.08ಲಕ್ಷ ಮೌಲ್ಯದ ವಿವಿಧ ಮಾದಕ ವಸ್ತುಗಳನ್ನು ವಶಪಡಿಸಿಕೊಂಡಿದ್ದು, ಈ ಸಂಬಂಧ 22 ಪ್ರಕರಣಗಳಲ್ಲಿ ಜಪ್ತಿ ಕಾರ್ಯಾಚರಣೆ ನಡೆಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ.ತಿಳಿಸಿದರು. ಈ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು, ಪೊಲೀಸ್ ಆಯುಕ್ತಾಲಯದ ವ್ಯಾಪ್ತಿಯಲ್ಲಿ ನಡೆದ ದಾಳಿಗಳ ವೇಳೆ 17 ಕೆಜಿ 634 ಗ್ರಾಂ ಗಾಂಜಾ (ಅಂದಾಜು ಮೌಲ್ಯ 17.34 ಲಕ್ಷ), Netrazepam NRX Schedule-H ನಿಷೇಧಿತ 14,970 ಮಾತ್ರೆಗಳು ಹಾಗೂ 18.73 ಗ್ರಾಂ ಎಂಡಿಎಂಎ ಡ್ರಗ್ (ಅಂದಾಜು ಮೌಲ್ಯ 2.74 ಲಕ್ಷ) ಸೇರಿದಂತೆ ಒಟ್ಟು 20,08,300 ಮೌಲ್ಯದ ಮಾದಕ ವಸ್ತುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ ಎಂದರು.

ಮತ್ತೋರ್ವ ಶಂಕಿತ ಉಗ್ರನ ಬಂಧನ

ಪುಟ ೧➜ ಅಲ್ಲದೆ, ತನ್ನ ಮೊಬೈಲ್‌ನಿಂದ ಅಂತಾರಾಷ್ಟ್ರೀಯ ಕರೆಗಳನ್ನೂ ಮಾಡಿದ್ದು, ಸಾಕಷ್ಟು ಮಾಹಿತಿ ಕಲೆ ಹಾಕಿದ ಕೇಂದ್ರ ಗುಪ್ತಚರ ಇಲಾಖೆ, ಜಿಲ್ಲಾ ಪೊಲೀಸ್ ಇಲಾಖೆ ಮಂಗಳವಾರ ನಸುಕಿನ ವೇಳೆ ಜಂಟಿ ಕಾರ್ಯಾಚರಣೆ ನಡೆಸಿ, ಸೊಹೇಲ್‌ನನ್ನು ಬಂಧಿಸುವಲ್ಲಿ ಸಫಲವಾಗಿವೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಎಚ್.ಟಿ.ಶೇಖರ್ ಮಾರ್ಗದರ್ಶನದಲ್ಲಿ ಗ್ರಾಮಾಂತರ ಡಿವೈಎಸ್ಪಿ ಬಿ.ಎಸ್.ಬಸವರಾಜ ನೇತೃತ್ವದ ಅಧಿಕಾರಿ, ಸಿಬ್ಬಂದಿ ಕೇಂದ್ರ ಗುಪ್ತಚರ ಇಲಾಖೆ ಅಧಿಕಾರಿಗಳು, ಸಿಬ್ಬಂದಿ ಸಹಕಾರದಲ್ಲಿ ಬನ್ನಿಕೋಡು ಗ್ರಾಮದ ಮನೆ ಮೇಲೆ ದಾಳಿ ಮಾಡಿ, ಸೊಹೇಲ್ ಬಂಧಿಸಿ ತುಮಕೂರು ಪೊಲೀಸರ ವಶಕ್ಕೆ ನೀಡಿದ್ದಾರೆ.

ಇಂದು ಬೆಂಗಳೂರಿಗೆ ಸಿಎಂ ಯೋಗಿ ಆದಿತ್ಯನಾಥ್

ಪುಟ೧➜ ನಗರದ ಖಾಸಗಿ ಹೋಟೆಲ್‌ನಲ್ಲಿ ಸಂಜೆ ನಡೆಯುವ ಕಾರ್ಯಕ್ರಮದಲ್ಲಿ ಉತ್ತರ ಪ್ರದೇಶದಲ್ಲಿ ಉದ್ಯಮಿಗಳಿಗೆ ಹೂಡಿಕೆಗೆ ಇರುವ ಅವಕಾಶಗಳು, ವ್ಯಾಪಾರ ಸ್ನೇಹಿ ಪರಿಸರ ವ್ಯವಸ್ಥೆ ಇರುವ ಬಗ್ಗೆ ಉದ್ಯಮಿಗಳೊಂದಿಗೆ ಚರ್ಚೆ ನಡೆಸಲಿದ್ದಾರೆ. ತಮ್ಮ ರಾಜ್ಯದಲ್ಲಿರುವ ಉದಯೋನ್ಮುಖ ಅವಕಾಶಗಳ ಬಗ್ಗೆಯೂ ಸಂವಾದ ನಡೆಸಲಿದ್ದಾರೆ. ಉತ್ತರ ಪ್ರದೇಶದಲ್ಲಿ ಹೂಡಿಕೆ ಮತ್ತು ವ್ಯವಹಾರ ಅವಕಾಶಗಳ ಕುರಿತು ಕಿರುಚಿತ್ರದ ಪ್ರದರ್ಶನ ಪ್ರಮುಖ ಕೈಗಾರಿಕಾ ಪ್ರತಿನಿಧಿಗಳಿಂದ ಸಂವಾದ ನಂತರ ಯೋಗಿ ಆದಿತ್ಯನಾಥ್ ಅವರು ದಿಕ್ಸೂಚಿ ಭಾಷಣ ಮಾಡಲಿದ್ದಾರೆ.

ನೀರಿನ ಮಿತ ಬಳಕೆಗೆ ಸೂಚನೆ

• ಬೆಂಗಳೂರು: ಜಲಾಶಯಗಳಲ್ಲಿ ಲಭ್ಯವಿರುವ ನೀರನ್ನು ಕೇವಲ ಕುಡಿಯುವ ಉದ್ದೇಶಕ್ಕಾಗಿ ಮಿತವಾಗಿ ಮತ್ತು ವಿವೇಚನೆಯಿಂದ ಬಳಸುವಂತೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ತಮಿಳುನಾಡು, ಕರ್ನಾಟಕ, ಕೇರಳ ಮತ್ತು ಪುದುಚೇರಿ ರಾಜ್ಯಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದೆ. ಮಂಗಳವಾರ ದಿಲ್ಲಿಯಲ್ಲಿ ನಡೆದ ಪ್ರಾಧಿಕಾರ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದ್ದು, ಮುಂಬರುವ ದಿನಗಳಲ್ಲಿ ಉತ್ತಮ ಮಳೆಯಾಗುವ ನಿರೀಕ್ಷೆಯಿದ್ದು, ಪರಿಸ್ಥಿತಿಯನ್ನು ನೋಡಿಕೊಂಡು ಮುಂದಿನ ಸಭೆಯಲ್ಲಿ ಮರುಪರಿಶೀಲನೆ ಕೈಗೊಳ್ಳಲು ತೀರ್ಮಾನಿಸಲಾಗಿದೆ. ಮುಂಗಾರು ಮಳೆ ವಿಳಂಬದಿಂದ ಜಲಾಶಯಗಳಿಗೆ ಹರಿದು ಬರುತ್ತಿರುವ ನೀರಿನ ಪ್ರಮಾಣ ತೀರಾ ಕಡಿಮೆಯಾಗಿದ್ದು, ಜಲಾಶಯಗಳಲ್ಲಿ ಸದ್ಯ ನೀರಿನ ಸಂಗ್ರಹ ಕಡಿಮೆಯಾಗಿದೆ. ಪರಿಣಾಮವಾಗಿ ಹೊರ ಹರಿವು ಕೂಡ ಕಡಿಮೆಯಾಗಿದೆ ಎಂದು ಕರ್ನಾಟಕ ತಿಳಿಸಿತು.

ಕರ್ನಾಟಕ ಸೇರಿ 12 ರಾಜ್ಯಗಳ 111 ಜಿಲ್ಲೆಗಳಲ್ಲಿ ಮುಂಗಾರು ಬೆಳೆಗಳಿಗೆ ಗಂಭೀರ ಅಪಾಯ

ಜು.2ರವರೆಗೂ ಮುಂಗಾರು ದುರ್ಬಲ

• ಹೊಸದಿಲ್ಲಿ: ದೇಶದಲ್ಲಿ ನೈರುತ್ಯ ಮುಂಗಾರು ಮಳೆ ಜುಲೈ 2ರವರೆಗೂ ದುರ್ಬಲವಾಗಿಯೇ ಮುಂದುವರಿಯುವ ಸಾಧ್ಯತೆ ಇದ್ದು, ಮಳೆಯನ್ನೇ ಅವಲಂಬಿಸಿರುವ ಪ್ರದೇಶಗಳ ಮುಂಗಾರು ಬೆಳೆಗಳಿಗೆ ತೀವ್ರ ಹೊಡೆತ ಬೀಳುವ ಆತಂಕ ಎದುರಾಗಿದೆ. ಕರ್ನಾಟಕ ಸೇರಿದಂತೆ 12 ರಾಜ್ಯಗಳ 111 ಜಿಲ್ಲೆಗಳನ್ನು ಅತ್ಯಂತ ಅಪಾಯದಲ್ಲಿರುವ ಜಿಲ್ಲೆಗಳೆಂದು ಕೇಂದ್ರ ಕೃಷಿ ಸಚಿವಾಲಯ ಗುರುತಿಸಿದೆ.

ದೇಶದಲ್ಲಿ ಒಟ್ಟಾರೆ ಮುಂಗಾರು ಮಳೆ ಶೇ.43ರಷ್ಟು ಕೊರತೆಯಾಗಿದೆ. ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯಂತೆ ಜುಲೈ 2ರವರೆಗೂ ದುರ್ಬಲ ಮುಂಗಾರು ಪರಿಸ್ಥಿತಿ ಮುಂದುವರಿಯಬಹುದು. ಇದರಿಂದ ಮುಂಗಾರು ಹಂಗಾಮಿನ ಬೆಳೆಗಳು ಬಾಧಿತವಾಗುವ ಸಾಧ್ಯತೆ ಇದೆ ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಮಂಗಳವಾರ ತಿಳಿಸಿದರು.

ಮುಂಗಾರು ಪ್ರಗತಿ ಮತ್ತು ಕೃಷಿ ಸಿದ್ಧತೆ ಕುರಿತು ರಾಜ್ಯಗಳ ಕೃಷಿ ಸಚಿವರು ಹಾಗೂ ಜಿಲ್ಲಾಧಿಕಾರಿಗಳೊಂದಿಗೆ ಪರಿಶೀಲನಾ ಸಭೆ ನಡೆಸಿದ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. ಮುಂಗಾರು ದುರ್ಬಲವಾಗಿದ್ದರೂ ಪರಿಸ್ಥಿತಿಯನ್ನು ಎದುರಿಸಲು ಕೇಂದ್ರ ಮತ್ತು ರಾಜ್ಯ ಸರಕಾರಗಳು ಸಂಪೂರ್ಣ ಸಿದ್ಧವಾಗಿವೆ. ರೈತರು ಆತಂಕಕ್ಕೆ ಒಳಗಾಗಬಾರದು. ವೈಜ್ಞಾನಿಕ ಯೋಜನೆ ಮತ್ತು ಸ್ಥಳೀಯ ಮಟ್ಟದ ಕ್ರಮಗಳ ಮೂಲಕ ಬೆಳೆ ನಷ್ಟವನ್ನು ಕನಿಷ್ಠಗೊಳಿಸಿ, ರೈತರ ಜೀವನೋಪಾಯವನ್ನು ರಕ್ಷಿಸಲಾಗುವುದು ಎಂದು ಭರವಸೆ ನೀಡಿದರು.

ಅಪಾಯದ ಪಟ್ಟಿಯಲ್ಲಿ ಕರ್ನಾಟಕದ ಜಿಲ್ಲೆಗಳು: ಕಡಿಮೆ ಮಳೆ ಮತ್ತು ನೀರಾವರಿ ಕೊರತೆಯಿಂದ ಸಂಕಷ್ಟಕ್ಕೆ ಒಳಗಾಗಬಹುದಾದ ಜಿಲ್ಲೆಗಳನ್ನು ಕೇಂದ್ರ ಕೃಷಿ ಸಚಿವಾಲಯ ಹಾಗೂ ಭಾರತೀಯ ಕೃಷಿ ಸಂಶೋಧನಾ ಮಂಡಳಿ ಜಂಟಿಯಾಗಿ ಗುರುತಿಸಿವೆ. ಕರ್ನಾಟಕ, ಮಧ್ಯಪ್ರದೇಶ, ಮಹಾರಾಷ್ಟ್ರ, ತಮಿಳುನಾಡು, ಗುಜರಾತ್, ಉತ್ತರ ಪ್ರದೇಶ, ರಾಜಸ್ಥಾನ, ಬಿಹಾರ, ಜಾರ್ಖಂಡ್, ತೆಲಂಗಾಣ, ಆಂಧ್ರಪ್ರದೇಶ ಮತ್ತು ಒಡಿಶಾದ ಒಟ್ಟು 315 ಜಿಲ್ಲೆಗಳು ದುರ್ಬಲ ಮುಂಗಾರಿನಿಂದ ಬಾಧಿತವಾಗುವ ಸಾಧ್ಯತೆ ಇದೆ. ಈ ಪೈಕಿ ಶೇ.25ಕ್ಕಿಂತ ಕಡಿಮೆ ನೀರಾವರಿ ಸೌಲಭ್ಯವಿರುವ 111 ಜಿಲ್ಲೆಗಳನ್ನು ಅತ್ಯಂತ ಅಪಾಯದ ಪಟ್ಟಿಗೆ ಸೇರಿಸಲಾಗಿದೆ. ಇದರಲ್ಲಿ ಮಹಾರಾಷ್ಟ್ರದ 20 ಜಿಲ್ಲೆಗಳಿವೆ. ಶೇ.25ರಿಂದ 50ರಷ್ಟು ನೀರಾವರಿ ಸೌಲಭ್ಯವಿರುವ 76 ಜಿಲ್ಲೆಗಳನ್ನು ಮಧ್ಯಮ ಅಪಾಯದ ಜಿಲ್ಲೆಗಳೆಂದು ಗುರುತಿಸಲಾಗಿದೆ. ಅಣೆಕಟ್ಟು ಮತ್ತು ಸಮರ್ಪಕ ನೀರಾವರಿ ವ್ಯವಸ್ಥೆ ಹೊಂದಿರುವ 128 ಜಿಲ್ಲೆಗಳನ್ನು ಕಡಿಮೆ ಅಪಾಯದ ಪಟ್ಟಿಯಲ್ಲಿಡಲಾಗಿದೆ.

ಜಲಾಶಯಗಳಲ್ಲಿ ಶೇ.60ರವರೆಗೆ ಕೊರತೆ: ದೇಶದ ವಿವಿಧ ನದಿ ಕಣಿವೆಗಳಲ್ಲಿನ ಜಲಾಶಯಗಳ ನೀರು ಸಂಗ್ರಹ ಸ್ಥಿತಿಯನ್ನೂ ಸಭೆಯಲ್ಲಿ ಪರಿಶೀಲಿಸಲಾಗಿದೆ. ಕೆಲವು ನದಿ ಕಣಿವೆಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ನೀರು ಸಂಗ್ರಹವಿದ್ದರೆ, ಮತ್ತೆ ಕೆಲವು ಪ್ರದೇಶಗಳಲ್ಲಿ ಶೇ.20ರಿಂದ ಶೇ.60ರವರೆಗೆ ಕೊರತೆ ಕಂಡುಬಂದಿದೆ. ಆಯಾ ಪ್ರದೇಶಗಳಲ್ಲಿನ ನೀರಿನ ಲಭ್ಯತೆ ಮತ್ತು ಕೊರತೆಯನ್ನು ಆಧರಿಸಿ ರಾಜ್ಯ ಸರಕಾರಗಳು ಆದ್ಯತೆಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಕೇಂದ್ರ ಸೂಚಿಸಿದೆ.

ಸ್ಪಷ್ಟ ಯೋಜನೆ ಸಲ್ಲಿಸಿಲ್ಲ

• ಬೆಂಗಳೂರು: ಟಾಟಾ ಪವರ್ ಕಂಪನಿ ಲಿಮಿಟೆಡ್ (ಟಿಪಿಸಿಎಲ್) ಸಲ್ಲಿಸಿರುವ ಸಮಾನಾಂತರ ವಿದ್ಯುತ್ ವಿತರಣಾ ಪರವಾನಗಿ ಅರ್ಜಿಗೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ(ಕೆಇಆರ್‌ಸಿ)ಕ್ಕೆ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಬೆಸ್ಕಾಂ) ಆಕ್ಷೇಪಣೆ ಸಲ್ಲಿಸಿದೆ.

ಪ್ರಸ್ತುತ ಬೆಸ್ಕಾಂ ವ್ಯಾಪ್ತಿಯಲ್ಲಿರುವ ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ ಮತ್ತು ಚಿತ್ರದುರ್ಗ ಜಿಲ್ಲೆಗಳಿಗೆ ವಿದ್ಯುತ್ ವಿತರಣಾ ಪರವಾನಿಗೆ ನೀಡುವಂತೆ ಟಾಟಾ ಸಂಸ್ಥೆಯು ಪರವಾನಗಿ ಅರ್ಜಿ ಸಲ್ಲಿಸಿತ್ತು. ಈ ಪ್ರಸ್ತಾವನೆ ಕುರಿತು ಬೆಸ್ಕಾಂ ಹಲವು ಗಂಭೀರ ಆಕ್ಷೇಪಣೆಗಳನ್ನು ಕೆಇಆರ್‌ಸಿ ಮುಂದೆ ಸಲ್ಲಿಸಿದ್ದು, ವಿದ್ಯುತ್ ಕಾಯ್ದೆ-2003ರಲ್ಲಿ ಅಗತ್ಯವಿರುವ ಕಾನೂನುಬದ್ಧ ಹಾಗೂ ಸಾರ್ವಜನಿಕ ಹಿತಾಸಕ್ತಿ ಸಂಬಂಧಿತ ಮಾನದಂಡಗಳನ್ನು ಪೂರೈಸುವ ಬಗ್ಗೆ ಟಾಟಾ ಸಂಸ್ಥೆಯು ಅರ್ಜಿಯಲ್ಲಿ ಪ್ರಸ್ತಾಪಿಸಿಲ್ಲ ಎಂದಿದೆ.

ಗ್ರಾಹಕರಿಗೆ ಹೆಚ್ಚುವರಿ ವೆಚ್ಚ ಸಾಧ್ಯತೆ: ಪ್ರಸ್ತಾವಿತ ಪ್ರದೇಶದಲ್ಲಿ ಸ್ವತಂತ್ರ ವಿದ್ಯುತ್ ವಿತರಣಾ ಜಾಲವನ್ನು ನಿರ್ಮಿಸುವ ಕುರಿತು ಟಾಟಾ ಪವರ್ ಸ್ಪಷ್ಟ ಯೋಜನೆ ಸಲ್ಲಿಸಿಲ್ಲ. ಬದಲಾಗಿ, ಬೆಸ್ಕಾಂನ ಈಗಿರುವ ಮೂಲ ಸೌಕರ್ಯವನ್ನು ಅವಲಂಬಿಸಿ ವಿದ್ಯುತ್ ಸರಬರಾಜು ಮಾಡಲು ಉದ್ದೇಶಿಸಿರುವುದಾಗಿ ಹೇಳಿದೆ. ಅಲ್ಪಾವಧಿ ವಿದ್ಯುತ್ ಖರೀದಿ ಹೆಚ್ಚಿನ ಅವಲಂಬನೆಯು ಗ್ರಾಹಕರಿಗೆ ಹೆಚ್ಚುವರಿ ವೆಚ್ಚದ ಭಾರವನ್ನು ಉಂಟು ಮಾಡುವ ಸಾಧ್ಯತೆಯಿದೆ ಎಂದು ವಿದ್ಯುತ್ ಖರೀದಿ ಯೋಜನೆಯ ಕುರಿತು ಬೆಸ್ಕಾಂ ಆಕ್ಷೇಪ ಸಲ್ಲಿಸಿದೆ. ಎಲ್ಲಾ ಗ್ರಾಹಕರಿಗೂ ಸಮರ್ಪಕ ಹಾಗೂ ಗುಣಮಟ್ಟದ ವಿದ್ಯುತ್ ಸರಬರಾಜು ಒದಗಿಸುವ ಕಾನೂನುಬದ್ಧ ಹೊಣೆಗಾರಿಕೆ ಬೆಸ್ಕಾಂ ಮೇಲಿದೆ. ಇದಕ್ಕಾಗಿ ಬೆಸ್ಕಾಂ 2035ರ ನಂತರವೂ ಮುಂದುವರಿಯುವ ದೀರ್ಘಾವಧಿಯ ವಿದ್ಯುತ್ ಖರೀದಿ ಒಪ್ಪಂದ ಮಾಡಿಕೊಂಡಿದ್ದು, ವಿದ್ಯುತ್ ಬಳಕೆ ಆಗದಿದ್ದರೂ ನಿಗದಿತ ಸ್ಥಿರ ಶುಲ್ಕಗಳನ್ನು ಪಾವತಿಸಬೇಕಾಗಿದೆ. ಟಿಪಿಸಿಎಲ್‌ಗೆ ಇಂತಹ ಯಾವುದೇ ಹೊಣೆಗಾರಿಕೆಗಳಿಲ್ಲ.

ಸದಾ ಸುದ್ದಿಯಾಗಲು ಆರೆಸ್ಸೆಸ್ ಬಗ್ಗೆ ಮಾತನಾಡುವ ಪ್ರಿಯಾಂಕ್

ಬೆಂಗಳೂರು: ಪ್ರತಿದಿನ ಟಿವಿಯಲ್ಲಿ ಬರಲು, ಸದಾ ಸುದ್ದಿಯಲ್ಲಿರುವ ಉದ್ದೇಶದಿಂದ ರಾಜ್ಯದ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ರಾಷ್ಟ್ರೀಯ ಸ್ವಯಂಸೇವಕ ಸಂಘ ಬಗ್ಗೆ ಮಾತನಾಡುತ್ತಾರೆ



ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಆಕ್ಷೇಪಿಸಿದ್ದಾರೆ. ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಮಗನಾದ ತಮ್ಮನ್ನು ಯಾರೂ ಮುಟ್ಟಲಾಗದು ಎಂಬ ಭಾವನೆ ಅವರದು. ಆರ್‌ಎಸ್‌ಎಸ್ ಅನ್ನು ಟೀಕಿಸುವುದನ್ನು ಬಿಟ್ಟು ನೀವೇನು ಮಾಡಿದ್ದೀರೆಂದು ಸ್ಪಷ್ಟಪಡಿಸಿ ಎಂದು ಆಗ್ರಹಿಸಿದರು.

ಹದಗೆಟ್ಟ ಕಾನೂನು- ಸುವ್ಯವಸ್ಥೆ ಕಡೆ ಗಮನ ಕೊಡದೇ ಅವರು ಕೇವಲ ಆರ್‌ಎಸ್‌ಎಸ್ ಬಗ್ಗೆ ಕಾಮೆಂಟ್ ಮಾಡುತ್ತ ಕೂತಿದ್ದಾರೆ. ಹಿಂದೆ ಅವರು ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದರು. ಅಲ್ಲಿ ಅವರ ಸಾಧನೆ ಶೂನ್ಯ. ಈಗ ಗೃಹ ಸಚಿವರಾಗಿ ಹೆಣ್ಮಕ್ಕಳ, ಗಂಡಸರ ನಾಪತ್ತೆ ವಿಚಾರದಲ್ಲಿ ಅವರು ಗಮನ ಕೊಡುವುದಿಲ್ಲ. ಒಂದೆಡೆ ತಂದೆಯ ಹಿಂದೆ ಅಡಗುವುದು, ನಿರಂತರ ಅಧಿಕಾರದಲ್ಲಿರುವ ಕುಟುಂಬದಿಂದ ಬಂದು ಬಲಿತರಾದರೂ ದಲಿತನೆಂಬ ನೆರಳನ್ನು ತೆಗೆದುಕೊಳ್ಳುತ್ತಾರೆ ಎಂದು ದೂರಿದರು. ಮೊದಲು ಪೊಲೀಸ್ ಇಲಾಖೆಯನ್ನು ತಹಬಂದಿಗೆ ತನ್ನಿ ಎಂದು ಶೋಭಾ ಕರಂದ್ಲಾಜೆ ಆಗ್ರಹಿಸಿದರು.

ಮೂಲಸೌಕರ್ಯ ನೀಡುತ್ತಿಲ್ಲ: ಬಿಡದಿ ಟೌನ್‌ಶಿಪ್ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ಇದು ಕೇವಲ ಬಿಡದಿ ಟೌನ್‌ಶಿಪ್ ವಿಷಯ ಅಲ್ಲ; ಕೆಂಪೇಗೌಡ ಬಡಾವಣೆ, ಶಿವರಾಮ ಕಾರಂತ ಬಡಾವಣೆಗಳನ್ನು ನಾವು ಮಾಡಿದ್ದೇವೆ. ಎಲ್ಲಿಗೂ ಮೂಲ ಸೌಕರ್ಯ ನೀಡಿಲ್ಲ. ಇದರಿಂದ ನಿವೇಶನ ಪಡೆದವರು 10 ವರ್ಷವಾದರೂ ಬಂದಿಲ್ಲ, ಮನೆ ಕಟ್ಟಿಲ್ಲ; ಅವರಿಗೆ ಇನ್ನೊಂದು ಕಡೆ ನಿವೇಶನ ಇರಬೇಕು ಎಂದರು. ಇದರ ಸಮಸ್ಯೆ ಪರಿಹರಿಸಲು ನೀವು ಮುಂದಾಗಬೇಕು. ತರುವಾಯ ಹೊಸದರ ಯೋಚನೆ ಮಾಡಿ ಎಂದು ಒತ್ತಾಯಿಸಿದರು. ಬೆಂಗಳೂರಿನಲ್ಲಿ ವಿದ್ಯುತ್, ನೀರು, ಕಸದ ಸಮಸ್ಯೆ ಇದೆ. ಬಿಲ್ ಜಾಸ್ತಿ ಮಾಡುತ್ತೀರಿ ಎಂದು ಶೋಭಾ ಕರಂದ್ಲಾಜೆ ಆಗ್ರಹಿಸಿದರು.

ಅಂತಿಮ ನಮನ



ಸೋಮವಾರ ಸಂಜೆ ಲಿಂಗೈಕ್ಯರಾದ ಕನಕಪುರ ದೇಗುಲ ಮಠದ ಶ್ರೀ ಮುಮ್ಮಡಿ ನಿರ್ವಾಣ ಸ್ವಾಮೀಜಿಗಳ ಪಾರ್ಥಿವ ಶರೀರಕ್ಕೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ದೇಗುಲ ಮಠದ ಆವರಣದಲ್ಲಿ ಮಂಗಳವಾರ ಅಂತಿಮ ನಮನ ಸಲ್ಲಿಸಿ ಕಿರಿಯ ಸ್ವಾಮೀಜಿಗೆ ರಾಷ್ಟ್ರಧ್ವಜ ಹಸ್ತಾಂತರಿಸಿದರು.

ನೀರು ಬಿಡುವುದು ಕಷ್ಟಕರ: ಸತೀಶ

ಬೆಳಗಾವಿ: ನೆರೆ ರಾಜ್ಯ ಮಹಾರಾಷ್ಟ್ರದಲ್ಲಿಯೂ ತೀವ್ರ ನೀರಿನ ಅಭಾವ ಉಂಟಾಗಿರುವುದರಿಂದ ಅಲ್ಲಿಂದ ನೀರು ಬಿಡುವುದು ಕಷ್ಟಕರ. ಈ ಬಗ್ಗೆ ಮಹಾರಾಷ್ಟ್ರ ರಾಜ್ಯದ ಅಧಿಕಾರಿಗಳು ಈಗಾಗಲೇ



ತಮ್ಮ ಅಸಮರ್ಥತೆ ತಿಳಿಸಿರುವುದಾಗಿ ಲೋಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ ತಿಳಿಸಿದರು.

ಮಂಗಳವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಈ ವರ್ಷ ಮಾತ್ರವಲ್ಲದೆ ಹಿಂದಿನ ವರ್ಷಗಳಲ್ಲಿಯೂ ರಾಜ್ಯ ಸರ್ಕಾರ ಮನವಿ ಸಲ್ಲಿಸಿದ್ದರೂ ಮಹಾರಾಷ್ಟ್ರದಿಂದ ನಿರೀಕ್ಷಿತ ಪ್ರಮಾಣದಲ್ಲಿ ನೀರು ಬಿಡುಗಡೆಗೊಂಡಿಲ್ಲ. ಕೊಯ್ನಾ ಜಲಾಶಯ ಭರ್ತಿಯಾಗಿದ್ದ ಸಂದರ್ಭಗಳಲ್ಲಿಯೂ ನೀರು ಬಿಡಲು ಮಹಾರಾಷ್ಟ್ರ ಸರ್ಕಾರ ಮುಂದಾಗಿರಲಿಲ್ಲ ಎಂದು ತಿಳಿಸಿದರು.

ಪ್ರಸ್ತುತ ಮಹಾರಾಷ್ಟ್ರದಲ್ಲಿಯೂ ನೀರಿನ ಅಭಾವ ಇರುವುದರಿಂದ ಅಲ್ಲಿನ ಅಧಿಕಾರಿಗಳು ನೀರು ಬಿಡುಗಡೆ ಮಾಡಲು ಸಾಧ್ಯವಿಲ್ಲ ಎಂದು ಈಗಾಗಲೇ ತಿಳಿಸಿದ್ದಾರೆಂದು ಹೇಳಿದರು.

ಬೆಳಗಾವಿ ನಗರದಲ್ಲಿ ಮುಂದಿನ 2 ತಿಂಗಳಿಗೆ ಸಾಕಾಗುವಷ್ಟು ಕುಡಿಯುವ ನೀರಿನ ಸಂಗ್ರಹ ಲಭ್ಯವಿದ್ದು, ಸಾರ್ವಜನಿಕರು ಯಾವುದೇ ರೀತಿಯ ಆತಂಕ ಪಡುವ ಅಗತ್ಯವಿಲ್ಲ. ನೀರಿನ ಕೊರತೆ ಎದುರಾಗುವ ಪ್ರದೇಶಗಳಿಗೆ ಟ್ಯಾಂಕರ್‌ಗಳ ಮೂಲಕ ನೀರು ಪೂರೈಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದ ಸಚಿವರು, ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರು ಸರಬರಾಜು ಸಮರ್ಪಕವಾಗಿ ನಡೆಯುವಂತೆ ಈಗಾಗಲೇ ಗ್ರಾಮ ಪಂಚಾಯಿತಿಗಳಿಗೆ ಸೂಚನೆ ನೀಡಲಾಗಿದೆ ಎಂದರು. ಸಚಿವ ಸಂಪುಟ ವಿಸ್ತರಣೆ ಹಾಗೂ ಮಂತ್ರಿ ಸ್ಥಾನಗಳ ಕುರಿತು ಮಾತನಾಡಿದ ಅವರು, ರಾಜಕೀಯದಲ್ಲಿ ಎಲ್ಲರೂ ಸಚಿವ ಸ್ಥಾನ ಬಯಸುವುದು ಸಹಜ. ಆದರೆ, ಎಲ್ಲರಿಗೂ ಅವಕಾಶ ದೊರೆಯುವುದಿಲ್ಲ. ಬೆಳಗಾವಿ ಜಿಲ್ಲೆಗೆ ಒಂದು ಸಚಿವ ಸ್ಥಾನ ಖಚಿತವಾಗಿದ್ದು, ಹೆಚ್ಚುವರಿ ಸ್ಥಾನ ನೀಡುವ ಅಥವಾ ನೀಡದಿರುವ ನಿರ್ಧಾರ ಹೈಕಮಾಂಡ್‌ಗೆ ಸೇರಿದೆ ಎಂದು ತಿಳಿಸಿದರು.

ಲಕ್ಷ್ಮಣ ಸವದಿ ಅವರಿಗೆ ಸಚಿವ ಸ್ಥಾನ ನೀಡುವ ಭರವಸೆಯ ಬಗ್ಗೆ ತಮಗೆ ಯಾವುದೇ ಮಾಹಿತಿ ಇಲ್ಲ ಎಂದು ಸ್ಪಷ್ಟಪಡಿಸಿದರು.

ಕಿರುಸುದ್ದಿ

ಕಾಂಗ್ರೆಸ್‌ಗೆ ಬುದ್ಧಿವಾದದ ಅವಶ್ಯಕತೆ ಇಲ್ಲ: ಖಾದರ್

ಮಂಗಳೂರು: ಕಾಂಗ್ರೆಸ್‌ಗಾಗಿ ಕೆಲಸ ಮಾಡದವರಿಗೆ ಪಕ್ಷದ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ಯು.ಟಿ.ಖಾದರ್ ಸ್ಪಷ್ಟಪಡಿಸಿದ್ದಾರೆ. ಮಂಗಳೂರಿನಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಕ್ಷಕ್ಕೆ ದುಡಿದವರು ಮಾತ್ರ ಪಕ್ಷದ ಬಗ್ಗೆ ಮಾತನಾಡಲಿ. ಬೇರೆ ಬೇರೆ ಹೆಸರು ಇಟ್ಟುಕೊಂಡು, ಸಮಾನಮನಸ್ಕರು ಎಂದು ಹೇಳಿಕೊಂಡು ಬರುವುದು ಬೇಡ. ಕಾಂಗ್ರೆಸ್‌ಗೆ ಅಂತವರ ಬುದ್ಧಿವಾದದ ಆವಶ್ಯಕತೆಯೂ ಇಲ್ಲ, ಪಕ್ಷವನ್ನು ವಿರೋಧ ಮಾಡಿದವರು ಇಂದು ಪಕ್ಷಕ್ಕೆ ನಿರ್ದೇಶನ ಕೊಡುವ ಅಗತ್ಯ ಇಲ್ಲ ಎಂದರು. ಕಾಂಗ್ರೆಸ್ ಪಕ್ಷ ಅಲ್ಪಸಂಖ್ಯಾತರಿಗೆ ಸಚಿವ ಸ್ಥಾನ ಮಾತ್ರ ಅಲ್ಲ, ಎಲ್ಲವನ್ನೂ ಕೊಟ್ಟಿದೆ. ಜಮೀರ್ ಅಹ್ಮದ್ ಸೇರಿದಂತೆ ಹಲವು ಮಂದಿ ಎಲ್ಲರೂ ಒಟ್ಟಿಗೆ ಇದ್ದೇವೆ. ಪಕ್ಷದ ಅಧ್ಯಕ್ಷರು, ಸಿಎಂ ಎಲ್ಲ ಸೇರಿ ಅಲ್ಪಸಂಖ್ಯಾತರಿಗೆ ಅವಕಾಶ ಕೊಡುತ್ತಾರೆ. ರಾಜಕೀಯವಾಗಿ ಇನ್ನಷ್ಟು ಬಿಗಡಾಯಿಸಲು ಯತ್ನಿಸುವ ಕಾಂಗ್ರೆಸ್‌ಗೆ ಮತ ಹಾಕದವರನ್ನು ನಾವು ಗಣನೆಗೆ ತೆಗೆದುಕೊಳ್ಳುವುದಿಲ್ಲ ಎಂದು ಖಾದರ್ ಹೇಳಿದರು.

ಮೂವರ ಆತ್ಮಹತ್ಯೆ ಪ್ರಕರಣ: ಆರೋಪಿ ಬಂಧನ

ಮೈಸೂರು: ಜಿಲ್ಲೆಯ ತಿ.ನರಸೀಪುರ ತಾಲೂಕಿನ ಹಳೇಕೆಂಪಯ್ಯನ ಹುಂಡಿ ಗ್ರಾಮದಲ್ಲಿ ಒಂದೇ ಕುಟುಂಬದ ಮೂವರು ಆತ್ಮಹತ್ಯೆ ಮಾಡಿಕೊಂಡ ಪ್ರಕರಣದ ಆರೋಪಿ ಉಲ್ಲಾಸ್‌ಗೌಡನನ್ನು ಪೊಲೀಸರು ಬಂಧಿಸಿದ್ದಾರೆ. ಘಟನೆ ಬಳಿಕ ತಲೆ ಮರೆಸಿಕೊಂಡಿದ್ದ ಉಲ್ಲಾಸ್ ಗೌಡನ ಬಂಧನಕ್ಕೆ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ವಿಶೇಷ ತಂಡ ರಚಿಸಿದ್ದರು. ಇನ್‌ಸ್ಪೆಕ್ಟರ್ ಧನಂಜಯ್, ಶಿವಾನಂದ ಶೆಟ್ಟಿ ನೇತೃತ್ವದಲ್ಲಿ ತಂಡ ರಚಿಸಲಾಗಿತ್ತು. ಮೈಸೂರಿನಲ್ಲಿ ತಲೆಮರೆಸಿಕೊಂಡಿದ್ದ ಆರೋಪಿ ಬೆಂಗಳೂರಿಗೆ ಪರಾರಿಯಾಗಲು ಯತ್ನಿಸಿದಾಗ ಖಚಿತ ಮಾಹಿತಿ ಮೇಲೆ ಕಾರ್ಯಾಚರಣೆ ನಡೆಸಿದ ಪೊಲೀಸರು ಆತನನ್ನು ಬಂಧಿಸಿ, ನ್ಯಾಯಾಧೀಶರ ಮುಂದೆ ಹಾಜರು ಪಡಿಸಿದರು. ನ್ಯಾಯಾಧೀಶರ ಆದೇಶದ ಮೇರೆಗೆ ಈಗ ಉಲ್ಲಾಸ್‌ಗೌಡನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ರಾಗಿ ಸಂಸ್ಕರಣೆಗೆ ಪಿಎಂಎಫ್‌ಎಂಇ ಬೆಂಬಲ

ಬೆಂಗಳೂರು: ಪಿಎಂಎಫ್‌ಎಂಇ ಯೋಜನೆಯಡಿಯಲ್ಲಿ ಕರ್ನಾಟಕವು 3,500 ರಾಗಿ ಸಂಸ್ಕರಣಾ ಘಟಕಗಳು ಮತ್ತು 10,500ಕ್ಕೂ ಹೆಚ್ಚು ಸೂಕ್ಷ್ಮ ಆಹಾರ ಉದ್ಯಮಗಳಿಗೆ ಬೆಂಬಲ ನೀಡುತ್ತದೆ ಎಂದು ಕರ್ನಾಟಕ ಕೃಷಿ ಸಂಸ್ಕರಣೆ ಮತ್ತು ರಫ್ತು ನಿಗಮ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವ ಪ್ರಕಾಶ್ ಹೇಳಿದರು. ಬೆಂಗಳೂರು ಕೈಗಾರಿಕಾ ಮತ್ತು ವಾಣಿಜ್ಯ ಮಂಡಳಿ (ಬಿಸಿಐಸಿ) ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿದ್ದ ಕೃಷಿ-ಆಹಾರ ಸಂಸ್ಕರಣೆಯನ್ನು ಮರುಕಲ್ಪಿಸುವುದು: ಎಐ ಮತ್ತು ರೊಬೊಟಿಕ್ಸ್ ಕ್ರಾಂತಿ ಕುರಿತ ಸಮ್ಮೇಳನದಲ್ಲಿ ಮಾತನಾಡಿದ ಅವರು, ಪ್ರಧಾನ ಮಂತ್ರಿಯವರ ಸೂಕ್ಷ್ಮ ಆಹಾರ ಸಂಸ್ಕರಣಾ ಉದ್ಯಮಗಳ ಯೋಜನೆಯ ಮೂಲಕ ಕರ್ನಾಟಕವು ಉದ್ಯಮಿಗಳು, ಉತ್ಪಾದಕರ ಸಾಮೂಹಿಕ ಮತ್ತು ಆಹಾರ ಸಂಸ್ಕರಣಾ ಉದ್ಯಮಗಳನ್ನು ಬೆಂಬಲಿಸುವಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸಿದೆ ಎಂದು ಹೇಳಿದರು.

ಬಿಸಿಐಸಿ ಅಧ್ಯಕ್ಷ ಪ್ರಶಾಂತ್ ಗೋಖಲೆ ಮಾತನಾಡಿ, ಭಾರತವು ಆಹಾರ ಸ್ವಾವಲಂಬನೆಯನ್ನು ಮೀರಿ ಜಾಗತಿಕ ಆಹಾರ ಶಕ್ತಿ ಕೇಂದ್ರವಾಗಿ ತನ್ನನ್ನು ತಾನು ಸ್ಥಾನಮಾನ ಮಾಡಿಕೊಳ್ಳಬೇಕು. ಭಾರತ ಇಂದು ಸುಮಾರು 350 ಮಿಲಿಯನ್ ಟನ್ ಆಹಾರ ಧಾನ್ಯಗಳನ್ನು ಉತ್ಪಾದಿಸುತ್ತದೆ ಮತ್ತು 1.5 ಬಿಲಿಯನ್ ಜನರಿಗೆ ಸ್ವಾವಲಂಬನೆಯನ್ನು ಸಾಧಿಸಿದೆ ಎಂದರು.

ತೆಂಗಿನ ನಾರಿನ ಅಭಿವೃದ್ಧಿ ನಿಗಮದಿಂದ ಮಹಿಳೆಯರಿಗೆ ಉದ್ಯೋಗ

ಆರ್ಥಿಕತೆಗೆ ತೆಂಗಿನ ಬಲ

ಬೆಂಗಳೂರು: ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮವು ತೆಂಗಿನ ನಾರಿನ ಉತ್ಪನ್ನಗಳಾದ ಹುರಿ, ಮ್ಯಾಟ್, ಕಾರಿಡಾರ್ ಮ್ಯಾಟ್, ಹಾಸಿಗೆ, ದಿಂಬು, ಡೆಸ್‌ಕಾಟ್‌ಗಳನ್ನು ಉತ್ಪಾದಿಸುತ್ತಾ ಗ್ರಾಮೀಣ ಪ್ರದೇಶದಲ್ಲಿ ಪ್ರಮುಖವಾಗಿ ಮಹಿಳೆಯರಿಗೆ ಉದ್ಯೋಗ ನೀಡುತ್ತಿದೆ ಎಂದು ನಿಗಮದ ಅಧ್ಯಕ್ಷ ನಟರಾಜ್ ಜಾನಕಿರಾಮ್ ತಿಳಿಸಿದ್ದಾರೆ.

ಈ ಕುರಿತು ಮಾತನಾಡಿದ ಅವರು, ಗ್ರಾಮೀಣ ಆರ್ಥಿಕತೆಗೆ ಬಲ ನೀಡುವ ನಿಟ್ಟಿನಲ್ಲಿ ಹಾಗೂ ಮಹಿಳಾ ಸಬಲೀಕರಣದ ಆಶಯದೊಂದಿಗೆ ನಿಗಮದ 35 ಉತ್ಪಾದನಾ ಘಟಕಗಳಲ್ಲಿ, ಮುಖ್ಯಮಂತ್ರಿಗಳ ಆಶಯದಂತೆ, ಹಸ್ತಚಾಲಿತ ಮ್ಯಾಟ್ ಫೋಮ್ ಬಳಸಿ ಸುಮಾರು 700 ಗ್ರಾಮೀಣ ಉದ್ಯೋಗ ಸೃಷ್ಟಿಸಲು ಕ್ರಮವಹಿಸಲಾಗುತ್ತಿದೆ ಎಂದು ತಿಳಿಸಿದರು.

ನಿಗಮವು ಪರಿಸರ ಸ್ನೇಹಿ ಮತ್ತು ಆಕರ್ಷಕ ತೆಂಗಿನ ನಾರಿನ ಮ್ಯಾಟ್‌ಗಳು ಹಾಗೂ ವೈವಿಧ್ಯಮಯ ಉತ್ಪನ್ನಗಳ ಮಾರಾಟ ಹೆಚ್ಚಿಸಲು ಸಮರೋಪಾದಿಯಲ್ಲಿ ಕ್ರಮವಹಿಸಲಾಗುತ್ತಿದೆ. ಈಗಾಗಲೇ ದೆಹಲಿಯ ತೆಂಗಿನ ನಾರಿನ ಉತ್ಪನ್ನಗಳ ಸರಬರಾಜು ವಾಹನಕ್ಕೆ ಮುಖ್ಯಮಂತ್ರಿಗಳು ಹಾಗೂ ಜೈಪುರಕ್ಕೆ ತೆರಳುವ ಸರಬರಾಜು ವಾಹನಕ್ಕೆ ಮುಖ್ಯ ಕಾರ್ಯದರ್ಶಿಗಳು ಹಸಿರು ನಿಶಾನೆ ನೀಡಿದ್ದು, ನಿಗಮವು ಜೈಪುರದಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಒಂದು ಮಳಿಗೆಯನ್ನು ತೆರೆಯಲಾಗಿದೆ ಎಂದು ಜಾನಕಿರಮ್ ತಿಳಿಸಿದರು.

ಮುಂದುವರೆದು ಕಪೆಕ್ ಅನುಮೋದಿತ ಮೆ. ಶ್ರೀಸಾನ್ವಿ ಆರೋಮಾ ಪ್ರೈ.ಲಿ., ಮಾಲ್ಗುಡಿ ಅಮೃತ್ ಚಹಾ ಬ್ರ್ಯಾಂಡ್ ಮಾಲೀಕರು, ನಿಗಮದ ಗ್ರಾಮೀಣ ಮಹಿಳೆಯರಿಂದ ತಯಾರಿಸಲ್ಪಟ್ಟ ಮ್ಯಾಟ್‌ಗಳನ್ನು ತಮ್ಮ ಚಹಾ ಮಳಿಗೆಯ 89 ಶಾಖೆಗಳಲ್ಲಿ ಪ್ರದರ್ಶನ ಹಾಗೂ ಮಾರಾಟ ಮಾಡಲು ಇಚ್ಛಿಸಿರುತ್ತಾರೆ. ಇವರಿಗೆ ಅಗತ್ಯವಿರುವ ಪ್ರದರ್ಶನದ ಫೋಮ್‌ಗಳನ್ನು ಮತ್ತು ಮ್ಯಾಟ್‌ಗಳನ್ನು ಮೆ. ವೀಣಾ ಶಿವಪ್ಪ ರೈ ಸಿವಿಲ್ ಇನ್ಫ್ರಾ ಪ್ರೈ.ಲಿ. ರವರು ಪ್ರಾಯೋಜಕತ್ವ ಮಾಡಲಿದ್ದಾರೆ ಎಂದು ತಿಳಿಸಿದರು.

ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ನಿಗಮದ ಫ್ರೇಮ್ ಮತ್ತು ಮ್ಯಾಟ್‌ಗಳ ಮಾರಾಟ ಹಾಗೂ ಪ್ರದರ್ಶನಕ್ಕೆ ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಚಾಲನೆ ನೀಡಿದರು. ಈ ವೇಳೆ ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷರಾದ ನಟರಾಜ್ ಜಾನಕಿರಾಮ್, ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿಯಮಿತ ಅಧ್ಯಕ್ಷ ಡಾ. ಬಿ.ಸಿ. ಮುದ್ದುಗಂಗಾಧರ್, ಡಿ. ದೇವರಾಜ್ ಅರಸ್ ಟ್ರಕ್ ಟರ್ಮಿನಲ್ಸ್ ಲಿಮಿಟೆಡ್ ಅಧ್ಯಕ್ಷ ಸಯೀದ್ ಅಹಮದ್, ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಸಿ.ಎನ್. ಶಿವಪ್ರಕಾಶ್, ಸೇರಿದಂತೆ ಉದ್ದಿಮೆದಾರರು ಉಪಸ್ಥಿತರಿದ್ದರು.



ಇ-ಕಾಮರ್ಸ್‌ಗೆ ತೆಂಗಿನ ನಾರಿನ ಅಭಿವೃದ್ಧಿ ನಿಗಮ ಲಗ್ಗೆ

ತೆಂಗಿನ ನಾರಿನ ಉತ್ಪನ್ನಗಳನ್ನು ಖರೀದಿಸುವಂತೆ ರಾಜ್ಯದ ಪ್ರಮುಖ ಮಠಾಧೀಶರು ಮತ್ತು ಕಲಾವಿದ ಸುರೇಶ ಹೆಬ್ಳೀಕರ್ ಅವರೂ ಕರೆ ನೀಡಿದ್ದು, ನಿಗಮದ ಉತ್ಪನ್ನಗಳ ಮಾರಾಟ ಹೆಚ್ಚಿಸಲು coirkarnataka.in ವೆಬ್‌ಸೈಟ್ ಸಿದ್ಧಪಡಿಸಿ ಇದರೊಂದಿಗೆ ಖಾಸಗಿ ಸಹಭಾಗಿತ್ವದಲ್ಲಿ ಡಿಜಿಟಲ್ ಮಾರಾಟ ಸಹಯೋಗದೊಂದಿಗೆ MoU ಮಾಡಿಕೊಂಡು ಇ-ಕಾಮರ್ಸ್ website coirempower.comನ್ನು ಸಿದ್ಧಪಡಿಸಲಾಗಿದೆ. ಕರ್ನಾಟಕ ಸೇರಿದಂತೆ ಹೊರ ರಾಜ್ಯಗಳಾದ ನವದೆಹಲಿ, ರಾಜಸ್ಥಾನ ಮತ್ತು ಗುಜರಾತ್‌ನಲ್ಲಿ ಸಂಗ್ರಹಕಾರರು ಹಾಗೂ ಮಾರಾಟ ಏಜೆಂಟ್‌ರನ್ನು ನೇಮಿಸಲಾಗಿದೆ ಎಂದು ತಿಳಿಸಿದರು.

ಕೈ ಮತ್ತಷ್ಟು ಬಲಿಷ್ಠ: ಬಿ.ಕೆ.ಹರಿಪ್ರಸಾದ್

ಮಂಗಳೂರು: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಮತ್ತಷ್ಟು ಬಲಿಷ್ಠವಾಗಲಿದೆ ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಹೇಳಿದ್ದಾರೆ.

ದ.ಕ.ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಇದೀಗ ಡಿಕೆಶಿ ನೇತೃತ್ವದ ಸರ್ಕಾರದ 2.0 ಇನ್ನಿಂಗ್ಸ್ ಶುರುವಾಗಿದೆ. ಇದರೊಂದಿಗೆ ಪಕ್ಷವನ್ನು ಬಲಪಡಿಸುವ ಕಾರ್ಯವೂ ನಡೆಯಲಿದೆ ಎಂದರು. ಕರಾವಳಿ ಸೇರಿದಂತೆ ರಾಜ್ಯಾದ್ಯಾಪಿ ಶಾಂತಿ, ಸುವ್ಯವಸ್ಥೆ ಶೇ.99ರಷ್ಟು ನೆಲೆಸಿದೆ. ಮಾಜಿ ಸಿಎಂ ಸಿದ್ದರಾಮಯ್ಯ ಕೂಡ ಕರ್ನಾಟಕವನ್ನು ಸರ್ವಜನಾಂಗದ ಶಾಂತಿಯ ತೋಟ ಮಾಡುತ್ತೇನೆ ಎಂದಿದ್ದರು.

ಶರಣ, ಬಸವಣ್ಣ, ಅಕ್ಕಮಹಾದೇವಿಯ ಈ ನಾಡಿನಲ್ಲಿ ಹಿಂಸೆಗೆ ಎಂದೂ ಅವಕಾಶ ಇರುವುದಿಲ್ಲ. ಕಳೆದ ಒಂದು ವರ್ಷದಿಂದ ಯಾವುದೇ ಅಹಿತಕರ ಘಟನೆಗಳು ನಡೆಯದೇ ಇರುವುದು ದೊಡ್ಡ ಸಾಧನೆಯಾಗಿದೆ ಎಂದು ಅವರು ಹೇಳಿದರು.

ಮತದಾರರ ಸಮಗ್ರ ವಿಶೇಷ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಕುರಿತಂತೆ ಕಾಂಗ್ರೆಸ್ ಪಕ್ಷದಿಂದ ಬಿಎಲ್‌ಎ 2 ನೇಮಕ ನಡೆಸಲಾಗಿದೆ. ಜೂ. 30ರಿಂದ ಗಣತಿ ಆರಂಭವಾದಾಗ ಇವರೆಲ್ಲರೂ ಗಣತಿದಾರರ ಜೊತೆ ಮನೆ ಮನೆಗಳಿಗೆ ತೆರಳಲಿದ್ದಾರೆ. ಮತಪಟ್ಟಿಗಳ ಪರಿಷ್ಕರಣೆಗೆ ಸಹಕಾರಿಯಾಗಲಿದ್ದಾರೆ ಎಂದು ಹರಿಪ್ರಸಾದ್ ಹೇಳಿದರು.



> ಬಡವರು, ಹಿಂದುಳಿದವರ ಹೆಸರು ಮತದಾರರ ಪಟ್ಟಿಯಿಂದ ಬಿಟ್ಟು ಹೋದರೆ ಅವರು ಸರ್ಕಾರದ ಸೌಲಭ್ಯಗಳಿಂದ ವಂಚಿತರಾಗಲಿದ್ದಾರೆ. ಸರ್ಕಾರದ ಸೌಲಭ್ಯಗಳಿಗೆ ಫಲಾನುಭವಿಗಳ ಹೆಸರು ಮತದಾರರ ಪಟ್ಟಿಯಲ್ಲಿ ಇರಬೇಕಾದ್ದು ಕಡ್ಡಾಯ. ಕಾಂಗ್ರೆಸ್ ಎಸ್‌ಐಆರ್‌ಗೆ ವಿರೋಧಿಯಲ್ಲ.
> ■ ಬಿ.ಕೆ.ಹರಿಪ್ರಸಾದ್, ಕೆಪಿಸಿಸಿ ಅಧ್ಯಕ್ಷ

ದೆಹಲಿಯಿಂದ ಜಿಲ್ಲಾಧ್ಯಕ್ಷರ ಆಯ್ಕೆ: ರಾಜ್ಯದಲ್ಲಿ ಖಾಲಿ ಇರುವ ಜಿಲ್ಲೆಗಳಲ್ಲಿ ಪಕ್ಷದ ಜಿಲ್ಲಾಧ್ಯಕ್ಷರ ಆಯ್ಕೆ ಕುರಿತಂತೆ ಹೊಸ ಮಾನದಂಡ ರೂಪಿಸಲಾಗಿದೆ. ಈ ಹಿಂದೆ ಕೆಪಿಸಿಸಿ ಮತ್ತು ಡಿಸಿಸಿ ಪದಾಧಿಕಾರಿಗಳು ಜಿಲ್ಲಾಧ್ಯಕ್ಷರ ಆಯ್ಕೆ ನಡೆಸುತ್ತಿದ್ದರು. ಈಗ ಎಐಸಿಸಿ ವತಿಯಿಂದ ವೀಕ್ಷಕರು ಆಗಮಿಸಿ ಒಂದು ವಾರ ಕಾಲ ಆಯಾ ಜಿಲ್ಲೆ ಹಾಗೂ ಬ್ಲಾಕ್‌ಗಳಿಗೆ ತೆರಳಿ ಅಭಿಪ್ರಾಯ ಸಂಗ್ರಹಿಸುತ್ತಾರೆ. ಜಿಲ್ಲೆಯಿಂದ ಕನಿಷ್ಠ 2ರಿಂದ 6 ಹೆಸರುಗಳನ್ನು ದೆಹಲಿಗೆ ಕಳುಹಿಸಬೇಕು. ಅಲ್ಲಿಂದಲೇ ಜಿಲ್ಲಾಧ್ಯಕ್ಷರ ಆಯ್ಕೆ ನಡೆಯಲಿದೆ ಎಂದು ಉತ್ತರಿಸಿದರು.

ಆತ್ಮನಿರ್ಭರ ಕಾರ್ಯಾಗಾರ



ಬೆಂಗಳೂರು: ರಕ್ಷಣಾ ವಲಯದ ಉತ್ಪಾದನೆಯಲ್ಲಿ ಭಾರತದ ಆತ್ಮನಿರ್ಭರ ಯೋಜನೆಗೆ ಸಂಬಂಧಿಸಿದ ಮಹತ್ವದ ಕಾರ್ಯಾಗಾರ ಮಂಗಳವಾರ ಖನಿಜ ಭವನದಲ್ಲಿ ನಡೆಯಿತು.

ಈ ಮುಕ್ತ ಸಂವಾದದಲ್ಲಿ ಕರ್ನಾಟಕದ ಸಾಮರ್ಥ್ಯಕ್ಕೆ ಪೂರಕವಾಗಿ ದೀರ್ಘಾವಧಿಯ ಏರೋಸ್ಪೇಸ್ ಮತ್ತು ರಕ್ಷಣಾ ನೀತಿ ರೂಪಣೆ, ಏಕಗವಾಕ್ಷಿ ವ್ಯವಸ್ಥೆಸಹಿತ ನೆರವು ಘಟಕ, ಉತ್ಪಾದನಾ ಕ್ಲಸ್ಟರ್‌ಗಳ ಅಭಿವೃದ್ಧಿ, ರಕ್ಷಣಾ ಪರೀಕ್ಷಾ ಕೇಂದ್ರ ಸ್ಥಾಪನೆ, ಸಣ್ಣ ಮತ್ತು ಮಧ್ಯಮ ಸ್ವರೂಪದ ಉದ್ಯಮಗಳ ಬಲವರ್ಧನೆ, ಬೆಂಗಳೂರು ಮೈಸೂರು ಬೆಳಗಾವಿ ರಕ್ಷಣಾ ಕಾರಿಡಾರ್ ಸ್ಥಾಪನೆ, ಇದಕ್ಕೆ ಬೆಂಬಲವಾಗಿ ಪ್ಲೇ ಅಂಡ್ ಪ್ಲಗ್ ಮಾದರಿಯಲ್ಲಿ ಕೈಗಾರಿಕಾ ಪಾರ್ಕ್‌ಗಳ ಸ್ಥಾಪನೆ, ಉತ್ಕೃಷ್ಟತಾ ಕೇಂದ್ರಗಳ ಆರಂಭ ಸೇರಿದಂತೆ ಇನ್ನಿತರೆ ವಿಚಾರ ವಿನಿಮಯ ನಡೆಸಲಾಯಿತು.

ಕಾರ್ಯಾಗಾರಕ್ಕೆ ಚಾಲನೆ ನೀಡಿದ ಐಟಿ ಇಲಾಖೆಯ ಕಾರ್ಯದರ್ಶಿ ಡಾ.ಎನ್.ಮಂಜುಳಾ ಮಾತನಾಡಿ, ರಾಜ್ಯವು ರಕ್ಷಣೆ ಮತ್ತು ವೈಮಾಂತರಿಕ್ಷ ವಲಯಗಳಲ್ಲಿ ಅಗ್ರಸ್ಥಾನದಲ್ಲಿರುವುದರಿಂದ ಇದಕ್ಕೆ ಅಗತ್ಯವಿರುವ ನೀತಿಯನ್ನು ರೂಪಿಸುವ ಹೊಣೆಗಾರಿಕೆಯ ನೇತೃತ್ವವನ್ನು ಕರ್ನಾಟಕಕ್ಕೆ ವಹಿಸಲಾಗಿದೆ ಎಂದರು. ಕೇಂದ್ರ ರಕ್ಷಣಾ ಮತ್ತು ಕೌಶಲ್ಯಾಭಿವೃದ್ಧಿ ಸಚಿವಾಲಯ, ರಾಜ್ಯ ಸರಕಾರದ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಮತ್ತು ಐಟಿ ಇಲಾಖೆ ಹಾಗೂ ರಕ್ಷಣಾ ವಲಯದ ಸಾರ್ವಜನಿಕ ಉದ್ದಿಮೆಗಳಾಗಿರುವ ಎಚ್‌ಎಎಲ್, ಬಿಡಿಎಲ್, ಬಿಇಎಂಎಲ್, ಜತೆಗೆ ರಕ್ಷಣಾ ವಲಯದ ಮುಂಚೂಣಿ ಉದ್ದಿಮೆಗಳ ಉನ್ನತ ಮಟ್ಟದ ಅಧಿಕಾರಿಗಳು ಮತ್ತು ಪ್ರತಿನಿಧಿಗಳು ಭಾಗವಹಿಸಿದ್ದರು.

ಪ್ರವಾಸೋದ್ಯಮ ಇಲಾಖೆಯಿಂದ ನಮ್ಮ ಗೈಡ್ ಆನ್‌ಲೈನ್ ವೇದಿಕೆ

ಪ್ರವಾಸಿಗರಿಗೆ ವಿಶ್ವದರ್ಜೆಯ ಸೌಲಭ್ಯ

ಬೆಂಗಳೂರು: ಪ್ರವಾಸಿಗರಿಗೆ ವಿಶ್ವದರ್ಜೆಯ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ನಮ್ಮ ಗೈಡ್ ಎಂಬ ಹೆಸರಿನಲ್ಲಿ ನೂತನ ಆನ್‌ಲೈನ್ ವೇದಿಕೆಯನ್ನು ಸಿದ್ಧಪಡಿಸಲು ಪ್ರವಾಸೋದ್ಯಮ ಇಲಾಖೆ ಚಿಂತನೆ ನಡೆಸಿದೆ.



ಈ ಕುರಿತು ಮಾಹಿತಿ ನೀಡಿದ ಪ್ರವಾಸೋದ್ಯಮ ಸಚಿವ ಕೆ.ಜೆ.ಜಾರ್ಜ್, ಪ್ರಸ್ತುತ ವಿದೇಶಗಳಲ್ಲಿ ಪ್ರವಾಸಿಗರು ತಮಗೆ ಬೇಕಾದ ಗೈಡ್‌ಗಳನ್ನು ಆನ್‌ಲೈನ್ ಮೂಲಕವೇ ಕಾಯ್ದಿರಿಸುವ ವ್ಯವಸ್ಥೆಗಳಿವೆ. ಇದೇ ಮಾದರಿಯ ಅತ್ಯಾಧುನಿಕ ಆನ್‌ಲೈನ್ ವೇದಿಕೆಯನ್ನು ರಾಜ್ಯದಲ್ಲೂ ಪ್ರಾರಂಭಿಸುವುದು ಇಲಾಖೆ ಪ್ರಮುಖ ಉದ್ದೇಶವಾಗಿದೆ. ಈ ಹಿನ್ನೆಲೆಯಲ್ಲಿ ಹೊಸದೊಂದು ವೆಬ್‌ಸೈಟ್ ಹಾಗೂ ಆ್ಯಪ್ ರಚಿಸಲು ಮುಂದಾಗಿದೆ ಎಂದರು.

ರಾಜ್ಯದ ಯಾವುದೇ ಪ್ರವಾಸಿ ತಾಣಕ್ಕೆ ಭೇಟಿ ನೀಡುವ ದೇಶವಿದೇಶಗಳ ಪ್ರವಾಸಿಗರಿಗೆ ಆಯಾ ಪ್ರದೇಶದ ಇತಿಹಾಸ, ಸಂಸ್ಕೃತಿ, ಮಹತ್ವದ ಬಗ್ಗೆ ನಿಖರ ಮಾಹಿತಿ ನೀಡುವಲ್ಲಿ ಸ್ಥಳೀಯ ಗೈಡ್‌ಗಳ ಸೇವೆ ಅತ್ಯಂತ ಪ್ರಮುಖವಾಗಿದೆ. ಈ ನೂತನ ಆನ್‌ಲೈನ್ ವೇದಿಕೆಯಿಂದ ಪ್ರವಾಸಿಗರಿಗೆ ಸ್ಥಳೀಯ ಗೈಡ್‌ಗಳನ್ನು ಸುಲಭವಾಗಿ ಸಂಪರ್ಕಿಸಲು, ಪ್ರವಾಸಿ ತಾಣಗಳನ್ನು ಸರಿಯಾಗಿ ಹಾಗೂ ಅರ್ಥಪೂರ್ಣವಾಗಿ ವೀಕ್ಷಿಸಲು ಅನುಕೂಲವಾಗಲಿದೆ ಎಂದು ಸಚಿವರು ತಿಳಿಸಿದರು.

ಅಲ್ಲದೆ, ಪ್ರವಾಸಿ ಸ್ಥಳಗಳ ಸ್ವಚ್ಛತೆ ಕಾಪಾಡುವಲ್ಲಿ ಹಾಗೂ ಅವುಗಳ ಸಮರ್ಪಕ ನಿರ್ವಹಣೆಯಲ್ಲಿ ಗೈಡ್‌ಗಳು ಸಕ್ರಿಯವಾಗಿ ಪಾಲ್ಗೊಳ್ಳಲು ಇದು ಸಹಕಾರಿಯಾಗಲಿದೆ. ಹಾಗೆಯೇ, ಇದರಿಂದ ಈಗಾಗಲೇ ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಣಿಯಾಗಿರುವ ಗೈಡ್‌ಗಳಿಗೆ ಹೆಚ್ಚಿನ ಕೆಲಸವೂ ದೊರೆಯಲಿದೆ.

> ವಿದೇಶಗಳ ಮಾದರಿಯಲ್ಲಿ ನಮ್ಮ ರಾಜ್ಯದಲ್ಲೂ ಪ್ರವಾಸಿಗರು ಸುಲಭವಾಗಿ, ಪಾರದರ್ಶಕವಾಗಿ ಗೈಡ್‌ಗಳ ಸೇವೆಯನ್ನು ಪಡೆಯಲು ಅನುವಾಗುವಂತೆ ನಮ್ಮ ಗೈಡ್ ವೆಬ್‌ಸೈಟ್ ಹಾಗೂ ಆ್ಯಪ್ ಅಭಿವೃದ್ಧಿಪಡಿಸಲಾಗುವುದು. ಇದರಿಂದ ಪ್ರವಾಸಿಗರಿಗೆ ಅತ್ಯುತ್ತಮ ಮಾಹಿತಿ ಮತ್ತು ಉತ್ತಮ ಅನುಭವ ದೊರೆಯುತ್ತದೆ.
> ■ ಕೆ.ಜೆ.ಜಾರ್ಜ್, ಪ್ರವಾಸೋದ್ಯಮ ಸಚಿವ

ಈ ಯೋಜನೆಯನ್ನು ತ್ವರಿತವಾಗಿ ಸಾಕಾರಗೊಳಿಸಲು ರಾಜ್ಯದಲ್ಲಿರುವ ನವೋದ್ಯಮಗಳು ಸೇರಿದಂತೆ ತಂತ್ರಜ್ಞಾನದಲ್ಲಿ ಆಸಕ್ತಿ ಹೊಂದಿರುವ ಸಂಸ್ಥೆಗಳಿಗೆ ಆಹ್ವಾನ ನೀಡಲು ಇಲಾಖೆ ಮುಂದಾಗಿದೆ ಎಂದು ಮಾಹಿತಿ ನೀಡಿದರು. ಈ ಆನ್‌ಲೈನ್ ವೇದಿಕೆಯಿಂದ ನಮ್ಮ ಐತಿಹಾಸಿಕ ಮತ್ತು ನೈಸರ್ಗಿಕ ತಾಣಗಳ ಸ್ವಚ್ಛತೆ ಹಾಗೂ ನಿರ್ವಹಣೆಗೂ ಹೆಚ್ಚಿನ ಬಲ ಸಿಗಲಿದೆ. ಈ ವಿನೂತನ ವೇದಿಕೆ ನಿರ್ಮಾಣಕ್ಕಾಗಿ ರಾಜ್ಯದ ಪ್ರತಿಭಾವಂತ ನವೋದ್ಯಮಗಳಿಗೆ ಅವಕಾಶ ನೀಡಲಾಗುವುದು ಎಂದು ಪ್ರವಾಸೋದ್ಯಮ ಸಚಿವ ಕೆ.ಜೆ ಜಾರ್ಜ್ ತಿಳಿಸಿದ್ದಾರೆ.

ಬಲಿದಾನ ದಿವಸ್ ಆಚರಣೆ



ಬೆಂಗಳೂರು: ಭಾರತೀಯ ಜನಸಂಘದ ಸಂಸ್ಥಾಪಕರಾದ ಡಾ. ಶ್ಯಾಮಪ್ರಸಾದ್ ಮುಖರ್ಜಿ ಅವರ ಬಲಿದಾನ ದಿವಸದ ಅಂಗವಾಗಿ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಮಂಗಳವಾರ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ವಿಧಾನಪರಿಷತ್ ಸದಸ್ಯರಾದ ಸಿ.ಟಿ.ರವಿ, ಪ್ರತಾಪಸಿಂಹ ನಾಯಕ್, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್. ಹರೀಶ್, ಬೆಂಗಳೂರು ಕೇಂದ್ರ ಜಿಲ್ಲಾಧ್ಯಕ್ಷ ಸಪ್ತಗಿರಿಗೌಡ, ಪಕ್ಷದ ಪ್ರಮುಖರು ಮತ್ತು ಕಾರ್ಯಕರ್ತರು ಭಾಗವಹಿಸಿದ್ದರು.

ಸರ್ಕಾರಿ ಜಮೀನಿನಲ್ಲಿ ಟೌನ್‌ಶಿಪ್ ಮಾಡಲಿ: ಬೊಮ್ಮಾಯಿ

ಗದಗ: ಬಿಡದಿ ಟೌನ್‌ಶಿಪ್ ಮಾಡುವ ವಿಚಾರದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಪ್ರತಿಷ್ಠೆ ಮಾಡಿಕೊಳ್ಳದೆ ರೈತರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ, ಸರ್ಕಾರಿ ಜಮೀನಿನಲ್ಲಿ ಸ್ಯಾಟಲೈಟ್ ಟೌನ್‌ಶಿಪ್ ಮಾಡಿ, ಎಲ್ಲಾ ವ್ಯವಸ್ಥೆಗಳನ್ನು ಮಾಡಿದರೆ ಆ ಒಳ್ಳೆಯ ನಿರ್ಧಾರ ಆಗುತ್ತದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಅಭಿಪ್ರಾಯ ಪಟ್ಟಿದ್ದಾರೆ.


ಮಲೆನಾಡು ಭಾಗದಲ್ಲಿ ಹೆಚ್ಚಾದ ಹಾವು ಸಂತತಿ | ತೋಟಗಳಿಗೆ ಹೋಗಲು ಹೆದರುವ ರೈತರು

ಮಳೆಗೆ ಅಪ್ಪಟೆ ಮಂಡಲ ಕಟ್ಟು ಹಾವಿನ ಭೀತಿ

ರಮೇಶ್, ಕರುವಾನೆ

ದಿಗಂತ ವಿಶೇಷ

ಶೃಂಗೇರಿ: ಹವಾಮಾನ ವೈಪರಿತ್ಯವೋ ಏನೋ ಮಲೆನಾಡು ಭಾಗದಲ್ಲಿ ಅಡಿಕೆ, ಕಾಫಿ ತೋಟಗಳಲ್ಲಿ ಎಲ್ಲೆಂದರಲ್ಲಿ ಅಪ್ಪಟೆ ಮಂಡಲ ಕಟ್ಟು ಹಾವುಗಳು ಕಾಣಸಿಗುತ್ತವೆ. ಹಿಂದೆಂದೂ ಕಂಡರಿಯದ ರೀತಿಯಲ್ಲಿ ಅಪ್ಪಟೆ ಹಾವುಗಳ ಸಂತತಿ ಜಾಸ್ತಿಯಾಗಿದ್ದು ಹಿಂದೆ ಬಾವಿಯ ಬಿಲ, ಮರದ ಪೊಟರೆಗಳಲ್ಲಿ ಅವುಗಳ ವಾಸಸ್ಥಾನವಾಗಿತ್ತು. ಈಗ ಮನೆಯ ಮರದ ಮಟ್ಟುಗಳ ಮೇಲೆ ಬೆಚ್ಚಗೆ ಸುರಳಿ ಸುತ್ತಿಕೊಂಡು ಮಲಗಿರುತ್ತವೆ.



ಅಪ್ಪಟೆ ಮಂಡಲ ಹಾವುಗಳು: ಈ ಹಾವುಗಳು 30 ಸೆಂ.ಮೀನಷ್ಟು ಉದ್ದ ಇದ್ದು ಬಾಲ ಮಾತ್ರ ಚಿಕ್ಕದಾಗಿ ವಿಷಯುಕ್ತವಾಗಿದೆ. ಸಾಮಾನ್ಯವಾಗಿ ಒಣ ಪ್ರದೇಶಗಳಲ್ಲಿ ವಾಸಿಸುತ್ತವೆ. ಅತಿ ಚಳಿ, ಅತಿ ಸೆಖೆ ತಡೆಯಲಾರವು. ಚಳಿಗಾಲದಲ್ಲಿ ಕಲ್ಲು ಬಂಡೆಗಳ ಕೆಳಗೆ ಬೇಸಿಗೆಯಲ್ಲಿ ಪ್ರದೇಶಗಳೆಡೆಗೆ ಸಾಗುತ್ತವೆ.

> ಈ ವರ್ಷ ಅಪ್ಪಟೆ ಮಂಡಲ ಕಟ್ಟು ಹಾವಿನಿಂದ ಕಚ್ಚಿಸಿಕೊಂಡವರು ಬಹಳಷ್ಟು ಜನ ಇದ್ದಾರೆ. ಜನ ಭಯ ಬೀಳುವುದು ಬೇಡ. ಅಸಡ್ಡೆ ತೋರಿದರೆ ಮಾತ್ರ ದೇಹದಲ್ಲಿ ನಂಜು ವಿಷ ಜಾಸ್ತಿಯಾಗಿ ತೊಂದರೆಗೆ ಒಳಗಾಗಬೇಕಾಗುತ್ತದೆ. ಕೂಡಲೇ ವೈದ್ಯರ ಬಳಿ ತೆರಳಿ ಔಷಧವನ್ನು ಕಟ್ಟುನಿಟ್ಟಾಗಿ ತೆಗೆದುಕೊಳ್ಳಬೇಕು.
> ■ ಡಾ. ಅಶ್ವಾ ದೂರೆ, ವೈದ್ಯರು ಶೃಂಗೇರಿ

> ಹವಾಮಾನ ವೈಪರೀತ್ಯದಿಂದ ಹಾವುಗಳ ಸಂತತಿಯಲ್ಲಿ ಏರುಪೇರಾಗಿರುವ ಸಾಧ್ಯತೆ ಇದೆ. ಕಳೆದ ಎರಡು, ಮೂರು ವರ್ಷಗಳಲ್ಲಿ ತಾಲೂಕಿನಲ್ಲಿ ಹೆಚ್ಚು ಮಳೆಯಾಗಿದೆ. ಈ ವರ್ಷ ಮಳೆ ಕೊರತೆ ಇದೆ. ಈ ಹಿನ್ನಲೆಯಲ್ಲಿ ಹಾವುಗಳ ಸಂತತಿ ಹೆಚ್ಚಾಗಿರಬಹುದು. ಸಂತತಿ ಹೆಚ್ಚಾಗಲು ಈ ವರ್ಷ ಪೂರಕ ವಾತಾವರಣ ಇದ್ದಿರಬಹುದು.
> ■ ಸ್ನೇಕ್‌ಸ್ನೇಹಿ ಕುಮಾರ್, ಶೃಂಗೇರಿ

ಈ ಹಾವುಗಳು ಭೂಭಾಗದ ಎಲ್ಲಾ ಕಡೆಯಲ್ಲೂ ಇರುತ್ತದೆ. ಈ ಹಾವುಗಳು ವಾಸಿಸುವ ಪರಿಸರದ ಬಣ್ಣವನ್ನು ಹೋಲುತ್ತದೆ. ಗಿಡಗಳ ಪೊದೆಯಲ್ಲಿ ವಾಸಿಸುವ ಈ ಹಾವುಗಳು ಮರಳು ಅಥವಾ ಒಣಗಿದ ತರಗೆಲೆಗಳ ಬಣ್ಣದ ಹಾವುಗಳಾಗಿವೆ. ವಿವಿಧ ವರ್ಣದ ಉಂಗುರ ಹಾಗೂ ಕಟ್ಟುಗಳಿಂದ ಶರೀರದ ತುಂಬೆಲ್ಲ ಆವರಿಸಿರುತ್ತದೆ ಎಂದು ಸ್ಥಳೀಯ ಸ್ನೇಕ್ ಸ್ನೇಹಿ ಅರ್ಜುನ್ ಹೇಳುತ್ತಾರೆ.

ಆತಂಕ ಹೆಚ್ಚಿಸುವ ಹಾವುಗಳು: ಮನುಷ್ಯರ ಸುಳಿವು ಸಿಕ್ಕುತ್ತಿದ್ದಂತೆ ಪ್ರಾಣಿಗಳು ಪಕ್ಷಿಗಳು ಓಡಿ ಹೋಗುತ್ತವೆ. ಆದರೆ ಹಾವುಗಳು ಕೆಲವೆಡೆ ಬಿಡುಬಿಟ್ಟು ಆತಂಕ ಸೃಷ್ಟಿಸುತ್ತಿವೆ. ಅಡಿಕೆ, ಬಾಳೆ, ಕಾಫಿ ತೋಟಗಳಲ್ಲಿ ವಾಸ್ತವ್ಯ ಹೂಡಿ ಭೀತಿ ಹುಟ್ಟಿಸುತ್ತವೆ. ಅಷ್ಟೇ ಏಕೆ ಮನೆಗಳ ಸುತ್ತಮುತ್ತಲಿನ ಜಾಗದಲ್ಲೂ ಅವುಗಳ ವಾಸಸ್ಥಾನವಾಗಿದೆ. ಹಾವುಗಳ ಉಪಟಳದಿಂದಾಗಿ ಗದ್ದೆ, ಅಡಿಕೆ, ಬಾಳೆ, ಕಾಫಿ ತೋಟಗಳಿಗೆ ಹೋಗಲು ಹಿಂಜರಿಯುವಂತಾಗಿದೆ.

ತುರ್ತು ಸಲಹೆ ನೀಡುವಂತೆ ರಾಜ್ಯಪಾಲರನ್ನು ಭೇಟಿಯಾದ ಬಿ.ವೈ.ರಾಘವೇಂದ್ರ

ಶಿವಮೊಗ್ಗದಲ್ಲಿಯೇ ಹೈ ಸಂಚಾರಿ ಪೀಠ ಸ್ಥಾಪಿಸಿ

ಶಿವಮೊಗ್ಗ: ಶಿವಮೊಗ್ಗದಲ್ಲಿಯೇ ಹೈಕೋರ್ಟ್ ಸಂಚಾರಿ ಪೀಠ ಸ್ಥಾಪನೆ ಮಾಡಬೇಕು. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕಾರ್ಯ ಪ್ರವೃತ್ತವಾಗಲು ತುರ್ತು ಸಲಹೆ ನೀಡುವಂತೆ ಕೋರಿ ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಅವರನ್ನು ಭೇಟಿ ಮಾಡಿ ಸಂಸದ ಬಿ.ವೈ.ರಾಘವೇಂದ್ರ ಮನವಿ ಸಲ್ಲಿಸಿದ್ದಾರೆ.

ಲೋಕ ಭವನದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರನ್ನು ಭೇಟಿ ಮಾಡಿ, ಶಿವಮೊಗ್ಗದಲ್ಲಿ ಹೈಕೋರ್ಟ್ ಸರ್ಕ್ಯೂಟ್ ಪೀಠ ಸ್ಥಾಪನೆಗೆ ಕೋರಿ ವಿವರವಾದ ಮನವಿ ಸಲ್ಲಿಸಿದ್ದಾರೆ. ಮನವಿಯಲ್ಲಿ ಭೌಗೋಳಿಕವಾಗಿ ಮಧ್ಯ ಕರ್ನಾಟಕದ ಜನರಿಗೆ ಹೈಕೋರ್ಟ್ ಸಂಚಾರಿ ಪೀಠ ಸ್ಥಾಪನೆಯಿಂದ ಆಗುವ ಅನುಕೂಲಗಳ ಬಗ್ಗೆ ರಾಜ್ಯಪಾಲರ ಗಮನ ಸೆಳೆದಿದ್ದಾರೆ.

ಶಿವಮೊಗ್ಗದಲ್ಲಿ ಸರ್ಕ್ಯೂಟ್ ಪೀಠ ಸ್ಥಾಪನೆಯಿಂದ ಶಿವಮೊಗ್ಗ ಜಿಲ್ಲೆಯ ಜನರಿಗೆ ಮಾತ್ರವಲ್ಲದೆ ಚಿಕ್ಕಮಗಳೂರು, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳು ಸೇರಿದಂತೆ ಮಲೆನಾಡು ಮತ್ತು ಮಧ್ಯ ಕರ್ನಾಟಕ ಪ್ರದೇಶದ ಜನರಿಗೆ ಹೆಚ್ಚಿನ ಅನುಕೂಲವಾಗಲಿದೆ. ಇದರಿಂದಾಗಿ ನ್ಯಾಯಾಂಗಕ್ಕೆ ಸಂಬಂಧಿಸಿದ ಕೆಲಸಗಳು ಸುಲಭವಾಗಿ ಜನರಿಗೆ ಸಿಗಲಿದೆ ಎಂದು ಮನವಿ ಮಾಡಿದ್ದಾರೆ.



ರಾಜ್ಯಪಾಲರ ಭೇಟಿ ಸಂದರ್ಭದಲ್ಲಿ ಬೆಂಗಳೂರಿನ ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ ಉಪಸ್ಥಿತರಿದ್ದರು. ಸಂಸದ ರಾಘವೇಂದ್ರ ಅವರ ಬೇಡಿಕೆಗೆ ತಮ್ಮ ಬೆಂಬಲ ವ್ಯಕ್ತಪಡಿಸಿದರು. ಶಿವಮೊಗ್ಗದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ ಆಗಬೇಕು ಎಂಬ ಹೋರಾಟ ಇದೀಗ ಇನ್ನೊಂದು ಹಂತಕ್ಕೆ ತೆರಳಿದೆ. ಈ ಸಂಬಂಧ ಶಿವಮೊಗ್ಗದಲ್ಲಿ ವಕೀಲರು ವಾರಗಳ ಕಾಲ ಹೋರಾಟ ನಡೆಸಿದ್ದರು. ಹೋರಾಟಕ್ಕೆ ಪಕ್ಷಾತೀತ ಬೆಂಬಲ ವ್ಯಕ್ತವಾಗಿತ್ತು.

> ಶಿವಮೊಗ್ಗದಲ್ಲಿ ಹೈಕೋರ್ಟ್ ಸಂಚಾರಿ ಪೀಠದ ಸ್ಥಾಪನೆ ಈ ಭಾಗದ ಜನರ ನ್ಯಾಯ ಪ್ರಾಪ್ತಿಯ ಹಕ್ಕಿಗೆ ಗಮನಾರ್ಹ ಬಲ ನೀಡುತ್ತದೆ. ದಾವೆದಾರರ ವೆಚ್ಚದ ಹೊರೆಯನ್ನು ಕಡಿಮೆ ಮಾಡುತ್ತದೆ ಮತ್ತು ಮಲೆನಾಡು ಮತ್ತು ಮಧ್ಯ ಕರ್ನಾಟಕದ ಜನರ ದೀರ್ಘಕಾಲದ ಆಕಾಂಕ್ಷೆಯನ್ನು ಈಡೇರಿಸುತ್ತದೆ.
> ■ ಬಿ.ವೈ.ರಾಘವೇಂದ್ರ, ಸಂಸದ

ಪ್ರತ್ಯೇಕ ಪೀಠದಿಂದ ಅನುಕೂಲ: ಶಿವಮೊಗ್ಗದಲ್ಲಿ ಪ್ರತ್ಯೇಕ ಸರ್ಕ್ಯೂಟ್ ಪೀಠವನ್ನು ಸ್ಥಾಪಿಸುವವರೆಗೆ ಶಿವಮೊಗ್ಗ ಜಿಲ್ಲೆ ಬೆಂಗಳೂರಿನ ಹೈ ಪ್ರಧಾನ ಪೀಠದ ವ್ಯಾಪ್ತಿಯಲ್ಲಿ ಮುಂದುವರಿಯಬೇಕು. ಬೆಂಗಳೂರು ಶಿವಮೊಗ್ಗದ ಜನರಿಗೆ ಅತ್ಯಂತ ಸುಲಭವಾಗಿ ತಲುಪಬಹುದಾದ ಕೇಂದ್ರ. ಶಿವಮೊಗ್ಗವನ್ನು ಮಂಗಳೂರಿನಲ್ಲಿ ಪ್ರಸ್ತಾವಿತ ನ್ಯಾಯಪೀಠದ ವ್ಯಾಪ್ತಿಗೆ ತರುವುದರಿಂದ ಇನ್ನಷ್ಟು ಸಮಸ್ಯೆಗಳು ಆಗುವ ಸಾಧ್ಯತೆ ಇದೆ ಎಂದು ರಾಜ್ಯಪಾಲರಿಗೆ ರಾಘವೇಂದ್ರ ಮನವರಿಕೆ ಮಾಡಿಕೊಟ್ಟಿದ್ದಾರೆ.

ಸಂಪಾದಕೀಯ

ಮುಂಗಾರು ಕೊರತೆ ಮುನ್ನೆಚ್ಚರಿಕೆಯೇ ಪರಿಹಾರ

ದೇಶದ ಕೃಷಿ ವಲಯಕ್ಕೆ ಜೀವನಾಡಿಯಾಗಿರುವ ನೈಋತ್ಯ ಮುಂಗಾರು ಈ ಬಾರಿ ಆರಂಭದಲ್ಲಿಯೇ ಆತಂಕ ಮೂಡಿಸಿದೆ. ಮಳೆ ಕೊರತೆ ಶೇ.43ಕ್ಕೆ ತಲುಪಿದ್ದು, 315 ಜಿಲ್ಲೆಗಳು ದುರ್ಬಲ ಮುಂಗಾರಿನ ಪರಿಣಾಮ ಎದುರಿಸುವ ಸಾಧ್ಯತೆಯಿದೆ. ಇವುಗಳಲ್ಲಿ ನೀರಾವರಿ ಸೌಲಭ್ಯ ಅತ್ಯಂತ ಕಡಿಮೆ ಇರುವ 111 ಜಿಲ್ಲೆಗಳು ತೀವ್ರ ಅಪಾಯದಲ್ಲಿವೆ. ಕರ್ನಾಟಕವೂ ಅಪಾಯ ಎದುರಿಸುತ್ತಿರುವ ರಾಜ್ಯಗಳಲ್ಲಿ ಒಂದಾಗಿದೆ.

ಮುಂಗಾರು ವಿಳಂಬದ ಮೊದಲ ಹೊಡೆತ ಖಾರಿಫ್ ಬಿತ್ತನೆಗೆ ಬೀಳುತ್ತದೆ.



ಭತ್ತ, ಮೆಕ್ಕೆಜೋಳ, ಹತ್ತಿ, ಬೇಳೆ ಮತ್ತು ಎಣ್ಣೆಕಾಳು ಬೆಳೆಗಳಿಗೆ ಅಗತ್ಯವಾದ ಮಣ್ಣಿನ ತೇವಾಂಶ ಹಲವು ಪ್ರದೇಶಗಳಲ್ಲಿ ಇನ್ನೂ ಸೃಷ್ಟಿಯಾಗಿಲ್ಲ. ಆತುರದ ಬಿತ್ತನೆ ಬಳಿಕ ಮಳೆ ಕೈಕೊಟ್ಟರೆ ರೈತನ ಬೀಜ, ಗೊಬ್ಬರ, ಶ್ರಮ ಎಲ್ಲವೂ ನಷ್ಟವಾಗುತ್ತದೆ. ಆದ್ದರಿಂದ ತಾಲೂಕು ಮತ್ತು ಹೋಬಳಿ ಮಟ್ಟದಲ್ಲಿ ನಿಖರ ಹವಾಮಾನ ಮಾಹಿತಿ ಹಾಗೂ ಬೆಳೆ ಸಲಹೆ ತಲುಪಬೇಕು.

ಅಪಾಯಪೀಡಿತ ಜಿಲ್ಲೆಗಳಲ್ಲಿ ಮರುಬಿತ್ತನೆಗೆ ಬೀಜ, ಗೊಬ್ಬರ, ಸಾಲ, ಬೆಳೆ ವಿಮೆ ಮತ್ತು ಕುಡಿಯುವ ನೀರಿನ ಸಿದ್ಧತೆ ಈಗಲೇ ಆಗಬೇಕು. ಕಡಿಮೆ ಅವಧಿಯಲ್ಲಿ ಬೆಳೆಯುವ, ಬರವನ್ನು ತಾಳುವ ತಳಿಗಳು, ಸಿರಿಧಾನ್ಯಗಳು, ಬೇಳೆ ಮತ್ತು ಎಣ್ಣೆಕಾಳುಗಳನ್ನು ಉತ್ತೇಜಿಸಬೇಕು. ಆದರೆ ಪರ್ಯಾಯ ಬೆಳೆಗಳಿಗೆ ಮಾರುಕಟ್ಟೆ ಮತ್ತು ಬೆಂಬಲ ಬೆಲೆ ಖಚಿತಪಡಿಸದಿದ್ದರೆ ರೈತರು ಬದಲಾವಣೆಗೆ ಮುಂದಾಗುವುದಿಲ್ಲ. ಕರ್ನಾಟಕದಲ್ಲಿ ಕೆರೆ, ಕಟ್ಟೆ, ಕೃಷಿಹೊಂಡ ಮತ್ತು ಕಾಲುವೆಗಳ ಪುನಶ್ಚೇತನಕ್ಕೆ ಆದ್ಯತೆ ನೀಡಬೇಕು. ಹನಿ ಹಾಗೂ ತುಂತುರು ನೀರಾವರಿ ಸೌಲಭ್ಯವನ್ನು ತ್ವರಿತವಾಗಿ ವಿಸ್ತರಿಸಬೇಕು. ಜಲಾಶಯಗಳಲ್ಲಿ ನೀರಿನ ಸಂಗ್ರಹ ಕಳೆದ ವರ್ಷಕ್ಕಿಂತ ಉತ್ತಮವಾಗಿದೆ ಎಂಬ ಸಮಾಧಾನ ಇದ್ದರೂ, ಪ್ರದೇಶವಾರು ಮಳೆಯ ಅಸಮಾನ ಹಂಚಿಕೆಯನ್ನು ನಿರ್ಲಕ್ಷಿಸಲಾಗದು. ಗ್ರಾಮ ಪಂಚಾಯಿತಿಗಳು, ಕೃಷಿ ಇಲಾಖೆ, ಕೃಷಿ ವಿಜ್ಞಾನ ಕೇಂದ್ರಗಳು ಮತ್ತು ಸಹಕಾರ ಸಂಸ್ಥೆಗಳು ಸಮನ್ವಯದಿಂದ ಕೆಲಸ ಮಾಡಬೇಕು.

ಬೆಳೆ ಹಾನಿ ಸಮೀಕ್ಷೆ ಪಾರದರ್ಶಕವಾಗಿದ್ದು, ವಿಮಾ ಪರಿಹಾರ ವಿಳಂಬವಿಲ್ಲದೆ ರೈತರ ಖಾತೆಗೆ ತಲುಪಬೇಕು. ಸಂಕಷ್ಟದ ಸಂದರ್ಭದಲ್ಲಿ ಬ್ಯಾಂಕುಗಳು ಸಾಲ ವಸೂಲಿಗೆ ಒತ್ತಡ ಹೇರುವ ಬದಲು ಮರುಪಾವತಿ ಅವಧಿ ವಿಸ್ತರಿಸಬೇಕು. ಪಶುಗಳಿಗೆ ಮೇವು, ಗ್ರಾಮಗಳಿಗೆ ಕುಡಿಯುವ ನೀರು ಮತ್ತು ಉದ್ಯೋಗ ಖಾತ್ರಿ ಯೋಜನೆಯಡಿ ಜಲಸಂರಕ್ಷಣಾ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕು. ಮುಂಗಾರು ಮತ್ತೆ ಚುರುಕಾಗಬಹುದು ಎಂಬ ನಿರೀಕ್ಷೆ ಇದ್ದರೂ, ಆಡಳಿತ ಯಂತ್ರ ನಿರ್ಲಕ್ಷ್ಯ ತೋರಬಾರದು; ಪ್ರತಿಯೊಂದು ಜಿಲ್ಲೆಯ ಪರಿಸ್ಥಿತಿಯನ್ನು ನಿತ್ಯ ಪರಿಶೀಲಿಸಿ ಅಗತ್ಯ ನೆರವನ್ನು ತಕ್ಷಣ ಒದಗಿಸಬೇಕು. ನಿಜಕ್ಕೂ ಇದೇ ರೈತನ ಬದುಕು ಉಳಿಸುವ ದಾರಿಯಾಗಿದೆ.

ಮಳೆ ಸರ್ಕಾರದ ನಿಯಂತ್ರಣದಲ್ಲಿಲ್ಲ, ಆದರೆ ಮಳೆ ಕೊರತೆಯಿಂದ ಉಂಟಾಗುವ ಸಂಕಷ್ಟವನ್ನು ಕಡಿಮೆ ಮಾಡುವುದು ಸರ್ಕಾರದ ಹೊಣೆ. ರೈತನಿಗೆ ಸುಳ್ಳು ಭರವಸೆ ಅಲ್ಲ, ಸಕಾಲಿಕ ಮಾಹಿತಿ, ಪರ್ಯಾಯ ಬೆಳೆ ಮಾರ್ಗದರ್ಶನ, ಮಾರುಕಟ್ಟೆ ಭದ್ರತೆ ಮತ್ತು ಕಾರ್ಯರೂಪದ ನೆರವೇ ಬೇಕಾಗಿದೆ.

ವಿನಾಶಕಾಲೇ ವಿಪರೀತ ಬುದ್ಧಿಃ

ನ ನಿರ್ಮಿತಾ ಕೇನ ನ ದೃಷ್ಟಪೂರ್ವಾ ನ ಶ್ರೂಯತೇ ಹೇಮಮಯೀ ಕುರಂಗೀ।
ತಥಾಪಿ ತೃಷ್ಣಾ ರಘುನಂದನಸ್ಯ ವಿನಾಶಕಾಲೇ ಉಪಹಿತಬುದ್ಧಿಃ॥ – ಚಾಣಕ್ಯ ನೀತಿ

ಚಿನ್ನದ ಜಿಂಕೆಯನ್ನು ಯಾರೂ ನಿರ್ಮಿಸಿಲ್ಲ, ಹಿಂದೆ ಯಾರೂ ನೋಡಿಲ್ಲ, ಯಾರೂ ಕೇಳಿಲ್ಲ. ಆದರೂ ಶ್ರೀರಾಮನಿಗೆ ಅದರ ಮೇಲೆ ಆಸಕ್ತಿ ಹುಟ್ಟಿತು. ಏಕೆಂದರೆ ವಿನಾಶಕಾಲ ಬಂದಾಗ ಬುದ್ಧಿಯೂ ವಿಕಾರಗೊಳ್ಳುತ್ತದೆ – ಎಂಬುದು ಶ್ಲೋಕಾರ್ಥ.

'ವಿನಾಶಕಾಲೇ ವಿಪರೀತ ಬುದ್ಧಿಃ' ಎಂಬ ನುಡಿಗಟ್ಟನ್ನು ಸಾಕಷ್ಟು ಬಾರಿ ಕೇಳಿದ್ದೇವೆ. ಅನೇಕ ಸಂದರ್ಭಗಳಲ್ಲಿ ಹೇಳಿದ್ದೇವೆ ಕೂಡ. ವಿನಾಶಕಾಲ ಸಮೀಪಿಸಿದಾಗ ಬುದ್ಧಿಯು ವಿಕಾರಗೊಳ್ಳುತ್ತದೆ, ಮಾಡಬಾರದ್ದನ್ನು ಮಾಡುತ್ತೇವೆ, ಆಡಬಾರದ್ದನ್ನು ಆಡುತ್ತೇವೆ ಎಂಬುದು ಸೂಕ್ತಿಯ ತಾತ್ಪರ್ಯ. ಒಟ್ಟಿನಲ್ಲಿ ಎಚ್ಚರಿಕೆಯಿಂದ ವ್ಯವಹಾರ ಮಾಡಬೇಕು. ವಿವೇಕದಿಂದ ನಡೆದುಕೊಳ್ಳಬೇಕು. ಆದಿಲ್ಲದಿದ್ದರೆ ಆಗಬಾರದ್ದಾಗುತ್ತದೆ.


ಶ್ಲೋಕ ಸಾಗರ
ಡಾ.ಸೋಂದಾ ಭಾಸ್ಕರ ಭಟ್

ಎಲ್ಲವನ್ನೂ ಕಳೆದುಕೊಳ್ಳಬೇಕಾಗುತ್ತದೆ ಎಂಬುದು ಕಥನದ ಆಶಯ. ಇದನ್ನು ರಾಮಾಯಣದ ಘಟನೆ ಹಿನ್ನೆಲೆಯಲ್ಲಿ ವಿವರಿಸಲಾಗಿದೆ. ರಾಮಾಯಣದ ವಿಷಯವನ್ನಾಧರಿಸಿದ ಶ್ಲೋಕ ಇದಾಗಿದ್ದರೂ ರಾಮಾಯಣದ್ದಲ್ಲ. ಚಾಣಕ್ಯ ನೀತಿ ಎಂಬ ಗ್ರಂಥದಲ್ಲಿ ಬಂದ ಶ್ಲೋಕ. ವಿನಾಶಕಾಲ ಎದುರಾದಾಗ ನಮ್ಮಲ್ಲಿ ಏನಾಗುತ್ತದೆ ಎಂಬುದನ್ನಿಲ್ಲಿ ತಿಳಿಸಲಾಗಿದೆ. ಶ್ರೀರಾಮ, ಸೀತೆ, ಲಕ್ಷ್ಮಣರು ಪಂಚವಟಿಯ ಪರ್ಣಶಾಲೆಯಲ್ಲಿರುವಾಗ ಸ್ವರ್ಣಜಿಂಕೆಯೊಂದು ಕಾಣಿಸಿಕೊಂಡಿತು. ಮೋಹಿತಳಾದ ಸೀತೆ ಅದು ಬೇಕೆಂದು ಹಠಹಿಡಿದಳು. ಅನಿವಾರ್ಯವಾಗಿ ರಾಮ ಮಾಯಾ ಸ್ವರ್ಣಜಿಂಕೆಯನ್ನು ಹಿಡಿದು ತರಲು ಹೋಗುತ್ತಾನೆ. ರಾಮನ ಬಾಣದಿಂದಾಗಿ ಮರಣದಂಚಿನಲ್ಲಿರುವ ಮಾಯಾ ಜಿಂಕೆಯ ರೂಪ ಧರಿಸಿದವ 'ಹಾ ಸೀತಾ' 'ಹಾ ಲಕ್ಷ್ಮಣ' ಎಂದು ಬೊಬ್ಬಿಡುತ್ತಾನೆ. ಇದರಿಂದ ಅಂಜಿದ ಸೀತೆ ಲಕ್ಷ್ಮಣ ಎಷ್ಟೇ ಪರಿಯಲ್ಲಿ ರಾಮನ ಹಿರಿಮೆ ಹೇಳಿದರೂ ಆತ ತೆರಳುವಂತೆ ಮಾಡುತ್ತಾಳೆ. ಸೀತೆಯ ರಕ್ಷಣೆಗಾಗಿ ವಿಧಿಸಿದ ಲಕ್ಷ್ಮಣರೇಖೆಯನ್ನೂ ದಾಟಿ ರಾವಣ ಸಂನ್ಯಾಸಿಗೆ ಭಿಕ್ಷೆ ನೀಡಲು ಹೋಗಿ ಅಪಹರಣಕ್ಕೆ ಒಳಗಾಗುತ್ತಾಳೆ.

ಈ ಕಥೆ ಎಲ್ಲರಿಗೂ ಗೊತ್ತು. ಕಥೆಯು ವಿಶೇಷವಲ್ಲ, ಅದರಿಂದಾದ ಅನಾಹುತ, ಅನಾಹುತವನ್ನು ತಾವಾಗಿ ತಂದುಕೊಂಡ ಪರಿ ಯೋಚಿಸುವಂತೆ ಮಾಡುತ್ತದೆ.

ಬಂಗಾರದ ಜಿಂಕೆಯೇ ಇಲ್ಲ ಎಂಬುದು ಜನಸಾಮಾನ್ಯರಿಗೆ ಗೊತ್ತು. ಇದನ್ನು ಯಾರೂ ನೋಡಿಲ್ಲ, ಯಾರೂ ಕೇಳಿಲ್ಲ. ಅಂತಹ ಸೃಷ್ಟಿಯೊಂದು ಆಗಿಲ್ಲ, ಆಗುವುದೂ ಇಲ್ಲ. ಈ ವಿಶ್ವಾಸ ಸಾಮಾನ್ಯರಿಗೂ ಗೊತ್ತಿರುವಾಗ ಸೀತೆಗೆ ಗೊತ್ತಾಗದಿರದೆ? ರಾಮನು ಪರಿಪರಿಯಾಗಿ ಹೇಳಿದ ಮಾತೂ ಅರ್ಥವಾಗದೇ ಹೋಯಿತೆ? ಜಿಂಕೆ ರೂಪದ ಮಾರೀಚನು ಕೂಗಿಕೊಂಡಾಗ ಧ್ವನಿಯನ್ನೂ ಗುರುತಿಸಲಾರದೆ ಹೋದಳೆ? ಲಕ್ಷ್ಮಣನನ್ನು ಚೆನ್ನಾಗಿ ತಿಳಿದಿದ್ದ ಅವಳ ಬಾಯಿಯಿಂದ ಅನುಚಿತ ಪದಪ್ರಯೋಗ! ಲಕ್ಷ್ಮಣನು ವಿಧಿಸಿದ ಮಾತನ್ನು ಮೀರಿ ಭಿಕ್ಷೆ ನೀಡುವ ಸಾಹಸ!

ಇಲ್ಲಿ ಮೂವರೂ ಸಮರ್ಥರೇ. ವಿವೇಕಿಗಳೇ. ಶೌರ್ಯದ ಅರಿವಿದ್ದವರೇ. ಆದರೂ ಘಟನೆ ಸಂಭವಿಸಿತು. ಸೀತಾಪಹರಣವಾಯಿತು. ಇವೆಲ್ಲವನ್ನೂ ಗಮನಿಸಿದರೆ ವಿನಾಶ ಕಾಲಕ್ಕೆ ಘಟನೆಯೊಂದು ಮುನ್ನುಡಿ. ಆಪತ್ತು ಬರಲೇಬೇಕಾದಾಗ ಎಂಥವರ ಮನಸ್ಸೂ ಮಂಕಾಗುತ್ತದೆ. ವಿವೇಕ ಮಾಯವಾಗುತ್ತದೆ. ವಿನಾಶದ ಕಾಲ ಸನ್ನಿಹಿತವಾದಾಗ ಎಲ್ಲರ ಬುದ್ಧಿಯೂ ವಿಪರಿಣಮಿಸುತ್ತದೆ. ಆಗಬೇಕಾದದ್ದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ. ಬುದ್ಧಿಗೆ ಮಂಕು ಕವಿದು ಹೀಗೆಲ್ಲ ಆಗುತ್ತದೆ. ಆದ್ದರಿಂದಲೇ ಹೇಳುವುದು ವಿವೇಕವನ್ನು ಕಳೆದುಕೊಳ್ಳಬಾರದು. ಮನೋಬುದ್ಧಿಗಳನ್ನು ಮಲಿನ ಮಾಡಿಕೊಳ್ಳಬಾರದು.


ಭಾರತೀಯ ದರ್ಶನಗಳಲ್ಲಿ ಜಗತ್ತಿನ ಸ್ವರೂಪ

ಜಗತ್ತು ಎಂಬುದು ಭಾರತೀಯ ದರ್ಶನಗಳಿಗೆ ಒಂದು ಮುಖ್ಯ ಪ್ರತಿಪಾದ್ಯವಾದ ವಿಷಯವಾಗಿದೆ.


ಪದಸಂಚಲನ
• ಡಾ. ವಿಶ್ವನಾಥ ಸುಂಕಸಾಳ
sunkasalvishwa@gmail.com

ಜಗತ್ತಿನ ಬಗ್ಗೆ ನಮಗೆಷ್ಟು ತಿಳಿದಿದೆಯೋ ಅದಷ್ಟೇ ಜಗತ್ತಲ್ಲ ಎಂಬುದು ವಿವೇಕಿಗಳಿಗೆಲ್ಲ ಗೊತ್ತಿರುವ ವಿಷಯವೇ ಆಗಿದೆ. ಇಲ್ಲಿ ಕಣ್ಣಿಗೆ ಕಾಣುವ ವಸ್ತುಗಳಷ್ಟೇ ಅಲ್ಲ, ಬದಲಿಗೆ ಯಾವ ಇಂದ್ರಿಯಗಳಿಗೂ ಗೋಚರವಾಗದ ಅದೆಷ್ಟೋ ಸಂಗತಿಗಳಿವೆ. ನಮ್ಮ ಸುತ್ತಮುತ್ತಲಿರುವ ಮತ್ತು ನಮ್ಮಿಂದ ಅದೆಷ್ಟೋ ದೂರದವರೆಗೂ ವ್ಯಾಪಿಸಿರುವ ಎಲ್ಲವನ್ನೂ ಸೇರಿ ಜಗತ್ತು ಅಥವಾ ವಿಶ್ವವೆಂದು ಕರೆಯಲಾಗುತ್ತದೆ. ಇಂಥ ಜಗತ್ತಿನ ಹೆಚ್ಚಿನ ಅಂಶ ಭೌತಿಕವಾಗಿರುವುದು ಹೌದಾದರೂ, ಅಭೌತಿಕ ಅಂಶಗಳನ್ನೂ ಈ ಜಗತ್ತು ಒಳಗೊಳ್ಳುತ್ತದೆ. ಒಟ್ಟಿನಲ್ಲಿ ಎಲ್ಲವನ್ನೂ ಒಳಗೊಂಡು ನಮ್ಮ ಜೀವಿತಕ್ಕೆ ಈ ಜಗತ್ತು ಆಧಾರವಾಗಿದೆ. ಅಷ್ಟೇ ಅಲ್ಲ, ನಮ್ಮ ಅನುಭವಕ್ಕೆ ವಿಷಯವೂ ಆಗಿದೆ. ಇಂಥ ಜಗತ್ತಿನ ಬಗ್ಗೆ ಸರಿಯಾಗಿ ತಿಳಿದುಕೊಳ್ಳದೇ ಜೀವನವು ಸಾರ್ಥಕವಾಗುವುದಿಲ್ಲವೆಂಬುದಾಗಿ ಭಾರತೀಯ ದರ್ಶನಗಳು ತಿಳಿಸಿವೆ. ಅದೇ ಕಾರಣಕ್ಕಾಗಿ ಭಾರತೀಯ ದರ್ಶನಗಳು ನಿಃಶ್ರೇಯಸ್ಸೆಂಬ ತನ್ನ ಒಳಿತನ್ನು ಉದ್ದೇಶಿಸಿಯೇ ಜಗತ್ತನ್ನು ಚರ್ಚೆಯ ಒಂದು ಮುಖ್ಯ ವಿಷಯವನ್ನಾಗಿಸಿಕೊಂಡಿವೆ.

ಈ ಪ್ರಪಂಚವು ಒಳಗೊಳ್ಳುವ ವಸ್ತುಗಳಾವವು? ಅವುಗಳನ್ನೆಲ್ಲ ಸೇರಿಸಿ, ಅವುಗಳ ನಡುವಿನ ಸಾಮ್ಯವನ್ನರಿಸಿಕೊಂಡು ಒಟ್ಟಾರೆಯಾಗಿ ಹೇಗೆಲ್ಲ ಈ ಪ್ರಪಂಚವನ್ನು ವಿಭಾಗಿಸಬಹುದು? ಅವುಗಳ ಸಂಖ್ಯೆ, ಅವುಗಳ ಗುಣಗಳು ಮತ್ತು ಅವುಗಳ ಸ್ವರೂಪವೇನು? ಜಗತ್ತಿನ ಸೃಷ್ಟಿ ಹೇಗಾಗುತ್ತದೆ? ಜಗತ್ತಿನ ಪ್ರಲಯವು ಹೇಗಾಗುತ್ತದೆ? ಈ ಜಗತ್ತು ಯಾಕಾಗಿ ಹುಟ್ಟಿದೆ? ಇಡೀ ಜಗತ್ತನ್ನು ಬ್ರಹ್ಮಾಂಡ ಎಂದು ಕರೆಯುವುದಾದರೆ, ಇಂಥ ಬ್ರಹ್ಮಾಂಡದಲ್ಲಿರುವ ಲೋಕಗಳು ಯಾವವು? ಈ ಜಗತ್ತು ಕಂಡಂತೆಯೇ ಇದೆಯೋ ಅಥವಾ ಬೇರೆಯದೇ ಸ್ವರೂಪವನ್ನು ಇದು ಹೊಂದಿದೆಯೋ? ಯಾರೆಲ್ಲ ಈ ಜಗತ್ತನ್ನು ಸತ್ಯವೆಂದು ವಾದಿಸುತ್ತಾರೆ? ಯಾರ ಮತದಲ್ಲಿ ಈ ಜಗತ್ತು ಹೇಗಿದೆ? ಈ ಜಗತ್ತು ಚೇತನವೋ ಅಚೇತನವೋ? ಈ ಜಗತ್ತು ನಮ್ಮೊಳಗಿದೆಯೋ ಅಥವಾ ಜಗತ್ತಿನೊಳಗೆ ನಾವಿದ್ದೇವೆಯೋ? ಹೊರಗೆ ಕಾಣುವುದು ಮಾತ್ರ ಪ್ರಪಂಚವೋ ಅಥವಾ ಒಳಗೂ ಒಂದು ಪ್ರಪಂಚವೆಂಬುದಿದೆಯೋ? ಒಳಗಿನ ಪ್ರಪಂಚವೊಂದಿದೆ ಎಂದಾದರೆ ಅದು ಹೊರಗಿನದ್ದಕ್ಕಿಂತ ಬೇರೆಯೋ ಒಂದೇ ಆಗಿದೆಯೋ? ಇತ್ಯಾದಿ ಪ್ರಶ್ನೆಗಳನ್ನು ಎತ್ತಿಕೊಂಡು ಅದಕ್ಕೆ ಉತ್ತರವನ್ನು ಕಂಡುಕೊಳ್ಳುವ ಪ್ರಯತ್ನವನ್ನು ದರ್ಶನಗಳು ಮಾಡುತ್ತವೆ.



ಜಗತ್ತು ಎಂಬುದು ಭಾರತೀಯ ದರ್ಶನಗಳಿಗೆ ಒಂದು ಮುಖ್ಯ ಪ್ರತಿಪಾದ್ಯವಾದ ವಿಷಯವಾಗಿದೆ. ಸಾಮಾನ್ಯವಾಗಿ ತತ್ತ್ವಶಾಸ್ತ್ರಗಳು ಪ್ರಪಂಚದ ಸ್ವರೂಪವನ್ನು ಚರ್ಚಿಸದೆಯೇ ಇರಲಾರವು. ಯಾಕೆಂದರೆ ಭಾರತೀಯ ತತ್ತ್ವಶಾಸ್ತ್ರದ ಮುಖ್ಯ ಪ್ರತಿಪಾದ್ಯವಾದ ವಿಷಯ 'ನಾನು ಯಾರು? ಎಂಬುದೇ ಆಗಿದೆ. ಇದನ್ನು ತಿಳಿದುಕೊಳ್ಳಲು ನನ್ನ ಅನುಭವಕ್ಕೆ ವಿಷಯವಾಗುವ ಮತ್ತು ನನ್ನ ಆಧಾರಗಳಲ್ಲಿ ಒಂದಾಗಿರುವ ಈ ಜಗತ್ತಿನ ಸ್ವರೂಪದ ವಿವೇಚನೆಯೂ ಕೂಡ ಅಷ್ಟೇ ಮುಖ್ಯವಾಗುತ್ತದೆ. ದರ್ಶನಗಳು ಆಸ್ತಿಕ ಮತ್ತು ನಾಸ್ತಿಕದರ್ಶನಗಳೆಂಬುದಾಗಿ ಮುಖ್ಯವಾಗಿ ಎರಡು ವಿಧ. ಯಾವ ದರ್ಶನಗಳು ವೇದವನ್ನು ಒಂದು ಪ್ರಮಾಣವನ್ನಾಗಿ ಸ್ವೀಕರಿಸಿವೆಯೋ ಅವನ್ನು ಆಸ್ತಿಕದರ್ಶನಗಳು ಎಂಬುದಾಗಿ ಗುರುತಿಸಲಾಗುತ್ತದೆ. ನ್ಯಾಯ-ವೈಶೇಷಿಕ, ಸಾಂಖ್ಯ-ಯೋಗ, ಪೂರ್ವೋತ್ತರ ಮೀಮಾಂಸಾದರ್ಶನಗಳು ಆಸ್ತಿಕದರ್ಶನಗಳು. ವೇದದ ಪ್ರಾಮಾಣ್ಯವನ್ನು ಅಂಗೀಕರಿಸದ ಚಾರ್ವಾಕ, ಬೌದ್ಧ ಮತ್ತು ಜೈನದರ್ಶನಗಳು ನಾಸ್ತಿಕದರ್ಶನಗಳು ಎಂಬುದಾಗಿ ಭಾರತೀಯ ತತ್ತ್ವಶಾಸ್ತ್ರದಲ್ಲಿ ದರ್ಶನಗಳ ಪ್ರವಿಭಾಗವನ್ನು ಮಾಡಲಾಗಿದೆ. ಆಸ್ತಿಕದರ್ಶನಗಳಿಗೆ ಮೂಲ ವೇದಗಳು. ಹಾಗಾಗಿ ಪ್ರಪಂಚದ ಬಗೆಗಿನ ವಿಚಾರವನ್ನು ಮೊಟ್ಟ ಮೊದಲ ಬಾರಿಗೆ ವೇದಗಳೇ ಮಾಡಿವೆ. ಅವುಗಳ ಆಧಾರದಲ್ಲಿಯೇ ಪ್ರತ್ಯಕ್ಷ, ತರ್ಕ ಮೊದಲಾದ ಪ್ರಮಾಣಗಳನ್ನು ಬಳಸಿ ಬೇರೆ ಬೇರೆ ದರ್ಶನಗಳು ಬೇರೆ ಬೇರೆ ರೀತಿಯಲ್ಲಿ ಪ್ರಪಂಚದ ವಿಮರ್ಶೆಯನ್ನು ಮಾಡಿವೆ ಮತ್ತು ಪ್ರಪಂಚದ ತತ್ತ್ವವನ್ನು ವಿವರಿಸಿವೆ.

ಜಗತ್ತು ಜಡತತ್ತ್ವವೆಂಬುದರಲ್ಲಿ ದಾರ್ಶನಿಕರಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ಇದು ಸತ್ಯವೋ ಮಿಥ್ಯೆಯೋ ಎಂಬ ಬಗ್ಗೆ ಬಹಳ ಚರ್ಚೆಗಳಿವೆ. ಜಗತ್ತು ತೋರುತ್ತದೆಯೇ ಹೊರತೂ ಅದು ಪಾರಮಾರ್ಥಿಕವಲ್ಲವೆಂಬುದಾಗಿ ಅದ್ವೈತಸಿದ್ಧಾಂತವು ಪ್ರತಿಪಾದಿಸುತ್ತದೆ. ಉಳಿದ ಹೆಚ್ಚಿನ ದರ್ಶನಗಳಲ್ಲಿ ಜಗತ್ತನ್ನು ಸತ್ಯವೆಂಬುದಾಗಿ ಪ್ರತಿಪಾದಿಸಲಾಗಿದೆ. ಆಯಾ ದರ್ಶನದ ಮುಖ್ಯ ಸಿದ್ಧಾಂತದ ವಿಷಯದಲ್ಲಿ ಮತಭೇದವುಂಟಾಗಲು ಆಯಾ ದರ್ಶನವು ಜಗತ್ತಿನ ಬಗ್ಗೆ ತಳೆಯುವ ನಿಲುವು ಕೂಡ ಮುಖ್ಯವಾದ ಕಾರಣವಾಗಿದೆ. ಜಗತ್ತು ಪ್ರತಿಕ್ಷಣ ಪರಿಣಾಮಿಯಾದುದು ಎಂಬುದನ್ನು ಹೆಚ್ಚಿನ ಎಲ್ಲ ದಾರ್ಶನಿಕರೂ ಒಪ್ಪುತ್ತಾರೆ. ಹಾಗಿದ್ದೂ ಅದು ನಿತ್ಯವೆಂದು ಕೆಲವರು ಭಾವಿಸುತ್ತಾರೆ. ಸೃಷ್ಟ್ಯಾದಿಗಳು ಈ ಜಗತ್ತಿಗೆ ಇವೆಯಾದರೂ ಅದು ಅತ್ಯಂತ ಅಸತ್ಯವಲ್ಲ, ಬದಲಿಗೆ ಈ ಸೃಷ್ಟಿ, ಸ್ಥಿತಿ, ಲಯಗಳು ನಿಯತವಾಗಿ ಸಂಭವಿಸುವುದರಿಂದ ಅದೇ ಜಗತ್ತಿನ ಸ್ವರೂಪವಾಗಿದೆ ಎಂಬುದು ಕೆಲವರ ಮತ.

ಜಗತ್ತಿನ ಬಗ್ಗೆ ಕೇವಲ ಆಸ್ತಿಕ ದರ್ಶನಗಳಷ್ಟೇ ವಿಚಾರವನ್ನು ನಡೆಸಿಲ್ಲ, ಬದಲಿಗೆ ನಾಸ್ತಿಕದರ್ಶನಗಳಾದ ಬೌದ್ಧ, ಜೈನದರ್ಶನಗಳಲ್ಲೂ ಪ್ರಪಂಚದ ಕುರಿತಾದ ಆಳವಾದ ಮತ್ತು ವಿಸ್ತೃತವಾದ ಪ್ರಕ್ರಿಯೆಗಳನ್ನು ಪ್ರದರ್ಶಿಸಲಾಗಿದೆ. ಜಗತ್ತು ಸ್ಕಂಧಗಳ ರೂಪದಲ್ಲಿದೆ ಎಂಬುದಾಗಿ ಬೌದ್ಧರು ಸ್ವೀಕರಿಸುತ್ತಾರೆ. ಪರಮಾಣುಗಳ ರೂಪದಲ್ಲಿ ಈ ಪ್ರಪಂಚವಿದೆ ಎಂಬುದು ತಾರ್ಕಿಕರ ಮತ. ಈ ಜಗತ್ತು ತನ್ನ ಸೃಷ್ಟಿಗಿಂತಲೂ ಮುಂಚೆ ಕಾರಣದಲ್ಲಿ ಸೂಕ್ಷ್ಮರೂಪದಲ್ಲಿ ಇದ್ದೇ ಇತ್ತು ಎಂಬುದಾಗಿ ಸಾಂಖ್ಯರು, ಈ ಜಗತ್ತು ಯಾವತ್ತೂ ಹೀಗೆಯೇ ಇದೆ ಎಂಬುದಾಗಿ ಮೀಮಾಂಸಕರು, ಜಗತ್ತು ಒಂದು ತೋರಿಕೆ, ಹಾಗಾಗಿ ಅದರ ಸೃಷ್ಟಿ, ಸ್ಥಿತಿ, ನಾಶವೂ ಕೂಡ ಒಂದು ತೋರಿಕೆಯೆಂಬುದಾಗಿ ಅದ್ವೈತ ಸಂಪ್ರದಾಯ. ಹೀಗೆ ಜಗತ್ತಿನ ಬಗ್ಗೆ ಅನೇಕ ಭಿನ್ನ ಹೊಳಹುಗಳನ್ನು ನಾವು ಭಾರತೀಯ ದರ್ಶನಗಳಲ್ಲಿ ಕಾಣಬಹುದಾಗಿದೆ. ಈ ಜಗತ್ತಿಗೆ ಚೇತನ ಕಾರಣವೋ ಅಥವಾ ಅಚೇತನ ಕಾರಣವೋ ಎಂಬುದು ಕೂಡ ಮತ್ತೊಂದು ಸ್ವಾರಸ್ಯಕರವಾದ ಚರ್ಚೆ. ಅಷ್ಟೇ ಅಲ್ಲ, ಈ ಜಗತ್ತಿನ ನಿಯಂತ್ರಣಕ್ಕೆ ಒಬ್ಬ ಈಶ್ವರ ಬೇಕೋ ಬೇಡವೋ ಎಂಬ ಬಗ್ಗೆಯೂ ದರ್ಶನಗಳು ಚರ್ಚಿಸುತ್ತವೆ. ವಸ್ತುತಃ ಜಗತ್ತೇ ಈಶ್ವರನ ಅಸ್ತಿತ್ವವನ್ನು ಸ್ವೀಕರಿಸಲು ಇರುವ ಮುಖ್ಯ ಕಾರಣಗಳಲ್ಲೊಂದು. ಅರ್ಥಾತ್ ನಿಯಮ್ಯವೊಂದು ಇಲ್ಲದೇ ಇದ್ದರೆ ನಿಯಂತಾ ತಾನೇ ಏನು ಮಾಡಲು ಸಾಧ್ಯ? ಹಾಗಾಗಿ ಕಾಲಕಾಲಕ್ಕೆ ಈ ಜಗತ್ತಿನ ಸೃಷ್ಟಿ, ಲಯ ಮೊದಲಾದವುಗಳನ್ನು ನಿರ್ವಹಿಸಲು ಈಶ್ವರನೊಬ್ಬ ಬೇಕಾಗುತ್ತಾನೆ ಎಂದು ಕೆಲವರು ವಾದಿಸಿದರೆ, ಇನ್ನು ಕೆಲವರು ಹಾಗೇನೂ ಇಲ್ಲ, ಜಗತ್ತು ತನ್ನ ನಿಯಮಗಳಿಂದಲೇ ಸ್ವಯಂ ಚಾಲನೆಯಲ್ಲಿರುತ್ತದೆ ಮತ್ತು ಅದು ತನ್ನ ನಿಯಮಗಳಿಂದಲೇ ಎಲ್ಲವನ್ನೂ ನಿಯಂತ್ರಿಸುತ್ತದೆ ಎಂಬುದಾಗಿ ಇನ್ನು ಕೆಲವರು ವಾದಿಸುತ್ತಾರೆ.

ಹೀಗೆ ಈಶ್ವರನೆಂಬ ಒಂದು ತತ್ತ್ವವನ್ನು ಎಲ್ಲ ದಾರ್ಶನಿಕರೂ ಒಪ್ಪುವುದಿಲ್ಲ. ಈಶ್ವರನನ್ನು ಒಪ್ಪುವವರೆಲ್ಲರೂ ಆಸ್ತಿಕರು ಎಂಬುದಾಗಿ ಲೋಕದಲ್ಲಿ ಪ್ರಸಿದ್ಧಿ ಇದೆಯಾದರೂ, ದರ್ಶನಗಳಲ್ಲಿ ಹಾಗಿಲ್ಲ. ಆಸ್ತಿಕದರ್ಶನಗಳಲ್ಲಿ ಕೂಡ ಇಂಥ ಒಬ್ಬ ಈಶ್ವರನನ್ನು ಅಂಗೀಕರಿಸದೇ ಇರುವವರು ಇದ್ದಾರೆ. ಸಾಂಖ್ಯರು ಈಶ್ವರನು ಬೇಕಾಗಿಲ್ಲ ಎನ್ನುತ್ತಾರೆ. ಮೀಮಾಂಸಕರು ನೇರವಾಗಿ ನಿರಾಕರಿಸುವುದಿಲ್ಲವಾದರೂ ಅವರ ದರ್ಶನದಲ್ಲಿ ತಮ್ಮ ಸಿದ್ಧಾಂತವನ್ನು ನಿರೂಪಿಸುವುದಕ್ಕೆ ಅವರಿಗೆ ಈಶ್ವರನ ಅಗತ್ಯ ಬಿದ್ದಿಲ್ಲ. ಇನ್ನು ಕೆಲವರು ನಿತ್ಯ ಪರಮೇಶ್ವರನನ್ನು ಸ್ವೀಕರಿಸಿದರೆ, ಈಶ್ವರತತ್ತ್ವವೂ ಕೂಡ ಮಿಥ್ಯೆಯೇ ಆಗಿದೆ ಎಂಬುದಾಗಿ ಇನ್ನು ಕೆಲವರು ವಾದಿಸುತ್ತಾರೆ. ಒಟ್ಟಿನಲ್ಲಿ ಪ್ರಪಂಚವೆಂಬ ಒಂದು ವಿಷಯವು ದರ್ಶನಗಳಲ್ಲಿ ಅಭಿಪ್ರಾಯಭೇದಕ್ಕೆ ಕಾರಣವಾಗಿದೆ. ಅಷ್ಟೇ ಅಲ್ಲ, ದೃಷ್ಟಿಭೇದಕ್ಕೂ ಕಾರಣವಾಗಿದೆ. ಹಾಗೆ ನೋಡಿದರೆ ದೃಷ್ಟಿಭೇದವೇ ಪ್ರಪಂಚದ ಬಗೆಗಿನ ಇಷ್ಟೊಂದು ಭಿನ್ನ ಭಿನ್ನ ವಿಚಾರಗಳಿಗೆ ಕಾರಣವೂ ಹೌದು ಎನ್ನಬಹುದು.

ಒಂದೇ ಜಗತ್ತಿದೆಯೋ ಅಥವಾ ನಾನಾ ಜಗತ್ತಿದೆಯೋ ಎಂಬ ಬಗ್ಗೆ ಕೂಡ ದರ್ಶನಗಳಲ್ಲಿ ಚರ್ಚೆಯಿದೆ. ಹಾಗೆ ಚರ್ಚಿಸುವಾಗ ಜಗತ್ತು ಎಂಬ ಶಬ್ದದ ವ್ಯಾಪ್ತಿಯನ್ನು ಮೊದಲು ನಿರ್ಧರಿಸಿಕೊಳ್ಳಬೇಕಾಗುತ್ತದೆ. ನಾವು ಬದುಕುವ ಜಗತ್ತು ಭೌತಿಕವಾದ ಜಗತ್ತಾಗಿದೆ. ಅದರ ಜೊತೆಗೆ ನಾವು ಬದುಕುವ ಇನ್ನೊಂದು ಜಗತ್ತಿದೆ. ಅದೇ ಮಾನಸ ಜಗತ್ತು. ಭೌತಿಕ ಪ್ರಪಂಚ ಎಲ್ಲರಿಗೂ ಸಮನಾಗಿದ್ದರೂ ಮಾನಸಪ್ರಪಂಚವು ಪ್ರತಿವ್ಯಕ್ತಿ ಭಿನ್ನವಾಗುತ್ತದೆ. ಇಂಥ ಜಗತ್ತಿನ ಸೃಷ್ಟಿಕರ್ತ ಯಾರು? ಎಂಬ ಬಗ್ಗೆ ಪ್ರಶ್ನೆಯನ್ನು ಎತ್ತಿಕೊಂಡು, ಸರ್ವಸಾಧಾರಣವಾದ ಜಗತ್ತಿಗೆ ಈಶ್ವರನು ಕರ್ತೃವಾದರೆ, ನಮ್ಮ ಮಾನಸಪ್ರಪಂಚಕ್ಕೆ ನಾವೇ ಕಾರಣವೆಂಬುದಾಗಿ ದರ್ಶನಗಳಲ್ಲಿ ವಿಶಿಷ್ಟವಾದ ದೃಷ್ಟಿಕೋನದ ಚರ್ಚೆಯಿದೆ. ಇವನ್ನೆಲ್ಲ ನಾವು ಒಂದೊಂದೇ ವಿಷಯವಾಗಿ, ಆಳವಾಗಿ ಮುಂದಿನ ಲೇಖನಗಳಲ್ಲಿ ನೋಡೋಣ. ದರ್ಶನಗಳಲ್ಲಿ ಪ್ರತಿಪಾದಿಸಲಾಗಿರುವ ಜಗತ್ತಿನ ಸೃಷ್ಟಿವಿಜ್ಞಾನ ಕೂಡ ಇವತ್ತಿನ ಜಗತ್ತಿಗೆ ಹೊಸ ಹೊಳಹೊಂದನ್ನು ಕೊಡಲು ಶಕ್ತವಾದುದಾಗಿದೆ.

ಆಧುನಿಕ ವಿಜ್ಞಾನವು ಈ ಜಗತ್ತಿನ ಬಗ್ಗೆ ಸಂಶೋಧನೆಯನ್ನು ನಡೆಸುತ್ತಲೇ ಇದೆ. ಅದು ಮುಂದುವರಿಯಲಿದೆ ಕೂಡ. ಆದರೆ ಸಾವಿರಾರು ವರ್ಷಗಳ ಹಿಂದೆಯೇ ಭಾರತೀಯ ಆರ್ಷವಿಜ್ಞಾನ ಪರಂಪರೆಯು ಜಗತ್ತಿನ ಬಗ್ಗೆ ತುಂಬ ಆಳವಾದ ವಿಷಯಗಳನ್ನು ಕಂಡುಕೊಂಡು ಜಿಜ್ಞಾಸುಗಳಿಗೆ ತೆರೆದಿಟ್ಟಿದೆ. ಅದನ್ನು ಒಂದೊಂದಾಗಿ ಇನ್ನು ಮುಂದಿನ ಲೇಖನ ಸರಣಿಯಲ್ಲಿ ನೋಡೋಣ.

ಪಾಕಿಸ್ತಾನವು ಭಯೋತ್ಪಾದನೆ ತ್ಯಜಿಸದೆ ಜಗತ್ತಿನ ವಿಶ್ವಾಸ ಗಳಿಸದು

▸ ಕ್ರಿಸ್ ಬ್ಲಾಕ್‌ಬರ್ನ್

ಪಾಕಿಸ್ತಾನವು ತನ್ನಲ್ಲಿರುವ ಭಯೋತ್ಪಾದಕ ಸಂಘಟನೆಗಳನ್ನು ಕ್ರೀಡಾತಂಡಗಳಂತೆ ಪೋಷಿಸುತ್ತದೆ.

ಕಳೆದ ತಿಂಗಳು ಪ್ರಮುಖ ಅಂತಾರಾಷ್ಟ್ರೀಯ ಮಾಧ್ಯಮವೊಂದರ ಹಿರಿಯ ವರದಿಗಾರ ''ಭಾರತ ಮತ್ತು ಪಾಕಿಸ್ತಾನಗಳ ಮಧ್ಯೆ ಶಾಶ್ವತ ಶಾಂತಿ ನೆಲೆಸಲು ಏನು ಮಾಡಬೇಕಾಗಬಹುದು?'' ಎಂಬ ಪ್ರಶ್ನೆಯನ್ನು ಕೇಳಿದ. ಆತ ಹೇಳುತ್ತಿರುವುದು ಯಾವುದೇ ತಾತ್ಕಾಲಿಕ ಕದನ ವಿರಾಮ ಅಲ್ಲ, ರಾಜತಾಂತ್ರಿಕ ಹಸ್ತಲಾಘವವೂ ಅಲ್ಲ, ಉಭಯದೇಶಗಳ ಮಧ್ಯೆ ನಿಜವಾಗಿ ಶಾಂತಿ ನೆಲೆಸಲು ಏನಾಗಬೇಕು ಎಂಬುದು. ನನ್ನ ಉತ್ತರ ಸರಳವಾಗಿತ್ತು. ಪಾಕಿಸ್ತಾನವು ಭಾರತದಲ್ಲಿ ಸಾಮೂಹಿಕ ನರಮೇಧ ನಡೆಸುವ ಭಯೋತ್ಪಾದಕ ಸಂಘಟನೆಗಳಿಗೆ ನೆರವು ನೀಡುವುದನ್ನು ನಿಲ್ಲಿಸಬೇಕು ಎಂದು ಉತ್ತರಿಸಿದೆ.

ಪಾಕಿಸ್ತಾನದಿಂದ ಕಾರ್ಯಾಚರಿಸುತ್ತಿರುವ ಜೈಶ್-ಇ-ಮೊಹಮ್ಮದ್, ಲಷ್ಕರ್-ಇ -ತೊಯ್ಬಾದಂತಹ ಸಂಘಟನೆಗಳನ್ನು ವಿಶ್ವಸಂಸ್ಥೆ ಭಯೋತ್ಪಾದಕ ಸಂಘಟನೆಗಳೆಂದು ಹೆಸರಿಸಿದ್ದು, ಅಂತಾರಾಷ್ಟ್ರೀಯ ಸಮುದಾಯ ಕೂಡ ಅವುಗಳನ್ನು ಭಯೋತ್ಪಾದಕ ಸಂಘಟನೆಗಳೆಂದೇ ಪರಿಗಣಿಸುತ್ತದೆ. ಆದರೆ ಪಾಕಿಸ್ತಾನವು ಅವುಗಳನ್ನು ಕ್ರೀಡಾತಂಡಗಳಂತೆ ಪೋಷಿಸುತ್ತದೆ. ಎಲ್ಲಾ ಅನಿಷ್ಟಗಳು ಅಲ್ಲಿಂದಲೇ ಶುರುವಾಗುತ್ತವೆ. ಭಾರತವು ಪಾಕಿಸ್ತಾನದೊಂದಿಗೆ ಉತ್ತಮ ಸಂಬಂಧವನ್ನೇನೋ ಬೆಳೆಸುತ್ತದೆ. ಬಹಳಷ್ಟು ಭಾರತೀಯರೂ ಅದನ್ನೇ ಬಯಸುತ್ತಾರೆ. ಆದರೆ ಯಾವ ದೇಶವೂ ತನ್ನ ತಲೆಗೆ ನಿರಂತರ ಬಂದೂಕು ಹಿಡಿದಿರುವ ದೇಶದೊಂದಿಗೆ ಶಾಶ್ವತ ಶಾಂತಿಯನ್ನು ಬೆಳೆಸಲಾರದು.

ದಕ್ಷಿಣ ಏಷ್ಯಾ ಬಿಕ್ಕಟ್ಟಿನ ಅತೀ ಮುಖ್ಯ ಅಂಶವಿರುವುದೇ ಈ ವಿಷಯದಲ್ಲಿ. ಯಾವುದೇ ಪ್ರಾದೇಶಿಕ ಸಮತೋಲನ, ರಹಸ್ಯ ಕಾರ್ಯಾಚರಣೆ, ವ್ಯೂಹಾತ್ಮಕ ರಣತಂತ್ರ ಮುಂತಾದವುಗಳ ಕುರಿತಂತೆ ಮಾತನಾಡುವ ಮೊದಲು ಮುಖ್ಯವಾಗಿ ಗಮನದಲ್ಲಿಟ್ಟುಕೊಳ್ಳಬೇಕಾದ ಮೂಲಭೂತ ವಿಷಯವೆಂದರೆ ಜಗತ್ತಿನ ಅತ್ಯಂತ ಕುಖ್ಯಾತವಾದ ಭಯೋತ್ಪಾದಕ ಸಂಘಟನೆಗಳು ಪಾಕಿಸ್ತಾನದಲ್ಲೇ ಹುಟ್ಟಿರುವುದು, ಅಲ್ಲಿಂದಲೇ ಕಾರ್ಯಾಚರಿಸುತ್ತಿರುವುದು ಹಾಗೂ ಅಲ್ಲಿಯೇ ಆಶ್ರಯ ಪಡೆಯುತ್ತಿವೆ ಎಂಬುದನ್ನು. ಕಳೆದ ಕೆಲವು ದಶಕಗಳಿಂದ ಇದು ನಡೆಯುತ್ತಿದೆ. ಪಾಕಿಸ್ತಾನವು ತನ್ನ ಈ ಸ್ವಭಾವವನ್ನು ಬದಲಿಸಿಕೊಳ್ಳದ ಹೊರತು ಹಾಗೂ ಆ ಬಗ್ಗೆ ನಿರ್ಣಾಯಕ ಕ್ರಮಗಳನ್ನು ಕೈಗೊಳ್ಳದ ಹೊರತು ಯಾವ ದೇಶವೂ ಅದನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಾರದು. ಭಾರತ ಮತ್ತು ಪಾಕಿಸ್ತಾನಗಳ ಮಧ್ಯೆ ಉದ್ವಿಗ್ನತೆ ಹೆಚ್ಚುತ್ತಿರುವ ಬಗ್ಗೆ ಹೇಳಲಾಗುತ್ತದೆ. ಎರಡೂ ದೇಶಗಳಲ್ಲೂ ರಾಜಕೀಯ ಮುಖಂಡರು ಪರಿಸ್ಥಿತಿಯನ್ನು ಉದ್ವಿಗ್ನಗೊಳಿಸುವ ಮಾತನಾಡುತ್ತಿರುತ್ತಾರೆ. ಆದರೆ ಪಾಕಿಸ್ತಾನವು ಭಾರತವನ್ನು ಟೀಕಿಸುವಾಗಲೆಲ್ಲ ತನ್ನ ಕುರೂಪವನ್ನು, ಹಿನ್ನೆಲೆಯನ್ನು ಮುಚ್ಚಿಡುತ್ತದೆ. ಏಕೆಂದರೆ ಮುಖ್ಯವಾದ ಲೋಪವು ಪಾಕಿಸ್ತಾನದಲ್ಲೇ ಇದೆ. ಸುಳ್ಳುಗಳು ಅದನ್ನು ಯಾವತ್ತೂ ಬಚಾಯಿಸಲಾರದು.

ಜಗತ್ತು ಭಾರತವನ್ನು ಅಂತಾರಾಷ್ಟ್ರೀಯ ಭಯೋತ್ಪಾದನೆಯ ಯಂತ್ರವೆಂದು ಭಾವಿಸುವುದಿಲ್ಲ. ಆದರೆ ಪಾಕಿಸ್ತಾನವನ್ನು ಹಾಗೆಂದು ಪರಿಗಣಿಸುತ್ತದೆ. ಪಾಕಿಸ್ತಾನವು ಭಯೋತ್ಪಾದಕ ರಾಷ್ಟ್ರವೆಂದು ಹೇಳುವುದು ಹೊಸದಿಲ್ಲಿಯಲ್ಲಿ ಟಿವಿ ಸ್ಟುಡಿಯೋಗಳಲ್ಲಿ ಕುಳಿತವರಲ್ಲ. ಪಾಕಿಸ್ತಾನವು ದಶಕಗಳ ಕಾಲದಿಂದ ಬೆಳೆಸಿದ ಭಯೋತ್ಪಾದನಾ ಜಾಲ, ಅವರ ಮೂಲಕ ನಡೆಸಿದ ಛಾಯಾ ಸಮರ, ತಾಲಿಬಾನ್ ಕಾಲ, ಕಾಶ್ಮೀರ ಉಗ್ರವಾದ ಮುಂತಾದವುಗಳು ಪಾಕಿಸ್ತಾನವನ್ನು ಭಯೋತ್ಪಾದಕ ರಾಷ್ಟ್ರವನ್ನಾಗಿ ರೂಪಿಸಿದೆ. ಸ್ವತಃ ಪಾಕಿಸ್ತಾನದ ಸೇನೆಯೇ ಭಯೋತ್ಪಾದನೆಯನ್ನು ಪ್ರಚೋದಿಸುತ್ತಿದೆ. ನ್ಯಾಟೋ ಸೇನೆಯು ಅಫಘಾನಿಸ್ತಾನದಲ್ಲಿ 20 ವರ್ಷ ತಳವೂರಿತ್ತು. ಅದೇ ಸಮಯದಲ್ಲಿ ನೆರೆಯ



ಪಾಕಿಸ್ತಾನದಿಂದ ತರಬೇತು ಪಡೆದ ಭಯೋತ್ಪಾದಕರು ಪಾಶ್ಚಿಮಾತ್ಯ ಸೈನಿಕರ ರಕ್ತ ಹರಿಸುವ ಕಾರ್ಯದಲ್ಲಿ ತೊಡಗಿದ್ದರು. ಪಾಶ್ಚಿಮಾತ್ಯ ರಾಜತಾಂತ್ರಿಕರು, ಅಂತಾರಾಷ್ಟ್ರೀಯ ನೆರವು ನೀಡುವ ಕಾರ್ಯಕರ್ತರು ಹಾಗೂ ನಾಗರಿಕರು ಈ ಭಯೋತ್ಪಾದಕರಿಂದ ಸಾವಿಗೀಡಾಗಿದ್ದರು. ಜಗತ್ತು ಈ ಕಹಿಸತ್ಯವನ್ನು ಮರೆತಿಲ್ಲ. ಪಾಕಿಸ್ತಾನವೂ ಅದನ್ನು ಇಷ್ಟಪಡದಿರಬಹುದು. ಆದರೆ ಇದನ್ನು ಸಾರಾಸಗಟಾಗಿ ನಿರಾಕರಿಸಲಾಗುವುದಿಲ್ಲ. ಹಾಗೆ ನಿರಾಕರಿಸಿದರೆ ಅದು ಅತೀ ದೊಡ್ಡ ವಿಡಂಬನೆ.

ಪಾಕಿಸ್ತಾನದ ವಿಶ್ವಾಸಾರ್ಹತೆಯನ್ನು ಪ್ರಶ್ನಿಸುವ ಅತೀ ದೊಡ್ಡ ಪ್ರಸಂಗವೆಂದರೆ ಅಬ್ಬೊಟಾಬಾದ್ ದಾಳಿ. ಅಮೆರಿಕನ್ ಸೇನೆಯು ಅಬ್ಬೊಟಾಬಾದ್‌ನಲ್ಲಿ ಒಸಾಮಾ ಬಿನ್ ಲಾಡೆನ್‌ನನ್ನು ಪತ್ತೆ ಹಚ್ಚಿ ರಹಸ್ಯ ಕಾರ್ಯಾಚರಣೆ ನಡೆಸಿ ಅವನನ್ನು ಹತ್ಯೆಗೈದಿತ್ತು. ಪಾಕಿಸ್ತಾನಕ್ಕೆ ಇದು ಅತೀ ದೊಡ್ಡ ಮುಜುಗರದ ಪ್ರಸಂಗವಾಗಿತ್ತು. ಕೂಡಲೇ ಅದು ಅಮೆರಿಕದ ಕಾರ್ಯಾಚರಣೆಯಲ್ಲಿ ಪಾಕಿಸ್ತಾನವು ರಹಸ್ಯವಾಗಿ ನೆರವು ನೀಡಿದೆ ಎಂಬ ಸುಳ್ಳನ್ನು ಹಬ್ಬಿಸತೊಡಗಿತು. ಆದರೆ ಅದನ್ನು ಯಾರೂ ನಂಬಲಿಲ್ಲ. ಪಾಕಿಸ್ತಾನವು ತನ್ನ ಪ್ರಮುಖ ಮಿಲಿಟರಿ ಅಕಾಡೆಮಿಯ ಅತ್ಯಂತ ಸಮೀಪದಲ್ಲೇ ಜಗತ್ತಿನ ಅತ್ಯಂತ ಕುಖ್ಯಾತ ಭಯೋತ್ಪಾದಕನನ್ನು ಅಡಗಿಸಿಟ್ಟಿತ್ತು ಎಂಬುದು ಇಡೀ ಜಗತ್ತಿಗೆ ಮನವರಿಕೆಯಾಗಿದೆ. ಮತ್ತೊಂದೆಡೆಯಿಂದ ಅಮೆರಿಕದ ಗುಪ್ತಚರ ಸಂಸ್ಥೆಯನ್ನು ಮೋಸಗೊಳಿಸಲೂ ಪಾಕಿಸ್ತಾನ ಸಫಲವಾಗಿತ್ತು. ತಾನೇ ಅಮೆರಿಕಕ್ಕೆ ಲಾಡೆನ್‌ನನ್ನು ಪತ್ತೆ ಹಚ್ಚಲು ನೆರವು ನೀಡಿದ್ದೆಂದು ಜಗತ್ತಿನ ಕಣ್ಣಿಗೆ ಮಣ್ಣೆರಚಲು ಪಾಕಿಸ್ತಾನ ಯತ್ನಿಸಿತಾದರೂ ಅದರ ಹೇಳಿಕೆಯಲ್ಲಿನ ಹಲವಾರು ವೈರುಧ್ಯಗಳು ಜಗತ್ತಿಗೆ ಗೋಚರವಾಗದಿರಲಿಲ್ಲ. ಹಾಗಾಗಿಯೇ ಜಗತ್ತು ಪಾಕಿಸ್ತಾನವನ್ನು ನಂಬಲಿಲ್ಲ.

ಪಾಕಿಸ್ತಾನವು ಯಾರನ್ನು ನಂಬಿಸಲು ಹೊರಟಿದೆ ಎಂಬುದೇ ಕೆಲವೊಮ್ಮೆ ಸ್ಪಷ್ಟವಾಗುವುದಿಲ್ಲ. ಸ್ವತಃ ಅದಕ್ಕೂ ಈ ಸ್ಪಷ್ಟತೆಯಿಲ್ಲ. ಅದು ತನ್ನ ಜನರನ್ನು ಮೋಸಗೊಳಿಸಲು ಯತ್ನಿಸುತ್ತಿದೆಯೆ? ಅಥವಾ ತನ್ನ ಸ್ನೇಹಿತ ಗಲ್ಫ್ ರಾಷ್ಟ್ರಗಳನ್ನೆ ? ಅಥವಾ ಚೀನಾವನ್ನೆ? ಪಾಶ್ಚಿಮಾತ್ಯ ಸರಕಾರಗಳನ್ನೆ? ಅಥವಾ ಅಂತಾರಾಷ್ಟ್ರೀಯ ಮಾಧ್ಯಮಗಳನ್ನೇ?

ವಿಪರ್ಯಾಸವೆಂದರೆ ತಾನು ಉತ್ಪಾದಿಸಿದ ಭಯೋತ್ಪಾದನೆಗೆ ಸ್ವತಃ ಪಾಕಿಸ್ತಾನವೇ ಬಲಿಪಶುವಾಗಿದೆ. ಭಯೋತ್ಪಾದಕರ ದಾಳಿಗೆ, ಬಾಂಬು ಸ್ಫೋಟಗಳಿಗೆ ಸಾವಿರಾರು ಪಾಕಿಸ್ತಾನಿಯರು ಸತ್ತಿದ್ದಾರೆ. ಕೆಲವು ಸಮುದಾಯಗಳೇ ನಾಶಗೊಂಡಿವೆ. ಶಾಲೆಗಳ ಮೇಲೆ ದಾಳಿ ನಡೆದಿವೆ. ಮಾರುಕಟ್ಟೆಗಳನ್ನು ನಾಶಪಡಿಸಲಾಗಿದೆ. ಈ ಭಯೋತ್ಪಾದಕರ ವಿರುದ್ಧ ಪಾಕಿಸ್ತಾನದ ಮಿಲಿಟರಿ ನಡೆಸುತ್ತಿರುವ ಹೋರಾಟ ಕೂಡಾ ಭೀಕರ ರಕ್ತಪಾತಗಳಿಂದ ಕೂಡಿದೆ. ಪಾಕಿಸ್ತಾನ ಕೂಡಾ ಈಗ ಭಯೋತ್ಪಾದನೆಗೆ ತುತ್ತಾಗುತ್ತಿದೆ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಹಾಗೆಂದು ಪಾಕಿಸ್ತಾನದ ಇತಿಹಾಸವನ್ನು, ಅದು ಎಸಗಿದ ಪ್ರಮಾದವನ್ನು, ಭಯೋತ್ಪಾದನೆ ಬೆಳೆಸುವಲ್ಲಿ ಅದರ ಪಾತ್ರವನ್ನು ಯಾರೂ ನಿರಾಕರಿಸಲಾಗುವುದಿಲ್ಲ.

ಪಾಕಿಸ್ತಾನವು ಭಯೋತ್ಪಾದನೆಯಲ್ಲಿ ತನ್ನ ಪಾತ್ರವಿಲ್ಲವೆಂದು ನಿರಾಕರಿಸುತ್ತಾ ಕೂರುವುದರಲ್ಲಿ ಅರ್ಥವಿಲ್ಲ. ನಿಜವಾಗಿ ಆಗಬೇಕಾಗಿರುವುದು ಪಾಕಿಸ್ತಾನದ ಸುಧಾರಣೆ. ಅಂತರಾಷ್ಟ್ರೀಯವಾಗಿ ಮಾನ್ಯತೆ ಪಡೆಯಬೇಕಾದರೆ ಪಾಕಿಸ್ತಾನವು ತನ್ನ ಕುಟಿಲ ನೀತಿಗಳನ್ನೆಲ್ಲಾ ಕೈಬಿಡಬೇಕು. ಭಯೋತ್ಪಾದನೆಗೆ ಪ್ರೋತ್ಸಾಹ ನೀಡುವುದನ್ನು ಬಿಡಬೇಕು. ಆರ್ಥಿಕ ಸುಧಾರಣೆಗೆ, ಪ್ರಾದೇಶಿಕ ವ್ಯಾಪಾರಕ್ಕೆ ಆದ್ಯತೆ ಕೊಡಬೇಕು. ರಾಜತಾಂತ್ರಿಕ ಪ್ರಬುದ್ಧತೆಯನ್ನು ಪ್ರದರ್ಶಿಸಬೇಕು.

ಪಾಕಿಸ್ತಾನವು ವ್ಯೂಹಾತ್ಮಕವಾಗಿ ಉತ್ತಮ ಜಾಗದಲ್ಲಿದೆ. ಭಾರತೀಯ ಉಪಖಂಡ, ಮಧ್ಯ ಏಷ್ಯಾ, ಚೀನಾ ಮತ್ತು ಕೊಲ್ಲಿ ರಾಷ್ಟ್ರಗಳ ಮಧ್ಯೆ ಅದು ವಾಣಿಜ್ಯಕ ಸೇತುವೆಯಾಗಿ ಕಾರ್ಯಾಚರಿಸಬಲ್ಲದು. ಆದರೆ ಅದಕ್ಕಿಂತ ಮುನ್ನ ಪಾಕಿಸ್ತಾನವು ಇತರ ರಾಷ್ಟ್ರಗಳ ವಿಶ್ವಾಸಾರ್ಹತೆ ಗಳಿಸುವ ಕೆಲಸ ಮಾಡಬೇಕು. ಪಾಕಿಸ್ತಾನವು ಅಂತಹ ಕಾರ್ಯಕ್ಕೆಳಸುವುದೆ ಅಥವಾ ಭಯೋತ್ಪಾದನೆಗೆ ಬೆಂಬಲ ನೀಡುವ ತನ್ನ ಹಳೆಯ ಚಾಳಿಯನ್ನೆ ಮುಂದುವರಿಸುವ ಮೂಲಕ ಜಾಗತಿಕ ವಿಶ್ವಾಸವನ್ನು ಕಳಕೊಳ್ಳುವುದೆ? ಆಯ್ಕೆ ಪಾಕಿಸ್ತಾನಕ್ಕೆ ಬಿಟ್ಟದ್ದು.

ಗ್ರಾಹಕ ಹಿತರಕ್ಷಣೆ ಬಗ್ಗೆ ವಿಶೇಷ ಆದ್ಯತೆ ಅಗತ್ಯ

ಪತ್ರ ಮಿತ್ರ

ಜನರ ಕುಂದುಕೊರತೆ ಆಲಿಸುವ ಸಲುವಾಗಿ 'ಪ್ರಜಾಸೇವೆ ಇಲಾಖೆ'ಯನ್ನು ತೆರೆಯುವುದಾಗಿ ಮತ್ತು ಇದಕ್ಕಾಗಿ ಪ್ರತ್ಯೇಕ ಸಚಿವರನ್ನು ನೇಮಿಸುವುದಾಗಿ ಮುಖ್ಯಮಂತ್ರಿಗಳ ಹೇಳಿಕೆ ಪ್ರಕಟವಾಗಿದೆ. ಅಲ್ಲದೆ ಸುಪ್ರೀಂ ಕೋರ್ಟಿನಲ್ಲಿರುವ ವ್ಯಾಜ್ಯಗಳ ಇತ್ಯರ್ಥಕ್ಕೆ ದಿಲ್ಲಿಯ ಕಾನೂನು ವಿಭಾಗವನ್ನು ಮತ್ತಷ್ಟು ಸದೃಢಗೊಳಿಸಲು ಪ್ರತ್ಯೇಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಇಷ್ಟು ದಿನ ಸಾರ್ವಜನಿಕರು ಕೊಡುವ ಮನವಿ ಆಯಾ ಇಲಾಖೆಗೆ ಹೋಗುತ್ತಿತ್ತು. ಇನ್ನು ಮುಂದೆ ಪ್ರಜಾಸೇವೆ ಇಲಾಖೆಯೇ ಇದನ್ನು ಪರಿಶೀಲಿಸುತ್ತದೆ. ಅದೂ ಪೋಸ್ಟ್ ಮ್ಯಾನ್ ಕೆಲಸವಲ್ಲ, ಇ.ಗವರ್ನೆನ್ಸ್, ಸಕಾಲ ಕೂಡ ಇದರ ವ್ಯಾಪ್ತಿಗೆ ಬರಲಿದೆ. ಕೆಲವರು ಮಾಧ್ಯಮಗಳಲ್ಲಿ ಸಮಸ್ಯೆಗಳನ್ನು ಹೇಳುತ್ತಾರೆ. ಅದನ್ನು ಇಲಾಖೆ ಗಮನಿಸಲಿದೆ ಎಂದೂ ಮುಖ್ಯಮಂತ್ರಿಗಳು ತಿಳಿಸಿದ್ದಾರೆ.

ಹಿರಿಯ ಐಎಎಸ್ ಅಧಿಕಾರಿಯೊಬ್ಬರನ್ನು ನೇಮಿಸಿ ಮುಖ್ಯಮಂತ್ರಿ ಹಾಗೂ ಸಚಿವರಿಗೆ ಜನರು ಸಲ್ಲಿಸುವ ಮನವಿಗಳ ಶೀಘ್ರ ಇತ್ಯರ್ಥ, ಸಮಸ್ಯೆ ಹೇಳಿಬರುವ ಜನರಿಗೆ ಪರಿಹಾರ ನೀಡುವ ಹೊಣೆ, ವಿಧಾನಸಭಾ ಕ್ಷೇತ್ರದಲ್ಲಿ ವಾರಕ್ಕೊಮ್ಮೆ ಸ್ಥಳೀಯ ಶಾಸಕರೊಂದಿಗೆ ಪ್ರಜಾಸೇವೆ ಇಲಾಖೆ ಮೂಲಕ ಜನಸ್ಪಂದನ ಸಭೆ, ನಂತರ ಅದನ್ನು ಪರಿಶೀಲಿಸುವ ಕೆಲಸ, ಜನರ ಕಷ್ಟ ಭಾವನೆಗಳನ್ನು ಅರಿತು ಕಾನೂನು ಚೌಕಟ್ಟಿನಲ್ಲಿ ಸ್ಪಂದಿಸುವುದು ನಮ್ಮ ಸರಕಾರದ ಗುರಿ ಎಂಬುದು ಮುಖ್ಯಮಂತ್ರಿಗಳ ಹೇಳಿಕೆ. ಬಹಳ ಸಂತೋಷ.

ಹಿಂದೆ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಜನರ ಸಂಕಷ್ಟಗಳನ್ನು ಪತ್ರಿಕೆಯ ಓದುಗರ ಓಲೆ ಅಂಕಣದ ಮೂಲಕ ವ್ಯಕ್ತಪಡಿಸುವಂತೆ ಜನತೆಗೆ ಕರೆ ನೀಡಿದ್ದರು. ಜೊತೆಗೆ ಪತ್ರಿಕೆಗಳಲ್ಲಿ ಬರುವ ಇಂತಹ ದೂರಿಗೆ ಅಧಿಕಾರಿಗಳು ತಪ್ಪದೇ ಸ್ಪಂದಿಸಬೇಕು ಎಂದು ಆದೇಶ ಹೊರಡಿಸಿದ್ದರು. ಆದರೆ ಅದೇಕೋ ನಿರೀಕ್ಷಿಸಿದಷ್ಟು ಫಲಕಾಣಲಿಲ್ಲ.

ಸರಕಾರವು ಗ್ರಾಹಕ ರಕ್ಷಣಾ ಇಲಾಖೆಯನ್ನು ತೆರೆದು ಜನರ ಸಂಕಷ್ಟಗಳಿಗೆ ನೆರವಾಗುವಂತೆ ಬಳಕೆದಾರರ ವೇದಿಕೆಗಳು ಹಲವು ವರ್ಷಗಳ ಹಿಂದೆಯೇ ಆಗ್ರಹಿಸಿದ್ದವು. ಅದು ನೆನೆಗುದಿಗೆ ಬಿದ್ದು ಇಂದಿಗೂ ಗ್ರಾಹಕ ಹಿತರಕ್ಷಣಾ ವಿಭಾಗದ ಹೊಣೆಯು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯ ಅಧೀನದಲ್ಲೇ ಇದೆ. ಇದರಿಂದಾಗಿ ಗ್ರಾಹಕ ರಕ್ಷಣೆಯು ಅವಗಣನೆಗೆ ತುತ್ತಾಗಿದೆ. ರಾಜ್ಯದ ಅನೇಕ ಕಡೆಗಳಲ್ಲಿ ಸ್ಥಳೀಯವಾಗಿ ಬಳಕೆದಾರರ ವೇದಿಕೆ ಎಂಬ ಪ್ರಜಾಹಿತದ ಸಂಸ್ಥೆಗಳು ಕೆಲಸ ಮಾಡುತ್ತಿದ್ದರೂ ಅದಕ್ಕೆ ಅನುದಾನವಿಲ್ಲದೆ ಸೊರಗಿ ಹೋಗಿರುವುದಲ್ಲದೆ ಕೆಲವೆಡೆ ಬಾಗಿಲು ಮುಚ್ಚಿವೆ. ಆಳಿದುಳಿದ ಕೆಲವು ವೇದಿಕೆಗಳು ಹಿರಿಯ ನಾಗರಿಕರ ಮಾರ್ಗದರ್ಶನದಲ್ಲಿ ಕೆಲವು ಉದಾರಿಗಳ ಆರ್ಥಿಕ ನೆರವಿನಲ್ಲಿ ನೊಂದ ಗ್ರಾಹಕರಿಗೆ ನೆರವಾಗುವಲ್ಲಿ ಕುಂಟುತ್ತಾ ಸಾಗಿವೆ.

ರಾಜ್ಯ ಸರಕಾರದ 21,799 ಪ್ರಕರಣಗಳು ಹೈಕೋರ್ಟ್‌ನಲ್ಲಿ ಬಾಕಿ ಇವೆ. ಇವುಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಲು ಕ್ರಮ ಕೈಗೊಳ್ಳಬೇಕು ಎಂದು ಹಿಂದಿನ ಮುಖ್ಯಮಂತ್ರಿಗಳು ಪ್ರಗತಿ ಪರಿಶೀಲನಾ ಸಭೆಯಲ್ಲಿ ನುಡಿದಿದ್ದರು. ಇವಿಷ್ಟು ಕೇವಲ ಸರಕಾರದ ಮುಂದಿರುವ ವ್ಯಾಜ್ಯ ಪ್ರಕರಣಗಳು. ದೇಶದ ಹಲವು ನ್ಯಾಯಾಲಯಗಳಲ್ಲಿ ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳು ಹಲವು ಲಕ್ಷಗಳು!

ನ್ಯಾಯದಾನವು ಎಷ್ಟು ವಿಳಂಬವಾಗಿರುತ್ತವೆ ಎಂದರೆ ಎಷ್ಟೋ ಪ್ರಕರಣಗಳಲ್ಲಿ ಕೋರ್ಟ್‌ಗಳಲ್ಲಿ ದಾವೆ ಹೂಡಿರುವ ವ್ಯಕ್ತಿಯು ಜೀವಂತವಾಗಿರುವಾಗ ಅದರ ಫಲ ಪ್ರಕಟವಾಗುವುದೇ ಇಲ್ಲ, ಆತ ಮರಣಿಸಿದ ಹಲವು ವರ್ಷಗಳ ನಂತರ ಪ್ರಕಟವಾಗುವುದಿದೆ. ಇದರಿಂದಾಗಿ ನ್ಯಾಯ ನಿರೀಕ್ಷೆಯ ಉದ್ದೇಶವೇ ಈಡೇರಿದಂತಾಗದೇ ನ್ಯಾಯಾಂಗದ ಮೇಲಿನ ವಿಶ್ವಾಸ ಕಡಿಮೆಯಾಗುವಂತಾಗಿದೆ.

ಇಂದು ಬಹುತೇಕ ಕೋರ್ಟ್‌ಗಳಲ್ಲಿ ಸಿಬ್ಬಂದಿ ಕೊರತೆ ಸರ್ವೇಸಾಮಾನ್ಯ. ಸಿಬ್ಬಂದಿ ಹಾಗೂ ಪೂರಕ ಸಲಕರಣೆಗಳಾದ ಜೆರಾಕ್ಸ್ ಯಂತ್ರ, ಇನ್ವರ್ಟರ್ ಮೊದಲಾದವುಗಳನ್ನು ಪೂರೈಸುವ ಮೂಲಕ ನ್ಯಾಯಾಲಯಗಳು ಸುಸ್ಥಿತಿಯಲ್ಲಿ ಕಾರ್ಯನಿರ್ವಹಿಸಿ ಜನಸಾಮಾನ್ಯರಿಗೆ ಶೀಘ್ರ ನ್ಯಾಯ ಒದಗಿಸುವಂತೆ ಆಗಬೇಕು. ಇದರ ಬಗ್ಗೆ ನಮ್ಮ ಜನಪ್ರತಿನಿಧಿಗಳೂ ಸರಕಾರದ ಮೇಲೆ ಒತ್ತಡ ತರದಿರುವುದು ಬೇಸರದ ಸಂಗತಿ. ಆದ್ದರಿಂದ ಇನ್ನಾದರೂ 'ಪ್ರಜಾಸೇವೆ ಇಲಾಖೆ'ಯನ್ನು ತೆರೆಯುವ ಜೊತೆಗೆ 'ಗ್ರಾಹಕ ಹಿತರಕ್ಷಣಾ ಕಾಯಿದೆ'ಯ ಅಧೀನದಲ್ಲಿ ಕೆಲಸ ಮಾಡುವ ಗ್ರಾಹಕ ಸ್ನೇಹಿ ಸಂಘ-ಸಂಸ್ಥೆಗಳನ್ನು ಈ ಇಲಾಖೆಯ ಅಧೀನದಲ್ಲಿ ತಂದು ಅವುಗಳಿಗೂ ಒಂದಷ್ಟು ಅನುದಾನ, ಅಧಿಕಾರ ನೀಡಿದಲ್ಲಿ ಜನಸಾಮಾನ್ಯರಿಗೆ ನೆರವಾಗಲಿದೆ. ಈ ನಿಟ್ಟಿನಲ್ಲಿ ಮುಖ್ಯಮಂತ್ರಿಗಳು ಗಮನಹರಿಸಲಿ ಎಂದು ಹಾರೈಕೆ.

–ಎನ್.ರಾಮ ಭಟ್,
ವಿಶ್ವಸ್ಥರು, ಬಳಕೆದಾರರ ವೇದಿಕೆ, ಉಡುಪಿ

ಫುಟ್ಬಾಲ್: ಭಾರತವೆಲ್ಲಿ?

ವಿಶ್ವಕಪ್ ಫುಟ್ಬಾಲ್ ಈಗ ನಡೆಯುತ್ತಿದೆ. ಈ ಬಾರಿಯಂತೂ ಸ್ಪರ್ಧಿಸುತ್ತಿರುವ ರಾಷ್ಟ್ರಗಳ ಸಂಖ್ಯೆ 48ಕ್ಕೇರಿದ್ದು ಈವರೆಗೆ ಹೆಸರು ಕೇಳಿರದ ಕೆಲವು ರಾಷ್ಟ್ರಗಳೂ ಕಂಡುಬರುತ್ತಿವೆ. ಪುಟ್ಟ ಪುಟ್ಟ ರಾಷ್ಟ್ರಗಳೂ ವಿಶ್ವಕಪ್‌ನಲ್ಲಿ ಸ್ಪರ್ಧಿಸುತ್ತಿವೆ. ಬಹುತೇಕರು ಹೆಸರೇ ಕೇಳಿರದ ಕೇಪ್ ವರ್ಡೆ ಎಂಬ ಹೆಸರಿನ ದೇಶವು ಬಲಿಷ್ಠ ಎರಡು ತಂಡಗಳೆದುರು ಡ್ರಾ ಸಾಧಿಸಿ ಅಚ್ಚರಿ ಮೂಡಿಸಿದೆ. ಕೇವಲ 6 ಲಕ್ಷ ಜನಸಂಖ್ಯೆ ಹೊಂದಿರುವ ದೇಶವಿದು. ಕುರಕಾವೋ, ಹೈಟಿ, ಕಾಂಗೋ, ಸೆನೆಗಲ್ ಮುಂತಾದ ದೇಶಗಳು ಕೂಡಾ ವಿಶ್ವಕಪ್‌ನಲ್ಲಿ ಉತ್ತಮ ನಿರ್ವಹಣೆ ನೀಡುತ್ತಿರುವುದು ಕಂಡುಬರುತ್ತಿದೆ.

ವಿವಿಧ ಕ್ರೀಡೆಗಳಲ್ಲಿ ವಿಶ್ವದರ್ಜೆಯ ಪ್ರದರ್ಶನ ನೀಡುವ ಭಾರತವು ಫುಟ್ಬಾಲಿನಲ್ಲಿ ಮಾತ್ರ ಈವರೆಗೆ ವಿಶ್ವಕಪ್‌ಗೆ ಏರದಿರುವುದು ದುರದೃಷ್ಟಕರ. ಫುಟ್ಬಾಲ್ ದೇಶಾದ್ಯಂತ ಜನಪ್ರಿಯತೆ ಹೊಂದಿಲ್ಲದಿರುವುದು ಕೂಡಾ ಇದಕ್ಕೆ ಕಾರಣವಾಗಿದೆ. ಭಾರತದಲ್ಲಿ ಗೋವಾ, ಪಶ್ಚಿಮ ಬಂಗಾಳ ಮತ್ತು ಕೇರಳ ಬಿಟ್ಟರೆ ಬೇರೆಡೆ ಫುಟ್ಬಾಲಿಗೆ ಹೆಚ್ಚು ಜನಪ್ರಿಯತೆ ಇಲ್ಲ.

ಜಾಗತಿಕವಾಗಿ ಅತ್ಯಂತ ಜನಪ್ರಿಯ ಕ್ರೀಡೆಯಾಗಿರುವ ಫುಟ್ಬಾಲ್‌ನಲ್ಲಿ ಕೂಡಾ ಭಾರತವು ಪ್ರಸಿದ್ಧಿಗೆ ಬರಬೇಕಾಗಿದೆ. ಭಾರತದ ತಂಡವೂ ವಿಶ್ವಕಪ್ ಫುಟ್ಬಾಲಿನಲ್ಲಿ ಭಾಗವಹಿಸುವ ದಿನ ಬೇಗನೆ ಬರಲಿ.

–ಮನೋಹರ ಸಾಮಂತ್, ಬ್ರಹ್ಮಾವರ




ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಪದ್ಮಶ್ರೀ ಪ್ರಶಸ್ತಿ ಸ್ವೀಕರಿಸಿದ ಖ್ಯಾತ ಬಹುಭಾಷಾ ನಟರಾದ ಆರ್.ಮಾಧವನ್ ಮತ್ತು ಗದ್ದೆ ಬಾಬು ರಾಜೇಂದ್ರ ಪ್ರಸಾದ್.

ಯುವ ಐಎಎಸ್ ಅಧಿಕಾರಿಗಳಿಗೆ ಪ್ರಧಾನಿ

ಎಲ್ಲಾ ಕಡತ ದೇಶದ ಜನಹಿತಕ್ಕೆ ಪ್ರಮುಖ

ಹೊಸದಿಲ್ಲಿ: ಎಲ್ಲಾ ಕಡತಗಳೂ ದೇಶದ ಅಸಂಖ್ಯ ನಾಗರಿಕರ ಬದುಕು, ಜನರ ಬವಣೆಗಳು, ಆಶೋತ್ತರಗಳನ್ನು ಪ್ರತಿಬಿಂಬಿಸುತ್ತವೆ. ಹಾಗಾಗಿ ಜನಹಿತಕ್ಕೆ ಪ್ರಾಧಾನ್ಯತೆಯಿರುವಂತೆ ಯಾವುದೇ ನಿರ್ಧಾರಕೈಗೊಳ್ಳುವಂತೆ ಪ್ರಧಾನಿ ನರೇಂದ್ರ ಮೋದಿ ಯುವ ಐಎಎಸ್ ಅಧಿಕಾರಿಗಳಿಗೆ ಮಂಗಳವಾರ ಕರೆ ನೀಡಿದ್ದಾರೆ. ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಸಹಾನುಭೂತಿ, ಸ್ಪಂದನೆ, ಸಮಸ್ತರ ಒಳಗೊಳ್ಳುವಿಕೆಯಂತಹ ಅಂಶಗಳಿಗೆ ಪ್ರಾಮುಖ್ಯತೆ ಕೊಡುವಂತೆಯೂ ಪ್ರಧಾನಿ ಸಲಹೆ ಮಾಡಿದ್ದಾರೆ.




ಅಭಿವೃದ್ಧಿಗೆ ಸಂಬಂಧಿತ ಪ್ರಮುಖ ಸವಾಲುಗಳನ್ನು ಪ್ರತ್ಯೇಕವಾಗಿ ಬಗೆಹರಿಸಲಾಗದು. ಅರ್ಥಪೂರ್ಣ ಅಂತಿಮ ಫಲಿತಾಂಶಗಳನ್ನು ಪಡೆಯಲು ವಿವಿಧ ಇಲಾಖೆಗಳು ಪರಸ್ಪರ ಸಮನ್ವಯತೆಯಿಂದ ಶ್ರಮಿಸುವುದು ಅತ್ಯವಶ್ಯ ಎಂದು ಪ್ರಧಾನಿ ಮೋದಿ ಪ್ರತಿಪಾದಿಸಿದರು. ಸರಕಾರದ ವಿವಿಧ ಖಾತೆಗಳು, ಇಲಾಖೆಗಳಿಗೆ ಸಹಾಯಕ ಕಾರ್ಯದರ್ಶಿಗಳಾಗಿ ನಿಯೋಜಿತ, ಐಎಎಸ್-2024 ಬ್ಯಾಚ್‌ನ ,ತರಬೇತಿ ಹಂತದಲ್ಲಿರುವ 183ಯುವ ಅಧಿಕಾರಿಗಳ ಜತೆ ಪ್ರಧಾನಿ ಮೋದಿ ಸಂವಾದ ನಡೆಸಿದರು.

ನಾಗರಿಕ ದೇವೋ ಭವ ಮಂತ್ರವನ್ನು ಮುಂದಿಟ್ಟುಕೊಂಡು ಜನಕೇಂದ್ರಿತ ಆಡಳಿತ, ಆವಿಷ್ಕಾರ, ಬಲಿಷ್ಠ ಸತ್‌ಧ್ಯೇಯ ಸಂಪನ್ನರಾಗಿ, ರಾಷ್ಟ್ರನಿರ್ಮಾಣಕ್ಕೆತಮ್ಮನ್ನು ತಾವು ಸಮರ್ಪಿಸಿಕೊಳ್ಳಿ ಮತ್ತು ಪ್ರತಿಯೊಂದು ಆಡಳಿತಾತ್ಮಕ ಕಡತಗಳ ಹಿಂದಿರುವ ಮಾನವೀಯ ಕಾಳಜಿ ಅಥವಾ ಅವು ಜನರ ಬದುಕಿನ ಮೇಲೆ ಬೀರಲಿರುವ ಪರಿಣಾಮಗಳನ್ನು ನೆನಪಿಟ್ಟುಕೊಂಡು ಕರ್ತವ್ಯ ನಿರ್ವಹಿಸಿ ಎಂದು ಪ್ರಧಾನಿ ಮೋದಿ ಯುವ ಸರಕಾರಿ ಅಧಿಕಾರಿಗಳಿಗೆ ಕಿವಿಮಾತು ಹೇಳಿದರೆಂದು ಅಧಿಕೃತ ಹೇಳಿಕೆ ತಿಳಿಸಿದೆ.

ನಿರಂತರ ಅವಲೋಕನ: ರಾಷ್ಟ್ರ ನಿರ್ಮಾಣಕ್ಕೆ ತಮ್ಮ ಕೊಡುಗೆ ಬಗ್ಗೆ ನಿರಂತರ ಅವಲೋಕನ ನಡೆಸುತ್ತಿರಿ ಮತ್ತು ತಮ್ಮ ಉನ್ನತ ಹುದ್ದೆ ಬಗ್ಗೆ ಅಲ್ಲ ಬದಲಾಗಿ ತಮ್ಮ ಕರ್ತವ್ಯಶೈಲಿಯು ನೀಡುವ ಫಲಿತಾಂಶಗಳ ಬಗ್ಗೆಸಂತೃಪ್ತಿಪಡುವಿರಂತೆ ಎಂದು ಸಲಹೆಯಿತ್ತ ಪ್ರಧಾನಿ, ಎರಡು ವರ್ಷಗಳ ಕಾಲ ಆಡಳಿತಾತ್ಮಕ ಕಲಿಕೆ, ಪ್ರಾಯೋಗಿಕ ತರಬೇತಿ ನಂತರ ಅಧಿಕಾರಿಗಳೀಗ ತಮ್ಮ ಭವಿಷ್ಯ ಮಾತ್ರವಲ್ಲ ಕೋಟ್ಯಂತರ ನಾಗರಿಕರ ಭಾವೀಯನ್ನೂ ರೂಪಿಸಬಲ್ಲಂತಹ ನಿರ್ಧಾರ ಕೈಗೊಳ್ಳುವ ನಿರ್ಣಾಯಕ ಘಟ್ಟದಲ್ಲಿದ್ದಾರೆ.

ಸಂಪೂರ್ಣ ಸರಕಾರಿ ನೆಲೆಯಲ್ಲಿ ಪ್ರಯತ್ನಿಸಿ: ವಿಕಸಿತ್ ಭಾರತ್ 2047 ವಿಷನ್ ಬಗ್ಗೆ ಉಲ್ಲೇಖಿಸಿ, ಮುಂಬರುವ ದಶಕಗಳಲ್ಲಿ ಕೈಗೊಳ್ಳುವ ಪ್ರತಿಯೊಂದು ಆಡಳಿತಾತ್ಮಕ ನಿರ್ಧಾರಗಳು, ರೂಪಿಸುವ ಪ್ರತಿಯೊಂದು ನೀತಿಗಳು ಸಂಪನ್ನ ಭಾರತ ನಿರ್ಮಾಣಕ್ಕೆ ಕೊಡುಗೆಯಾಗಬೇಕು. ಆತ್ಮನಿರ್ಭರ ಭಾರತ, ಮೇಕ್ ಇನ್ ಇಂಡಿಯಾ, ಉತ್ಪಾದನಾ ರಂಗದಲ್ಲಿ ಬೆಳವಣಿಗೆ, ಇಂಧನ ಭದ್ರತೆ ಮತ್ತು ಯುವಶಕ್ತಿಗೆ ಅವಕಾಶಗಳ ಸೃಜಿಸುವುದೇ ಇತ್ಯಾದಿ ದೇಶದ ಪ್ರಸಕ್ತ ಪ್ರಾಧಾನ್ಯತೆಗಳಲ್ಲಿ ಒಳಗೊಂಡಿವೆ . ಇವೆಲ್ಲವುಗಳ ಸಾಕಾರಕ್ಕಾಗಿ ಸಂಪೂರ್ಣವಾಗಿ ಮತ್ತು ಸಮಗ್ರವಾಗಿ ಸರಕಾರಿ ನೆಲೆಯಲ್ಲಿ ಪ್ರಯತ್ನಿಸುವಂತೆ ಪ್ರಧಾನಿ ಮೋದಿ ಅಧಿಕಾರಿಗಳಿಗೆ ಕರೆ ನೀಡಿದರು.



ಲಯನ್ಸ್ ರೇಂಜ್ ಮತ್ತೆ ಅಬ್ಬರ?

ಒಂದು ಕಾಲದಲ್ಲಿ ಮುಂಬೈನ ದಲಾಲ್ ಸ್ಟ್ರೀಟ್‌ಗೆ ಸೆಡ್ಡುಹೊಡೆದು ಭಾರತದ ಷೇರು ವಹಿವಾಟಿನ ದಿಕ್ಕು ನಿರ್ಧರಿಸುತ್ತಿದ್ದ ಕೋಲ್ಕತಾದ ಲಯನ್ಸ್ ರೇಂಜ್ ಮತ್ತೆ ಚಟುವಟಿಕೆಯಿಂದ ಕಂಗೊಳಿಸಲಿದೆಯೇ? ಕಳೆದ 13 ವರ್ಷಗಳಿಂದ ಸ್ವಂತ ವೇದಿಕೆಯಲ್ಲಿ ಷೇರು ವಹಿವಾಟಿಲ್ಲದೆ, ಅಸ್ತಿತ್ವದ ಕೊನೆಯ ಘಟ್ಟ ತಲುಪಿರುವ 118 ವರ್ಷಗಳಷ್ಟು ಹಳೆಯ ಕಲ್ಕತ್ತಾ ಷೇರು ವಿನಿಮಯ ಕೇಂದ್ರಕ್ಕೆ ಮರುಜೀವ ನೀಡಲು ಪಶ್ಚಿಮ ಬಂಗಾಳ ಸರ್ಕಾರ ಮುಂದಾಗಿದೆ. ರಾಜ್ಯ ಹಣಕಾಸು ಸಚಿವ ಸ್ವಪನ್ ದಾಸ್‌ಗುಪ್ತ ಅವರು ತಮ್ಮ ಚೊಚ್ಚಲ ಬಜೆಟ್‌ನಲ್ಲಿ ಈ ಐತಿಹಾಸಿಕ ಷೇರುಪೇಟೆಯ ಪುನರುಜ್ಜೀವನಕ್ಕೆ ಸರ್ಕಾರ ಬೆಂಬಲ ನೀಡುವುದಾಗಿ ಪ್ರಕಟಿಸಿದ್ದಾರೆ.

ಪೂರ್ವ ಭಾರತಕ್ಕೊಂದು ಸ್ವಂತ ಬಂಡವಾಳ ವೇದಿಕೆ

ಪ್ರಸ್ತುತ ದೇಶದ ಷೇರು ವಹಿವಾಟು ಬಹುತೇಕ ರಾಷ್ಟ್ರೀಯ ಷೇರು ವಿನಿಮಯ ಕೇಂದ್ರ ಮತ್ತು ಬಾಂಬೆ ಷೇರು ವಿನಿಮಯ ಕೇಂದ್ರಗಳ ಸುತ್ತ ಕೇಂದ್ರೀಕೃತವಾಗಿದೆ. ಪಶ್ಚಿಮ ಬಂಗಾಳ, ಒಡಿಶಾ, ಬಿಹಾರ, ಜಾರ್ಖಂಡ್, ಅಸ್ಸಾಂ ಹಾಗೂ ಈಶಾನ್ಯ ರಾಜ್ಯಗಳ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಷೇರು ಮಾರುಕಟ್ಟೆ ಮೂಲಕ ಬಂಡವಾಳ ಸಂಗ್ರಹಿಸಬೇಕಾದರೆ ರಾಷ್ಟ್ರೀಯ ವಿನಿಮಯ ಕೇಂದ್ರಗಳನ್ನೇ ಅವಲಂಬಿಸಬೇಕಾಗಿದೆ. ಕಲ್ಕತ್ತಾ ಷೇರುಪೇಟೆ ಹೊಸ ರೂಪದಲ್ಲಿ ಕಾರ್ಯಾರಂಭ ಮಾಡಿದರೆ ಪೂರ್ವ ಭಾರತದ ಸಣ್ಣ ಮತ್ತು ಮಧ್ಯಮ ಉದ್ಯಮಗಳು, ಆರಂಭಿಕ ಹಂತದ ಕಂಪನಿಗಳು ಹಾಗೂ ಪ್ರಾದೇಶಿಕ ಸಾರ್ವಜನಿಕ ವಲಯದ ಸಂಸ್ಥೆಗಳಿಗೆ ಹತ್ತಿರದಲ್ಲೇ ಬಂಡವಾಳ ಸಂಗ್ರಹಿಸುವ ವೇದಿಕೆ ಸಿಗಬಹುದು ಎಂಬುದು ರಾಜ್ಯ ಸರ್ಕಾರದ ಲೆಕ್ಕಾಚಾರ.

ಹಗರಣದ ಹೊಡೆತ; ರಾಷ್ಟ್ರೀಯ ಪೇಟೆಗಳತ್ತ ವಲಸೆ

ಕಲ್ಕತ್ತಾ ಷೇರುಪೇಟೆಯ ಕುಸಿತಕ್ಕೆ ಒಂದೇ ಕಾರಣವಿರಲಿಲ್ಲ. ತಂತ್ರಜ್ಞಾನದ ಬೆಳವಣಿಗೆ, ರಾಷ್ಟ್ರೀಯ ಷೇರುಪೇಟೆಯ ವಿಸ್ತರಣೆ, ವೇಗದ ಗಣಕೀಕೃತ ವಹಿವಾಟು, ಹೆಚ್ಚಿನ ದ್ರವ್ಯತೆ ಮತ್ತು ದೇಶಾದ್ಯಂತ ಒಂದೇ ವೇದಿಕೆಯ ಮೂಲಕ ವಹಿವಾಟು ಮಾಡುವ ಸೌಲಭ್ಯವು ಪ್ರಾದೇಶಿಕ ಷೇರುಪೇಟೆಗಳ ಅಸ್ತಿತ್ವವನ್ನೇ ಪ್ರಶ್ನಿಸುವಂತೆ ಮಾಡಿತು. 2001ರಲ್ಲಿ ಷೇರು ದಲ್ಲಾಳಿ ಕೇತನ್ ಪಾರೇಖ್‌ಗೆ ಸಂಬಂಧಿಸಿದ ಸುಮಾರು 120 ಕೋಟಿ ರೂ. ಮೊತ್ತದ ಪಾವತಿ ಬಿಕ್ಕಟ್ಟು ಕಲ್ಕತ್ತಾ ಷೇರುಪೇಟೆಗೆ ದೊಡ್ಡ ಹೊಡೆತ ನೀಡಿತು. ಇದರಿಂದ ವಹಿವಾಟು ಸ್ಥಗಿತಗೊಂಡು ಹೂಡಿಕೆದಾರರ ವಿಶ್ವಾಸಕ್ಕೂ ಧಕ್ಕೆ ಉಂಟಾಯಿತು. ನಂತರ ಸಂಸ್ಥೆಯನ್ನು ಪರಸ್ಪರ ಮಾಲೀಕತ್ವದಿಂದ ಬೇರ್ಪಡಿಸಿ ವೃತ್ತಿಪರ ಆಡಳಿತದಡಿ ತರಲಾಯಿತಾದರೂ ಹಿಂದಿನ ಚೈತನ್ಯವನ್ನು ಮರಳಿ ಪಡೆಯಲು ಸಾಧ್ಯವಾಗಲಿಲ್ಲ.

ಮರದ ನೆರಳಿನಿಂದ ಗಣಕ ಪರದೆಯವರೆಗೆ

ಕೋಲ್ಕತಾದ ಷೇರು ವಹಿವಾಟಿನ ಇತಿಹಾಸವು ಕಲ್ಕತ್ತಾ ಷೇರು ವಿನಿಮಯ ಕೇಂದ್ರ ಸ್ಥಾಪನೆಯಾದ 1908ಕ್ಕಿಂತಲೂ ಹಳೆಯದು. 1836ರ ವೇಳೆಗೆ ನಗರದ ನೇತಾಜಿ ಸುಭಾಷ್ ರಸ್ತೆಯ ಪ್ರದೇಶದಲ್ಲಿದ್ದ ಬೇವಿನ ಮರದ ಸಮೀಪ ದಲ್ಲಾಳಿಗಳು ಸೇರಿ ಷೇರು ಮತ್ತು ಸಾಲಪತ್ರಗಳ ವಹಿವಾಟು ನಡೆಸುತ್ತಿದ್ದರು. ಅವರಿಗೆ ಆಗ ನಿಗದಿತ ಕಚೇರಿ, ನಿಯಮಾವಳಿ ಅಥವಾ ಸಂಘಟಿತ ವ್ಯವಸ್ಥೆ ಇರಲಿಲ್ಲ. 1839ರ ವೇಳೆಗೆ ಕೋಲ್ಕತಾದ ಪತ್ರಿಕೆಗಳಲ್ಲಿ ಯೂನಿಯನ್ ಬ್ಯಾಂಕ್, ಆಗ್ರಾ ಬ್ಯಾಂಕ್ ಮತ್ತು ಕೆಲವು ವಾಣಿಜ್ಯ ಸಂಸ್ಥೆಗಳ ಷೇರು ಬೆಲೆಗಳು ಪ್ರಕಟವಾಗುತ್ತಿದ್ದವು. ಕಂಪನಿಗಳ ಕಾಯ್ದೆ ಮತ್ತು ಸೀಮಿತ ಹೊಣೆಗಾರಿಕೆಯ ತತ್ವ ಜಾರಿಗೆ ಬಂದ ಬಳಿಕ ಷೇರುಗಳಲ್ಲಿ ಹೂಡಿಕೆ ಮಾಡುವ ಆಸಕ್ತಿ ವೇಗವಾಗಿ ಬೆಳೆಯಿತು. ತೆರೆದ ಜಾಗದಲ್ಲಿ ಬಿಸಿಲು, ಮಳೆಯ ನಡುವೆಯೇ ವಹಿವಾಟು ನಡೆಸುತ್ತಿದ್ದ ದಲ್ಲಾಳಿಗಳು ಕೊನೆಗೆ ಸಂಘಟಿತರಾಗಿ 1908ರ ಮೇ ತಿಂಗಳಲ್ಲಿ ಚೀನಾ ಬಜಾರ್ ರಸ್ತೆಯ 2ನೇ ಸಂಖ್ಯೆಯ ಕಟ್ಟಡದಲ್ಲಿ ಕಲ್ಕತ್ತಾ ಸ್ಟಾಕ್ ಎಕ್ಸ್‌ಚೇಂಜ್ ಅಸೋಸಿಯೇಷನ್ ಸ್ಥಾಪಿಸಿದರು. ಆರಂಭದಲ್ಲಿ 150 ಸದಸ್ಯರು ಇದರಲ್ಲಿದ್ದರು. 1923ರ ಜೂನ್ 7ರಂದು ಇದು ಸೀಮಿತ ಹೊಣೆಗಾರಿಕೆಯ ಸಂಸ್ಥೆಯಾಗಿ ನೋಂದಣಿಯಾಯಿತು. 1928ರಲ್ಲಿ ಕೋಲ್ಕತಾದ ವ್ಯಾಪಾರ ಕೇಂದ್ರವಾಗಿದ್ದ ಲಯನ್ಸ್ ರೇಂಜ್‌ನ 7ನೇ ಸಂಖ್ಯೆಯಲ್ಲಿ ಈಗಿನ ಐತಿಹಾಸಿಕ ಕಟ್ಟಡ ನಿರ್ಮಾಣವಾಯಿತು. 1980ರ ಏಪ್ರಿಲ್ 14ರಿಂದ ಕೇಂದ್ರ ಸರಕಾರ ಕಲ್ಕತ್ತಾ ಷೇರುಪೇಟೆಗೆ ಶಾಶ್ವತ ಮಾನ್ಯತೆ ನೀಡಿತು. ದಲ್ಲಾಳಿಗಳು ಕೂಗಿ ಬೆಲೆ ನಿಗದಿಪಡಿಸುವ ಹಳೆಯ ಬಹಿರಂಗ ವಹಿವಾಟು ಪದ್ಧತಿಯನ್ನು 1997ರಲ್ಲಿ ಕೈಬಿಟ್ಟು, ಸಂಪೂರ್ಣ ಗಣಕೀಕೃತ ಸಿಸ್ಟಾರ್ ವಹಿವಾಟು ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. ಅಂದಿನ ಮುಖ್ಯಮಂತ್ರಿ ಜ್ಯೋತಿ ಬಸು ಈ ವ್ಯವಸ್ಥೆಯನ್ನು ಉದ್ಘಾಟಿಸಿದ್ದರು. 1997-98ರಲ್ಲಿ ಷೇರುಪೇಟೆಯ ವಾರ್ಷಿಕ ವಹಿವಾಟು ಸುಮಾರು 1.78 ಲಕ್ಷ ಕೋಟಿ ರೂ. ತಲುಪಿತ್ತು. ಆ ಕಾಲದಲ್ಲಿ 3,500ಕ್ಕೂ ಹೆಚ್ಚು ಕಂಪನಿಗಳು ಇಲ್ಲಿ ನೋಂದಣಿಯಾಗಿದ್ದವು. ಕೆಲವು ದಿನಗಳಲ್ಲಿ ಇದರ ವಹಿವಾಟು ಬಾಂಬೆ ಷೇರುಪೇಟೆಯನ್ನೂ ಮೀರಿತ್ತು ಎನ್ನುವುದು ಇದರ ಗತವೈಭವಕ್ಕೆ ಸಾಕ್ಷಿ.

ಪುನರುಜ್ಜೀವನಕ್ಕೆ ಅಡ್ಡಿಯಾಗಿರುವ ನಿರ್ಗಮನ ಅರ್ಜಿ

ಬಂಗಾಳ ಸರಕಾರ ಕಲ್ಕತ್ತಾ ಷೇರುಪೇಟೆಗೆ ಮರುಜೀವ ನೀಡುವುದಾಗಿ ಘೋಷಿಸಿರುವ ಹೊತ್ತಿನಲ್ಲೇ, ಷೇರುಪೇಟೆ ಸಂಸ್ಥೆಯು ಸೆಬಿಗೆ ಸಲ್ಲಿಸಿರುವ ಸ್ವಯಂ ನಿರ್ಗಮನ ಅರ್ಜಿ ಇನ್ನೂ ಪರಿಶೀಲನೆಯಲ್ಲಿದೆ. ಸೆಬಿಯ 2012ರ ಪ್ರಾದೇಶಿಕ ಷೇರು ವಿನಿಮಯ ಕೇಂದ್ರಗಳ ನಿರ್ಗಮನ ನೀತಿಯ ಪ್ರಕಾರ, ಸ್ವಂತ ವೇದಿಕೆಯಲ್ಲಿ ವಾರ್ಷಿಕವಾಗಿ ಕನಿಷ್ಠ 1,000 ಕೋಟಿ ರೂ. ವಹಿವಾಟು ಸಾಧಿಸಲಾಗದ ವಿನಿಮಯ ಕೇಂದ್ರಗಳು ಸ್ವಯಂ ಮಾನ್ಯತೆ ತ್ಯಜಿಸಬಹುದು. ಅಗತ್ಯ ಮಟ್ಟದ ವಹಿವಾಟು ನಿರಂತರವಾಗಿ ಸಾಧಿಸಲು ವಿಫಲವಾದರೆ ಸೆಬಿಯು ಕಡ್ಡಾಯ ನಿರ್ಗಮನ ಪ್ರಕ್ರಿಯೆ ಆರಂಭಿಸಬಹುದಾಗಿದೆ. ಪ್ರತ್ಯೇಕ ನಿಯಮದಡಿ ಷೇರು ವಿನಿಮಯ ಕೇಂದ್ರವು ಕನಿಷ್ಠ 100 ಕೋಟಿ ರೂ. ನಿವ್ವಳ ಮೌಲ್ಯ ಹೊಂದಿರಬೇಕಾಗಿದೆ. ಈ ನಿಯಮಗಳನ್ನು ಪಾಲಿಸಲು ವಿಫಲವಾದ ಹಿನ್ನೆಲೆಯಲ್ಲಿ ಕಲ್ಕತ್ತಾ ಷೇರುಪೇಟೆಯ ಸ್ವಂತ ವಹಿವಾಟು ವೇದಿಕೆ 2013ರ ಏಪ್ರಿಲ್‌ನಿಂದ ಸ್ಥಗಿತಗೊಂಡಿತು. ಸೆಬಿಯ ಕ್ರಮವನ್ನು ಪ್ರಶ್ನಿಸಿ ಸಂಸ್ಥೆಯು ಕಲ್ಕತ್ತಾ ಹೈಕೋರ್ಟ್ ಮೆಟ್ಟಿಲೇರಿತ್ತು. 2024ರ ಫೆಬ್ರವರಿ ಮತ್ತು ಆಗಸ್ಟ್‌ನಲ್ಲಿ ಹೈಕೋರ್ಟ್ ನೀಡಿದ ಆದೇಶಗಳಲ್ಲಿ, ನಿಯಮಗಳಿಗೆ ಅನುಗುಣವಾದ ತೀರುವಳಿ ನಿಗಮವನ್ನು ಸ್ಥಾಪಿಸಲು ಅಥವಾ ಈಗಿರುವ ಮಾನ್ಯತೆ ಪಡೆದ ತೀರುವಳಿ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಳ್ಳಲು ಕಲ್ಕತ್ತಾ ಷೇರುಪೇಟೆಗೆ ಕಾಲಾವಕಾಶ ನೀಡಲಾಗಿತ್ತು. ಅಗತ್ಯ ನಿವ್ವಳ ಮೌಲ್ಯ ಮತ್ತು ತೀರುವಳಿ ವ್ಯವಸ್ಥೆಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ಸಂಸ್ಥೆಗೆ ಸಾಧ್ಯವಾಗಲಿಲ್ಲ. ಇದಾದ ಬಳಿಕ 2025ರ ಫೆಬ್ರವರಿ 18ರಂದು ಷೇರು ವಿನಿಮಯ ವ್ಯವಹಾರದಿಂದ ಸ್ವಯಂ ನಿರ್ಗಮಿಸಲು ಸಂಸ್ಥೆಯು ಸೆಬಿಗೆ ಅಧಿಕೃತ ಅರ್ಜಿ ಸಲ್ಲಿಸಿತು. 2026ರ ಮಾರ್ಚ್‌ನಲ್ಲಿ ಕೇಂದ್ರ ಹಣಕಾಸು ಸಚಿವಾಲಯ ಲೋಕಸಭೆಗೆ ನೀಡಿದ ಉತ್ತರದ ಪ್ರಕಾರ, ಈ ಅರ್ಜಿ ಇನ್ನೂ ಸೆಬಿಯ ಪರಿಶೀಲನೆಯಲ್ಲಿದೆ.



ಕಿರುಸುದ್ದಿ

2030ರೊಳಗೆ ಇವಿ ಸ್ವದೇಶೀಕರಣ

ಮುಂಬೈ: ಇಲೆಕ್ಟ್ರಿಕ್ ವಾಹನ(ಇವಿ)ಗಳಲ್ಲಿ ಬಳಕೆಯಾಗುವ ಉಪಕರಣಗಳ ಸ್ವದೇಶಿ ಉತ್ಪಾದನೆ ಪ್ರಗತಿ ಕಾಣುತ್ತಿದ್ದು, 2030ರ ವೇಳೆಗೆ ಭಾರತದ ಇಲೆಕ್ಟ್ರಿಕ್ ವಾಹನಗಳು (ಬ್ಯಾಟರಿ ಹೊರತುಪಡಿಸಿ) ಶೇ.90ರಿಂದ 100ರಷ್ಟು ಸ್ವದೇಶೀಕರಣ ಆಗಲಿದೆ ಎಂದು ಇಂಧನ ಆರ್ಥಿಕತೆ ಮತ್ತು ಹಣಕಾಸು ವಿಶ್ಲೇಷಣಾ ಸಂಸ್ಥೆ(ಐಇಇಎಫ್‌ಎ) ಹಾಗೂ ಜೆಎಂಕೆ ಸಂಶೋಧನೆ ಮತ್ತು ವಿಶ್ಲೇಷಣೆ ತಮ್ಮ ಹೊಸ ವರದಿಯಲ್ಲಿ ಉಲ್ಲೇಖಿಸಿವೆ. ಇವಿಯಲ್ಲಿ ಬಳಕೆಯಾಗುವ ಉಪಕರಣಗಳ ವಿದೇಶಿ ಆಮದು ಕಡಿಮೆಗೊಳಿಸಿ ದೇಶದಲ್ಲೇ ಅವುಗಳ ಉತ್ಪಾದಿಸುವುದನ್ನು ಇವಿ ಉಪಕರಣಗಳ ಸ್ವದೇಶೀಕರಣ ಎನ್ನುತ್ತಾರೆ. ಇವಿಗಳಲ್ಲಿ ಬ್ಯಾಟರಿ ಹೊರತುಪಡಿಸಿದರೆ ಮೋಟರ್, ಪವರ್ ಇಲೆಕ್ಟ್ರಾನಿಕ್ಸ್, ಥರ್ಮಲ್ ನಿರ್ವಹಣಾ ವ್ಯವಸ್ಥೆ, ಚಾರ್ಜರ್ಸ್ ಮತ್ತು ಕಂಟ್ರೋಲ್ ಯೂನಿಟ್ಸ್ ಇತ್ಯಾದಿ ಸ್ವದೇಶಿ ನಿರ್ಮಾಣಕ್ಕೆ ಅವಕಾಶವಿದೆ.

ಅನಿಲ ಘಟಕ ಸ್ಫೋಟ: 12 ಭಾರತೀಯರ ಸಾವು

ಹೊಸದಿಲ್ಲಿ: ಕತಾರ್‌ನ ಅನಿಲ ಘಟಕದಲ್ಲಿ ಭಾನುವಾರ ತಡರಾತ್ರಿ ಸಂಭವಿಸಿದ ಅನಿಲ ಸ್ಫೋಟದಲ್ಲಿ ಮೃತಪಟ್ಟ 13 ಮಂದಿಯಲ್ಲಿ 12 ಮಂದಿ ಭಾರತೀಯರೇ ಸೇರಿದ್ದಾರೆ ಎಂದು ವಿದೇಶಾಂಗ ಇಲಾಖೆ ಸ್ಪಷ್ಟನೆ ನೀಡಿದೆ. ಕತಾರ್‌ನ ರಾಸ್ ಲಫ್ಘಾನ್ ಉದ್ಯಮ ನಗರದಲ್ಲಿನ ಅನಿಲ ಘಟಕವೊಂದರಲ್ಲಿ ಸ್ಫೋಟ ಸಂಭವಿಸಿತ್ತು. ಹನ್ನೆರಡು ಮಂದಿ ಭಾರತೀಯ ಸಾವು ಬಹಳ ದುರದೃಷ್ಟಕರ ಎಂದು ವಿದೇಶಾಂಗ(ಎಂಇಎ) ವಕ್ತಾರ ರಣಧೀರ್ ಜೈಸ್ವಾಲ್ ಮಂಗಳವಾರ ಸಂತಾಪ ಸೂಚಿಸಿದ್ದಾರೆ. ಘಟನೆಯಲ್ಲಿ ಒಟ್ಟಾರೆ ವಿವಿಧ ರಾಷ್ಟ್ರಗಳ 66 ಮಂದಿ ಗಾಯಗೊಂಡಿದ್ದಾರೆ.

ಲಖನೌ ದುರಂತ: ನಾಲ್ವರು ಅಧಿಕಾರಿಗಳ ಅಮಾನತು

ಲಕ್ನೋ: ಲಕ್ನೋದಲ್ಲಿ ಸಂಭವಿಸಿದ ಅಗ್ನಿ ದುರಂತದಲ್ಲಿ 15 ವಿದ್ಯಾರ್ಥಿಗಳು ಮೃತಪಟ್ಟ ಬೆನ್ನಲ್ಲೇ ಉತ್ತರ ಪ್ರದೇಶ ಸರ್ಕಾರವು ನಾಲ್ವರು ರಾಜ್ಯ ಸರ್ಕಾರಿ ಅಧಿಕಾರಿಗಳನ್ನು ಅಮಾನತುಗೊಳಿಸಿದೆ. ನಾಲ್ವರು ಆರೋಪಿಗಳನ್ನು ಬಂಧಿಸಿದೆ. ಬಂಧಿತ ಆರೋಪಿಗಳೆಲ್ಲರೂ ಕಟ್ಟಡದ ಜಂಟಿ ಮಾಲೀಕರು ಎಂದು ತಿಳಿದುಬಂದಿದೆ. ಅಲಿಗಂಜ್ ಪೊಲೀಸರು ಆರು ಜನ ಹೆಸರಿಸಲಾದ ವ್ಯಕ್ತಿಗಳು ಮತ್ತು ಇತರರ ವಿರುದ್ಧ ಬಿಎನ್‌ಎಸ್ ಹಾಗೂ ಉತ್ತರ ಪ್ರದೇಶ ಅಗ್ನಿಶಾಮಕ ಸೇವಾ ಕಾಯ್ದೆಯಡಿ ಪ್ರಥಮ ಮಾಹಿತಿ ವರದಿ (ಎಫ್ ಐಆರ್) ದಾಖಲಿಸಿದ್ದಾರೆ.

ಭಾರತ-ಅಮೆರಿಕ ಬಿಟಿಎ ಜುಲೈನಲ್ಲಿ ಅಂತಿಮ?

ಹೊಸದಿಲ್ಲಿ: ಭಾರತ-ಅಮೆರಿಕ ನಡುವಿನ ದ್ವಿಪಕ್ಷೀಯ ವ್ಯಾಪಾರ ಮಾತುಕತೆ ಬಹುತೇಕ ಅಂತಿಮ ಹಂತವನ್ನು ತಲುಪಿದೆ. ಅಮೆರಿಕದ ವ್ಯಾಪಾರ ಸಂಧಾನಕಾರ ಜೇಮಿಸನ್ ಗ್ರೀರ್ ಭಾರತಕ್ಕೆ ಆಗಮಿಸಿದ್ದು, ದಿಲ್ಲಿಯ ವಾಣಿಜ್ಯ ಭವನದಲ್ಲಿ ಕೇಂದ್ರ ವಾಣಿಜ್ಯೋದ್ಯಮ ಸಚಿವ ಪಿಯೂಷ್ ಗೋಯಲ್ ಅವರೊಂದಿಗೆ ಉನ್ನತಮಟ್ಟದ ಸಭೆಯಲ್ಲಿ ಪಾಲ್ಗೊಂಡಿದ್ದಾರೆ. ಮುಂದಿನ ತಿಂಗಳು ಒಪ್ಪಂದ ಅಂತಿಮಗೊಳ್ಳುವ ಸಾಧ್ಯತೆಯಿದೆ.

ಫ್ರಾನ್ಸ್‌ನ ಎವಿಯನ್‌ನಲ್ಲಿ ನಡೆದ ಜಿ7 ಸಮ್ಮೇಳನದಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಡುವಿನ ಸಭೆಯ ಬಳಿಕ ಸಚಿವರ ನಡುವಿನ ಸಭೆಗಳ ವೇಗವರ್ಧನೆ ಆಗಿದೆ. ದೀರ್ಘಕಾಲದಿಂದ ಬಾಕಿ ಉಳಿದಿರುವ ಒಪ್ಪಂದಗಳನ್ನು ಆದಷ್ಟು ಬೇಗ ಪೂರ್ಣಗೊಳಿಸಲು ಇಬ್ಬರು ರಾಷ್ಟ್ರ ನಾಯಕರು ಒಮ್ಮತಕ್ಕೆ ಬಂದಿದ್ದರು. ವಾಣಿಜ್ಯ ಭವನದಲ್ಲಿ ನಡೆದ ಸಭೆಯಲ್ಲಿ ಅಮೆರಿಕ ರಾಯಭಾರಿ ಗೊರ್ ಹಾಜರಿದ್ದು, ಹೊಸದಿಲ್ಲಿಯಲ್ಲಿ ಸಚಿವ ಪಿಯೂಷ್ ಗೋಯಲ್ ಮತ್ತು ಅಮೆರಿಕ ವ್ಯಾಪಾರ ಸಂಧಾನಕಾರ ಗ್ರೀರ್ ಅವರೊಂದಿಗೆ ಮಾತುಕತೆ ಉತ್ತಮವಾಗಿತ್ತು. ಒಪ್ಪಂದ ಅಂತಿಮಗೊಳಿಸುವ ಉದ್ದೇಶದಿಂದ ಇಬ್ಬರು ಸಚಿವರು ಮಾತುಕತೆ ನಡೆಸಿದ್ದಾರೆ ಎಂದು ಎಕ್ಸ್‌ನಲ್ಲಿ ಬರೆದಿದ್ದಾರೆ.

ಒಪ್ಪಂದ ನಿಯಮಗಳ ಚರ್ಚೆ: ಮುಂದಿನ ತಿಂಗಳು ಒಪ್ಪಂದ ಅಂತಿಮಗೊಳ್ಳುವ ಸಾಧ್ಯತೆಯಿದ್ದು, ಮಧ್ಯಂತರ ಒಪ್ಪಂದವು ಅದರ ಮೊದಲ ಹೆಜ್ಜೆಯಾಗಿರಲಿದೆ. ಅಮೆರಿಕದ ಕೃಷಿ ಉತ್ಪನ್ನ, ಇಂಧನ ರಫ್ತು, ರಕ್ಷಣಾ ಉಪಕರಣ ಮತ್ತು ಅತ್ಯಾಧುನಿಕ ವಾಣಿಜ್ಯ ವಿಮಾನಗಳ ಮಾರುಕಟ್ಟೆ ವ್ಯಾಪ್ತಿ ವಿಸ್ತರಿಸಲು ಅಮೆರಿಕ ಬಯಸಿದೆ.

ಎಂಟು ನಾಯಕರನ್ನು ಉಚ್ಛಾಟಿಸಿದ ಟಿಎಂಸಿ

ಕೋಲ್ಕತ್ತಾ: ಪಕ್ಷ ವಿರೋಧಿ ಚಟುವಟಿಕೆಗಳ ಆರೋಪದಲ್ಲಿ , ಕೋಲ್ಕತ್ತಾದ ಮಾಜಿ ಮೇಯರ್ ಫಿರ್ಹದ್ ಹಕೀಮ್, ಅರೂಪ್ ಬಿಸ್ವಾಸ್ ಮತ್ತು ಇತರ ಆರು ಮಂದಿ ನಾಯಕರನ್ನು ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿ ಬಣ ಪಕ್ಷದಿಂದ ಉಚ್ಛಾಟಿಸಿದೆ. ಜಾವೇದ್ ಅಹಮದ್ ಖಾನ್, ಅರೂಪ್ ರಾಯ್ ,ರಥಿನ್ ಘೋಷ್, ಬಿಪ್ಲಬ್ ಮಿತ್ರಾ, ಸಬಿನಾ ಯಾಸ್ಮಿನ್, ಸ್ನೇಹಸಿಸ್ ಚಕ್ರವರ್ತಿ ಉಚ್ಛಾಟಿತ ಇತರ ನಾಯಕರು.



ಉಚ್ಛಾಟನೆಗೆ ಮುನ್ನ , ಈ ಎಲ್ಲಾ ಎಂಟು ನಾಯಕರಿಗೆ ಅಖಿಲ ಭಾರತ ತೃಣಮೂಲ ಕಾಂಗ್ರೆಸ್ (ಎಐಟಿಸಿ) ಶೋಕಾಸ್ ನೋಟೀಸ್ ಗಳನ್ನು ಜಾರಿಗೊಳಿಸಿತ್ತು. ಎಐಟಿಸಿಗೆ ಮಮತಾ ಬ್ಯಾನರ್ಜಿ ಅಧ್ಯಕ್ಷೆ ಎಂದು ವಿಶದಪಡಿಸುವ ದಾಖಲೆಯನ್ನು , ಮಮತಾ ಬ್ಯಾನರ್ಜಿ ನೇತೃತ್ವದ ಬಣವು ಚುನಾವಣಾ ಆಯೋಗಕ್ಕೆ ಸಲ್ಲಿಸಿತ್ತು. ಸುಬ್ರತಾ ಬಕ್ಷಿ ಟಿಎಂಸಿಯ ಉಪಾಧ್ಯಕ್ಷ, ಅಭಿಷೇಕ್ ಬ್ಯಾನರ್ಜಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ಲೋಕಸಭಾ ನಾಯಕ ಡೆರೆಕ್ ಒಬ್ರಿಯನ್ ಪಕ್ಷದ ಜಂಟಿ ಕಾರ್ಯದರ್ಶಿ, ರಾಜ್ಯಸಭಾ ನಾಯಕ ಡೋಲಾ ಸೇನ್ ಜಂಟಿ ಕಾರ್ಯದರ್ಶಿ, ಸುಭಾಸಿಶ್ ಚಕ್ರವರ್ತಿ ಕೋಶಾಧಿಕಾರಿಯೆಂದು ಯಾದಿ ಅಥವಾ ದಾಖಲೆಯಲ್ಲಿ ಮಾಹಿತಿ ನೀಡಲಾಗಿದೆ. ವಿಪಕ್ಷ ನಾಯಕ ರಿತಬ್ರತ ಬ್ಯಾನರ್ಜಿ ನೇತೃತ್ವದ ಟಿಎಂಸಿಯ ಬಂಡಾಯ ಬಣವು, ಮಮತಾ ಬ್ಯಾನರ್ಜಿಯನ್ನು ಪಕ್ಷಾಧ್ಯಕ್ಷ ಸ್ಥಾನದಿಂದ ಉಚ್ಛಾಟಿಸಲಾಗಿದೆ ಮತ್ತು ಅಭಿಷೇಕ್ ಬ್ಯಾನರ್ಜಿಯನ್ನೂ ಅಮಾನತುಗೊಳಿಸಲಾಗಿದೆ.

ಭಾರತದತ್ತ ತೈಲ, ಅನಿಲ ಹೊತ್ತ 11 ನೌಕೆಗಳು

ಹೊಸದಿಲ್ಲಿ: ಅಮೆರಿಕ ಮತ್ತು ಇರಾನ್ ನಡುವೆ ಉದ್ವಿಗ್ನತೆ ಶಮನಗೊಳಿಸುವ ಒಪ್ಪಂದ ಏರ್ಪಟ್ಟ ಬೆನ್ನಲ್ಲೇ, ಕಚ್ಚಾತೈಲ, ಅಡುಗೆ ಅನಿಲ ಹಾಗೂ ರಸಗೊಬ್ಬರ ಹೊತ್ತ 11 ವಾಣಿಜ್ಯ ನೌಕೆಗಳು ಹೋರ್ಮುಜ್ ಜಲಸಂಧಿಯನ್ನು ಸುರಕ್ಷಿತವಾಗಿ ದಾಟಿ ಭಾರತದತ್ತ ಪ್ರಯಾಣ ಆರಂಭಿಸಿವೆ.



ಇದೇ ವೇಳೆ, ಭಾರತದಿಂದ ಪರ್ಷಿಯನ್ ಕೊಲ್ಲಿ ಪ್ರದೇಶದತ್ತ ಎರಡು ಭಾರತೀಯ ನೌಕೆಗಳು ಹೋರ್ಮುಜ್ ಜಲಸಂಧಿಯನ್ನು ದಾಟಿವೆ. ಉಭಯ ದಿಕ್ಕುಗಳಲ್ಲೂ ಹಡಗು ಸಂಚಾರ ಪುನರಾರಂಭವಾಗಿರುವುದು, ಜಾಗತಿಕ ಇಂಧನ ಮತ್ತು ಸರಕು ಸಾಗಣೆಯ ಪ್ರಮುಖ ಮಾರ್ಗದಲ್ಲಿ ಪರಿಸ್ಥಿತಿ ಸಹಜ ಸ್ಥಿತಿಗೆ ಮರಳುತ್ತಿರುವುದರ ಸೂಚನೆಯಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ಮೂರು ಭಾರತೀಯ ತೈಲ ಟ್ಯಾಂಕರ್: ಜೂ.17ರಂದು ಅಮೆರಿಕ ಮತ್ತು ಇರಾನ್ ನಡುವೆ 14 ಅಂಶಗಳ ತಿಳಿವಳಿಕೆ ಒಪ್ಪಂದ ಏರ್ಪಟ್ಟ ಬಳಿಕ ಒಟ್ಟು 11 ಭಾರತಮುಖಿ ನೌಕೆಗಳು ಜಲಸಂಧಿಯನ್ನು ದಾಟಿವೆ. ಇವುಗಳಲ್ಲಿ ಭಾರತೀಯ ಧ್ವಜ ಹೊಂದಿರುವ ಮೂರು ತೈಲ ಟ್ಯಾಂಕರ್ ಗಳಿದ್ದು, ಪ್ರತಿಯೊಂದರಲ್ಲೂ ಸುಮಾರು 2.85 ಲಕ್ಷ ಮೆಟ್ರಿಕ್ ಟನ್ ಕಚ್ಚಾತೈಲ ಸಾಗಿಸಲಾಗುತ್ತಿದೆ. ಉಳಿದವುಗಳಲ್ಲಿ ವಿದೇಶಿ ಧ್ವಜದ ಒಂದು ಕಚ್ಚಾತೈಲ ಟ್ಯಾಂಕರ್, 1 ಅಡುಗೆ ಅನಿಲ ಸಾಗಣೆ ಹಡಗು ಹಾಗೂ ರಸಗೊಬ್ಬರ ಹೊತ್ತ 6 ಬೃಹತ್ ಸರಕು ನೌಕೆಗಳು ಸೇರಿವೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ.

ಸರ್ಕಾರಕ್ಕೆ ಮಧ್ಯಂತರ ವರದಿ ಸಲ್ಲಿಕೆ

ಲಖನೌ: ಅಯೋಧ್ಯೆಯ ಶ್ರೀರಾಮ ಜನ್ಮಭೂಮಿ ಮಂದಿರಕ್ಕೆ ಭಕ್ತರು ಸಲ್ಲಿಸಿದ ದೇಣಿಗೆ ಮತ್ತು ಕಾಣಿಕೆಗಳ ನಿರ್ವಹಣೆಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ತನಿಖೆ ನಡೆಸಿರುವ ವಿಶೇಷ ತನಿಖಾ ತಂಡ, 20ಕ್ಕೂ ಹೆಚ್ಚು ಜನರ ವಿರುದ್ಧ ಪ್ರಥಮ ಮಾಹಿತಿ ವರದಿ ದಾಖಲಿಸುವಂತೆ ಶಿಫಾರಸು ಮಾಡಿದೆ. ಮೂರು ಸದಸ್ಯರ ತನಿಖಾ ತಂಡವು ತನ್ನ 150 ಪುಟಗಳ ಮಧ್ಯಂತರ ವರದಿಯನ್ನು ಉತ್ತರ ಪ್ರದೇಶದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ (ಗೃಹ) ಸಂಜಯ್ ಪ್ರಸಾದ್ ಅವರಿಗೆ ಮಂಗಳವಾರ ಸಲ್ಲಿಸಿದೆ. ಮಂದಿರದ ಹುಂಡಿ ಮತ್ತು ದೇಣಿಗೆ ಪೆಟ್ಟಿಗೆಗಳಿಂದ ಸಂಗ್ರಹವಾಗುತ್ತಿದ್ದ ಹಣದ ಎಣಿಕೆ, ಬ್ಯಾಂಕಿಗೆ ಜಮೆ ಮಾಡುವ ವಿಧಾನ, ಹಣಕಾಸು ದಾಖಲೆಗಳ ನಿರ್ವಹಣೆ ಹಾಗೂ ಅಮೂಲ್ಯ ಕಾಣಿಕೆಗಳ ಸಂರಕ್ಷಣೆಯಲ್ಲಿ ಹಲವು ಕಾರ್ಯವಿಧಾನಾತ್ಮಕ ಲೋಪಗಳು ಕಂಡುಬಂದಿವೆ ಎಂದು ಮೂಲಗಳು ತಿಳಿಸಿವೆ.

ಕಾಶ್ಮೀರದಲ್ಲಿ ಪರಿಸ್ಥಿತಿ ಸಹಜತೆಯತ್ತ: ಕೈ ನಾಯಕ ತರೂರ್ ಹೇಳಿಕೆ

ಕಾಂಗ್ರೆಸಿಗೆ ಮತ್ತೆ ತೀವ್ರ ಮುಜುಗರ

ಶ್ರೀನಗರ: ರಾಷ್ಟ್ರೀಯ ಹಿತ ಮತ್ತು ಅಂತಾರಾಷ್ಟ್ರೀಯ ವ್ಯವಹಾರಗಳಿಗೆ ಸಂಬಂಧಿಸಿ ಪ್ರಧಾನಿ ನರೇಂದ್ರ ಮೋದಿ ಸರ್ಕಾರ ಕೈಗೊಳ್ಳುತ್ತಿರುವ ಕ್ರಮಗಳು ಸರಿಯಾಗಿವೆ ಎಂಬುದಾಗಿ ಹೇಳಿ ಬೆಂಬಲಿಸುತ್ತಿರುವ ಕಾಂಗ್ರೆಸ್ ಸಂಸದ ಶಶಿ ತರೂರ್ ಅವರು, ಇದೀಗ ಜಮ್ಮು-ಕಾಶ್ಮೀರದಲ್ಲಿ ಪರಿಸ್ಥಿತಿ ಸಹಜಗೊಳ್ಳುತ್ತಿದೆ ಎಂಬ ಹೇಳಿಕೆ ನೀಡಿರುವುದು ಮತ್ತೆ ಕಾಂಗ್ರೆಸಿಗೆ ತೀವ್ರ ಮುಜುಗರ ಉಂಟು ಮಾಡಿದೆ.

ಮೋದಿ ಸರಕಾರದ ಎಲ್ಲ ನೀತಿಗಳನ್ನು ವಿಪಕ್ಷ ಕಾಂಗ್ರೆಸಿನ ನಾಯಕ ರಾಹುಲ್ ಗಾಂದಿ ಒಂದೇ ಸವನೆ ವಿರೋಧಿಸುತ್ತಿರುವಾಗಲೇ, ಶಶಿ ತರೂರ್ ಅವರ ಈ ಹೇಳಿಕೆ ಬಂದಿರುವುದು ಮತ್ತು ರಾಷ್ಟ್ರೀಯ ಹಿತದ ವಿಷಯದಲ್ಲಿ ಕ್ಷುಲ್ಲಕ ರಾಜಕೀಯ ಮಾಡುವುದು ಸರಿಯಲ್ಲ ಎಂದಿರುವುದು ಕಾಂಗ್ರೆಸಿಗೆ ತೀವ್ರ ಪೇಚುಂಟು ಮಾಡಿದೆ.

ಶ್ರೀನಗರದ ಲೋಕ ಭವನದಲ್ಲಿ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರೊಂದಿಗಿನ ಅತ್ಯುತ್ತಮ ಸಭೆಯ ಗೌರವ ಸಿಕ್ಕಿತು. ನಾವು ರಾಜ್ಯದ ಪರಿಸ್ಥಿತಿ ಮತ್ತು ಸಹಜ ಸ್ಥಿತಿಯತ್ತ ಸಾಗುತ್ತಿರುವ ಪ್ರೋತ್ಸಾಹದಾಯಕ ಪ್ರಗತಿಯ ಬಗ್ಗೆ ಚರ್ಚಿಸಿದೆವು. ನಾನು ಬಂದ ವೇಳೆ,ಅವರು ಕಾಶ್ಮೀರಿ ಬರಹಗಾರರ ಸಂಘ ಮತ್ತು ಮಹಿಳಾ ಸಂಘಟನೆಯ ಅಧ್ಯಕ್ಷರೊಂದಿಗೆ ಮಾತನಾಡುತ್ತಿದ್ದರು - ಈ ಸಕಾರಾತ್ಮಕ ಸಂಪರ್ಕವನ್ನು ನಾನು ಸ್ವಾಗತಿಸಿದೆ. ಹಲವು ಸವಾಲುಗಳು ಉಳಿದಿವೆ ಮತ್ತು ಇನ್ನೂ ಹೆಚ್ಚಿನದನ್ನು ಮಾಡಬೇಕಾಗಿದೆ, ಆದರೆ ನಾನು ಸ್ವಲ್ಪ ಸಮಯದವರೆಗೆ ಅನುಭವಿಸಿದ್ದಕ್ಕಿಂತ ಹೆಚ್ಚು ಸಕಾರಾತ್ಮಕ ಭಾವನೆಯಿಂದ ಸಭೆಯಿಂದ ಹೊರಗೆ ಬಂದಿದ್ದೇನೆ '' ಎಂದು ತರೂರ್ ಎಕ್ಸ್‌ನಲ್ಲಿ ಬರೆದಿದ್ದಾರೆ.

ನಲಂದಾ ಮಾತುಕತೆಗಳಿಗಾಗಿ ತರೂರ್ ಅವರ ಶ್ರೀನಗರ ಭೇಟಿ ಮತ್ತು ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರೊಂದಿಗಿನ ಅವರ ಭೇಟಿಯ ಬಳಿಕ ವ್ಯಕ್ತಪಡಿಸಿದ ಅಭಿಪ್ರಾಯಗಳಿಗೆ ಕೆಲವು ಕಾಂಗ್ರೆಸ್ ನಾಯಕರು ತೀವ್ರ ಅಸಹನೆ ವ್ಯಕ್ತಪಡಿಸಿದ್ದಾರೆ.

ಜಮ್ಮು -ಕಾಶ್ಮೀರದ ಕಾಂಗ್ರೆಸ್ ಮುಖ್ಯ ವಕ್ತಾರ ರವೀಂದರ್ ಶರ್ಮಾ, ಶಶಿ ತರೂರ್ ಅವರನ್ನು ಟೀಕಿಸಿ ಮೂಲ ವಾಸ್ತವವನ್ನು ಅರ್ಥಮಾಡಿಕೊಳ್ಳಲು ತರೂರ್ ಕಾಶ್ಮೀರ ಕಣಿವೆಯ ಜನರನ್ನು ಭೇಟಿ ಮಾಡಲು ಸಮಯ ಮೀಸಲಿಡಬೇಕಿತ್ತು ಎಂದಿದ್ದಾರೆ.

ಬಿಜೆಪಿ ಜಮ್ಮು -ಕಾಶ್ಮೀರದಲ್ಲಿ ಪರಿಸ್ಥಿತಿ ಸಹಜವಾಗಿಲ್ಲ ಎಂದು ಬಿಂಬಿಸಲು ಕಾಂಗ್ರೆಸ್ ಹೆಣಗಾಡುತ್ತಿರುವಾಗಲೇ, ಜಮ್ಮು-ಕಾಶ್ಮೀರದಲ್ಲಿನ ಪ್ರಗತಿಯನ್ನು ಪ್ರೋತ್ಸಾಹಿಸುವ ಬೆಳವಣಿಗೆಯನ್ನು ತರೂರ್ ಶ್ಲಾಘಿಸಿದ್ದಾರೆ. ತಮ್ಮ ಹೇಳಿಕೆಗೆ ಕಾಂಗ್ರೆಸ್ ನಾಯಕರ ತಕರಾರಿಗೆ ಪ್ರತಿಕ್ರಿಯಿಸಿರುವ ಅವರು, ತಾವು ವಿದೇಶಾಂಗ ವ್ಯವಹಾರಗಳಿಗೆ ಸಂಬಂಧಿಸಿದ ಸಂಸತ್ತಿನ ಸ್ಥಾಯೀ ಸಮಿತಿಯ ನಿಯೋಗವಾಗಿ ಅಲ್ಲಿಗೆ ತೆರಳಿದ್ದು, ಅಲ್ಲಿ ಪಾಸ್‌ಪೋರ್ಟ್ ಕಚೇರಿ ಚಟುವಟಿಕೆಗಳು ಸುಗಮವಾಗಿ ನಡೆಯುತ್ತಿತ್ತು ಎಂದಿದ್ದಾರೆ.

ವಿಶ್ವಾಸಾರ್ಹ ಶಕ್ತಿಯಾಗಿ ಭಾರತ ಉದಯ: ಪ್ರಧಾನಿ ಮೋದಿ

ಭಾರತ ಜಾಗತಿಕ ಪಾಲುದಾರ

ಹೊಸದಿಲ್ಲಿ: ಭಾರತವು ವಿಶ್ವದ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಿರುವುದಷ್ಟೇ ಅಲ್ಲ, ವಿಶ್ವಾಸಾರ್ಹ ಮತ್ತು ನಂಬಿಕೆಗೆ ಅರ್ಹವಾದ ಜಾಗತಿಕ ಶಕ್ತಿಯಾಗಿಯೂ ಹೊರಹೊಮ್ಮಿದೆ. ದೇಶದ ಪ್ರತಿಯೊಂದು ನೀತಿ ಮತ್ತು ನಿರ್ಧಾರಕ್ಕೂ 'ರಾಷ್ಟ್ರ ಮೊದಲು' ಎಂಬ ತತ್ವವೇ ಪರಮ ಮಾರ್ಗದರ್ಶಿಯಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. 'ರಿಪಬ್ಲಿಕ್ ಶೃಂಗಸಭೆ-2026'ರಲ್ಲಿ ಮಾತನಾಡಿದ ಅವರು, ವಿಶ್ವವು ಕ್ಷಿಪ್ರ ಮತ್ತು ಪರಿಣಾಮಕಾರಿ ಬದಲಾವಣೆಗಳನ್ನು ಕಾಣುತ್ತಿರುವ ಈ ಸಂದರ್ಭದಲ್ಲಿ 'ಮಹಾಶಕ್ತಿ ಭಾರತ: ರಾಷ್ಟ್ರ ಮೊದಲು' ವಿಷಯದ ಕುರಿತು ಚರ್ಚೆ ನಡೆಯುತ್ತಿರುವುದು ಮಹತ್ವದ್ದಾಗಿದೆ ಎಂದರು.

ಭಾರತದ ಬೆಳವಣಿಗೆಯು ವಿಶ್ವಾಸ, ಸ್ಥಿರತೆ ಮತ್ತು ಜಾಗತಿಕ ಒಳಿತಿನ ಬದ್ಧತೆಯ ಮೇಲೆ ನಿಂತಿದೆ. ಇತ್ತೀಚೆಗೆ ನಡೆದ ಜಿ-7 ಶೃಂಗಸಭೆಯಲ್ಲಿಯೂ ವಿಶ್ವನಾಯಕರು ಭಾರತದ 'ರಾಷ್ಟ್ರ ಮೊದಲು' ಬದ್ಧತೆಯನ್ನು ಗುರುತಿಸಿದ್ದಾರೆ. ಇದೇ ತತ್ವ ದೇಶದ ನೀತಿ, ಆದ್ಯತೆ ಮತ್ತು ಅಭಿವೃದ್ಧಿಯ ಆಶಯಗಳಿಗೆ ದಿಕ್ಕು ತೋರಿಸುತ್ತಿದೆ ಎಂದು ಮೋದಿ ತಿಳಿಸಿದರು.

ಮಾವೋವಾದಿ ಹಿಂಸಾಚಾರ ಅಂತಿಮ ಹಂತದಲ್ಲಿ: ದೇಶದಲ್ಲಿ ಮಾವೋವಾದಿ ಭಯೋತ್ಪಾದನೆ ಈಗ ಕೊನೆಯುಸಿರೆಳೆಯುತ್ತಿದೆ.

ಭದ್ರತಾ ಪಡೆಗಳ ದೃಢ ಕಾರ್ಯಾಚರಣೆ ಮತ್ತು ತ್ವರಿತ ಅಭಿವೃದ್ಧಿ ಕಾರ್ಯಗಳ ಪರಿಣಾಮವಾಗಿ ಹಿಂದೆ ಹಿಂಸಾಚಾರ ಹಾಗೂ ಹಿಂದುಳಿದಿದ್ದ ಪ್ರದೇಶಗಳು ಈಗ ಪ್ರಗತಿಯ ಹಾದಿಯಲ್ಲಿವೆ ಎಂದು ಪ್ರಧಾನಿ ಹೇಳಿದರು.ಮಾವೋವಾದಿ ಪೀಡಿತ ಮತ್ತು ಬುಡಕಟ್ಟು ಪ್ರದೇಶಗಳಲ್ಲಿ ಕಳೆದ ಹತ್ತು ವರ್ಷಗಳಲ್ಲಿ 12 ಸಾವಿರ ಕಿಮೀಗೂ ಹೆಚ್ಚು ರಸ್ತೆ ನಿರ್ಮಿಸಲಾಗಿದೆ.

ಕಡಿಮೆ ದರದಲ್ಲಿ ಔಷಧ: ಜನೌಷಧಿ ಕೇಂದ್ರಗಳ ಮೂಲಕ ಕಡಿಮೆ ಬೆಲೆಗೆ ಔಷಧ ಒದಗಿಸಲಾಗುತ್ತಿದೆ. ಹಿರಿಯ ನಾಗರಿಕರಿಗೆ ಆರೋಗ್ಯ ರಕ್ಷಣೆ ನೀಡುವ ವಿವಿಧ ಯೋಜನೆಗಳಿಂದ ಕುಟುಂಬಗಳ ಚಿಕಿತ್ಸಾ ವೆಚ್ಚ ಕಡಿಮೆಯಾಗಿದೆ.

ಆರೋಗ್ಯ ಸೇವೆಗಳನ್ನು ಜನಸಾಮಾನ್ಯರಿಗೆ ಕೈಗೆಟಕುವಂತೆ ಮಾಡಲು ಸರಕಾರ ನಿರಂತರವಾಗಿ ಶ್ರಮಿಸುತ್ತಿದೆ ಎಂದು ತಿಳಿಸಿದರು.

ಕಿರುಸುದ್ದಿ

ಲಂಚ ಪ್ರಕರಣ: ಜಾಮೀನು ಅರ್ಜಿ ತಿರಸ್ಕಾರ

ಕಲಬುರಗಿ: ಲಂಚ ಸ್ವೀಕರಿಸುತ್ತಿದ್ದ ವೇಳೆ ಲೋಕಾಯುಕ್ತ ಬಲೆಗೆ ಬಿದ್ದಿದ್ದ ಯಡ್ರಾಮಿ ಪೊಲೀಸ್ ಠಾಣೆಯ ಪಿಎಸ್‌ಐ ವಿಶ್ವನಾಥ ಮುದರೆಡ್ಡಿ ಹಾಗೂ ಎಸ್‌ಬಿ (ವಿಶೇಷ ದಳ) ಸಿಬ್ಬಂದಿ ಸಿದ್ದಣ್ಣ ಬಿರಾದಾರ ಅವರ ಜಾಮೀನು ಅರ್ಜಿಯನ್ನು ಜಿಲ್ಲಾ ನ್ಯಾಯಾಲಯ ತಿರಸ್ಕರಿಸಿದೆ. ಕಳೆದ ಗುರುವಾರ 20 ಸಾವಿರ ರೂ. ಲಂಚ ಪಡೆಯುತ್ತಿದ್ದಾಗ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ ಇಬ್ಬರನ್ನೂ ರೆಡ್ ಹ್ಯಾಂಡ್ ಆಗಿ ಬಂಧಿಸಿದ್ದರು. ತದನಂತರ ಆರೋಪಿಗಳನ್ನು ಸಮಗ್ರ ವಿಚಾರಣೆಗೆ ಒಳಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು. ನ್ಯಾಯಾಲಯದಲ್ಲಿ



ವಾದ-ಪ್ರತಿವಾದ: ಶುಕ್ರವಾರ ಆರೋಪಿಗಳ ಪರ ವಕೀಲರು ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ಇದಕ್ಕೆ ಶನಿವಾರ ತೀವ್ರ ಆಕ್ಷೇಪಣೆ ಸಲ್ಲಿಸಿದ ಲೋಕಾಯುಕ್ತ ಪರ ವಕೀಲರು, ಪ್ರಕರಣದ ತನಿಖೆ ಇನ್ನೂ ಪ್ರಾಥಮಿಕ ಹಂತದಲ್ಲಿದೆ. ಈ ಸಮಯದಲ್ಲಿ ಆರೋಪಿಗಳಿಗೆ ಜಾಮೀನು ನೀಡಿದರೆ ಸಾಕ್ಷ್ಯ ನಾಶಪಡಿಸುವ ಮತ್ತು ತನಿಖೆಯ ಹಾದಿ ತಪ್ಪಿಸುವ ಸಾಧ್ಯತೆ ಇರುತ್ತದೆ ಎಂದು ಪ್ರಬಲ ವಾದ ಮಂಡಿಸಿದ್ದರು. ನ್ಯಾಯಾಲಯದ ಆದೇಶ: ಸೋಮವಾರ ಜಾಮೀನು ಅರ್ಜಿಯ ಅಂತಿಮ ವಿಚಾರಣೆ ನಡೆಸಿದ ನ್ಯಾಯಾಧೀಶ ಬಿ.ಎಲ್.ಲಕ್ಷ್ಮಿನಾರಾಯಣ ಅವರು, ಉಭಯ ಕಡೆಯ ವಾದ-ಪ್ರತಿವಾದಗಳನ್ನು ಆಲಿಸಿ ಆರೋಪಿಗಳ ಜಾಮೀನು ಅರ್ಜಿಯನ್ನು ವಜಾಗೊಳಿಸಿ ಆದೇಶ ಹೊರಡಿಸಿದರು. ಲೋಕಾಯುಕ್ತ ಪರವಾಗಿ ಸರ್ಕಾರಿ ಅಭಿಯೋಜಕ (ಎಪಿಪಿ) ಎಸ್.ಎಸ್.ಚಾಂದ್ ಕೌಟೆ ವಾದ ಮಂಡಿಸಿದರೆ, ಆರೋಪಿಗಳ ಪರವಾಗಿ ವಕೀಲ ಬಾಬುರಾವ್ ಮಂಡಿಸಿದರು. ನ್ಯಾಯಾಲಯದ ಈ ಆದೇಶದಿಂದಾಗಿ ಸದ್ಯಕ್ಕೆ ಪಿಎಸ್‌ಐ ವಿಶ್ವನಾಥ ಹಾಗೂ ಸಿಬ್ಬಂದಿ ಸಿದ್ದಣ್ಣ ಬಿರಾದಾರ ನ್ಯಾಯಾಂಗ ಬಂಧನದಲ್ಲೇ ಮುಂದುವರಿಯಲಿದ್ದಾರೆ.

ಎಂಜಿನಿಯರ್ ಮನೆ ಮೇಲೆ ಲೋಕಾ ದಾಳಿ:



ಬಳ್ಳಾರಿ: ಸಿರುಗುಪ್ಪದ ಗ್ರಾಮೀಣ ಕುಡಿಯುವ ನೀರು ಸರಬರಾಜು ಎಂಜಿನಿಯರ್ ತಿಪ್ಪೇಸ್ವಾಮಿ ಅವರ ಮನೆ ಮೇಲೆ ಲೋಕಾಯುಕ್ತ ಅಧಿಕಾರಿಗಳು ಮಂಗಳವಾರ ಬೆಳಗ್ಗೆ ದಿಢೀರ್ ದಾಳಿ ನಡೆಸಿ ನಡೆಸಿದ್ದಾರೆ. ಆದಾಯಕ್ಕಿಂತ ಹೆಚ್ಚು ಹಣ, ಆಸ್ತಿ ಸಂಪಾದಿಸಿದ ಆರೋಪ ಹಿನ್ನೆಲೆಯಲ್ಲಿ ಲೋಕಾಯುಕ್ತ ಎಸ್ಪಿ ವಾಸುದೇವ ಅವರ ನೇತೃತ್ವದ ತಂಡದ ಅಧಿಕಾರಿಗಳು, ಅವರ ನಿವಾಸ, ಕಚೇರಿ ಸೇರಿ ವಿವಿಧೆಡೆ 3 ತಂಡಗಳು ದಿಢೀರ್ ದಾಳಿ ನಡೆಸಿದ್ದು, ಅಪಾರ ಪ್ರಮಾಣದ ಚಿನ್ನ, ಬೆಳ್ಳಿ, ನಗದು ಹಾಗೂ ಆಸ್ತಿಗಳ ದಾಖಲೆಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ. ಬಳ್ಳಾರಿಯ ಹನುಮಾನ್ ನಗರದ ತಿಪ್ಪೇಸ್ವಾಮಿ ಅವರ ನಿವಾಸ, ಕುಡುತಿನಿ ಪಟ್ಟಣದಲ್ಲಿರುವ ಅವರ ಮತ್ತೊಂದು ನಿವಾಸ, ಸಿರುಗುಪ್ಪ ಪಟ್ಟಣದ ಇಲಾಖೆ ವಸತಿ ಗೃಹದ ಮೇಲೆ ಅಧಿಕಾರಿಗಳು ದಾಳಿ ನಡೆಸಿದ್ದು ವಶಕ್ಕೆ ಪಡೆದು ವಿಚಾರಣೆ ಮುಂದುವರಿಸಿದ್ದಾರೆ.

ಪಕ್ಷಕ್ಕೆ ದ್ರೋಹ ಮಾಡಿದವರ ವಿರುದ್ಧ ಕ್ರಮವಾಗಲಿ: ಬಿಜೆಪಿ

ಕಲಬುರಗಿ: ವಿಧಾನ ಪರಿಷತ್ ಸದಸ್ಯರ ಆಯ್ಕೆ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ವಿಧಾನ ಪರಿಷತ್ ಹಿರಿಯ ಸದಸ್ಯ ಡಾ.ಬಿ.ಜಿ.ಪಾಟೀಲ ಒತ್ತಾಯಿಸಿದ್ದಾರೆ. ಬಿಜೆಪಿ ಪಕ್ಷದ ಟಿಕೆಟ್ ಪಡೆದುಕೊಂಡು ವಿಧಾನಸಭೆ ಸದಸ್ಯರಾಗಿ (ಎಂಎಲ್‌ಎ) ಆಯ್ಕೆಯಾದವರು ಎಂಎಲ್‌ಸಿ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿರುವುದು ಸರಿಯಲ್ಲ. ಶಿಸ್ತುಬದ್ಧ ಪಕ್ಷ ಎಂಬ ಹೆಸರನ್ನು ಹೊಂದಿರುವ ಬಿಜೆಪಿಗೆ ಈ ಘಟನೆ ಮುಜುಗರ ಉಂಟು ಮಾಡಿದೆ. ಹೀಗಾಗಿ ಇಂತಹ ಕೃತ್ಯ ಎಸಗಿದವರು ಯಾರೇ ಆಗಿರಲಿ, ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದ್ದಾರೆ. ಪಕ್ಷದ ಅಧಿಕೃತ ಅಭ್ಯರ್ಥಿಗೆ ಮತ ಹಾಕದೆ, ಬೇರೆ ಅಭ್ಯರ್ಥಿಗೆ ಮತದಾನ ಮಾಡಿದವರನ್ನು ಪತ್ತೆಹಚ್ಚಲು ಸತ್ಯಶೋಧನಾ ಸಮಿತಿಯನ್ನು ರಚಿಸಲಾಗಿದೆ. ಸಮಿತಿ ಶೀಘ್ರದಲ್ಲೇ ವರದಿ ನೀಡಿದರೆ, ತಪ್ಪಿತಸ್ಥರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಸಾಧ್ಯವಾಗುತ್ತದೆ ಎಂದು ಹೇಳಿದ್ದಾರೆ. ಇದು ತಾಯಿ ಪಕ್ಷಕ್ಕೆ ದ್ರೋಹ ಮಾಡಿದಂತೆಯೇ ಎಂದು ಅಭಿಪ್ರಾಯಪಟ್ಟಿದ್ದಾರೆ.

ಸೇತುವೆ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ | ಶಾಸಕ ಬೆಲ್ದಾಳೆ ಹೇಳಿಕೆ

ಸುರಕ್ಷಿತ ಸಂಚಾರಕ್ಕೆ ಮೊದಲ ಆದ್ಯತೆ

ಬೀದರ್: ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದ ಬರೂರ ಗ್ರಾಮದ ಅಭಿವೃದ್ಧಿಗೆ ಮತ್ತೊಂದು ಮಹತ್ವದ ಹೆಜ್ಜೆಯಾಗಿ, ಚಿಂತಲಗೇರ ಕ್ರಾಸ್‌ನಿಂದ ಬರೂರ (ತೆಲಂಗಾಣ ಗಡಿವರೆಗೆ) ಸಂಪರ್ಕಿಸುವ ರಸ್ತೆಯ 4 ಕೋಟಿ ಅಂದಾಜು ವೆಚ್ಚದ ಬಾಕ್ಸ್ ಕಲ್ವರ್ಟ್ (ಸೇತುವೆ) ನಿರ್ಮಾಣ ಕಾಮಗಾರಿಗೆ ಇಂದು ಬೀದರ್ ದಕ್ಷಿಣ ಕ್ಷೇತ್ರದ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ ಅವರು ಗುದ್ದಲಿ ಪೂಜೆ ನೆರವೇರಿಸಿ ಚಾಲನೆ ನೀಡಿದರು.



ಕಳೆದ ಮಳೆಗಾಲದಲ್ಲಿ ಈ ಸ್ಥಳದಲ್ಲಿ ಉಂಟಾದ ಪ್ರವಾಹದಿಂದ ರಸ್ತೆ ಸಂಪೂರ್ಣ ಮುಳುಗಡೆಯಾಗಿ, ಬರೂರ ಗ್ರಾಮದ ಪ್ರಭಾಕರ್ ಅವರು ದುರಂತವಾಗಿ ಮೃತಪಟ್ಟಿದ್ದರು. ಈ ದುರ್ಘಟನೆಯ ಬಳಿಕ ಸ್ಥಳೀಯರ ಬಹುಕಾಲದ ಬೇಡಿಕೆ ಹಾಗೂ ಸಾರ್ವಜನಿಕರ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಶಾಶ್ವತ ಪರಿಹಾರವಾಗಿ ಈ ಬಾಕ್ಸ್ ಕಲ್ವರ್ಟ್ ನಿರ್ಮಾಣಕ್ಕೆ ಸರ್ಕಾರದಿಂದ 4 ಕೋಟಿ ರೂ. ಅನುದಾನ ಮಂಜೂರಾಗಿದ್ದು, ಇದೀಗ ಕಾಮಗಾರಿಗೆ ಅಧಿಕೃತ ಚಾಲನೆ ನೀಡಲಾಗಿದೆ.

ಮಾತನಾಡಿದ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ ಅವರು, 'ಸಾರ್ವಜನಿಕರ ಜೀವ ರಕ್ಷಣೆ ಮತ್ತು ಸುರಕ್ಷಿತ ಸಂಚಾರ ನಮ್ಮ ಮೊದಲ ಆದ್ಯತೆಯಾಗಿದೆ. ಮಳೆಗಾಲದಲ್ಲಿ ಜನರು ಯಾವುದೇ ತೊಂದರೆ ಅನುಭವಿಸದಂತೆ ಗುಣಮಟ್ಟದ ಮೂಲಸೌಕರ್ಯಗಳನ್ನು ನಿರ್ಮಿಸುವ ಮೂಲಕ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಈ ಕಾಮಗಾರಿ ಪೂರ್ಣಗೊಂಡ ಬಳಿಕ ಬರೂರ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಜನರಿಗೆ ವರ್ಷಪೂರ್ತಿ ಸುರಕ್ಷಿತ ಹಾಗೂ ಸುಗಮ ಸಂಚಾರಕ್ಕೆ ಅನುಕೂಲವಾಗಲಿದೆ ಎಂದು ಹೇಳಿದರು.

ಮಾಜಿ ಜಿಪಂ ಸದಸ್ಯರಾದ ಬಾಬುರಾವ ಮಲ್ಕಾಪುರ ಮಾತನಾಡಿ, ಬರೂರ ಗ್ರಾಮದ ಜನರು ಸುಮಾರು ನಾಲ್ಕು ದಶಕಗಳಿಂದ ಈ ಸೇತುವೆ ನಿರ್ಮಾಣಕ್ಕಾಗಿ ನಿರಂತರವಾಗಿ ಹೋರಾಟ ನಡೆಸುತ್ತಿದ್ದರು. ಮಳೆಗಾಲದಲ್ಲಿ ಸಂಪರ್ಕ ಕಡಿತಗೊಂಡು ವಿದ್ಯಾರ್ಥಿಗಳು, ರೈತರು ಹಾಗೂ ಸಾರ್ವಜನಿಕರು ತೀವ್ರ ಸಂಕಷ್ಟ ಅನುಭವಿಸುತ್ತಿದ್ದರು. ಇದೀಗ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಅವರ ವಿಶೇಷ ಪ್ರಯತ್ನದಿಂದ 4 ಕೋಟಿ ವೆಚ್ಚದ ಬಾಕ್ಸ್ ಕಲ್ವರ್ಟ್ ಕಾಮಗಾರಿಗೆ ಚಾಲನೆ ದೊರೆತಿರುವುದು ಈ ಭಾಗದ ಜನರ ಬಹುಕಾಲದ ಕನಸನ್ನು ನನಸಾಗಿಸಿದೆ. ಕಾಮಗಾರಿ ಶೀಘ್ರ ಪೂರ್ಣಗೊಂಡು ಜನರ ಸೇವೆಗೆ ಸಮರ್ಪಣೆಯಾಗಲಿ ಎಂಬುದು ನಮ್ಮ ಆಶಯ ಎಂದು ಹೇಳಿದರು.

> **ಸುಮಾರು 40 ವರ್ಷಗಳಿಂದ ಈ ಸ್ಥಳದಲ್ಲಿ ಸೇತುವೆ ನಿರ್ಮಾಣವಾಗಬೇಕು ಎಂಬುದು ನಮ್ಮ ಗ್ರಾಮದ ಜನರ ಬಹುಕಾಲದ ಕನಸಾಗಿತ್ತು. ಪ್ರತೀ ಮಳೆಗಾಲದಲ್ಲೂ ಸಂಪರ್ಕ ಕಡಿತಗೊಂಡು ಸಾಕಷ್ಟು ತೊಂದರೆ ಅನುಭವಿಸುತ್ತಿದ್ದೆವು. ಇಂದು ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ ಅವರ ಪ್ರಯತ್ನದಿಂದ 4 ಕೋಟಿ ವೆಚ್ಚದ ಸೇತುವೆ ಕಾಮಗಾರಿಗೆ ಚಾಲನೆ ದೊರೆತಿರುವುದು ನಮಗೆ ಅತ್ಯಂತ ಸಂತಸದ ವಿಷಯವಾಗಿದೆ.**
> ■ **ದಯಾನಂದ ರೆಡ್ಡಿ, ಬರೂರ ಗ್ರಾಮಸ್ಥ**

ಬಿಜೆಪಿ ಮಂಡಲ ಅಧ್ಯಕ್ಷ ಗುರುನಾಥ ರಾಜಗೀರ, ಮುಖಂಡರಾದ ಸುರೇಶ್ ಮಾಶೆಟ್ಟಿ, ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯರಾದ ಬಾಬುರಾವ ಮಲ್ಕಾಪುರ, ಚಂದ್ರಯ್ಯ ಸ್ವಾಮಿ, ಅನೀಲ ಪನ್ನಾಳೆ, ದಯಾನಂದ್ ರೆಡ್ಡಿ, ಮಲ್ಲಿಕಾರ್ಜುನ ಮೂಲಗಿ, ಗೋಪಾಲ ರೆಡ್ಡಿ, ಬಸವರಾಜ ಪವಾರ್, ಶಿವಕಾಂತ ಶೇಖಾಪುರ, ರಾಜಶೇಖರ್ ರೆಡ್ಡಿ, ಇಂದ್ರಾ ರೆಡ್ಡಿ, ನರಸಿಂಹಲು, ಬಲವಂತ್ ರೆಡ್ಡಿ, ಜೈಪಾಲ್ ರೆಡ್ಡಿ, ಸಂತೋಷ್, ರಮೇಶ್, ನರೇಶ್, ಶ್ರೀನಿವಾಸ್ ರೆಡ್ಡಿ, ಕೃಷ್ಣ, ಟಿ. ಜೈಪಾಲ್ ರೆಡ್ಡಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಬಪ್ಪೂರು ಮಾರ್ಗದ ಶಿಥಿಲ ಸೇತುವೆಗೆ ಮುಕ್ತಿ ಯಾವಾಗ?

ಸಿಂಧನೂರು: ನಗರದ ಬಪ್ಪೂರು ಮಾರ್ಗದ ರಸ್ತೆಯಲ್ಲಿ ಹಳ್ಳಕ್ಕೆ ನಿರ್ಮಿಸಿರುವ ಬ್ರಿಡ್ಜ್ ಶಿಥಿಲಗೊಂಡಿದ್ದು, ಈ ಮಾರ್ಗದಲ್ಲಿ ವಾಹನ ಸಂಚರಿಸುವವರಿಗೆ ಅಪಾಯ ಭೀತಿ ಕಾಡುತ್ತಿದೆ.

ಬ್ರಿಡ್ಜ್‌ಗೆ ತಡೆಗೋಡೆ ಇಲ್ಲ, ಸಿಮೆಂಟ್ ಬಾಂಡುಗಲ್ಲುಗಳನ್ನು ಹಾಕಿದ್ದು ಕಿತ್ತಿ ಹೋಗಿವೆ. ರಾತ್ರಿ ವೇಳೆ ಎದುರು-ಬದುರು ವಾಹನಗಳು ಚಲಿಸುವ ವೇಳೆ ಅವಘಡ ಸಂಭವಿಸುವ ಸಾಧ್ಯತೆ ಇದೆ ಎಂದು ಸಾರ್ವಜನಿಕರು ಹೇಳುತ್ತಾರೆ.

ಈ ಮಾರ್ಗದಲ್ಲಿ ದಿನವೂ ಕೃಷಿ ಉತ್ಪನ್ನಗಳನ್ನು ಸಾಗಿಸುವ ಸರಕು ಲಾರಿಗಳು, ಬೆಳಿಗ್ಗೆ ಮತ್ತು ಸಂಜೆ ಶಾಲಾ-ಕಾಲೇಜು ವಾಹನಗಳು ಹಾಗೂ ಸಾರಿಗೆ ಬಸ್ಸುಗಳು ಸಂಚರಿಸುತ್ತವೆ. ಹಳ್ಳದ ಬ್ರಿಡ್ಜ್ ಶಿಥಿಲಗೊಂಡಿರುವ ಕಾರಣ ಆತಂಕದಿಂದ ವಾಹನ ಚಲಾಯಿಸುತ್ತೇವೆ ಎಂದು ಚಾಲಕರೊಬ್ಬರು ತಿಳಿಸಿದ್ದಾರೆ.

ಗೀತಾಕ್ಯಾಂಪ್, ತಿಡಿಗೋಳ, ನಿಡಿಗೋಳ, ಕುರಕುಂದಾ, ಬೊಮ್ಮನಾಳ, ಬಪ್ಪೂರು, ಗುಂಡಾ, ಮಾಟೂರು, ಉಪ್ಪಲದೊಡ್ಡಿ, ಕನಿಗನಹಾಳ, ಗುಡದಮ್ಮನಕ್ಯಾಂಪ್, ದೇವರಗುಡಿ ಸೇರಿದಂತೆ ಹತ್ತಾರು ಕ್ಯಾಂಪ್ ಹಾಗೂ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆಯಾಗಿದ್ದು, ಅಲ್ಲದೇ ಮಸ್ಕಿ ತಾಲೂಕಿನ ಹಲವು ಗ್ರಾಮಗಳಿಗೂ ಸಂಪರ್ಕ ಕೊಂಡಿಯಾಗಿದೆ.

ಈ ಮಾರ್ಗದಲ್ಲಿರುವ ಬಹುತೇಕ ಗ್ರಾಮಗಳು ನೀರಾವರಿ ಪ್ರದೇಶ ಹೊಂದಿದ್ದು, ಮುಂಗಾರು ಮತ್ತು ಹಿಂಗಾರು ಹಂಗಾಮಿನಲ್ಲಿ ಬೃಹತ್ ಲಾರಿಗಳು ಭತ್ತದ ಲೋಡುಗಳನ್ನು ಹೊತ್ತು ಸಾಗುವುದು ಸಾಮಾನ್ಯವಾಗಿದೆ. ಹಾಗಾಗಿ ಶಿಥಿಲಗೊಂಡ ಸೇತುವೆ ಮೇಲೆ ಯಾವುದೇ ರೀತಿಯ ಅವಘಡ ಸಂಭವಿಸುವ ಮುಂಚೆ ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಸೇತುವೆಯ ಸಾಮರ್ಥ್ಯವನ್ನು ಪರೀಕ್ಷಿಸುವ ಮೂಲಕ ಹೊಸ ಸೇತುವೆ ನಿರ್ಮಾಣಕ್ಕೆ ಪ್ರಸ್ತಾವನೆ ಕಳುಹಿಸಬೇಕೆಂಬುದು ಈ ಮಾರ್ಗದ ಗ್ರಾಮಗಳ ಸಾರ್ವಜನಿಕರ ಒತ್ತಾಯವಾಗಿದೆ.



ಕಲಬುರಗಿಯಲ್ಲಿ ಭಾರೀ ಮಾದಕ ವಸ್ತು ಜಪ್ತಿ

- 20.08 ಲಕ್ಷ ಮೌಲ್ಯದ ಗಾಂಜಾ
- ಎಂಡಿಎಂಎ, ನಿಷೇಧಿತ ಮಾತ್ರೆ ವಶ

ಕಲಬುರಗಿ: ನಗರ ಪೊಲೀಸ್ ಆಯುಕ್ತಾಲಯದ ಅಧೀನದ ಪೊಲೀಸರು ನಡೆಸಿದ ವಿಶೇಷ ಕಾರ್ಯಾಚರಣೆಯಲ್ಲಿ 20.08ಲಕ್ಷ ಮೌಲ್ಯದ ವಿವಿಧ ಮಾದಕ ವಸ್ತುಗಳನ್ನು ವಶಪಡಿಸಿಕೊಂಡಿದ್ದು, ಈ ಸಂಬಂಧ 22 ಪ್ರಕರಣಗಳಲ್ಲಿ ಜಪ್ತಿ ಕಾರ್ಯಾಚರಣೆ ನಡೆಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ.ತಿಳಿಸಿದರು.

ಈ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು, ಪೊಲೀಸ್ ಆಯುಕ್ತಾಲಯದ ವ್ಯಾಪ್ತಿಯಲ್ಲಿ ನಡೆದ ದಾಳಿಗಳ ವೇಳೆ 17 ಕೆಜಿ 634 ಗ್ರಾಂ ಗಾಂಜಾ (ಅಂದಾಜು ಮೌಲ್ಯ 17.34 ಲಕ್ಷ), Netrazepam NRX Schedule-H ನಿಷೇಧಿತ 14,970 ಮಾತ್ರೆಗಳು ಹಾಗೂ 18.73 ಗ್ರಾಂ ಎಂಡಿಎಂಎ ಡ್ರಗ್ (ಅಂದಾಜು ಮೌಲ್ಯ 2.74 ಲಕ್ಷ) ಸೇರಿದಂತೆ ಒಟ್ಟು 20,08,300 ಮೌಲ್ಯದ ಮಾದಕ ವಸ್ತುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ ಎಂದರು.

ಈ ಕಾರ್ಯಾಚರಣೆಯನ್ನು ಕಲಬುರಗಿ ನಗರ ಪೊಲೀಸ್ ಆಯುಕ್ತಾಲಯದ ಅಧಿಕಾರಿಗಳು ಹಾಗೂ ಸಿಬ್ಬಂದಿ ಜಂಟಿಯಾಗಿ ನಡೆಸಿದ್ದು, ಮಾದಕ ವಸ್ತುಗಳ ಮಾರಾಟ ಮತ್ತು ಸಾಗಾಟದ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ. ಜಪ್ತಿ ಮಾಡಲಾದ ಮಾದಕ ವಸ್ತುಗಳನ್ನು ಮಂಗಳವಾರ ನಗರದ ಸಿಮೆಂಟ್ ಫ್ಯಾಕ್ಟರಿಯ ಭಟ್ಟಿಯಲ್ಲಿ ಸುಟ್ಟು ನಾಶಪಡಿಸಲಾಗಿದೆ ಎಂದರು.

ಮಾದಕ ವಸ್ತುಗಳ ನಿರ್ಮೂಲನೆಗಾಗಿ ಪೊಲೀಸ್ ಇಲಾಖೆ ನಿರಂತರ ಕಾರ್ಯಾಚರಣೆ ನಡೆಸುತ್ತಿದ್ದು, ಸಾರ್ವಜನಿಕರು ಕೂಡ ಇಂತಹ ಅಕ್ರಮ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡುವಂತೆ ಪೊಲೀಸ್ ಅಧಿಕಾರಿಗಳು ಪತ್ರಿಕಾ ಪ್ರಕಟಣೆ ಮೂಲಕ ಮನವಿ ಮಾಡಿದ್ದಾರೆ.



ಕೌಶಲ್ಯಯುತ ಮಾನವ ಸಂಪನ್ಮೂಲಕ್ಕೆ ಹೆಚ್ಚು ಬೇಡಿಕೆ

ಕುಷ್ಟಗಿ: ಇಂದಿನ ಕೈಗಾರಿಕಾ ಕ್ಷೇತ್ರದಲ್ಲಿ ಕೌಶಲ್ಯಯುತ ಮಾನವ ಸಂಪನ್ಮೂಲಕ್ಕೆ ಹೆಚ್ಚಿನ ಬೇಡಿಕೆ ಇದ್ದು, ಐಟಿಐ ವಿದ್ಯಾರ್ಥಿಗಳು ತಾಂತ್ರಿಕ ಶಿಕ್ಷಣದ ಜೊತೆಗೆ ಅಪ್ರೆಂಟಿಸ್‌ಶಿಪ್ ತರಬೇತಿಯನ್ನು ಪೂರ್ಣಗೊಳಿಸಿದರೆ ಉತ್ತಮ ಉದ್ಯೋಗಾವಕಾಶಗಳು ದೊರೆಯುತ್ತವೆ ಎಂದು ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ಉಪನಿರ್ದೇಶಕ ಹಾಗೂ ಪ್ರಾಚಾರ್ಯರು ಗ್ರೇಡ್-1 ಗವಿಶಂಕರ್ ಕೆ. ಅಭಿಪ್ರಾಯಪಟ್ಟರು.



ಪಟ್ಟಣದ ಕುಷ್ಟಗಿಯ ಸಜ್ಜಲ ಕೈಗಾರಿಕಾ ತರಬೇತಿ ಸಂಸ್ಥೆ ಹನಮನಾಳ ಸರ್.ಎಂ.ವಿಶ್ವೇಶ್ವರಯ್ಯ ಐಟಿಐ ಕಾಲೇಜ್ ಸಂಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಉಪನಿರ್ದೇಶಕರು (ಪ್ರಾಚಾರ್ಯರು ಗ್ರೇಡ್-1) ಹುದ್ದೆಗೆ ಪದೋನ್ನತಿ ಹೊಂದಿದ ಪ್ರಯುಕ್ತ ಸನ್ಮಾನ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು, ಐಟಿಐ ಶಿಕ್ಷಣವು ವಿದ್ಯಾರ್ಥಿಗಳಿಗೆ ಕೇವಲ ಪಠ್ಯಾಧಾರಿತ ಜ್ಞಾನವನ್ನಷ್ಟೇ ನೀಡದೆ, ವಿವಿಧ ವೃತ್ತಿಗಳಲ್ಲಿ ಅಗತ್ಯವಿರುವ ತಾಂತ್ರಿಕ ಕೌಶಲ್ಯಗಳನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಎಲೆಕ್ಟ್ರಿಷಿಯನ್, ಫಿಟ್ಟರ್ ಸೇರಿದಂತೆ ವಿವಿಧ ಟ್ರೇಡ್‌ಗಳಲ್ಲಿ ತರಬೇತಿ ಪಡೆಯುವ ವಿದ್ಯಾರ್ಥಿಗಳು ಉದ್ಯಮ ಕ್ಷೇತ್ರದ ಅಗತ್ಯಗಳಿಗೆ ತಕ್ಕಂತೆ ಸಿದ್ಧರಾಗುತ್ತಾರೆ ಎಂದರು.

ಪ್ರಸ್ತುತ ಅನೇಕ ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳು ಅನುಭವ ಹೊಂದಿರುವ ಅಭ್ಯರ್ಥಿಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಿವೆ. ಅಪ್ರೆಂಟಿಸ್‌ಶಿಪ್ ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ಸಂಸ್ಥೆಗಳಲ್ಲಿಯೇ ನೇರ ನೇಮಕಾತಿ ಅವಕಾಶಗಳು ಹೆಚ್ಚಾಗಿದ್ದು, ಉತ್ತಮ ವೇತನದ ಉದ್ಯೋಗಗಳನ್ನು ಪಡೆಯಲು ಸಹಕಾರಿಯಾಗುತ್ತಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕೌಶಲ್ಯಾಭಿವೃದ್ಧಿಗೆ ಹೆಚ್ಚಿನ ಒತ್ತು ನೀಡುತ್ತಿದ್ದು, ರಾಷ್ಟ್ರೀಯ ಅಪ್ರೆಂಟಿಸ್‌ಶಿಪ್ ಯೋಜನೆಯ ಮೂಲಕ ಸಾವಿರಾರು ಯುವಕರಿಗೆ ತರಬೇತಿ ಮತ್ತು ಉದ್ಯೋಗದ ಅವಕಾಶಗಳನ್ನು ಕಲ್ಪಿಸುತ್ತಿವೆ. ಈ ಸೌಲಭ್ಯಗಳನ್ನು ವಿದ್ಯಾರ್ಥಿಗಳು ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದು ಸಲಹೆ ನೀಡಲಾಗಿದೆ ಎಂದರು.

ಸಜ್ಜಲ ಐಟಿಐ ಕಾಲೇಜಿನ ಪ್ರಾಚಾರ್ಯ ಶ್ರೀಕಾಂತ ಶೇಖರಯ್ಯ ಸರಗಣಾಚಾರಿ ಮಾತನಾಡಿ, ಐಟಿಐ ಶಿಕ್ಷಣವು ಕೇವಲ ಪಠ್ಯಾಧಾರಿತವಾಗಿರದೆ, ಕಾರ್ಯಾಗಾರಗಳಲ್ಲಿ (ವರ್ಕ್‌ಶಾಪ್) ನಡೆಸುವ ಪ್ರಾಯೋಗಿಕ ತರಬೇತಿಯ ಮೇಲೆ ಹೆಚ್ಚು ಅವಲಂಬಿತವಾಗಿದೆ. ವಿದ್ಯಾರ್ಥಿಗಳು ಪ್ರತಿದಿನ ತರಗತಿ ಹಾಗೂ ಪ್ರಾಯೋಗಿಕ ಅವಧಿಗಳಲ್ಲಿ ಭಾಗವಹಿಸುವುದರಿಂದ ಯಂತ್ರೋಪಕರಣಗಳ ಬಳಕೆ, ತಾಂತ್ರಿಕ ವಿಧಾನಗಳು, ಸುರಕ್ಷತಾ ಕ್ರಮಗಳು ಹಾಗೂ ಉದ್ಯೋಗ ಕ್ಷೇತ್ರಕ್ಕೆ ಬೇಕಾದ ಕೌಶಲ್ಯಗಳನ್ನು ಸಮರ್ಪಕವಾಗಿ ಕಲಿಯಲು ಸಾಧ್ಯವಾಗುತ್ತದೆ ಎಂದರು.

ಹನಮನಾಳ ಸರ್. ಎಂ.ವಿಶ್ವೇಶ್ವರಯ್ಯ ಐಟಿಐ ಕಾಲೇಜಿನ ಪ್ರಾಚಾರ್ಯ ವೀರಪ್ಪ ಸಂಗಮದ, ದ್ಯಾಮಣ್ಣ ನಾಯಕ, ರಂಗಪ್ಪ, ಪ್ರವೀಣ ಚಿಕ್ಕನವರ, ಈಶಪ್ಪ, ವೀರೇಶ ಸರಗಣಾಚಾರಿ ಸೇರಿದಂತೆ ಅನೇಕರು ಇದ್ದರು.

ಟಿಬಿ ಡ್ಯಾಂ ಗೇಟ್ ಲೋಕಾರ್ಪಣೆ ನಾಳೆ

ವಿಜಯನಗರ: ಜಲಸಂಪನ್ಮೂಲ ಇಲಾಖೆ ಹಾಗೂ ತುಂಗಭದ್ರಾ ಮಂಡಳಿಯ ಸಹಯೋಗದಲ್ಲಿ ಜೂ.25ರಂದು ಬೆಳಗ್ಗೆ 11ಗಂಟೆಗೆ ಕೊಪ್ಪಳ ಜಿಲ್ಲೆ ಮುನಿರಾಬಾದ್ ಸರ್ಕಾರಿ ಹೈಸ್ಕೂಲ್ ಮೈದಾನದಲ್ಲಿ ತುಂಗಭದ್ರಾ ಜಲಾಶಯಕ್ಕೆ ನೂತನವಾಗಿ ಬದಲಾಯಿಸಿರುವ 33 ಸ್ಟೀಲ್‌ವೇ ಗೇಟುಗಳ ಲೋಕಾರ್ಪಣೆ ಕಾರ್ಯಕ್ರಮ ಆಯೋಜಿಸಲಾಗಿದೆ.

ಕರ್ನಾಟಕ ಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ ಕಾರ್ಯಕ್ರಮವನ್ನು ಉದ್ಘಾಟಿಸುವರು. ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ, ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು, ತೆಲಂಗಾಣ ಮುಖ್ಯಮಂತ್ರಿ ಎ.ರೇವಂತ್ ರೆಡ್ಡಿ, ಕರ್ನಾಟಕದ ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್, ಆಂಧ್ರ ಪ್ರದೇಶ ಉಪ ಮುಖ್ಯಮಂತ್ರಿ ಕೆ.ಪವನ್ ಕಲ್ಯಾಣ್, ತೆಲಂಗಾಣ ಉಪ ಮುಖ್ಯಮಂತ್ರಿ ಮಲ್ಲುಭಟ್ಟಿ ವಿಕ್ರಮಾರ್ಕ, ಕೇಂದ್ರ ಜಲಶಕ್ತಿ ಹಾಗೂ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ, ರಾಜ ಭೂಷಣ ಚೌಧರಿ, ವಿಧಾನ ಪರಿಷತ್ ಸಭಾಪತಿ ಬಸವರಾಜ್ ಎಸ್.ಹೊರಟ್ಟಿ, ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆ ಸಚಿವ ರಾಮಲಿಂಗಾರೆಡ್ಡಿ, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಆಂಧ್ರಪ್ರದೇಶ, ತೆಲಂಗಾಣ ರಾಜ್ಯದ ಜಲಸಂಪನ್ಮೂಲ ಸಚಿವರು, ಕರ್ನಾಟಕದ ಮೂರು ಜಿಲ್ಲೆಗಳ ಶಾಸಕರು, ಸಂಸದರು, ಅಧಿಕಾರಿಗಳು ಪಾಲ್ಗೊಳ್ಳುವರು ಎಂದು ತಿಳಿಸಿದೆ.

ಉಚಿತ ಬಸ್‌ಪಾಸ್ ವಿತರಣೆ

ರಾಯಚೂರು: ರಾಯಚೂರು ಗ್ರಾಮೀಣ ಕ್ಷೇತ್ರದ ಶಾಸಕ ಬಸನಗೌಡ ದದ್ದಲ ವಿದ್ಯಾರ್ಥಿಗಳಿಗೆ ಸರ್ಕಾರ ನೀಡುವ ಉಚಿತ ಬಸ್ ಪಾಸ್ ವಿತರಣೆ ಮಾಡಿದರು.

ನಗರದ ಕೇಂದ್ರ ಬಸ್ ನಿಲ್ದಾಣದಲ್ಲಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ರಾಯಚೂರು ವಿಭಾಗ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಬಸ್‌ಪಾಸ್ ವಿತರಣೆ ಮಾಡಿದರು. ಈ ವೇಳೆ ಮಾತನಾಡಿ, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಮುಖ್ಯಮಂತ್ರಿಗಳಾಗಿ ಅಧಿಕಾರ ಸ್ವೀಕರಿಸಿದ ಸಂದರ್ಭದಲ್ಲಿ ಶಿಕ್ಷಣದ ಪ್ರಗತಿಗೆ ವಿಶೇಷವಾಗಿ ಬಡ ಹಾಗೂ ಗ್ರಾಮೀಣ ಭಾಗರದಲ್ಲಿ ರೈತಾಪಿ ವರ್ಗದ ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡುವ ಸಂಕಲ್ಪ ಮಾಡಿದ್ದರು. ಈ ವರ್ಗದ ಜನರಿಗೆ ಬಸ್‌ಪಾಸ್ ಪಡೆಯುವುದು. ಹೊರೆಯಾಗಬಾರದೆಂಬ ಉದ್ದೇಶದಿಂದ ಪ್ರಾಥಮಿಕ ಶಾಲೆಯಿಂದ ಹಿಡಿದು ಸ್ನಾತಕೋತ್ತರ ಶಿಕ್ಷಣದವರೆಗೂ ಉಚಿತ ಬಸ್ ಪಾಸ್‌ನ್ನು ನೀಡುವ ನಿರ್ಧಾರವನ್ನು ಮಾಡಿದ ಫಲವಾಗಿ ಸರ್ಕಾರ ಈ ಉಚಿತ ಬಸ್‌ಪಾಸನ್ನು ನೀಡುತ್ತಿದೆ ಎಂದರು. ವಿದ್ಯಾರ್ಥಿಗಳು ಸರ್ಕಾರ ನೀಡುವ ಉಚಿತ ಬಸ್‌ಪಾಸ್‌ನ್ನು ಪಡೆದುಕೊಂಡು ಉತ್ತಮವಾಗಿ ಅಧ್ಯಯನ ಮಾಡಿ ಉತ್ತಮ ಫಲಿತಾಂಶವನ್ನು ಪಡೆದುಕೊಂಡು ವಿವಿಧ ಕ್ಷೇತ್ರಗಳಲ್ಲಿ ಕೆಲಸವನ್ನು ಪಡೆದುಕೊಳ್ಳುವ ಮೂಲಕ ರಾಜ್ಯಕ್ಕೆ ಹಾಗೂ ದೇಶಕ್ಕೆ ಉತ್ತಮ ಆಸ್ತಿಯಾಗಬೇಕು ಎಂದರು. ಈ ವೇಳೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಶು ಗಿರಿ, ಕೆಕೆಆರ್‌ಟಿಸಿಯ ವಿಭಾಗೀಯ ನಿಯಂತ್ರಣಾಧಿಕಾರಿ ಇಮಾಮಕಾಸೀಂ ಕಂದಗಲ್, ಡಿಎಸ್‌ಪಿ ಶಾಂತವೀರ, ಡಿಟಿಒ ಚಂದ್ರಶೇಖರ ಸೇರಿದಂತೆ ಇತರರಿದ್ದರು.



ಆಮೆಗತಿಯಲ್ಲಿ ಅಮೃತ ಯೋಜನೆ: ಆಕ್ರೋಶ



ಮಸ್ಕಿ: ಪಟ್ಟಣದ 23 ವಾರ್ಡ್‌ಗಳ ಜನರಿಗೆ ನಿರಂತರ ಮತ್ತು ಶುದ್ಧ ಕುಡಿಯುವ ನೀರನ್ನು ಒದಗಿಸುವ ಉದ್ದೇಶದಿಂದ ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ಆರಂಭಿಸಲಾದ ಅಮೃತ 2.0 ಯೋಜನೆಯು ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಪೈಪ್‌ಲೈನ್ ಅಳವಡಿಕೆ ಕಾಮಗಾರಿಯು ಅರೆಬರೆಯಾಗಿಯೇ ಉಳಿದಿದ್ದು, ಸಾರ್ವಜನಿಕರು ನಿತ್ಯ ನರಕಯಾತನೆ ಅನುಭವಿಸುವಂತಾಗಿದೆ ಎಂದು ಕರವೇ ತಾಲೂಕು ಅಧ್ಯಕ್ಷ ದುರ್ಗರಾಜ ವಟಗಲ್ ಅವರು ಆರೋಪಿಸಿದರು.

ಪಟ್ಟಣದ ಪತ್ರಿಕೆ ಭವನದಲ್ಲಿ ನಡೆದ ಸುದ್ದಿ ಗೋಷ್ಠಿ ಯಲ್ಲಿ ಮಾತನಾಡಿದ ಅವರು ವಿವಿಧ ವಾರ್ಡ್‌ಗಳ ಪೈಪ್‌ಲೈನ್ ಅಳವಡಿಸಲು ಗುಂಡಿಯನ್ನು ತೋಡಲಾಗಿದೆ. ಆದರೆ, ಪೈಪ್ ಹಾಕಿದ ನಂತರ ರಸ್ತೆಯನ್ನು ಸಮರ್ಪಕವಾಗಿ ಮುಚ್ಚದೇ ಹಾಗೆಯೇ ಬಿಡಲಾಗಿದೆ. ಕೋಟಿ ವೆಚ್ಚದ ಯೋಜನೆ ಇದು. ಆದರೆ ಕೆಲಸ ಅತ್ಯಂತ ನಿಧಾನವಾಗಿ ಸಾಗುತ್ತಿದೆ. ಇದರಿಂದಾಗಿ ಸಾರ್ವಜನಿಕರಿಗೆ ಬಹಳ ಸಮಸ್ಯೆಯಾಗಿದೆ. ಆದ್ದರಿಂದ ಸಂಬಂಧಿಸಿದ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಹಂತ ಹಂತವಾಗಿ ಹೋರಾಟ ಮಾಡಬೇಕು ಆಗುತ್ತದೆ ಎಂದು ಗುಡುಗಿದರು. ಅಯ್ಯಪ್ಪ, ವೀರಭದ್ರ, ಕೋಠಾರಿ, ನೂರ್ ಮಹಮ್ಮದ್, ಮರಿಯಪ್ಪ ಇದ್ದರು.

ಅರ್ಹರನ್ನು ಮತದಾರರ ಪಟ್ಟಿಯಿಂದ ಕೈಬಿಡಬೇಡಿ

ಕುಷ್ಟಗಿ: ಪಟ್ಟಣದ ಪಿಸಿಎಚ್ ಕಲ್ಯಾಣ ಮಂಟಪದ ಸಭಾಂಗಣದಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ ಎಸ್‌ಐಆರ್ ಕುರಿತು ಬಿಎಲ್‌ಎ-2ಗಳಿಗೆ ತರಬೇತಿ ಕಾರ್ಯಕ್ರಮ ನಡೆಯಿತು.



ಮಾಜಿ ಸಚಿವ ಶಿವರಾಜ ತಂಗಡಗಿ ಮಾತನಾಡಿ, ಕಾಂಗ್ರೆಸ್ ಪಕ್ಷದ ಬಿಎಲ್‌ಎ-2 ಎಚ್ಚರಿಕೆಯಿಂದ ಕೆಲಸ ಮಾಡಬೇಕು. ಬಿಎಲ್‌ಎ-2ಗಳು ಸಂಪೂರ್ಣ ಮಾಹಿತಿ ಹೊಂದಿರಬೇಕು. ಪ್ರತಿಯೊಬ್ಬ ಮತದಾರರ ಹೆಸರು ಪಟ್ಟಿಯಲ್ಲಿ ಉಳಿಯುವಂತೆ ನೋಡಿಕೊಳ್ಳುವುದು ಜವಾಬ್ದಾರಿಯಾಗಿದೆ ಎಂದರು.

ಎಸ್‌ಐಆರ್ ಪ್ರಕ್ರಿಯೆಯ ಪರಿಣಾಮವಾಗಿ ಪಶ್ಚಿಮ ಬಂಗಾಳ ಹಾಗೂ ತಮಿಳುನಾಡು ಸೇರಿದಂತೆ ಇತರೆ ರಾಜ್ಯಗಳು ಸೋಲು ಕಂಡಿವೆ ಎಂದ ಅವರು ಲೋಕಸಭೆ ಚುನಾವಣೆಯಲ್ಲೂ ಕಾಂಗ್ರೆಸ್ ಪಕ್ಷಕ್ಕೆ ಆದ ಹಿನ್ನಡೆಗೆ ಎಸ್‌ಐಆರ್ ಕಾರಣವಾಗಿದೆ ಎಂದರು.

ಬಿಜೆಪಿ ಹಾಗೂ ಜೆಡಿಎಸ್ ಹೊರತುಪಡಿಸಿ ಉಳಿದ ರಾಜಕೀಯ ಪಕ್ಷಗಳು ಎಸ್‌ಐಆರ್ ಕುರಿತು ಜಾಗೃತಿ ಮೂಡಿಸುತ್ತಿವೆ ಎಂದು ಹೇಳಿದರು.

ಮಾಜಿ ಸಚಿವ ಅಮರೇಗೌಡ ಬಯ್ಯಾಪುರ ಮಾತನಾಡಿ, ಚುನಾವಣಾ ಪ್ರಕ್ರಿಯೆಯಲ್ಲಿ ಬಿಎಲ್‌ಎ-2ಗಳ ಪಾತ್ರ ಅತ್ಯಂತ ನಿರ್ಣಾಯಕವಾಗಿದೆ ಚುನಾವಣಾ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಮತದಾರರ ಪಟ್ಟಿಯಲ್ಲಿನ ಪ್ರತಿಯೊಂದು ಬದಲಾವಣೆಯನ್ನು ಪರಿಶೀಲಿಸಬೇಕು. ನೈಜ ಮತದಾರರ ಹೆಸರು ಕೈಬಿಡದಂತೆ ಹಾಗೂ ನಕಲಿ ಹೆಸರು ಸೇರ್ಪಡೆಯಾಗದಂತೆ ಜಾಗ್ರತೆ ವಹಿಸಬೇಕು ಎಂದು ಸಲಹೆ ನೀಡಿದರು.

ಮುಂದಿನ ದಿನಗಳಲ್ಲಿ ಹೋಬಳಿ ಮಟ್ಟದಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಕಾಂಗ್ರೆಸ್ ಪಕ್ಷದ ವಕ್ತಾರೆ ಶೈಲಜಾ ಹಿರೇಮಠ, ತರಬೇತಿದಾರ ಗಿರೀಶಕುಮಾರ ಹಾಗೂ ಪ್ರವೀಣ್ ಕುಮಾರ್ ಅವರು ಬಿಎಲ್‌ಎ-2ಗಳು ಪಾಲಿಸಬೇಕಾದ ಕ್ರಮ ಕುರಿತು ತರಬೇತಿ ನೀಡಿದರು.

ಪಕ್ಷದ ಮುಖಂಡರಾದ ಸೋಮಶೇಖರ ವೈಜಾಪೂರು, ಶೇಖರಗೌಡ ಮಾಲಿಪಾಟೀಲ, ಹ್ಯಾರಿಸ್, ರಾಕೇಶ ಕುಮಾರ, ಮೈನೂದ್ದಿನ್ ಮುಲ್ಲಾ, ಫಾರೂಕ ಡಾಲಾಯತ್, ಶಕುಂತಲಾ ಹಿರೇಮಠ, ಶಿವಶಂಕರಗೌಡ ಕಡೂರು, ದೊಡ್ಡಬಸವ ಬಯ್ಯಾಪೂರ, ಲಾಡ್ಲೇಮಷಾಕ ದೋಟಿಹಾಳ, ಹನುಮೇಶ ಗುಮಗೇರಿ, ಕರಿಸಿದ್ದಪ್ಪ ಪಟ್ಟಣಶೆಟ್ಟಿ, ವಿರೇಶ ಕಮ್ಮಾರ, ವೆಂಕಟೇಶ ಚವ್ಹಾಣ ಸೇರಿದಂತೆ ಬ್ಲಾಕ್ ಸಮಿತಿ ಅಧ್ಯಕ್ಷರು, ಯುಥ್ ಕಾಂಗ್ರೆಸ್ ಕಮಿಟಿಯ ಪದಾಧಿಕಾರಿಗಳು, ನೂರಾರು ಜನ ಬಿಎಲ್‌ಎ2 ಏಜೇಂಟರು ಇದ್ದರು.

ಜೇವರ್ಗಿಯಲ್ಲಿ ಬಿಜೆಪಿ ಗೆಲುವು ನಿಶ್ಚಿತ: ರದ್ದೇವಾಡಗಿ

ಕಲಬುರಗಿ: ಮುಂಬರುವ 2028ರ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯ ಜೇವರ್ಗಿ ಕ್ಷೇತ್ರದಲ್ಲಿ ಬಿಜೆಪಿ ಪಕ್ಷದ ಗೆಲುವು ನಿಶ್ಚಿತ ಎಂದು ಬಿಜೆಪಿ ಮುಖಂಡ ಶಿವರಾಜ ಪಾಟೀಲ ರದ್ದೇವಾಡಗಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.



ಪಟ್ಟಣದ ಮಹಿಬೂಬ್ ಫಂಕ್ಷನ್ ಹಾಲ್‌ನಲ್ಲಿ ಬಿಜೆಪಿ ಮಂಡಲದ ವತಿಯಿಂದ ಆಯೋಜಿಸಲಾಗಿದ್ದ 'ಎಸ್‌ಐಆರ್' ವಿಶೇಷ ಸಭೆಯಲ್ಲಿ ಅವರು ಮಾತನಾಡಿ, ನಾವು ಯಾರನ್ನೋ ನೋಡಿ ರಾಜಕಾರಣ ಮಾಡುವುದನ್ನು ಕಲಿತಿಲ್ಲ. ನಮ್ಮ ತಾತ, ವಿಧಾನ ಪರಿಷತ್ ಮಾಜಿ ಸದಸ್ಯ ಬಸವಂತರಾಯಗೌಡ ಪಾಟೀಲ ಅವರ ಗರಡಿಯಲ್ಲಿ ಬೆಳೆದವರು. ನಾವು ಹುಟ್ಟಿನಿಂದಲೇ ರಾಜಕಾರಣವನ್ನು ಮೈಗೂಡಿಸಿಕೊಂಡು ಬಂದಿದ್ದೇವೆ. ಮುಂಬರುವ ದಿನಗಳಲ್ಲಿ ಕ್ಷೇತ್ರದಲ್ಲಿ ಬಿಜೆಪಿ ಪಕ್ಷವನ್ನು ಮತ್ತಷ್ಟು ಸಂಘಟಿಸಿ, ಬಲವರ್ಧನೆಗೆ ಪ್ರಾಮಾಣಿಕವಾಗಿ ಶ್ರಮಿಸಲಾಗುವುದು ಎಂದರು.

ಎಸ್‌ಐಆರ್ ಪ್ರಕ್ರಿಯೆಯ ಮಹತ್ವವನ್ನು ವಿವರಿಸಿದ ಅವರು, ಮತಪಟ್ಟಿ ಶುದ್ಧೀಕರಣ ಮಾಡುವುದು ಅತ್ಯಂತ ಪ್ರಮುಖ ಪ್ರಕ್ರಿಯೆಯಾಗಿದೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಶಕ್ತಿ ತುಂಬುವ ಹಾಗೂ ಸಂವಿಧಾನದ ಆಶಯಗಳನ್ನು ಮತ್ತಷ್ಟು ಗಟ್ಟಿಗೊಳಿಸುವ ಮಹತ್ತರ ಅಭಿಯಾನವಾಗಿದೆ ಎಂದು ತಿಳಿಸಿದರು.

ಪಾರದರ್ಶಕ ಚುನಾವಣೆಗೆ ಎಸ್‌ಐಆರ್ ಅಗತ: ಬಳಿಕ ಎಸ್‌ಐಆರ್ ತಾಲೂಕು ಉಸ್ತುವಾರಿ ಸಂಜಯ ಮಿಸ್ಕಿನ್ ಮಾತನಾಡಿ, ಪ್ರಜಾಪ್ರಭುತ್ವ ವ್ಯವಸ್ಥೆಗೆ ಮತದಾರರ ಪಟ್ಟಿಯೇ ಆಧಾರ ಸ್ತಂಭವಾಗಿದೆ. ಈ ಪಟ್ಟಿಯಲ್ಲಿ ದೋಷಗಳು, ನಕಲಿ ಹೆಸರುಗಳು, ಡಬಲ್ ನೋಂದಣಿ ಹಾಗೂ ಅನರ್ಹರ ಹೆಸರುಗಳಿದ್ದರೆ, ಚುನಾವಣೆಯ ಪಾರದರ್ಶಕತೆ ಮತ್ತು ನೈತಿಕತೆಯ ಮೇಲೆ ಪ್ರಶ್ನೆಗಳು ಮೂಡುತ್ತವೆ. ಹಾಗಾಗಿ, ದೋಷಮುಕ್ತ ಮತದಾರರ ಪಟ್ಟಿ ತಯಾರಿಕೆಗೆ ಎಸ್‌ಐಆರ್ ಪ್ರಕ್ರಿಯೆ ಅತ್ಯಗತ್ಯ ಎಂದರು.

ಬಿಜೆಪಿ ಮುಖಂಡರಾದ ಮಲ್ಲಿನಾಥಗೌಡ ಯಲಗೋಡ, ಶೋಭಾ ಬಾಣಿ, ಹಳ್ಳೆಪ್ಪಚಾರ್ಯ ಜೋಶಿ, ಮರೆಪ್ಪ ಬಡಿಗೇರ, ಮಲ್ಲಿಕಾರ್ಜುನ ಕುಸ್ತಿ, ಭೀಮರಾವ ಗುಜಗೊಂಡ, ಬಿಜೆಪಿ ಮಂಡಲ ಅಧ್ಯಕ್ಷ ದೇವಿಂದ್ರ ಮುತ್ತಕೋಡ, ಮಹಾಂತಗೌಡ ಚನ್ನೂರ, ಭಾಗೇಶ ಹೋತಿನಮಡು, ಸುರೇಶ ಪಾಟೀಲ ನೇದಲಗಿ, ಸಾಹೇಬಗೌಡ ಕಡ್ಡಿ, ಸಿದ್ದು ಸಾಹು ಗೋಗಿ ಹಾಗೂ ಅನೀಲ ದೊಡ್ಡಮನಿ ಸೇರಿದಂತೆ ಪಕ್ಷದ ಪ್ರಮುಖ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.

CHANGE OF NAME

I, **MUSHTAK AHMED MAHMED GOUSE SHOLAPUR** (Old Name) Resident of Ahmed Nagar Bankapur, Dist: Haveri-581202, have changed my name as **MUSTAQ AHMED SHOLLAPUR** (New Name) henceforth I will be called and recognized by new name for all future purposes, dated: 23/06/2026.

CHANGE OF NAME

I, **NAVEENSINGH JAMADAR** (Old Name) Resident of S. V. Rajaput, Gudisalageri Street, Haveri, Karnataka, Pin Code: 581110, have changed my name as **NAVEENSINGH SUBHASSINGH RAJPUT** (New Name) henceforth I will be called and recognized by new name for all future purposes, dated: 23/06/2026.

CHANGE OF NAME

I, **RUDRAPPA MUGADLI** (Old Name) Resident of H No 217, At Post Holihosur, Tq: Bailahongal, Dist: Belagavi - 591118, Karnataka, India, have changed my name as **RUDRAPPA DEMAPPA MUGADLI** (New Name) henceforth I will be called and recognized by new name for all future purposes, dated: 23/06/2026.

CHANGE OF NAME

I, **RAJASHEKHAR KURADIKERI** (Old Name) Resident of #34 Lakamanahalli Oni Dharwad Karnataka - 580001, have changed my name as **RAJASHEKHAR BASAVARAJ KURDIKERI** (New Name) henceforth I will be called and recognized by new name for all future purposes, dated: 23/06/2026.

CHANGE OF NAME

I, **HAMEEDA BEGUM ALTAF AHMED SHAIKH** (Old Name) Resident of Plot No 11 Mantur Road 5th Cross Byali Plot Hubli 580020 (address), have changed my name as **HAMEEDA BEGUM SHAIKH** (New Name) henceforth I will be called and recognized by new name for all future purposes, dated: 23/06/2026.

CHANGE OF NAME

I, **ABUBAKAR MOHAMMADHASHAM SHAIKH** (Old Name) Resident of Ram Nagar, 4th Cross, Dharwad, Hubballi - Dharwad City - 580001, Karnataka, India, have changed my name as **ABUBAKAR SHAIKH** (New Name) henceforth I will be called and recognized by new name for all future purposes, dated: 23/06/2026.

CHANGE OF NAME

I, **HUSEN BIJAPUR** (Old Name) Resident of Yamanurappa Darga Banhatti Dist: Bagalkot-587311, have changed my name as **HUSENSAB BIJAPUR** (New Name) henceforth I will be called and recognized by new name for all future purposes, dated: 23/06/2026.

CHANGE OF NAME

I, **AYESHA NADAF** (Old Name) Resident of H No 31 Ambika Nagar Opp Urdu Primary School Taj Nagar Unkal Hubli 580031 (address), have changed my name as **AYESHA SHAHAJAN NADAF** (New Name) henceforth I will be called and recognized by new name for all future purposes, dated: 23/06/2026.

CHANGE OF NAME

I, **SABIYANAZ KHUDDUNAVAR** (Old Name) Resident of Hosur Galli, Haliyal Uttara Kannadi, Karataka 581329, have changed my name as **SABIYANAZ MEHABOOBSUBANI LOHANI** (New Name) henceforth I will be called and recognized by new name for all future purposes, dated: 23/06/2026.

CHANGE OF NAME

I, **ROSHAN BANU HAMEED SAB TINMEKAR** (Old Name) Resident of Ganesh Nagar 1st Cross, Ranebennur - 581115 Dist-haveri (address), have changed my name as **ROSHAN BANU MOHAMMED HANIF KARJAGI** (New Name) henceforth I will be called and recognized by new name for all future purposes, dated: 23/06/2026.

CHANGE OF NAME

I, **ANWAR ALAM** (Old Name) Resident of Ward No 27 Hanrichandra Ghat Hiriyur 577598 (address), have changed my name as **MAHAMED ANWAR** (New Name) henceforth I will be called and recognized by new name for all future purposes, dated: 23/06/2026.

CHANGE OF NAME

I, **SOHAIL HANNIYAL** (Old Name) Resident of # 259, Chituguppi Chwal, Shankar Chwal, Good Shed Road Hubli, Hubli, District: Dharwad, Karataka, Pin Code: 580020, have changed my name as **SOHAIL HONNYAL** (New Name) henceforth I will be called and recognized by new name for all future purposes, dated: 23/06/2026.

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ.

ಸಂಖ್ಯೆ: ಕಾಇಂ:ಲೋವಿಚಿ:ಎಇ-2:ಟೆಂಡರ್-13:2026-27 ದಿನಾಂಕ: 23.06.2026

ಇ-ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕೆಪಿಪಿ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಏಕ ಲಕೋಟೆ ಮತ್ತು ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಆಹ್ವಾನಿಸಲಾಗಿದೆ.

ಅರ್ಹ ಗುತ್ತಿಗೆದಾರರು ವೆಬ್‌ಸೈಟ್ kppp.karnataka.gov.in ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.

ಕಾಮಗಾರಿಗಳ ವಿವರ:- ಲೆಕ್ಕ ಶೀರ್ಷಿಕೆ: 5054-80-190-0-01-132 ಕರ್ನಾಟಕ ರಸ್ತೆ ಅಭಿವೃದ್ಧಿ ಅಡಿಯಲ್ಲಿ ನಿಗಮ ನಿಯಮಿತ- ಬಂಡವಾಳ ವೆಚ್ಚ:- (1) ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕು ನೇರ್ಲಗುಂಟೆ ತಿಮ್ಮಪ್ಪಯ್ಯನಹಳ್ಳಿ ರಸ್ತೆ ಜಂಬಯ್ಯನಪಟ್ಟಿ ಹತ್ತಿರ ಸೇತುವೆ ನಿರ್ಮಾಣ (ವ.ಇಂ. 36288)
ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):-200.00
ಲೆಕ್ಕ ಶೀರ್ಷಿಕೆ: 8443 ಠೇವಣಿ ವಂತಿಕೆ:- (2) ಹಿರಿಯ ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಚಿತ್ರದುರ್ಗ ಕಛೇರಿ ಕಟ್ಟಡದ ದುರಸ್ಥಿ ಮತ್ತು ನವೀಕರಣ ಕಾಮಗಾರಿ (ವ.ಇಂ. 36232)
ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):-9.00

ಕ್ರ.ಸಂ. 1 ರ ಕಾಮಗಾರಿ ಟೆಂಡರ್ ದಿನಾಂಕಗಳು:- ಟೆಂಡರ್ ಬಗ್ಗೆ ವಿಚಾರಿಸಲು/ ಮಾಹಿತಿ ಪಡೆಯಲು ಕೊನೆಯ ದಿನಾಂಕ 07-07-2026 ಸಮಯ 17-30
ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ 08-07-2026 ಸಮಯ 16-00
ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 09-07-2026 ಸಮಯ 16-15
ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 13-07-2026 ಸಮಯ 11-00

ಕ್ರ.ಸಂ. 2 ರ ಕಾಮಗಾರಿ ಟೆಂಡರ್ ದಿನಾಂಕಗಳು:- ಟೆಂಡರ್ ಬಗ್ಗೆ ವಿಚಾರಿಸಲು/ ಮಾಹಿತಿ ಪಡೆಯಲು ಕೊನೆಯ ದಿನಾಂಕ 07-07-2026 ಸಮಯ 17-30
ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ 08-07-2026 ಸಮಯ 16-00
ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 09-07-2026 ಸಮಯ 16-15

ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಸಹಾಯಕ ದೂರವಾಣಿ ಸಂಖ್ಯೆ 91 9240214000 ಮತ್ತು 91 9240214001 ರಿಂದ ಮಾಹಿತಿ ಪಡೆಯಬಹುದು.

DIPR/CTA/KSMCA/ 187/2026-27

ಸಹಿ/- ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಚಿತ್ರದುರ್ಗ.

CHANGE OF NAME

I, **TASLIMA** (Old Name) Resident of 94 Gangavali Post Nadumaskeri Kumta 581319, have changed my name as **TASLIMA ZUBAIR KASARKOD MOHAMMED** (New Name) henceforth I will be called and recognized by new name for all future purposes, dated: 23/06/2026.

CHANGE OF NAME

I, **SHAIKH AFSHAN MOHAMMED IBRAHIM (Old Name)** R/o # H.No. 08, 1st Floor, Naikwadi Building, 4th Cross, Byali Plot, Mantur Road, Hubli-580020 have changed my name to **AFSHAN MOHAMMAD IBRAHIM SHAIKH(New Name)** Vide Affidavit Sworn Before Notary T.G. Balannavar on 23-06-2026



CHANGE OF NAME

I, **MUHAMMAD RAFIQ UNTWALE** (Old Name) Resident of 34, Islampur Road, Raza Twon Old Hubli, Hubli - 580024 (address), have changed my name as **MOHAMMED FAROOQUE OONTWALE** (New Name) henceforth I will be called and recognized by new name for all future purposes, dated: 23/06/2026.

CHANGE OF NAME

I, **SAHIL BAGSIRAJ** (Old Name) Resident of 3rd Main, Jamakhandi Road, Kudachi 591311 (address), have changed my name as **SAHIL AKRAM BAGSIRAJ** (New Name) henceforth I will be called and recognized by new name for all future purposes, dated: 23/06/2026.

CHANGE OF NAME

I, **DIVYA B R** (Old Name) Resident of 220 Arunodaya, Bendre Nagar, K.C.Park, Dharwad, Karnataka, Pin Code: 580008 have changed my name as **DIVYA NAGARAJ GINIWALAD** (New Name) henceforth I will be called and recognized by new name for all future purposes, dated: 23/06/2026.

CHANGE OF NAME

I, **ANAND ANAVEKAR** (Old Name) Resident of Shri Golokha Dham, Unkal Tharihal Road, Near Asha Nagari Layout, Unkal,hubli Vidyanagar, Dharwad, State: Karnataka, Pin Code: 580021, have changed my name as **ANAND ANVEKAR** (New Name) henceforth I will be called and recognized by new name for all future purposes, dated: 23/06/2026.

CHANGE OF NAME

I, **FAKKIRAPPA MADIWALAR** (Old Name) Resident of Plot No. 12/1, Ward No.19 1st Main, Rajatagiri, Vidyagiri, Dharwad, Karnataka, Pin Code: 580004 have changed my name as **FAKKIRAPPA BIDRIGOWDRA** (New Name) henceforth I will be called and recognized by new name for all future purposes, dated: 18/06/2026.

CHANGE OF NAME

I, **MUKTUMHUSENSAB SAYEDNAVAR** (Old Name) Resident of Kalghatgi Muttagi Road, Dharwad Pin - 581204, have changed my name as **MAKTUMHUSEN MAHABOOBSAB SAYYADNAVAR** (New Name) henceforth I will be called and recognized by new name for all future purposes, dated: 23/06/2026.

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನೀಯರರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ ವಿಭಾಗ, ಗದಗ

ಕಾ.ಇ: ಗ್ರಾ.ಕು.ನೀ&ನೈ.ವಿ/ಗದಗ/ ಕೆ.ಇಂ/ಟೆಂಡರ್/2026-27/419 ದಿನಾಂಕ: 23.06.2026

ಟೆಂಡರ್ ಪ್ರಕಟಣೆ

ಪಂಚಾಯತ ರಾಜ್ ಇಂಜನೀಯರಿಂಗ ಇಲಾಖೆಯಲ್ಲಿ ನೋಂದಾಯಿಸಿದ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ-2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ, ಕುಡಿಯುವ ನೀರು ಸರಬರಾಜು ಯೋಜನೆ ಅಡಿಯಲ್ಲಿ ಗದಗ ಜಿಲ್ಲೆಯ ಈ ಕೆಳಗಿನ ಕಾಮಗಾರಿಯ ಟೆಂಡರನ್ನು "ಇ ಪ್ರೊಕ್ಯುರಮೆಂಟ್-2" ಮುಖಾಂತರ ಕರೆಯಲಾಗಿದೆ.

ಕ್ರ. ಸಂ	ಇಂಡೆಂಟ್ ಸಂಖ್ಯೆ/ಕಾಮಗಾರಿಯ ಹೆಸರು	ಟೆಂಡರಗಿಟ್ಟ ಮೊತ್ತ	ಮುಂಗಡ ಠೇವಣಿ ಮೊತ್ತ
1	RWSSD/2026-27/RT/WORK_INDENT10252	**246.74** ಲಕ್ಷಗಳು	**247000.00**

ಈ ಕಾಮಗಾರಿಗಳ ವಿವರಗಳಿಗಾಗಿ ಹಾಗೂ ಡೌನಲೋಡ ಮಾಡಿಕೊಳ್ಳಲು ಗುತ್ತಿಗೆದಾರರು ಕರ್ನಾಟಕ ಸರಕಾರದ "ಇ ಪ್ರೋಕ್ಯೂರಮೆಂಟ್ " ವೆಬ್‌ಸೈಟ್ **https://KPPP.karnataka.gov.in** ನಲ್ಲಿ ನೋಡಿಕೊಳ್ಳಬಹುದು. ಟೆಂಡರ ಸಲ್ಲಿಸಲು ಪ್ರಾರಂಭವಾಗುವ ದಿನಾಂಕ: **24.06.2026**, ಪೂರ್ವಭಾವಿ ಸಭೆ ದಿನಾಂಕ **29.06.2026**, ಪ್ರಶ್ನೋತ್ತರದ ಕೊನೆಯ ದಿನಾಂಕ : **07.07.2026** ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ: **08.07.2026** ತಾಂತ್ರಿಕ ಬಿಡ್ ಟೆಂಡರ ತೆರೆಯುವ ದಿನಾಂಕ: **10.07.2026** ಆರ್ಥಿಕ ಟೆಂಡರ ಬಿಡ್ ತೆರೆಯುವ ದಿನಾಂಕ: **13.07.2026.**

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ವಾಸಾಸಂಇ/ಗದಗ/135/ಕೆಎಸ್‌ಎಂಸಿಎ/2026-27 ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಗದಗ

CHANGE OF NAME

I, **FATIMABI IBRAHIM SAYED** (Old Name) Resident of Kalamma nagar, Yellapur, Uttara Kannada Karnataka - 581359, have changed my name as **FATIMA IBRAHIM SAYED** (New Name) henceforth I will be called and recognized by new name for all future purposes, dated: 23/06/2026.

CHANGE OF NAME

I, **GIRIJA SHIMPI** (Old Name) Resident of #34 Giriraj Building Shukravar Peth Lakamana Halli Oni Dharwad Karnataka - 580001, have changed my name as **GIRIJA RAJASHEKHAR KURDIKERI** (New Name) henceforth I will be called and recognized by new name for all future purposes, dated: 23/06/2026.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು

CHANGE OF NAME

I, **MUKTIYARAHMED SUNKAD** (Old Name) Resident of #4593/2 Maqbuliya Nagar Hanagal Taluku Mattu Pattan Haveri, have changed my name as **MUKTIYAR AHAMAD SUNKAD** (New Name) henceforth I will be called and recognized by new name for all future purposes, dated: 23/06/2026.

ಕರ್ನಾಟಕ ಸರಕಾರ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಶಿವಾಜಿ ನಗರ, ಬೆಳಗಾವಿ

ಟೆಂಡರ್‌ಕ್ರ: ಉನೆಬಿ: ಮಮಅಇ:ಬೆ: ಉಮವನಿ: ಟೆ:ಪ್ರಕು: 2026-27 ದಿನಾಂಕ: 22-06-2026

ಇ-ಪ್ರೋಕ್ಯೂರಮೆಂಟ್ ಟೆಂಡರ್ ಪ್ರಕಟಣೆ

ಬೆಳಗಾವಿ ನಗರ ವ್ಯಾಪ್ತಿಯಲ್ಲಿ ಮಹಿಳೆಯರ ಸುರಕ್ಷತಾ ಹಾಗೂ ಯೋಗ್ಯ ವಸತಿ ಸೌಕರ್ಯ ನೀಡುವ ನಿಟ್ಟಿನಲ್ಲಿ, ವಸತಿ ಸೌಲಭ್ಯಗಳನ್ನು ಕಲ್ಪಿಸಿಕೊಡುವ ಉದ್ದೇಶದಿಂದ ಬೆಳಗಾವಿಯಲ್ಲಿ ಪ್ರಾರಂಭಿಸಿರುವ 3 ಉದ್ಯೋಗಸ್ಥ ಮಹಿಳೆಯರ ವಸತಿ ನಿಲುಗಳಲ್ಲಿ 2026-27ನೇ ಸಾಲಿಗಾಗಿ ಅವಶ್ಯವಿರುವ 27 ವಿವಿಧ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಅರ್ಹ ಹೌಸ್ ಕೀಪಿಂಗ್ (ಹೊರಸಂಪನ್ಮೂಲ) ಏಜೆನ್ಸಿಗಳಿಂದ ಇ-ಪ್ರೋಕ್ಯೂರಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್‌ನಲ್ಲಿನ ಷರತ್ತುಗಳ ಪ್ರಕಾರ ಅರ್ಹ ಟೆಂಡರ್‌ದಾರರು/ಸಂಸ್ಥೆಗಳು ಭರ್ತಿ ಮಾಡಿದ ಟೆಂಡರ್‌ಗಳನ್ನು ಈ ಕೆಳಗೆ ನಿಗದಿಪಡಿಸಿರುವ ವೇಳಾಪಟ್ಟಿಯಂತೆ ಕರ್ನಾಟಕ ಸರ್ಕಾರದ ಇ-ಪ್ರೋಕ್ಯೂರಮೆಂಟ್ ಪೋರ್ಟಲ್ ವಿಳಾಸ **http://kppp.karnataka.gov.in** ರ ಮೂಲಕ ಮಾತ್ರ ಸಲ್ಲಿಸತಕ್ಕದ್ದು.

ಟೆಂಡರ್ ವೇಳಾಪಟ್ಟಿ

1	ಟೆಂಡರ್ ಅರ್ಜಿಗಳನ್ನು ಇ-ಪ್ರೋಕ್ಯೂರಮೆಂಟ್ ಮೂಲಕ ಅಪ್‌ಲೋಡ್ ಮಾಡಿಕೊಂಡು ಸಲ್ಲಿಸಲು ಕೊನೆಯ ದಿನಾಂಕ	ದಿನಾಂಕ: 06-07-2026 5:00 PM http://kppp.karnataka.gov.in ಮೂಲಕ
2	ಟೆಂಡರ್ ಒಟ್ಟು ಮೊತ್ತ	ರೂ. 54.00 ಲಕ್ಷ
3	ಇ.ಎಂ.ಡಿ. ಮೊತ್ತ	ರೂ. 1.35 ಲಕ್ಷ
4	ಇ-ಪೋರ್ಟಲ್‌ನಲ್ಲಿ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ: 08-07-2026 11:00 AM
5	ಇ-ಪೋರ್ಟಲ್‌ನಲ್ಲಿ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ: 10-07-2026 11:00 AM
6	ಇ-ಟೆಂಡರ್ ಗೆ ಸಂಬಂಧಿಸಿದ ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ಕಚೇರಿ ವಿವರ	ಉಪ ನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿವಾಜಿ ನಗರ, ಬೆಳಗಾವಿ

ಸಹಿ/-
ಉಪ ನಿರ್ದೇಶಕರು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಳಗಾವಿ

ವಾ.ಸಾ.ಇ./ಬೆಳಗಾವಿ/483/2026-27/ದೇಶಪಾಂಡೆಪಬ್ಲಿಸಿಟಿ

ನಗರಸಭೆ ಕಾರ್ಯಾಲಯ, ಕೊಪ್ಪಳ.

www.ka.koppal.cmc@gmail.com

ಸಂಖ್ಯೆ/ನಸಕೊ/ಆರೋಗ್ಯ ಶಾಖೆ/2026-27 ದಿ: 23/06/2026

ಅಲ್ಪಾವಧಿ ಕೊಟೇಶನ್ ಪ್ರಕಟಣೆ

ಸನ್ 2026-27 ನೇ ಸಾಲಿನ ನಗರಸಭೆ ನಿಧಿ ಅನುದಾನದಡಿಯಲ್ಲಿ **ಕೊಪ್ಪಳ ನಗರಸಭೆಯ 13 ವಾಹನಗಳಿಗೆ ಆಯಿಲ್ ಬದಲಾವಣೆ ಮಾಡಲು ತ್ರೈಮಾಸಿಕ ಅವಧಿಗೆ ತಕ್ಷಣ ಆಯಿಲ್ ಬದಲಾವಣೆ ಮಾಡಲು ನಗರಸಭೆಯಿಂದ ಅಲ್ಪಾವಧಿ ಕೊಟೇಶನ್ನು ಆಹ್ವಾನಿಸಲಾಗಿದೆ.** ಇಚ್ಛೆಯುಳ್ಳ ಮೇಕ್ಯಾನೀಕ್ದಾರರು ಅಲ್ಪಾವಧಿ ಕೊಟೇಶನ್ನಲ್ಲಿ ಭಾಗವಹಿಸಬಹುದು.
ಹೆಚ್ಚಿನ ವಿವರಗಳನ್ನು ಆರೋಗ್ಯ ಶಾಖೆ ನಗರಸಭೆ ಕೊಪ್ಪಳಕ್ಕೆ ಸಂಪರ್ಕಿಸಿ ಮಾಹಿತಿ ಪಡೆಯಬಹುದು ಅಥವಾ ಕಛೇರಿಯ ಸಹಾಯಕ **ದೂರವಾಣಿ ಸಂಖ್ಯೆ: 08539-230192** ರಿಂದ ಮಾಹಿತಿ ಪಡೆಯಬಹುದು.

ಪೂರೈಕೆ ಹೆಸರು: ಸನ್ 2026-27 ನೇ ಸಾಲಿನ ನಗರಸಭೆ ನಿಧಿ 01-ಕಾರ್ಯಾಲಯದ 13 ವಾಹನಗಳು (ಬಿಎಸ್6) ಅವಶ್ಯವಿರುವ ಡಫ್ ಆಯಿಲ್, ಇಂಜಿನ್ ಆಯಿಲ್, ಡಿಜೆಲ್ ಫಿಲ್ಟರ್, ಅಳವಡಿಸಿ ಆಯಿಲ್ ಬದಲಾವಣೆ ಮಾಡುವುದು.
ಅಂದಾಜು ಮೊತ್ತ ರೂ (ಸಾವಿರಗಳಲ್ಲಿ): 99,000/-

ಷರತ್ತುಗಳು: 1) ಅಲ್ಪಾವಧಿ ಕೊಟೇಶನ್ ಪಡೆಯುವ **ದಿನಾಂಕ: 24/06/2026 ರಿಂದ 29/06/2026.** 2) ಅಲ್ಪಾವಧಿ ಕೊಟೇಷನ್ ಸಲುವಾಗಿ ಅರ್ಜಿ ಸಲ್ಲಿಸಲು ಹಾಗೂ **KQ-1** ನಮೂನೆಯಲ್ಲಿ ಪಡೆಯಲು ಕೊನೆಯ **ದಿನಾಕ : 29/06/2026 ಬೆಳಿಗ್ಗೆ 10.00 ಗಂಟೆಗೆ.** 3) ಅಲ್ಪಾವಧಿ ಕೊಟೇಷನ್ ತೆರೆಯುವ **ದಿನಾಂಕ: 29/06/2026 ಸಂಜೆ 4.00 ಗಂಟೆಗೆ.** 4) ಯಾವುದೇ ಕಾರಣ ನೀಡದೆ ಅಲ್ಪಾವಧಿ ಕೊಟೇಷನ್‌ನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರ ನಗರಸಭೆ ಕಾಯ್ದಿರಿಸಿಕೊಂಡಿದೆ. 5) ತಾವು ನಮೂದಿಸುವ ದರದಲ್ಲಿ ಎಲ್ಲಾ ತೆರಿಗೆಗಳು ಸೇರಿಸಿ ನಮೂದಿಸತಕ್ಕದ್ದು. 6) 13 ವಾಹನಗಳ ವಿವರಗಳಿಗಾಗಿ ಕಾರ್ಯಾಲಯಕ್ಕೆ ಬೇಟಿ ನೀಡಿ ಕೊಟೇಶನ್ ಪ್ರತಿಗಳನ್ನು ಪಡೆಯತಕ್ಕದ್ದು.

ಸಹಿ/- ಪೌರಾಯುಕ್ತರು
ನಗರಸಭೆ ಕೊಪ್ಪಳ

ಡಿಐಪಿಆರ್/ಕೊಪ್ಪಳ/ 194/ಮಣಿಪಾಲ್/2025-26

ಸಮಗ್ರ ಶಿಕ್ಷಣ ಕರ್ನಾಟಕ

ಉಪ ನಿರ್ದೇಶಕರು(ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ, ಸಮಗ್ರ ಶಿಕ್ಷಣ ಕರ್ನಾಟಕ, ಹಾಸನ ಜಿಲ್ಲೆ, ಹಾಸನ

ದೂರವಾಣಿ ಸಂಖ್ಯೆ: 08172 295020 ಇಮೇಲ್ ವಿಳಾಸ: **ssahassan2003@gmail.com**

ಸಂ: ಸಶಿಕ/ಲೆ.ಪ.3/ಕೆ.ಜಿ.ಬಿ.ವಿ.(ಟೈಪ್4)/ಇ.ಪ್ರೂ./08/2026-27
ದಿನಾಂಕ:23-06-2026

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

2026-27ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಕೆ.ಜಿ.ಬಿ.ವಿ.(Type-1) ವಸತಿ ನಿಲಯ ಹಳ್ಳಿಮೈಸೂರು ಇಲ್ಲಿಗೆ ಹೊರಗುತ್ತಿಗೆ ಆಧಾರದಲ್ಲಿ ಆಹಾರ ಪೂರೈಕೆ ಮಾಡುವ ಸಂಬಂಧ ಅರ್ಹ ಸಂಸ್ಥೆ/ಏಜೆನ್ಸಿಯವರಿಂದ ಅಲ್ಪಾವಧಿ ಇ-ಟೆಂಡರ್ ಆಹ್ವಾನಿಸಿದ್ದು, https://kppp.karanataka.gov.in ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವ ದಿನಾಂಕಗಳು ಈ ಕೆಳಕಂಡಂತಿರುತ್ತದೆ. ಟೆಂಡರ್‌ನ ಅಂದಾಜು ಮೊತ್ತ: ಕೆ.ಜಿ.ಬಿ.ವಿ.(Type-4) ವಸತಿ ನಿಲಯ ರೂ. 20,40,000/- ಪ್ರಾರಂಭದ ದಿನಾಂಕ: 23-06-2026, ಕೊನೆಯ ದಿನಾಂಕ: 02.07.2026, 5.30 PM. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 04.07.2026 ರ 11.00 AM, ಆರ್ಥಿಕ ಬಿಡ್ ತೆರೆಯುವ ದಿನಾಂಕ: 06-07-2026 ರ 11.00 AM. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ : 94808 86939 ನ್ನು ಸಂಪರ್ಕಿಸಲು ಕೋರಿದೆ.

ಸಹಿ/-ಉಪನಿರ್ದೇಶಕರು, ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ, ಹಾಸನ.

ವಾಸಾಸಂಇ/ಹಿಸನಿ/ಹಾಸನ/269/ಕೆಎಸ್‌ಎಂಸಿಎ/2026-27

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನೀಯರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನಂ.4, ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ.

ಸಂ: ಕಾ.ಇಂ/ಕನೀನಿನಿ/ಬಿಡಿಯನ್-4/ತಾ.ಸಂ/ಪಿ.ಬಿ 1/4701 ಭದ್ರಾ/ 2ನೇ ಟೆಂಡರ್ ಪ್ರಕಟಣೆ ಸಂಖ್ಯೆ : 05/2026-27 ದಿನಾಂಕ : 20.06.2026

ಅಲ್ಪಾವಧಿ ಟೆಂಡರ್ ಪ್ರಕಟಣೆ 2ನೇ ಕರೆ

(ಕೆ.ಪಿ.ಪಿ.ಪೋರ್ಟಲ್‌ನ ಮೂಲಕ ಮಾತ್ರ)

ಕೆ.ಟಿ.ಪಿ.ಪಿ ವೇದಿಕೆಯಡಿಯಲ್ಲಿ 4701 ಭದ್ರಾ ಲೆಕ್ಕ ಶೀರ್ಷಿಕೆಯಡಿಯಲ್ಲಿ 01 ಸಂಖ್ಯೆ ಕಾಮಗಾರಿಗೆ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ., ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟಿರುವ ಗುತ್ತಿಗೆದಾರರಿಂದ ಟೆಂಡರ್‌ನ್ನು ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.4 ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ ಇವರಿಂದ ಆಹ್ವಾನಿಸಲಾಗಿದೆ.

1) ಟೆಂಡರ್ ಫಾರಂಗಳನ್ನು ಕೋರಿ ಹಾಗೂ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಗಳು : 20.06.2026 ರಿಂದ 02.07.2026 ರವರೆಗೆ 17.30 ಗಂಟೆಗೆ. 2) ಪ್ರೀ ಬಿಡ್ ಮೀಟಿಂಗ್ : 30.06.2026 ರಂದು ಬೆಳಿಗ್ಗೆ 11.00 ಗಂಟೆಗೆ, ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.4, ಬಿಆರ್‌ಎಲ್‌ಬಿಸಿ ವಿಭಾಗ, ಭದ್ರಾವತಿ. 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 03.07.2026 ರಂದು 17.30 ಗಂಟೆಗೆ. 4) ಆರ್ಥಿಕ ಬಿಡ್ ತೆರೆಯುವ ದಿನಾಂಕ : After obtaining approval of technical bid from competent authority. 5) ಕಾಲಾವಧಿ : 12 ತಿಂಗಳು (ಮಳೆಗಾಲ ಸಹಿತ). 6) ಟೆಂಡರ್‌ಗಿಟ್ಟ ಮೊತ್ತ : ರೂ. 2033.84 ಲಕ್ಷಗಳವರೆಗೆ. 7) ಇಎಂಡಿ ಮೊತ್ತ : ರೂ. 20.33 ಲಕ್ಷಗಳು. (Rs.1.00 lakhs through e-cash and balance amt of Rs. 19.33 lakhs through e-BG).

ಸೂಚನೆಗಳು ಹಾಗೂ ಹೆಚ್ಚಿನ ವಿವರಗಳಿಗಾಗಿ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಫೋನ್ : 8660573513.

ಸಹಿ/-
ಕಾರ್ಯಪಾಲಕ ಇಂಜಿನೀಯರರು,
ಕನೀನಿನಿ, ನಂ.4, ಬಿಆರ್‌ಎಲ್‌ಬಿಸಿ ವಿಭಾಗ, ಭದ್ರಾವತಿ.

ವಾ.ಸಾ.ಸಂ.ಇ/ಶಿ/ನಂ.99-06/ ಶ್ಯಾಂಕಾರ್/2026-27

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

No: EE/ UTP /RNR/MadagMasur/LIS-Hangal/ Call-3/PB-2/ 2026-27/568 Date: 08-06-2026.

(ಕೆ.ಪಿ.ಪಿ ಪೋರ್ಟಲ್ ಮುಖಾಂತರ) ಟೆಂಡರ್ ಪ್ರಕಟಣೆ ಕರೆ-3

ದ್ವಿ - ಲಕೋಟೆ ಪದ್ಧತಿ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು ಇವರು ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಮದಗ ಮಾಸೂರು ಕೆರೆಯ ಎಡದಂಡೆ ಮತ್ತು ಬಲದಂಡೆ ಕಾಲುವೆಗಳ ಆಧುನೀಕರಣ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಲೆಕ್ಕ ಶೀರ್ಷಿಕೆ 4701 ಮದಗ ಮಾಸೂರು ಯೋಜನೆ ಅಡಿ ಕಾಮಗಾರಿಯ ಟೆಂಡರ್‌ನ್ನು ಉಲ್ಲೇಖಿತ ಪತ್ರ (1) ರನ್ವಯ ಆಹ್ವಾನಿಸಲಾಗಿದೆ.

ಸದರಿ ಕಾಮಗಾರಿಯ ಟೆಂಡರ್ ಮೊತ್ತ ರೂ.5031.68 ಲಕ್ಷಗಳು (GST ಸೇರಿ) ಇರುತ್ತದೆ ಮತ್ತು ಇ.ಎಂ.ಡಿ ಮೊತ್ತವು ರೂ:42.64 ಲಕ್ಷಗಳ ವರೆಗೆ ಇರುತ್ತದೆ. ಟೆಂಡರ್ ಪ್ರಕ್ರಿಯೆ ಶುಲ್ಕವನ್ನು (ಹಿಂದಿರುಗಿಸಲಾಗದ್ದು) https:// kppp.karnataka.gov.inನಲ್ಲಿ ನೋಡಿಕೊಂಡು ತುಂಬತಕ್ಕದ್ದು. (1) ಟೆಂಡರ್ ಅಕ್ಸೆಸ್ ಮಾಡುವ ದಿನಾಂಕ:22-06-2026 ರಿಂದ 31-07-2026ರ ಸಂಜೆ 5.00 ರವರೆಗೆ (2) ಪ್ರೀ-ಬಿಡ್ ಮೀಟಿಂಗ್ ದಿನಾಂಕ:13-07-2026 ಸಂಜೆ 4.00 ಕ್ಕೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿ., 4ನೇ ಮಹಡಿ ಕಾಫೀ ಬೋರ್ಡ್ ಕಟ್ಟಡ, ನಂ.01 ಡಾ॥ ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು ರವರ ಕಛೇರಿಯಲ್ಲಿ. (3) ಟೆಂಡರ್ ಬಗ್ಗೆ ವಿಚಾರಣೆಗೆ ಕೊನೆಯ ದಿನಾಂಕ 22-07-2026 ಸಂಜೆ 4.00 ರ ವರೆಗೆ (4) ಭರ್ತಿ ಮಾಡಿದ ಟೆಂಡರ್‌ಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ 31-07-2026 ರ ಸಂಜೆ 5.00 ರ ವರೆಗೆ (5) ದಿನಾಂಕ 01-08-2026 ರಂದು ಸಂಜೆ 5.30 ಗಂಟೆಗೆ ತಾಂತ್ರಿಕ ಬಿಡ್‌ನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು ಇವರ ಕಚೇರಿಯಲ್ಲಿ ತೆರೆಯಲಾಗುವುದು.

ಸದರಿ ಟೆಂಡರ್‌ನಲ್ಲಿ ಏನಾದರೂ ತಿದ್ದುಪಡಿ ಮಾಡಿದಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಪ್ರಚುರ ಪಡಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂ.(08373) 297332 ಕ್ಕೆ ಸಂಪರ್ಕಿಸುವುದು. ಷರತ್ತು ಬದ್ಧ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್ ಅಂಗೀಕರಿಸುವ ಅಧಿಕಾರಿಯು ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ರದ್ದು ಪಡಿಸುವ ಅಧಿಕಾರ ಹೊಂದಿರುತ್ತಾರೆ.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ,
ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು.

420

ಕರ್ನಾಟಕ ಸರ್ಕಾರ

ಪುರಸಭಾ ಕಾರ್ಯಾಲಯ, ಕೃಷ್ಣರಾಜಪೇಟೆ

ಕೃಷ್ಣರಾಜಪೇಟೆ - 571426, ಮಂಡ್ಯಜಿಲ್ಲೆ. ದೂರವಾಣಿ: 08230-295073
ಇ-ಮೇಲ್: ka.krishnarajapete.tmc@gmail.com
Web: www.krishnarajapetetown.mrc.gov.in

ಪುಕಾ:ರಾಪೇ:ಹರಾಜು:ಸಿ.ಆರ್:01:2026-27 ದಿನಾಂಕ:22.06.2026

-: ಮರು ಬಹಿರಂಗ ಹರಾಜು ಪ್ರಕಟಣೆ :-

ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಕೃಷ್ಣರಾಜಪೇಟೆ ಪುರಸಭಾ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ನೆಲಬಾಡಿ ಶುಲ್ಕ ವಸೂಲಾತಿ ಮಾಡುವ ಹರಾಜು 2026-27 ನೇ ಸಾಲಿಗೆ ದಿನಾಂಕ: 16.06.2026 ರಿಂದ ದಿನಾಂಕ: 31.03.2027 ರ (09) ತಿಂಗಳು) ಅವಧಿಗೆ ಮಾತ್ರ ಹಕ್ಕನ್ನು ಪಡೆದುಕೊಳ್ಳಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಮಾನ್ಯ ಆಡಳಿತಾಧಿಕಾರಿ/ಮುಖ್ಯಾಧಿಕಾರಿಗಳ ಸಮಕ್ಷಮದಲ್ಲಿ ದಿನಾಂಕ: 25.06.2026 ರ ಗುರುವಾರ ಬೆಳಿಗ್ಗೆ 11.00 ಗಂಟೆಗೆ ಎಸ್.ಜೆ.ಎಸ್.ಆರ್.ವೈನ ಸಿ.ಡಿ.ಎಸ್ ಭವನದಲ್ಲಿ ಬಹಿರಂಗ ಹರಾಜು ನಡೆಸಲಾಗುವುದು. ಆದುದರಿಂದ ಪುರಸಭೆಯ ಆಸಕ್ತಿಯುಳ್ಳ ಸಾರ್ವಜನಿಕರು ಮುಂಗಡ ಡಿಡಿ 75000/-ಬಾಬ್ತನ್ನು ದಿನಾಂಕ:24.06.2026 ಮತ್ತು 25.06.2026 11.00 ಗಂಟೆಯೊಳಗೆ ಡಿಡಿ ಸಲ್ಲಿಸಿ ಈ ಕೆಳಕಂಡ ಹರಾಜಿನಲ್ಲಿ ಭಾಗವಹಿಸಬಹುದಾಗಿರುತ್ತದೆ. ಷರತ್ತುಗಳಿಗೆ ಒಳಪಟ್ಟು ಹರಾಜಿನಲ್ಲಿ

ಕ್ರ. ಸಂ	ನೆಲಬದಿ ಶುಲ್ಕ ವಸೂಲಾತಿ ಮಾಡುವ ಹರಾಜು		ಮುಂಗಡ ಭದ್ರತಾ ಠೇವಣಿ
1	ಕೃಷ್ಣರಾಜಪೇಟೆ ಟೌನ್ ಎಲ್ಲೆಯೊಳಗೆ ರಸ್ತೆ ಬದಿಯಲ್ಲಿ ದಿನವಹಿ ನೆಲ ತೆರಿಗೆ ವಸೂಲಾತಿ ಹಾಗೂ ವಾಹನ ನಿಲುಗಡೆ ಶುಲ್ಕ ವಸೂಲಾತಿ ಮಾಡುವ ಗುತ್ತಿಗೆ ಹಕ್ಕಿನ ಹರಾಜು		75,000/-
	1) 1) ಪಾನಿಪುರಿ ಅಂಗಡಿ ದಿನ ಒಂದಕ್ಕೆ	ರೂ. 10.00	
	2) ಸ್ಟೀಲ್ ಪಾತ್ರೆ ಅಂಗಡಿ ದಿನ ಒಂದಕ್ಕೆ	ರೂ. 10.00	
	3) ಚಪ್ಪಲಿ ಅಂಗಡಿ ದಿನ ಒಂದಕ್ಕೆ	ರೂ. 10.00	
	4) ಬಟ್ಟೆ ಅಂಗಡಿ ದಿನ ಒಂದಕ್ಕೆ	ರೂ. 10.00	
	5) ಹಣ್ಣಿನ ಅಂಗಡಿ ದಿನ ಒಂದಕ್ಕೆ	ರೂ. 10.00	
	6) ಇತರೆ ಯಾವುದೇ ಅಂಗಡಿಗೆ	ರೂ. 10.00	
	1) ಬಸ್ ದಿನ ಒಂದಕ್ಕೆ	ರೂ. 20.00	
	2) ಪ್ರಯಾಣಿಕರ ಟೆಂಪೋ ದಿನ ಒಂದಕ್ಕೆ	ರೂ. 20.00	
	3) ಸರಕು ಸಾಗಾಣಿಕೆ ಟೆಂಪೋ ಮತ್ತು ಕಾರು ದಿನ ಒಂದಕ್ಕೆ	ರೂ. 10.00	
	4) ಆಪೆ ಆಟೋ ದಿನ ಒಂದಕ್ಕೆ	ರೂ. 10.00	

ಸಹಿ/-
ಆಡಳಿತಾಧಿಕಾರಿಗಳು
ಪುರಸಭೆ, ಕೃಷ್ಣರಾಜಪೇಟೆ

ಸಹಿ/-
ಮುಖ್ಯಾಧಿಕಾರಿ ಪುರಸಭೆ,
ಕೃಷ್ಣರಾಜಪೇಟೆ

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಇಂಜಿನೀಯರ್ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ವಿಭಾಗ ಕಾರ್ಯಲಯ, ಹಬ್ಬುವಾಡಾ-ಕಾರವಾರ, ಉತ್ತರಕನ್ನಡ ಜಿಲ್ಲೆ - 581 301
ದೂರವಾಣಿ: (08382)228935, ಫ್ಯಾಕ್ಸ್: 229735 E-mail: eerdwsd.uk@gmail.com
ನಂ: ಕಾ.ನಿ.ಇಂ/ಗ್ರಾ.ಕು.ನೀ.&ನೈ.ವಿ.ಕಾ/MVS-O&M/ಟೆಂಡರ್ ಪ್ರಕಟಣೆ/2026-27/307 ದಿನಾಂಕ: 23/06/2026

ಕೆ.ಪಿ.ಪಿ ಪೋರ್ಟಲ್ ಮೂಲಕ ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಾರವಾರ ಉತ್ತರಕನ್ನಡ ಜಿಲ್ಲೆ ಇವರಿಂದ ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಹಾಗೂ ಇ-ಪ್ರೊಕ್ಯೂರಮೆಂಟ್ ಸಂಸ್ಥೆಯಿಂದ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ **Standard Tender Document** ನಂತೆ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ್ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಕೆ.ಪಿ.ಪಿ ಪೋರ್ಟಲ್ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪ್ರಕಟಿಸಿದಂತೆ.
ಟೆಂಡರ್ ವಿವರಗಳು ಈ ಕೆಳಗಿನಂತಿದೆ.
ಕಾಮಗಾರಿ ಹೆಸರು: (1) **RWSSD/2026-27/WS/WORK_INDENT10050**

(1) ಟೆಂಡರ್ ದಾಖಲಾತಿಗಳನ್ನು ಕೆ.ಪಿ.ಪಿ ಪೋರ್ಟಲ್ ಮುಖಾಂತರ ಡೌನಲೋಡ ಮಾಡಿಕೊಳ್ಳುವ ದಿನಾಂಕ: **23/06/2026** ರಿಂದ **07/07/2026** ರ **16.30** ಘಂಟೆವರೆಗೆ (2) ಟೆಂಡರುಗಳನ್ನು ಕೆ.ಪಿ.ಪಿ ಪೋರ್ಟಲ್ ಮೂಲಕ ಸಲ್ಲಿಸುವ ಕೊನೆಯ ದಿನಾಂಕ: **07/07/2026** ರ **16.30** ಗಂಟೆವರೆಗೆ (3) ಟೆಂಡರಗಳನ್ನು ತೆರೆಯುವ ದಿನಾಂಕ: **08/07/2026** ರಂದು **17:00** ಘಂಟೆಯ ನಂತರ. ಉಳಿದ ವಿವರಗಳನ್ನು **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಪಡೆಯಬಹುದು ಹಾಗೂ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ
ಕಾರವಾರ (ಉ.ಕ. ಜಿಲ್ಲೆ)

DIPR/KWR/KSMCA/227/26-27 dt. 23.06.2026

ಶ್ರೀಗಳ 59ನೇ ವರ್ಧಂತಿ ಉತ್ಸವ



ಶಿರಸಿ: ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನದ ಜಗದ್ಗುರು ಶಂಕರಾಚಾರ್ಯ ಶ್ರೀಗಂಗಾಧರೇಂದ್ರ ಸರಸ್ವತೀ ಶ್ರೀಗಳವರ 59ನೇ ವರ್ಧಂತಿ ಉತ್ಸವವನ್ನು ಮಂಗಳವಾರ ಭಕ್ತಿ, ಶ್ರದ್ಧೆ ಹಾಗೂ ಸೇವಾ ಚಟುವಟಿಕೆಗಳೊಂದಿಗೆ ಆಚರಿಸಲಾಯಿತು.

ಉತ್ಸವದ ಅಂಗವಾಗಿ ಮಹಾಸಂಸ್ಥಾನದ ಸುಧರ್ಮ ಸಭಾಭವನದಲ್ಲಿ ಆಯೋಜಿಸಿದ್ದ ಉಚಿತ ರಕ್ತದಾನ ಹಾಗೂ ಆರೋಗ್ಯ ತಪಾಸಣಾ ಶಿಬಿರಕ್ಕೆ ಸಾರ್ವಜನಿಕರಿಂದ ಉತ್ತಮ ಸ್ಪಂದನೆ ದೊರೆಯಿತು. ಸುಮಾರು 100ಕ್ಕೂ ಅಧಿಕ ಮಂದಿ ಆರೋಗ್ಯ ತಪಾಸಣಾ ಶಿಬಿರದ ಪ್ರಯೋಜನ ಪಡೆದುಕೊಂಡರೆ, 40ಕ್ಕೂ ಹೆಚ್ಚು ಮಂದಿ ಸ್ವಯಂಪ್ರೇರಿತರಾಗಿ ರಕ್ತದಾನ ಮಾಡಿ ಮಾನವೀಯ ಸೇವೆಗೆ ಕೈ ಜೋಡಿಸಿದರು.

ಗ್ರಾಮಾಭ್ಯುದಯ,ಟಿ.ಎಸ್.ಎಸ್. ಶ್ರೀಪಾದ ಹೆಗಡೆ ಕಡವೆ ವೈದ್ಯಕೀಯ ವಿಜ್ಞಾನ ಸಂಸ್ಥೆ, ಪಂಡಿತ ಸಾರ್ವಜನಿಕ ಆಸ್ಪತ್ರೆ, ತಾಲೂಕು ಆರೋಗ್ಯ ಇಲಾಖೆ, ಸೇವಾ ಸಹಕಾರಿ ಸಂಘ ಸೇರಿದಂತೆ ವಿವಿಧ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ಶಿಬಿರ ನಡೆಯಿತು. ವೈದ್ಯರಾದ ಡಾ. ವಿರೇಶ್ ಎಸ್. ಬಾಲೆಹೊಸೂರು, ಡಾ. ವೀಣಾ ವೆರ್ಣೇಕರ್, ಡಾ. ಸುಮನ್ ಹಾಗೂ ಇತರ ತಜ್ಞ ವೈದ್ಯರು ಆರೋಗ್ಯ ತಪಾಸಣೆ ನಡೆಸಿ ಅಗತ್ಯ ವೈದ್ಯಕೀಯ ಸಲಹೆ ನೀಡಿದರು.

ವರ್ಧಂತಿ ಉತ್ಸವದ ಅಂಗವಾಗಿ ಅಥರ್ವಶೀರ್ಷ ಪಾರಾಯಣ, ಮಹಾಗಣಪತಿ ಹವನ, ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಶ್ರದ್ಧಾಭಕ್ತಿಯಿಂದ ನಡೆದವು. ಪುರೋಹಿತರಾದ ವೇ.ಮೂ. ಕೃಷ್ಣ ಜೋಶಿ, ವೇ.ಮೂ. ಚಿನ್ಮಯ ಜೋಶಿ ಹಾಗೂ ಇತರ 50ಕ್ಕೂ ಅಧಿಕ ಋತ್ವಿಜರು ಕಾರ್ಯಕ್ರಮ ನಡೆಸಿಕೊಟ್ಟರು. ಸಂಜೆ ನಡೆದ ಸಾಂಸ್ಕೃತಿಕ ಹಾಗೂ ಭಜನೆ ಸಂಗೀತ ಕಾರ್ಯಕ್ರಮ ನಡೆಯಿತು.

ಗ್ರಾಮಾಭ್ಯುದಯದ ಅಧ್ಯಕ್ಷ ರಾಮಚಂದ್ರ ಹೆಗಡೆ ಕಂಚನಳ್ಳಿ, ಕಾರ್ಯದರ್ಶಿ ಸಂತೋಷ ಭಟ್ಟ ಕೋಡಿಗಾರ, ಹೇಮಂತ ಹೆಗಡೆ, ಎಂ.ಸಿ.ಹೆಗಡೆ ಶಿರಸಿಮಕ್ಕಿ, ಆರ್.ಎನ್. ಹೆಗಡೆ ಉಳ್ಳಿಕೊಪ್ಪ, ಸುರೇಶ ಹಕ್ಕಿಮನೆ, ಎಂ.ಕೆ.ಹೆಗಡೆ ಗೋಳಿಕೊಪ್ಪ, ಶ್ರೀಧರ ಭಟ್ ಕಳವೆ, ಆರ್.ಎನ್.ಭಟ್ಟ ಸುಗಾವಿ ಹಾಗೂ ಇತರರು ಇದ್ದರು.

ಬಾಲಕಿ ಮೇಲೆ ಅತ್ಯಾಚಾರ ಪ್ರಕರಣ ಅಪರಾಧಿಗೆ 20 ವರ್ಷ ಜೈಲು ಶಿಕ್ಷೆ

ಕಲಬುರಗಿ: ಅಪ್ರಾಪ್ತ ಬಾಲಕಿಯ ಮೇಲೆ ದೌರ್ಜನ್ಯ ಎಸಗಿದ ಪ್ರಕರಣದ ಅಪರಾಧಿಗೆ ನಗರದ ವಿಶೇಷ ಪೋಕ್ಸೋ ನ್ಯಾಯಾಲಯವು 20 ವರ್ಷಗಳ ಕಠಿಣ ಜೈಲು ಶಿಕ್ಷೆ ಹಾಗೂ ಒಟ್ಟು 55,000 ದಂಡ ವಿಧಿಸಿ ಮಹತ್ವದ ತೀರ್ಪು ನೀಡಿದೆ.

ಅಂಜನೇಯ (25) ಶಿಕ್ಷೆಗೊಳಗಾದ ಅಪರಾಧಿಯಾಗಿದ್ದು, 2025ರ ಫೆಬ್ರವರಿಯಲ್ಲಿ ಅಪರಾಧಿ ಅಂಜನೇಯ, ಅಪ್ರಾಪ್ತ ಬಾಲಕಿಗೆ ಜೀವ ಬೆದರಿಕೆ ಹಾಕಿ ಬಲವಂತವಾಗಿ ಅಪಹರಿಸಿದ್ದನು. ಬಳಿಕ ಬೆಂಗಳೂರಿನ ನಿವಾಸವೊಂದರಲ್ಲಿ ಕಾನೂನುಬಾಹಿರವಾಗಿ ಬಂಧನದಲ್ಲಿಟ್ಟು, ಬಾಲಕಿಯ ಇಚ್ಛೆಗೆ ವಿರುದ್ಧವಾಗಿ ನಿರಂತರವಾಗಿ ಅತ್ಯಾಚಾರ ಎಸಗಿದ್ದನು. ಈ ಕುರಿತು ವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿ, ಸಿಪಿಐ ಚಂದ್ರಶೇಖರ ತಿಗಡಿ ಅವರು ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಎಸ್.ಎಲ್. ಚವ್ಹಾಣ ಅವರು ಆರೋಪದ ಮೇಲಿನ ಸಾಕ್ಷ್ಯಾಧಾರಗಳು ರುಜುವಾತಾದ ಹಿನ್ನೆಲೆಯಲ್ಲಿ ಪೋಕ್ಸೋ ಕಾಯ್ದೆಯಡಿ 20 ವರ್ಷ ಜೈಲು ಶಿಕ್ಷೆ ಹಾಗೂ ಭಾರತೀಯ ನ್ಯಾಯ ಸಂಹಿತೆಯ ವಿವಿಧ ಕಲಂ ಅಡಿಯಲ್ಲಿ ದಂಡ ವಿಧಿಸಿದ್ದಾರೆ.

ಜತೆಗೆ, ನೊಂದ ಬಾಲಕಿಗೆ ಕಾನೂನು ಪ್ರಾಧಿಕಾರದವತಿಯಿಂದ ರೂ.5 ಲಕ್ಷ ಪರಿಹಾರವನ್ನು ಒಂದು ತಿಂಗಳೊಳಗೆ ನೀಡುವಂತೆ ಮಾನ್ಯ ನ್ಯಾಯಾಲಯವು ಆದೇಶಿಸಿದೆ. ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕ ಶಾಂತವೀರ ಬಿ.ತುಪ್ಪದ ವಾದ ಮಂಡಿಸಿದ್ದರು.

ಇಂದಿನ ಉತ್ಪನ್ನವಾರು ದರ — ಹುಬ್ಬಳ್ಳಿ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಕಡಲೆಕಾಳು	2011	5939
ಹೆಸರುಕಾಳು	3360	7525
ಜೋಳ	1829	4106
ಸಾಸುವೆ	5136	5136
ಈರುಳ್ಳಿ	500	2200
ಆಲೂಗಡ್ಡೆ	1200	1850
ಸೋಯಾಬಿನ್	5876	7039
ಗೋಧಿ	2329	2521

ಕಾಲ್ಚೆಂಡಿನ ಸಮರ

ಫಿಫಾ ವಿಶ್ವಕಪ್ | ಯುಎಸ್ಎ, ಮೆಕ್ಸಿಕೋ, ಕೆನಡಾ | ಜೂನ್ 11-ಜುಲೈ 19

ಬುಧವಾರದ ಪಂದ್ಯಗಳು

ಕೊಲಂಬಿಯಾ-ಡಿಆರ್ ಕಾಂಗೊ (ಬೆಳಗ್ಗೆ 7:30)

ಸ್ವಿಟ್ಜರ್ಲೆಂಡ್-ಕೆನಡಾ (ಮಧ್ಯರಾತ್ರಿ 12:30)

ಬೋಸ್ನಿಯಾ ಮತ್ತು ಹರ್ಜೆಗೋವಿನಾ-ಕತಾರ್, (ಮಧ್ಯರಾತ್ರಿ 12:30)

ಮೊರೊಕ್ಕೊ-ಹೈಟಿ, (ಮಧ್ಯರಾತ್ರಿ 3:30)

ಸ್ಕಾಟ್ಲೆಂಡ್-ಬ್ರೆಜಿಲ್, (ಮಧ್ಯರಾತ್ರಿ 3:30)

ಫಿಫಾ ವಿಶ್ವಕಪ್‌ನಲ್ಲಿ 18 ಗೋಲು ಬಾರಿಸಿ ಲಿಯೋನೆಲ್ ಇತಿಹಾಸ
ಕೈಲಿಯನ್ ಎಂಬಾಪ್ಪೆ ದ್ವಿಗೋಲು, ಫ್ರಾನ್ಸ್‌ಗೆ ಸತತ 2ನೇ ಗೆಲುವು

ಮೆಸ್ಸಿ ಮಹಾದಾಖಲೆ!



• **ಆರ್ಲಿಂಗ್ಟನ್:** ಇನ್ಮುಂದೆ ಲಿಯೋ ಅಭಿಮಾನಿಗಳೆಲ್ಲರೂ, ಫುಟ್‌ಬಾಲ್ ವಿಶ್ವಕಪ್ ಇತಿಹಾಸದಲ್ಲಿ ಲಿಯೋನೆಲ್ ಮೆಸ್ಸಿಗಿಂತಲೂ ಹೆಚ್ಚು ಗೋಲು ಗಳಿಸಿದ ಆಟಗಾರರೆ ಇಲ್ಲ, ನನ್ನ ನೆಚ್ಚಿನ ಆಟಗಾರನೇ ಬೆಸ್ಟ್ ಎಂದೆಲ್ಲಾ ಹೇಳಿಕೊಳ್ಳಬಹುದು. ಏಕೆಂದರೆ 18 ಗೋಲು ಪೂರೈಸಿಕೊಂಡಿರುವ ಮೆಸ್ಸಿ ಫುಟ್‌ಬಾಲ್‌ನಲ್ಲಿ ಮಾಡಬಹುದಾದ ಅತ್ಯುನ್ನತ ಸಾಧನೆಯನ್ನೇ ಸೋಮವಾರ ಮಾಡಿಬಿಟ್ಟರು! ಫಿಫಾ ವಿಶ್ವಕಪ್ ಪಂದ್ಯಾವಳಿಯಲ್ಲಿ ಅಭಿಮಾನಿಗಳಿಗೆ ಮತ್ತೊಮ್ಮೆ ಹಬ್ಬ. ಹಾಲಿ ಚಾಂಪಿಯನ್ ಅರ್ಜೆಂಟೀನಾ ಮತ್ತು ಹಾಲಿ ರನ್ನರ್-ಅಪ್‌ಗ ಫ್ರಾನ್ಸ್ ಎದುರು-ಬದುರು ಆಗದಿದ್ದರೂ ತಮ್ಮ ತಮ್ಮ ಪಂದ್ಯದಲ್ಲಿ ವಿಶ್ವ ಕ್ರೀಡಾಪಟುಗಳನ್ನು ರಂಜಿಸಿದವು. ಅರ್ಜೆಂಟೀನಾದಲ್ಲಿ ಲಿಯೋನೆಲ್ ಮೆಸ್ಸಿ, ಫ್ರಾನ್ಸ್‌ನಲ್ಲಿ ಎಂಬಾಪ್ಪೆ, ಹೀಗೆ ಸ್ಟಾರ್‌ಗಳು ಮಿಂಚುತ್ತಿದ್ದರೆ, ಅಭಿಮಾನಿಗಳು ಖುಷಿಯಲ್ಲಿ ತೇಲಾಡುತ್ತಿದ್ದರು.

ನಾಕೌಟ್‌ಗೆ ಹಾಲಿ ಚಾಂಪಿಯನ್ಸ್!

• **ಆರ್ಲಿಂಗ್ಟನ್:** ಫುಟ್‌ಬಾಲ್ ದಂತಕಥೆ ಲಿಯೋನೆಲ್ ಮೆಸ್ಸಿ ವಿಶ್ವಕಪ್ ಇತಿಹಾಸದ ಗರಿಷ್ಠ ಗೋಲುಗಳ ಹೊಸ ದಾಖಲೆ ನಿರ್ಮಿಸಿದರೆ, ಹಾಲಿ ಚಾಂಪಿಯನ್ ಅರ್ಜೆಂಟೀನಾ ಆಸ್ಟ್ರಿಯಾ ವಿರುದ್ಧ 2-0 ಅಂತರದ ಗೆಲುವು ಸಾಧಿಸಿ ನಾಕೌಟ್ ಹಂತಕ್ಕೆ ಪ್ರವೇಶಿಸಿತು.

ಜರ್ಮನಿಯ ಮಿರೋಸ್ಲಾವ್ ಕ್ಲೋಸೆ ಅವರ 16 ಗೋಲುಗಳ ದಾಖಲೆಯನ್ನು ಸಮಗೊಳಿಸಿಕೊಂಡಿದ್ದ ಮೆಸ್ಸಿ, ಈ ಪಂದ್ಯದಲ್ಲಿ ಎರಡು ಗೋಲುಗಳನ್ನು ದಾಖಲಿಸುವ ಮೂಲಕ ತನ್ನ ವಿಶ್ವಕಪ್ ಗೋಲುಗಳ ಸಂಖ್ಯೆಯನ್ನು 18ಕ್ಕೆ ಏರಿಸಿದರು. ಇದರೊಂದಿಗೆ ವಿಶ್ವಕಪ್ ಇತಿಹಾಸದ ಅಗ್ರ ಗೋಲುಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಪಂದ್ಯದ 9ನೇ ನಿಮಿಷದಲ್ಲೇ ಪೆನಾಲ್ಟಿ ಅವಕಾಶ ಸಿಕ್ಕಿದ್ದರೂ ಮೆಸ್ಸಿ ಗುರಿ ತಪ್ಪಿಸಿದರು. ಆದರೆ 38ನೇ ನಿಮಿಷದಲ್ಲಿ ಥಿಯಾಗೊ ಅಲ್ಮಾಡಾ ಮತ್ತು ಫಾಕುಂಡೊ ಮೆಡಿನಾ ರೂಪಿಸಿದ ಸುಂದರ ಚಲನೆಯ ಅಂತ್ಯದಲ್ಲಿ ಮೆಸ್ಸಿ ಗೋಲು ಬಾರಿಸಿ ಅರ್ಜೆಂಟೀನಾಗೆ ಮುನ್ನಡೆ ನೀಡಿದರು.

ಮೆಸ್ಸಿ ಸಾಧನೆಗಳು: ಹೆಚ್ಚುವರಿ ಸಮಯದ ಕೊನೆಯ ಕ್ಷಣಗಳಲ್ಲಿ ಮತ್ತೊಮ್ಮೆ ಮಿಂಚಿದ ಮೆಸ್ಸಿ, ತನ್ನ ಮೊದಲ ಪ್ರಯತ್ನವನ್ನು ಗೋಲ್‌ಕೀಪರ್ ಅಲೆಕ್ಸಾಂಡರ್ ಶ್ಲಾಗರ್ ತಡೆದ ಬಳಿಕ ರೀಬೌಂಡ್ ಚೆಂಡನ್ನು ಜಾಲಕ್ಕಟ್ಟಿ ದಾಖಲೆಯ ಗೋಲಿನ ಸಂಭ್ರಮ ಆಚರಿಸಿದರು. ಇಷ್ಟೇ ಅಲ್ಲದೆ, ಮೆಸ್ಸಿ ಸತತ ಆರು ವಿಶ್ವಕಪ್ ಪಂದ್ಯಗಳಲ್ಲಿ ಗೋಲು ಗಳಿಸಿದ ವಿಶ್ವದ ಕೇವಲ ಮೂರನೇ ಆಟಗಾರರಾದರು. ಈ ಹಿಂದೆ ಜಸ್ಟ್ ಫಾಂಟೈನ್ ಮತ್ತು ಜೈರ್ಜಿನ್ಹೋ ಮಾತ್ರ ಈ ಸಾಧನೆ ಮಾಡಿದ್ದರು.

- ಲಿಯೋನೆಲ್ ಮೆಸ್ಸಿಯಿಂದಲೇ 2 ಗೋಲು
- ಮೆಸ್ಸಿ ಗೋಲುಗಳ ಸಂಖ್ಯೆ 18ಕ್ಕೆ ಏರಿಕೆ
- ಮಿರೋಸ್ಲಾವ್ ದಾಖಲೆ ಹಿಂದಿಕ್ಕಿದ ಮೆಸ್ಸಿ
- ಅರ್ಜೆಂಟೀನಾ ನಾಕೌಟ್ ಹಂತಕ್ಕೆ ಅರ್ಹತೆ



ಅಲ್ಜೀರಿಯಾ, ನಾರ್ವೆಗೆ ಗೆಲುವು

ಇರ್ಲಿಂಗ್ ಹಾಲೆಂಡ್ ಅವರ ದ್ವಿಗೋಲು ಪ್ರದರ್ಶನದೊಂದಿಗೆ ನಾರ್ವೆ ತಂಡವು ಸೆನೆಗಲ್ ಅನ್ನು 3-2ರಿಂ ಸೋಲಿಸಿತು. ಪಂದ್ಯದಲ್ಲಿ ಮೊದಲಿನಿಂದಲೂ ರಕ್ಷಣಾ ಆಟಗಾರರು ಉತ್ತಮ ಪ್ರದರ್ಶನ ನೀಡುತ್ತಾ ಬಂದರು. 43ನೇ ನಿಮಿಷದಲ್ಲಿ ಮಾರ್ಕಸ್ ಪಿಡರ್‌ಸೆನ್ ಗೋಲು ಗಳಿಸಿ ಫ್ರಾನ್ಸ್‌ಗೆ ಮುನ್ನಡೆ ತಂದರು. ಐದು ನಿಮಿಷ ಬಳಿಕ 48ನೇ ನಿಮಿಷ ಹಾಲೆಂಡ್ ಮತ್ತೊಂದು ಗೋಲು ಗಳಿಸಿ ಮುನ್ನಡೆಯನ್ನು 2ಕ್ಕೆ ವಿಸ್ತರಿಸಿದರು. 53ನೇ ನಿಮಿಷದ ವೇಳೆ ಇಸ್ಮೈಲಾ ಸಾರ್ ಸೆನೆಗಲ್ ಪರ ಮೊದಲ ಗೋಲು ಗಳಿಸಿದರು. ಆದರೆ 58ನೇ ನಿಮಿಷದ ವೇಳೆ ಮಿಂಚಿದ ಹಾಲೆಂಡ್ ಮತ್ತೊಂದು ಗೋಲು ಗಳಿಸಿ ಪಂದ್ಯ ಕಸಿದರು. ಸೆನೆಗಲ್ ಪರ 90+3ನೇ ನಿಮಿಷಕ್ಕೆ ಸಾರ್ ಮತ್ತೊಂದು ಗೋಲ್ ಗಳಿಸಿ ಅಂತರ ಕುಗ್ಗಿಸಿದರು.

ಅತ್ತ ಮತ್ತೊಂದು ಪಂದ್ಯದಲ್ಲಿ ಜಾರ್ಡನ್ ತಂಡವನ್ನು ಅಲ್ಜೀರಿಯಾ



ಮಣಿಸಿತು. ಮೊದಲನೇ ಗೋಲು ಎದುರಾಳಿ ಗಳಿಸಿದ್ದಾದರೂ ಹೋಪ್ ಬಿಡದ ಅಲ್ಜೀರಿಯಾ 69ನೇ ನಿಮಿಷದಲ್ಲಿ ಕಂಬ್ಯಾಕ್ ಮಾಡಿತು. ಪಂದ್ಯದ 36ನೇ ನಿಮಿಷಕ್ಕೆ ನಿಝಾರ್ ಅಲ್ ಗೋಲು ಗಳಿಸಿ ಜಾರ್ಡನ್‌ಗೆ ಮುನ್ನಡೆ ತಂದುಕೊಟ್ಟರು. ನಾಧೀರ್ ಅವರ ಕರಾರುವಾಕ್ ಪ್ರದರ್ಶನದ ಮೂಲಕ ಅಲ್ಜೀರಿಯಾ 69ನೇ ನಿಮಿಷದಲ್ಲಿ ಕಂಬ್ಯಾಕ್ ಮಾಡಿತು. ಅಮಿನ್ 82ನೇ ನಿಮಿಷದಲ್ಲಿ ಭರ್ಜರಿ ಗೋಲೊಂದನ್ನು ಬಾರಿಸಿ ಪಂದ್ಯ ತಿರುಗಿಸಿದರು.

ಮಳೆ ಮಧ್ಯೆಯೂ ಎಂಬಾಪ್ಪೆ ಮ್ಯಾಜಿಕ್

• **ಫಿಲಡೆಲ್ಫಿಯಾ:** ಕೈಲಿಯನ್ ಎಂಬಾಪ್ಪೆ ಅವರ ಎರಡು ಗೋಲುಗಳ ಅದ್ಭುತ ಪ್ರದರ್ಶನದ ನೆರವಿನಿಂದ ಫ್ರಾನ್ಸ್ ತಂಡ ಇರಾಕ್ ವಿರುದ್ಧ 3-0 ಅಂತರದ ಭರ್ಜರಿ ಜಯ ಸಾಧಿಸಿ ಫಿಫಾ ವಿಶ್ವಕಪ್‌ನ ನಾಕೌಟ್ ಹಂತಕ್ಕೆ ಪ್ರವೇಶಿಸಿದೆ. ಮಳೆ ಯಿಂದಾಗಿ ಎರಡು ಗಂಟೆಗಳಿಗೂ ಅಧಿಕ ಕಾಲ ಪಂದ್ಯ ಸ್ಥಗಿತಗೊಂಡಿದ್ದರೂ, ಫ್ರಾನ್ಸ್ ತನ್ನ ಪ್ರಾಬಲ್ಯ ಮೆರೆದಿತು.

ಎಂಬಾಪ್ಪೆ ದಾಖಲೆ: ಬ್ಯಾಲನ್ ಡಿ ಓರ್ ವಿಜೇತ ಉಸ್ಮಾನ್ ಡೆಂಬೆಲೆ ಒಂದು ಗೋಲು ದಾಖಲಿಸಿ ಫ್ರಾನ್ಸ್ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದರು. ತನ್ನ 100ನೇ ಅಂತಾರಾಷ್ಟ್ರೀಯ ಪಂದ್ಯವಾಡಿದ ಎಂಬಾಪ್ಪೆ, 14ನೇ ಮತ್ತು 54ನೇ ನಿಮಿಷಗಳಲ್ಲಿ ಗೋಲು ಬಾರಿಸಿದರು. ಹ್ಯಾಟ್ರಿಕ್ ಅವಕಾಶವೂ ಎಂಬಾಪ್ಪೆಗೆ ಸಿಕ್ಕಿತಾದರೂ ಕೊನೆಯ ಕ್ಷಣದಲ್ಲಿ ಗುರಿ ತಪ್ಪಿಸಿಕೊಂಡರು. ಆ ಮೂಲಕ ಕಿಲಿಯನ್ ವಿಶ್ವಕಪ್‌ನಲ್ಲಿ ತನ್ನ ಒಟ್ಟು ಗೋಲುಗಳ ಸಂಖ್ಯೆಯನ್ನು 16ಕ್ಕೆ ಏರಿಸಿದರು. ಈ ಮೂಲಕ ಜರ್ಮನಿಯ ಮಿರೋಸ್ಲಾವ್ ಕ್ಲೋಸೆ ಅವರ ದಾಖಲೆಯನ್ನು



ಸರಿಗಟ್ಟಿದ ಎಂಬಾಪ್ಪೆ, ವಿಶ್ವಕಪ್ ಇತಿಹಾಸದ ಎರಡನೇ ಅತಿ ಹೆಚ್ಚು ಗೋಲು ಗಳಿಸಿದ ಆಟಗಾರರ ಪಟ್ಟಿಯಲ್ಲಿ ಜಂಟಿ ಸ್ಥಾನಕ್ಕೇರಿದರು. ಈಗ ಅವರು ಅರ್ಜೆಂಟೀನಾದ ಲಿಯೋನೆಲ್ ಮೆಸ್ಸಿ (18) ದಾಖಲೆಯ ಬೆನ್ನಟ್ಟುತ್ತಿದ್ದಾರೆ.

ಪಂದ್ಯಕ್ಕೆ ಮಳೆ ಅಡ್ಡಿ: ಮೊದಲಾರ್ಧದ ಅಂತ್ಯದಲ್ಲಿ ಭಾರೀ ಮಳೆ ಹಾಗೂ ಗುಡುಗು-ಮಿಂಚಿನ ಕಾರಣ ಪಂದ್ಯ ಸುಮಾರು ಎರಡು ಗಂಟೆಗಳ ಕಾಲ ಸ್ಥಗಿತಗೊಂಡಿತು. ಪ್ರೇಕ್ಷಕರನ್ನು ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಸೂಚಿಸಲಾಯಿತು. ವಿರಾಮದ ಬಳಿಕವೂ ಫ್ರಾನ್ಸ್‌ನ ದಾಳಿಯ ಆಟ ಮುಂದುವರಿಯಿತು.

ಮುಖ್ಯಾಂಶಗಳು

- ಫ್ರಾನ್ಸ್ 3-0 ಇರಾಕ್
- ಕೈಲಿಯನ್ ಎಂಬಾಪ್ಪೆ 2 ಗೋಲು
- ಉಸ್ಮಾನ್ ಡೆಂಬೆಲೆ 1 ಗೋಲು

ಗೋಲು

- 14ನೇ ನಿಮಿಷ: ಕೈಲಿಯನ್ ಎಂಬಾಪ್ಪೆ
- 54ನೇ ನಿಮಿಷ: ಕೈಲಿಯನ್ ಎಂಬಾಪ್ಪೆ
- 82ನೇ ನಿಮಿಷ: ಉಸ್ಮಾನ್ ಡೆಂಬೆಲೆ

ಕಿರುಸುದ್ದಿ

ಹಾಕಿ: ಭಾರತಕ್ಕೆ ಪಾಕ್ ವಿರುದ್ಧ ರೋಚಕ ಜಯ

• **ಹೊಸದಿಲ್ಲಿ:** ಕೊನೆ ಕ್ಷಣದ ಥ್ರಿಲ್ ಗೆದ್ದಿರುವ ಭಾರತ ಪುರುಷರ ಹಾಕಿ ತಂಡವು ಪಾಕಿಸ್ತಾನ ತಂಡದ ಸೆದೆಬಿಡೆದಿದೆ. ಇಲ್ಲಿ ನಡೆಯುತ್ತಿರುವ ಎಫ್‌ಐಎಚ್ ಹಾಕಿ ಪ್ರೊ ಲೀಗ್ ಪಂದ್ಯಾವಳಿಯ ಲೀಗ್ ಪಂದ್ಯದಲ್ಲಿ 3-2ರಿಂದ ಮಣಿಸಿರುವ ಭಾರತೀಯರು ಭಾರೀ ಮುನ್ನಡೆ ಸಾಧಿಸಿದ್ದಾರೆ. ಮೊದಲನೇ ಕ್ವಾರ್ಟರ್‌ನಲ್ಲಿ 3 ಪೆನಾಲ್ಟಿ ಕಾರ್ನರ್ ಪಡೆದ ಪಾಕಿಸ್ತಾನ ತಂಡ ನದೀಮ್ ಖಾನ್ 14ನೇ ನಿಮಿಷದಲ್ಲಿ ಗೋಲು ಗಳಿಸಿದರು. ಇದರೊಂದಿಗೆ ಪಾಕಿಸ್ತಾನ ಮುನ್ನಡೆ ಪಡೆಯಿತು. ಎರಡನೇ ಕ್ವಾರ್ಟರ್‌ವರೆಗೂ ಪೆನಾಲ್ಟಿ ಕಾರ್ನರ್‌ಗಳನ್ನು ಪಡೆದ ಭಾರತ 22ನೇ ನಿಮಿಷಕ್ಕೆ ಮೊದಲ ಗೋಲು ಗಳಿಸಿತು. ಅಭಿಷೇಕ್ ಭಾರತದ ಸ್ಕೋರ್ ಅನ್ನು ಸಮಬಲಕ್ಕೆ ತಂದರು. 2 ನಿಮಿಷ ಬಳಿಕ ನೀಲಕಂಠ ಶರ್ಮ ಮತ್ತೊಂದು ಗೋಲು ಗಳಿಸಿ ಭಾರತಕ್ಕೆ ಮುನ್ನಡೆ ತಂದುಕೊಟ್ಟರು. ಮೂರನೇ ಕ್ವಾರ್ಟರ್‌ನಲ್ಲಿ ಮತ್ತೊಂದು ಗೋಲು ಗಳಿಸಿದ ಭಾರತ ಗೆಲುವಿನತ್ತ ಸಾಗಿತ್ತು. 51.39ನೇ ನಿಮಿಷಕ್ಕೆ ರಾಜೇಂದ್ರ ಮತ್ತೊಂದು ಗೋಲು ಗಳಿಸಿ ಮುನ್ನಡೆಯನ್ನು 4-1ಕ್ಕೆ ಹಿಗ್ಗಿಸಿದರು. ಆದಾಗ್ಯೂ ಅಂತಿಮ ಕ್ವಾರ್ಟರ್‌ನಲ್ಲಿ 52ನೇ ನಿಮಿಷಕ್ಕೊಂದು, 60ನೇ ನಿಮಿಷಕ್ಕೊಂದು ಗೋಲು ಗಳಿಸಿದ ಪಾಕಿಸ್ತಾನ ಅಂತರ 3-4ಕ್ಕೆ ಕುಗ್ಗಿಸಿತು.

ವಿಂಬಲ್ಡನ್ ಚಾಂಪಿಯನ್ ಮಾರ್ಕೆಟಾ ಅಮಾನತು

• **ದುಬೈ:** ಡೋಪಿಂಗ್ ವಿರೋಧಿ ಪರೀಕ್ಷೆಗೆ ನಿರಾಕರಿಸಿದ್ದಕ್ಕಾಗಿ ವಿಂಬಲ್ಡನ್ ಚಾಂಪಿಯನ್ ಮಾರ್ಕೆಟಾ ವೊಂಡ್ರೌಸೋವಾ ಅವರನ್ನು ನಾಲ್ಕು ವರ್ಷಗಳ ಅಮಾನತುಗೊಳಿಸಲಾಗಿದೆ. ಡಿಸೆಂಬರ್ 2025 ರಲ್ಲಿ ತನ್ನ ಮನೆಯಲ್ಲಿ ಸ್ಪರ್ಧೆಯ ಹೊರಗಿನ ಪರೀಕ್ಷಾ ಪ್ರಯತ್ನದ ಸಮಯದಲ್ಲಿ ಡೋಪಿಂಗ್ ನಿಯಂತ್ರಣ ಅಧಿಕಾರಿಯೊಬ್ಬರು ವೊಂಡ್ರೌಸೋವಾ ಮಾದರಿಯನ್ನು ಸಲ್ಲಿಸಲಿಲ್ಲ. 2023 ರಲ್ಲಿ ವಿಂಬಲ್ಡನ್ ಗೆದ್ದ 26 ವರ್ಷದ ಜೆಕ್, ಒತ್ತಡ ಮತ್ತು ಕಳಪೆ ಮಾನಸಿಕ ಆರೋಗ್ಯವು ತನ್ನ ನಿರ್ಧಾರ ತೆಗೆದುಕೊಳ್ಳುವಿಕೆಯ ಮೇಲೆ ಪರಿಣಾಮ ಬೀರಿದೆ ಎಂದು ಹೇಳಿದರು, ಸ್ವತಂತ್ರ ನ್ಯಾಯಮಂಡಳಿಯು ವೊಂಡ್ರೌಸೋವಾ ಅವರ ಹಕ್ಕುಗಳನ್ನು ಮತ್ತು ಪರೀಕ್ಷೆಯನ್ನು ನಡೆಸಲು ಪ್ರಯತ್ನಿಸಿದ ಡೋಪಿಂಗ್ ನಿಯಂತ್ರಣ ಅಧಿಕಾರಿಯ ಸಾಕ್ಷ್ಯವನ್ನು ಪರಿಗಣಿಸಿದೆ.

ಅಮಾನತು ವಾಪಸ್‌ಗೆ ಫೆನ್ಸರ್ ಭವಾನಿ ಮನವಿ

• **ಹೊಸದಿಲ್ಲಿ:** ಏಷ್ಯನ್ ಫೆನ್ಸಿಂಗ್ ಚಾಂಪಿಯನ್‌ಶಿಪ್‌ನ ತಂಡದ ಈವೆಂಟ್‌ನಲ್ಲಿ ತನ್ನ ವರ್ತನೆಗೆ ಬೇಷರತ್ ಕ್ಷಮೆಯಾಚಿಸಿರುವ ಭಾರತದ ಪ್ರಮುಖ ಫೆನ್ಸರ್ ಭವಾನಿ ದೇವಿ, ತಮ್ಮ ಮೇಲೆ ವಿಧಿಸಲಾದ ಎರಡು ತಿಂಗಳ ಅಮಾನತು ಶಿಕ್ಷೆಯನ್ನು ಮರುಪರಿಶೀಲಿಸುವಂತೆ ಮನವಿ ಮಾಡಿದ್ದಾರೆ. ಕೂಟವೊಂದರಲ್ಲಿ ಅನುಚಿತ ವರ್ತನೆಗೈದಿರುವ ನಿಟ್ಟಿನಲ್ಲಿ, ಭವಾನಿಗೆ ಕಪ್ಪು ಕಾರ್ಡ್ ತೋರಿಸಲಾಯಿತು, ಇದರ ಪರಿಣಾಮವಾಗಿ ಅನ್ವಯವಾಗುವ ಶಿಸ್ತಿನ ನಿಯಮಗಳ ಅಡಿಯಲ್ಲಿ ಎರಡು ತಿಂಗಳ ಅಮಾನತು ವಿಧಿಸಲಾಯಿತು. ವಿಷಯದ ಗಂಭೀರತೆಯನ್ನು ಗುರುತಿಸಿ, ಭವಾನಿ ದೇವಿ ಅವರು ಕ್ಷಮೆಯಾಚಿಸಿದ್ದಾರೆ ಮತ್ತು ಕ್ರೀಡೆಯ ನಿಯಮಗಳು, ಅಧಿಕಾರಿಗಳು ಮತ್ತು ಮೌಲ್ಯಗಳ ಬಗ್ಗೆ ತಮ್ಮ ಆಳವಾದ ಗೌರವವನ್ನು ವ್ಯಕ್ತಪಡಿಸಿದ್ದಾರೆ ಎಂದು ಫೆನ್ಸಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ (ಎಫ್ಎಐ) ಮಾಧ್ಯಮ ಪ್ರಕಟಣೆ ತಿಳಿಸಿದೆ.

ಶೇ. 60ರಷ್ಟು ಕಡಿಮೆ ವೆಚ್ಚದಲ್ಲಿ ಕಾಮನ್‌ವೆಲ್ತ್

• **ಹೊಸದಿಲ್ಲಿ:** ಅಹಮದಾಬಾದ್‌ನಲ್ಲಿ ನಡೆಯಲಿರುವ ಕಾಮನ್‌ವೆಲ್ತ್ ಗೇಮ್ಸ್ ಕೂಟದಲ್ಲಿ 17 ಕ್ರೀಡೆಗಳು ಇರಲಿವೆ. ಹಿಂದಿನ ಮಹಾಕೂಟಗಳಲ್ಲಿ ಖರ್ಚು ಮಾಡಲಾಗಿರುವ ಮೊತ್ತಕ್ಕಿಂತಲೂ ಶೇ. 60ರಷ್ಟು ಕಡಿಮೆ ವೆಚ್ಚದಲ್ಲಿ ಕೂಟ ನಡೆಯಲಿದೆ. 2032ರ ಒಲಿಂಪಿಕ್ಸ್ ಆಯೋಜನೆಗೂ ಮುನ್ನ ಭಾರತ 2030ರ ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಆತಿಥ್ಯ ನೀಡಲಿದೆ. ಅಹಮದಾಬಾದ್ ಇದಕ್ಕೆ ಹೋಸ್ಟಿಂಗ್ ಸಿಟಿಯಾಗಿ ಆಯ್ಕೆಯಾಗಿದೆ. ತಯಾರಿ ಕುರಿತಂತರ ಮಾತನಾಡಿರುವ ಕಾಮನ್‌ವೆಲ್ತ್ ಗೇಮ್ಸ್ ಸಿಇಒ ಕೇಟೀ ಸ್ಯಾಡ್ಲೀರ್ ಈ ಬಗ್ಗೆ ಮಾಹಿತಿ ಹಂಚಿಕೊಂಡಿದ್ದಾರೆ. ಕೂಟಕ್ಕೆ 4 ವರ್ಷಗಳಿರುವಾಗಲೇ ನಾವು ಸಿದ್ಧತೆಗಳನ್ನು ಶುರು ಮಾಡಿಕೊಂಡಿದ್ದೇವೆ. ಹೋಸ್ಟಿಂಗ್ ಮಾದರಿಯೊಂದನ್ನು ಸಿದ್ಧಪಡಿಸಲಾಗಿದೆ. ಈ ಮಾದರಿಯ ಪ್ರಕಾರ ಹಿಂದಿನ ಕ್ರೀಡಾಕೂಟಗಳಿಗಿಂತಲೂ ಕಡಿಮೆ ಮೊತ್ತದಲ್ಲಿ ನಡೆಸಲಾಗುವುದು ಎಂದಿದ್ದಾರೆ.

ಶ್ರೀಲಂಕಾಗೆ ಗೆಲುವು

• **ಬ್ರಿಸ್ಟಾಲ್ (ಇಂಗ್ಲೆಂಡ್):** ತಂಡದ ಸಾಂಘಿಕ ಬೌಲಿಂಗ್ ದಾಳಿ ಮತ್ತು ನಾಯಕಿ ಚಮಾರಿ ಅನಂತಪ್ರಭು ಅವರ ಸ್ಫೋಟಕ ಶತಕದ ನೆರವಿನೊಂದಿಗೆ ಮಿಂಚಿರುವ ಶ್ರೀಲಂಕಾ ಮಹಿಳೆಯರ ತಂಡವು ಇಲ್ಲಿ ನಡೆಯುತ್ತಿರುವ ಮಹಿಳೆಯರ ಟಿ20 ವಿಶ್ವಕಪ್ ಪಂದ್ಯಾವಳಿಯ ತನ್ನ ಎರಡನೇ ಪಂದ್ಯದಲ್ಲಿ ಐರ್ಲೆಂಡ್ ವಿರುದ್ಧ ಭರ್ಜರಿ ಗೆಲುವು ಸಾಧಿಸಿದೆ. ಪಂದ್ಯದಲ್ಲಿ ಟಾಸ್ ಗೆದ್ದ ಶ್ರೀಲಂಕಾ ಬ್ಯಾಟಿಂಗ್ ಆಹ್ವಾನ ಕೊಟ್ಟಿತು. ಗ್ಯಾಬಿ ಲೇವಿಸ್ ಅವರ 59 ರನ್ ಬ್ಯಾಟಿಂಗ್ ಆಸರೆ ಪಡೆದ ಐರ್ಲೆಂಡ್ 20 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 130 ರನ್ ಗಳಿಸಿತು. ಶ್ರೀಲಂಕಾ ಪರ ಮಿಥಾಲಿ, ಕುಮಾರಿ, ಚಮಾರಿ ಮತ್ತು ಸಿಲ್ವಾ ತಲಾ ಒಂದು ವಿಕೆಟ್ ಕಿತ್ತರು. ಗುರಿ ಬೆನ್ನತ್ತಿದ ಶ್ರೀಲಂಕಾ ಯಾವುದೇ ಅಡೆತಡೆ ಎದುರಿಸದರೆ, ಒಂದು ವಿಕೆಟ್ ಕಳೆದುಕೊಂಡು 15.1 ಓವರ್‌ಗಳಲ್ಲಿ 134 ರನ್ ಗಳಿಸಿ ಪಂದ್ಯ ಮುಗಿಸಿತು. ನಾಯಕಿ ಚಮಾರಿ(106) ಸ್ಫೋಟಕ ಶತಕ ಬಾರಿಸಿದರು.

ಮರಳಿ ಗೂಡಿಗೆ ರಿಷಭ್ ಪಂತ್

- ಕುಲ್ದೀಪ್ ಈಗ ಲಖನೌಗೆ
- ಐಪಿಎಲ್ ಮುಗಿದ ಒಂದೇ ತಿಂಗಳಲ್ಲಿ ಟ್ರೇಡ್!

• **ಹೊಸದಿಲ್ಲಿ:** ವಿಕೆಟ್-ಕೀಪರ್, ಬ್ಯಾಟರ್ ರಿಷಭ್ ಪಂತ್ ತಮ್ಮ ತವರು ತಂಡ ದಿಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಮರಳಿದ್ದಾರೆ. ಕುಲ್ದೀಪ್ ಯಾದವ್ ತಮ್ಮ ತವರೂರಿನ ಫ್ರಾಂಚೈಸಿ ಲಖನೌ ಸೂಪರ್ ಜೇಂಟ್ಸ್ ಸೇರಿಕೊಂಡಿದ್ದಾರೆ. ಐಪಿಎಲ್ ಮುಗಿದ ಒಂದೇ ತಿಂಗಳ ಒಳಗೆ ಐತಿಹಾಸಿಕ ಟ್ರೇಡ್ ಒಂದು ನಡೆದಿದೆ.

ಎರಡು ಪಂದ್ಯಾವಳಿಗಳಲ್ಲಿ ನಿರಂತರ ವೈಫಲ್ಯ ಅನುಭವಿಸಿದ್ದ ತುಟ್ಟಿ ಆಟಗಾರ ರಿಷಭ್ ಪಂತ್ ಎಲ್ಲಿ ಶುರು ಮಾಡಿದ್ದರೋ ಅಲ್ಲೇ ಬಂದಿದ್ದಾರೆ. ಕೆಲವು ದಿನಗಳಿಂದ ಓಡಾಡುತ್ತಿದ್ದ ವರದಿಗಳಂತೆ ಒಪ್ಪಂದ ಮಾಡಿಕೊಂಡಿರುವ ದಿಲ್ಲಿ ಹಾಗೂ ಲಖನೌ ಫ್ರಾಂಚೈಸಿಗಳು ಅಧಿಕೃತ ಘೋಷಣೆ ಮಾಡಿದ್ದಾರೆ. ತಮ್ಮ ಸಂಬಳದಲ್ಲಿ ಕಡಿತ ಕಂಡಿರುವ ರಿಷಭ್ ಪಂತ್ ಈಗ ದುಬಾರಿ ಆಟಗಾರರಾಗಿ ಆಡುವುದಿಲ್ಲ. 15 ಕೋಟಿ ರೂ.ಗೆ ಅವರನ್ನು ದಿಲ್ಲಿ ಟ್ರೇಡ್ ಮಾಡಿಕೊಂಡಿದೆ. ಮತ್ತೊಂದೆಡೆ ಇಷ್ಟು ದಿನ ದಿಲ್ಲಿಯಲ್ಲೇ ಆಡಿದ್ದ ಚೈನಾಮೆನ್ ಬೌಲರ್ ಕುಲ್ದೀಪ್ ಯಾದವ್ 13.5 ಕೋಟಿ ರೂ.ಗೆ ಲಖನೌ ಸೂಪರ್ ಜೇಂಟ್ಸ್ ಸೇರಿಕೊಂಡಿದ್ದಾರೆ.

ಕೆ.ಎಲ್. ರಾಹುಲ್ ಅವರಿಗೆ ನಾಯಕತ್ವ ಸಿಗುವ ಎಲ್ಲಾ ಲಕ್ಷಣಗಳು ಕಾಣಿಸುತ್ತಿವೆ. ಅದರಂತೆ ಮ್ಯಾನೇಜ್ಮೆಂಟ್‌ಗೆ ಸೌರವ್ ಗಂಗೂಲಿ ಮತ್ತು ಯುವರಾಜ್ ಕೂಡ ಬರಲಿದ್ದಾರೆ ಎಂಬ ಮಾತು ಹರಿದಾಡುತ್ತಲೇ ಇದೆ. ಆದರೆ ಇನ್ನೂ ಖಚಿತವಾಗಿಲ್ಲ. ಪಂತ್ 2016ರಲ್ಲಿ ದಿಲ್ಲಿ ತಂಡದ ಮೂಲಕವೇ ಐಪಿಎಲ್‌ಗೆ ಲಗ್ಗೆ ಹಾಕಿದ್ದರು. 111 ಪಂದ್ಯದಲ್ಲಿ ದಿಲ್ಲಿ ತಂಡವನ್ನು ಪ್ರತಿನಿಧಿಸಿರುವ ಅವರು, ಆ ಫ್ರಾಂಚೈಸಿ ಪರ ಅತಿ ಹೆಚ್ಚು ಪಂದ್ಯ ಆಡಿದ ಆಟಗಾರ ಅನಿಸಿಕೊಂಡಿದ್ದಾರೆ.

ಐರ್ಲೆಂಡ್-ಇಂಗ್ಲೆಂಡ್ ಸರಣಿ: ನಿತೀಶ್ ಔಟ್, ಸೂರ್ಯಾಂಶ್‌ಗೆ ಅವಕಾಶ

ನೀಲಿ ಜೆರ್ಸಿ ಪಡೆದ ಸೂರ್ಯವಂಶಿ

• **ಮುಂಬೈ:** ಐರ್ಲೆಂಡ್ ಹಾಗೂ ಇಂಗ್ಲೆಂಡ್ ಸರಣಿಗಳಿಗಾಗಿ ಭಾರತ ಕ್ರಿಕೆಟ್ ತಂಡ ವಿಮಾನ ಹತ್ತಿದ್ದಾಗಿದೆ. ಪಂದ್ಯಗಳ ಆರಂಭಕ್ಕೂ ಮುನ್ನವೇ ಇತಿಹಾಸದಲ್ಲಿ ಕೆಲವೊಮ್ಮೆ ಮಾತ್ರ ನಡೆಯುವ ವಿಸ್ಮಯದಂತೆ ಸ್ಫೋಟಕ ಬ್ಯಾಟರ್ ವೈಭವ್ ಸೂರ್ಯವಂಶಿ ನೀಲಿ ಜೆರ್ಸಿ ಪಡೆದರು. ಈ ತುಣುಕನ್ನು ಹಂಚಿಕೊಂಡಿರುವ ಬಿಸಿಸಿಐ ವಿಜೃಂಭಣೆಯಿಂದ ಆಚರಿಸಿದೆ. ಇತಿಹಾಸದ ಪುಟಗಳಲ್ಲಿ ಸಚಿನ್ ತೆಂಡೂಲ್ಕರ್ ಅತಿ ಕಿರಿಯರಾಗಿ ಅಂತಾರಾಷ್ಟ್ರೀಯ ಪಂದ್ಯವನ್ನಾಡಿದ್ದರು. ಈ ದಾಖಲೆಯನ್ನು ಅಳಿಸಲು 15 ವರ್ಷದ ವೈಭವ್ ಸೂರ್ಯವಂಶಿ ಸಜ್ಜಾಗಿದ್ದಾರೆ. ಏಷ್ಯನ್ ಗೇಮ್ಸ್‌ನಲ್ಲಿ ಕ್ರಿಕೆಟ್ ಮರಳಿರುವ ದೃಷ್ಟಿಯಿಂದ ಅಭ್ಯಾಸ ನಡೆಸಲು ಭಾರತ ತಂಡ ಐರ್ಲೆಂಡ್ ಮತ್ತು ಇಂಗ್ಲೆಂಡ್ ಜತೆಗೆ ಟಿ20 ಸರಣಿಗಳನ್ನಾಡಲು



ಪ್ರವಾಸ ಮಾಡಿದೆ. ಮಂಗಳವಾರದಂದು ತಂಡವು ವಿಮಾನದ ಮೂಲಕ ಪ್ರಯಾಣಿಸಿತು. ಶ್ರೇಯಸ್ ಅಯ್ಯರ್ ನಾಯಕತ್ವದಲ್ಲಿ ಹೊಸ ತಂಡ ಪ್ರಕಟಿಸಿರುವ ಬಿಸಿಸಿಐ ವೈಭವ್ ಸೂರ್ಯವಂಶಿಗೆ ಅವಕಾಶ ನೀಡಿದೆ. ಜೂನ್ 26 ಮತ್ತು 28ರಂದು ಭಾರತ ಐರ್ಲೆಂಡ್‌ನೊಂದಿಗೆ ಪಂದ್ಯವನ್ನಾಡಲಿದೆ, ಬಳಿಕ ಇಂಗ್ಲೆಂಡ್‌ಗೆ ತೆರಳಲಿದೆ.

ನಿತೀಶ್ ಬದಲಿಗೆ ಶೇಡ್ಗೆ

ಆಲ್‌ರೌಂಡರ್ ನಿತೀಶ್ ಕುಮಾರ್ ರೆಡ್ಡಿ ಗಾಯಗೊಂಡಿರುವ ನಿಟ್ಟಿನಲ್ಲಿ ಅವರ ಬದಲಿಗೆ ಸೂರ್ಯಾಂಶ್ ಶೆಡ್ಗೆ ಅವರನ್ನು ತಂಡಕ್ಕೆ ಆಯ್ಕೆ ಮಾಡಲಾಗಿದೆ. ಇತ್ತೀಚಿಗಷ್ಟೆ ನಡೆದ ಭಾರತ ಎ, ಅಫ್ಘಾನಿಸ್ತಾನ ಎ ಮತ್ತು ಶ್ರೀಲಂಕಾ ಎ ತಂಡಗಳ ನಡುವಿನ ತ್ರಿಕೋನ ಸರಣಿಯಲ್ಲಿ ಅವರು ತಂಡದ ಭಾಗವಾಗಿದ್ದರು. ಐಪಿಎಲ್‌ನಲ್ಲಿ ಪಂಜಾಬ್ ಕಿಂಗ್ಸ್ ತಂಡದ ಪರ ಉತ್ತಮ ಪ್ರದರ್ಶನ ನೀಡಿದ್ದ ಶೇಡ್ಗೆ ಫಿನಿಶರ್ ಆಗಿ ಕಾರ್ಯ ನಿರ್ವಹಿಸುತ್ತಾರೆ. ಆಫ್ಘನ್ ವಿರುದ್ಧ ನಡೆದಿದ್ದ ಕೊನೆ ಏಕದಿನ ಪಂದ್ಯದ ವೇಳೆ ನಿತಿಶ್ ಕುಮಾರ್ ಗಾಯಗೊಂಡಿದ್ದರು.





ಕ್ರಿಕೆಟಿಗ ರೋಹಿತ್ ಶರ್ಮ ಮತ್ತು ಹಾಕಿ ಆಟಗಾರ್ತಿ ಸವಿತಾ ಪುನಿಯಾ ಅವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಪದ್ಮಶ್ರೀ ಪ್ರಶಸ್ತಿ ಪ್ರದಾನ ಮಾಡಿದರು.

ಸ್ಕಾಟ್ಲೆಂಡ್ ವಿರುದ್ಧ ಗೆದ್ದ ನ್ಯೂಜಿಲೆಂಡ್

• **ಲೀಡ್ಸ್:** ಮೊದಲ ಪಂದ್ಯದಲ್ಲಿ ಸೋತ ನಂತರ ಕಳೆದ ಪಂದ್ಯದಲ್ಲಿ ಜಯ ಸಾಧಿಸಿರುವ ಹಾಲಿ ಚಾಂಪಿಯನ್ ನ್ಯೂಜಿಲೆಂಡ್ ತಂಡವು ಸ್ಕಾಟ್ಲೆಂಡ್ ತಂಡವನ್ನು ಮಣಿಸಿದೆ. ಡರ್ಸೀ ಕಾರ್ಟರ್ ಅವರ ಸ್ಫೋಟಕ ಬ್ಯಾಟಿಂಗ್ ಹೊರತಾಗ್ಯೂ ಸೋತ ಸ್ಕಾಟ್ಲೆಂಡ್ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 131 ರನ್ ಗಳಿಸಿತು. ಡರ್ಸೀ 52 ಬಾಲ್‌ಗಳಲ್ಲಿ ಔಟಾಗದೆ 72 ರನ್ ಗಳಿಸಿದರು. ಸಾರಾ ಬ್ರೇಸ್ 25 ರನ್ ಗಳಿಸಿದರು. ನ್ಯೂಜಿಲೆಂಡ್ ಪರ ಮೀಲಿ ಕೇರ್ 17 ರನ್‌ಗೆ 3 ವಿಕೆಟ್ ಪಡೆದರೆ, ಸೋಫಿ ಡಿವೈನ್ 19 ರನ್‌ಗೆ 2 ವಿಕೆಟ್ ಕಿತ್ತರು. ಗುರಿ ಬೆನ್ನತ್ತಿದ ನ್ಯೂಜಿಲೆಂಡ್ 18.2 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 132 ರನ್ ಗಳಿಸಿ ಪಂದ್ಯ ಗೆದ್ದುಕೊಂಡಿದೆ. ಇಝಿ ಶಾರ್ಪ್ 43 ಬಾಲ್‌ಗಳಲ್ಲಿ 68 ರನ್ ಗಳಿಸಿದರು. ಬ್ರೂಕ್ 38 ಬಾಲ್‌ಗಳಲ್ಲಿ 41 ರನ್ ಗಳಿಸಿದರು. ಸ್ಕಾಟ್ಲೆಂಡ್ ಪರ ಕ್ಯಾಥರೀನ್ 13 ರನ್‌ಗೆ 2, ಸ್ಲಾಟರ್ 22ಕ್ಕೆ 2 ವಿಕೆಟ್ ಕಿತ್ತರು.

ಇಂದು ಇಂಗ್ಲೆಂಡ್-ವಿಂಡೀಸ್ ಪಂದ್ಯ: ಬುಧವಾರದ ಏಕೈಕ ಪಂದ್ಯದಲ್ಲಿ ಆತಿಥ್ಯ ಇಂಗ್ಲೆಂಡ್ ಮತ್ತು ವೆಸ್ಟ್ ಇಂಡೀಸ್ ತಂಡಗಳು ಎದುರಾಗಲಿವೆ.

ಗುಲ್ಬರ್ಗಾ ಪುನರಾಗಮನ

• **ಮೈಸೂರು:** ಸೋಮವಾರ ರಾತ್ರಿ ಪಂದ್ಯದಲ್ಲಿ ಸೋತಿರುವ ಗುಲ್ಬರ್ಗಾ ಮ್ಯಾಸ್ಟಿಕ್ಸ್ ತಂಡವು ಮಂಗಳವಾರದ ಪಂದ್ಯದಲ್ಲಿ ಗೆಲುವು ಸಾಧಿಸಿದೆ. ಮಹಾರಾಜ ಟ್ರೋಫಿಯಲ್ಲಿ ಯುವಕರು ಮತ್ತು ಸ್ಟಾರ್‌ಗಳು ಮಿಂಚುತ್ತಿದ್ದು ತಂಡಗಳ ನಡುವಿನ ಪೈಪೋಟಿ ದುಪ್ಪಟ್ಟುಗೊಂಡಿದೆ.


ನಾಯಕ ಮನೀಷ್ ಪಾಂಡೆ ಅವರ ಭರ್ಜರಿ ಅರ್ಧಶತಕದ ಹೊರತಾಗ್ಯೂ ಸೋಮವಾರದಂದು ಗುಲ್ಬರ್ಗಾ ಕೋಸ್ಟಲ್ ಮಂಗಳೂರು ತಂಡದೊಂದಿಗೆ ಸೋತಿತ್ತು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ಗುಲ್ಬರ್ಗಾ 19.5 ಓವರ್‌ಗಳಲ್ಲಿ 177 ರನ್‌ಗಳಿಗೆ ಆಲೌಟ್ ಆಗಿತ್ತು. ಮನೀಷ್ ಪಾಂಡೆ 34 ಬಾಲ್‌ಗಳಲ್ಲಿ 70 ರನ್ ಗಳಿಸಿದ್ದರು. ಮಂಗಳೂರು ಪರ ಶ್ರೇಯಸ್ 3 ವಿಕೆಟ್ ಕಿತ್ತರು. ಗುರಿ ಬೆನ್ನತ್ತಿದ ಮಂಗಳೂರು 16.3 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 182 ರನ್ ಗಳಿಸಿ ಪಂದ್ಯ ಗೆದ್ದಿತು. ನಿಕಿನ್ ಜೋಸ್ 47 ಬಾಲ್‌ಗಳಲ್ಲಿ ಭರ್ಜರಿ ಶತಕ ಬಾರಿಸಿದರು. ಕರುಣ್ ನಾಯರ್ 36 ಬಾಲ್‌ಗಳಲ್ಲಿ 56 ರನ್ ಗಳಿಸಿದರು. ಸೋಮವಾರದ ಸೋಲಿನ ನಡುವೆ ಮಂಗಳವಾರ ಗುಲ್ಬರ್ಗಾ, ಶಿವಮೊಗ್ಗ ತಂಡದ ವಿರುದ್ಧ ಗೆದ್ದು ಕಂಬ್ಯಾಕ್ ಮಾಡಿತು.

ಸಾಂಘಿಕ ಬ್ಯಾಟಿಂಗ್‌ನೊಂದಿಗೆ ಮಿಂಚಿದ ಗುಲ್ಬರ್ಗಾ ಮೊದಲು ಬ್ಯಾಟಿಂಗ್ ಮಾಡಿ ಬರೋಬ್ಬರಿ 232 ರನ್ ಗಳಿಸಿತು. ಲೋಚನ್ 21 ಬಾಲ್‌ಗಳಲ್ಲಿ 47 ರನ್, ಶರತ್ 10 ಬಾಲ್‌ಗಳಲ್ಲಿ 24, ಪ್ರಖರ್ 19 ಬಾಲ್‌ಗಳಲ್ಲಿ 45 ರನ್ ಗಳಿಸಿದರು. ಶಿವಮೊಗ್ಗ ಪರ ನವೀನ್, ಭೀಮ್‌ರಾವ್ 2 ವಿಕೆಟ್ ಪಡೆದುಕೊಂಡರು. ಗುರಿ ಬೆನ್ನತ್ತಿದ ಶಿವಮೊಗ್ಗ 137 ರನ್‌ಗಳಿಗೆ ಆಲೌಟ್ ಆಯಿತು. ಲವನೀತ್ 30 ರನ್ ಗಳಿಸಿದರು. ಗುಲ್ಬರ್ಗಾ ಪರ ಗೌತಂ ಮಿಶ್ರಾ 3, ರೋನಿತ್, ಕ್ರಾಂತಿ ಮತ್ತು ಸುಹಾಸ್ ತಲಾ 2 ವಿಕೆಟ್ ಕಿತ್ತರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ

6024



ಎಡದಿಂದ ಬಲಕ್ಕೆ

1.ಕಾಣಿಸುವಿಕೆ-ಆಡಂಬರವಿದು (3)
3.ತೀವ್ರವಾದ ಪರಿಮಳ ಹೊಂದಿದ ಹೂವು (5)
5.ಹಿತವಾದದ್ದು ಜೊತೆಯಲ್ಲಿಯೇ ಇದೆ (3)
7.ಖಾಲಿ-ಬರಿದಾದುದು ಇಲ್ಲಿದೆ (2)
8.ಸಂಖ್ಯಾತ್ಮಕ-ಲೆಕ್ಕಾಚಾರದಲ್ಲಿ ಜ್ಞಾನಿಯೀತ (4)
9.ವಿವಿಧ ಹಣ್ಣುಗಳ ಮಿಶ್ರಣವಿದು (4)
11.ಮಥುರೆಯ ಒಬ್ಬ ಕ್ರೂರ ರಾಜ (2)
13.ನವಕಟ್ಟು ಕಟ್ಟಿಕೊಂಡ ಅಭಿನಯಗಾರ (3)
15.ಹಲ್ಲುಗಳನ್ನು ಉಜ್ಜುವಿಕೆಯಿದೆ (5)
16.ಧಾರಾಳ ಸ್ವಭಾವದವನೀತ (3)

ಮೇಲಿನಿಂದ ಕೆಳಕ್ಕೆ

1.ತೋಪುಗಳಲ್ಲಿ ಬೆಳೆಯುತ್ತಿರುವ ಮಾವಿನ ಒಂದು ಬಗೆ (4)
2.ಉದ್ಯೋಗ ಅಥವಾ ವೃತ್ತಿಯನ್ನು ಹೀಗೆನ್ನುತ್ತೇವೆ (3)
3.ಸುತನು ಓದುತ್ತಿರುವ ಹದಿನಾಲ್ಕು ಸಾಲುಗಳ ಪದ್ಯ (3)
4.ಮತ್ತೊಂದು ರಾಜ್ಯಕ್ಕೆ ಕಳಿಸುವ ಪ್ರತಿನಿಧಿ (4)
6.ಹಿತ-ನರಿ ಒಳಗೊಂಡ ದೊಡ್ಡಸ್ತಿಕೆ (4)
8.ನಡುಗು-ಕಂಪಿಸುವಿಕೆಯಿದು (4)
10.ಅಲಂಕಾರದಿಂದ ಕೂಡಿದ-ಚೆನ್ನಾಗಿ ಅಲಂಕರಿಸಲ್ಪಟ್ಟದ್ದು (4)
12.ಸಮಾನವಾದ ಮನಸ್ಥಿತಿ-ಸ್ಥಿತಪ್ರಜ್ಞತೆ (4)
13.ಗುರು-ಹಿರಿಯರಿಗೆ ಭಕ್ತಿಯ ಗೌರವ ಸಲ್ಲಿಸುವುದು (3)
14.ಭವ ಕಡೆಯಲ್ಲಿರುವ ಹುಟ್ಟುವಿಕೆ ತಲೆಕೆಳಗಾಗಿದೆ (3)

6023 ಉತ್ತರ

ಎಡದಿಂದ ಬಲಕ್ಕೆ:
1.ಸುಜಲ 3.ಬಲಭಾಗ
5.ಕೋದಂಡ 7.ಸುಗತ
8.ಮಾಯ 10.ನಗ
12.ವಿವರ್ಣ 13.ಪಾನೀಯ
15.ರತ್ನಾಕರ 16.ಹಸಿರು

ಮೇಲಿನಿಂದ ಕೆಳಕ್ಕೆ :
1.ಸುಗ್ಗಿಗೆಳೆಯ 2.ಕೋಮಲ
3.ಬಗ್ಗಡ 4.ಗಟ್ಟಿಗತನ
6.ದಂತಚೂರ್ಣ
7.ಸುಹಾಸಿನೀ
9.ಮಾವಿನಮರ
11.ಗಡಸುನೀರು
13.ಪಾಮರ 14.ಹರೆಯ

ಕಿರುಸುದ್ದಿ

ಪಿಎಚ್‌ಡಿ ಪದವಿ ಪ್ರದಾನ



• **ಧಾರವಾಡ:** ಡಾ.ಕಿರಣ್ ಕುಮಾರ ಅವರಿಗೆ ಧರ್ಮಸ್ಥಳ ಮಂಜುನಾಥೇಶ್ವರ ವಿಶ್ವವಿದ್ಯಾಲಯ 2026ರ ಘಟಿಕೋತ್ಸವದಲ್ಲಿ ದಂತ ವಿಜ್ಞಾನ ವಿಭಾಗದ ಅಡಿಯಲ್ಲಿ ಓರಲ್ ಪ್ಯಾಥಾಲಜಿ ಮತ್ತು ಮೈಕ್ರೋಬಯಾಲಜಿ ವಿಷಯದಲ್ಲಿ ಪಿಎಚ್‌ಡಿ ಪದವಿ ಪ್ರದಾನ ಮಾಡಲಾಯಿತು. ಡಾ.ಕಿರಣ್ ಕುಮಾರ್ ಅವರು "ದೀರ್ಘ ಕೋಡಿಂಗ್ ಮಾಡದ ಆರ್‌ಎನ್‌ಎಗಳ ಡಿಫರೆನ್ಷಿಯಲ್ ಎಕ್ಸ್‌ಪ್ರೆಶನ್ ಮತ್ತು ಓರಲ್ ಸ್ಕ್ವಾಮಸ್ ಸೆಲ್ ಕಾರ್ಸಿನೋಮದಲ್ಲಿ ಮಹತ್ವ ಎಂಬ ವಿಷಯದ ಕುರಿತು ಸಂಶೋಧನಾ ಪ್ರಬಂಧ ಮಂಡಿಸಿದ್ದಾರೆ. ಧಾರವಾಡದ ಸತ್ತೂರಿನ ಎಸ್‌ಡಿಎಂ ಕಾಲೇಜ್ ಆಫ್ ಡೆಂಟಲ್ ಸೈನ್ಸಸ್ ಆ್ಯಂಡ್ ಹಾಸ್ಪಿಟಲ್‌ನ ಓರಲ್ ಪ್ಯಾಥಾಲಜಿ ಮತ್ತು ಮೈಕ್ರೋಬಯಾಲಜಿ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಡಾ.ಕಾವೇರಿ ಹಳ್ಳಿಕೇರಿ ಅವರಿಗೆ ಮಾರ್ಗದರ್ಶನ ಮಾಡಿದ್ದಾರೆ.

ತುರ್ತು ವಿಚಾರಣೆಗೆ ಸುಪ್ರೀಂ ನಕಾರ

ಹನುಮನ ಜನ್ಮಸ್ಥಳ ವಿವಾದ

• **ಕೊಪ್ಪಳ:** ದೇಶಾದ್ಯಂತ ತೀವ್ರ ಕುತೂಹಲ ಕೆರಳಿಸಿರುವ ಭಗವಾನ್ ಹನುಮಂತನ ನಿಜವಾದ ಜನ್ಮಸ್ಥಳ ಯಾವುದು ಎಂಬ ವಿವಾದಕ್ಕೆ ಸಂಬಂಧಿಸಿದಂತೆ ಮಹತ್ವದ ಬೆಳವಣಿಗೆಯೊಂದರಲ್ಲಿ ಸುಪ್ರೀಂ ಕೋರ್ಟ್ ತುರ್ತು ವಿಚಾರಣೆ ನಡೆಸಲು ನಿರಾಕರಿಸಿದೆ. ಕರ್ನಾಟಕ ಹೈಕೋರ್ಟ್ ತೀರ್ಪು ಪ್ರಕಟಿಸಿದ ನಂತರ ಪ್ರಕರಣವನ್ನು ಮರು ವಿಚಾರಣೆಗೆ ಒಳಪಡಿಸುವ ನಿರ್ಧಾರದ ಬಗ್ಗೆ ಅರ್ಜಿದಾರರು ತೀವ್ರ ಕಳವಳ ವ್ಯಕ್ತಪಡಿಸಿ ಸಲ್ಲಿಸಿದ್ದ ಅರ್ಜಿಯನ್ನು ಮಾನ್ಯ ಮಾಡಲು ಸರ್ವೋಚ್ಚ ನ್ಯಾಯಾಲಯ ಒಲವು ತೋರಲಿಲ್ಲ. ನ್ಯಾಯಮೂರ್ತಿ ಬಿ.ವಿ.ನಾಗರತ್ನ ಮತ್ತು ನ್ಯಾಯಮೂರ್ತಿ ಜೋಯ್ಮಲ್ಯ ಬಾಗ್ಚಿ ಅವರಿದ್ದ ದ್ವಿಪೀಠದ ಮುಂದೆ ಈ ವಿಷಯವನ್ನು ಸಾಮಾನ್ಯ ಕಾರಣ ಪಟ್ಟಿಯ ಹೊರಗೆ ಮೌಖಿಕವಾಗಿ ಪ್ರಸ್ತಾಪಿಸಲಾಯಿತು. ಆದರೆ, ಈ ಹಂತದಲ್ಲಿ ಹಸ್ತಕ್ಷೇಪ ಮಾಡಲು ನಿರಾಕರಿಸಿದ ಪೀಠವು, 'ಕರ್ನಾಟಕ ಹೈಕೋರ್ಟ್ ತನ್ನ ನಿರ್ಧಾರವನ್ನು ಸ್ಪಷ್ಟಪಡಿಸಲು ಸಮರ್ಥವಾಗಿದೆ' ಎಂದು ಹೇಳಿ ಅರ್ಜಿಯನ್ನು ತಿರಸ್ಕರಿಸಿತು.

ವಕೀಲರ ವಾದವೇನು?: ಸುಪ್ರೀಂಕೋರ್ಟ್ ಮುಂದೆ ಹಾಜರಾದ ಅರ್ಜಿದಾರರ ಪರ ವಕೀಲರು, ಕರ್ನಾಟಕ ಹೈಕೋರ್ಟ್ ಮುಂದೆ ಅತ್ಯಂತ ಅಸಾಮಾನ್ಯ ಮತ್ತು ವಿಚಿತ್ರ ಕಾರ್ಯವಿಧಾನದ ಪರಿಸ್ಥಿತಿ ಉದ್ಭವಿಸಿದೆ ಎಂದು ವಾದಿಸಿದರು.

ನಾಲ್ವರ ವಿರುದ್ಧ ಪ್ರಕರಣ ದಾಖಲು

• **ಹುಬ್ಬಳ್ಳಿ:** ಕಡಿಮೆ ದರದಲ್ಲಿ ಪ್ಲಾಟ್‌ಗಳ ನೀಡುವುದಾಗಿ ನಂಬಿಸಿ ಓರ್ವನಿಂದ 20 ಲಕ್ಷ ಪಡೆದು ಪ್ಲಾಟ್ ಕೊಡದೆ, ಮರಳಿ 9.50 ಲಕ್ಷ ಹಣ ಕೊಡದೆ ಮೋಸ ಮಾಡಿದ ಆರೋಪದ ಮೇಲೆ ನಾಲ್ವರ ವಿರುದ್ಧ ಇಲ್ಲಿನ ಕಸಬಾಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನಗರದ ರಮೇಶ್ ಎಚ್., ಮಂಜುನಾಥ ಎಚ್., ಶಂಕರ್ ಎಂ., ರಮೇಶ್ ಕೆ ಎಂಬುವವರ ವಿರುದ್ಧ ಹರೀಶ್ ಹಳಪೇಟೆ ಎಂಬುವರು ದೂರು ನೀಡಿದ್ದಾರೆ. ತಮ್ಮದಲ್ಲದ ಭೂಮಿಯನ್ನು ತಮ್ಮದೆಂದು ಹೇಳಿದಲ್ಲದೆ, ಕಡಿಮೆ ದರದಲ್ಲಿ ಪ್ಲಾಟುಗಳನ್ನು ಕೊಡುವುದಾಗಿ ನಂಬಿಸಿದ್ದಾರೆ. ಹಳೇಹುಬ್ಬಳ್ಳಿ ಅಯೋಧ್ಯಾ ಗ್ರಾಮದ ವಿಐ ಎಕರೆ ಭೂಮಿಯನ್ನು ಸಂಘವೊಂದಕ್ಕೆ 8.50 ಲಕ್ಷಕ್ಕೆ 1989ರಲ್ಲಿ ಮಾರಾಟ ಮಾಡಿದ್ದಾರೆ. 1990ರಲ್ಲಿ ಗಂಗಾಧರ್ ಮತ್ತು ಬಸವರಾಜ ಎಂಬುವವರಿಗೆ ಎಸ್‌ಸಿ, ಎಸ್ಟಿ ಹಾಗೂ ಹಿಂದುಳಿದ ಸದಸ್ಯರಿಗೆ ಪ್ಲಾಟ್ ನೀಡುವುದಾಗಿ ಬಿನ್‌ಶೇತ್ಕಿ ಮಾಡಿಸಿದ್ದಾರೆ. ಆದರೆ ಈ ವ್ಯವಹಾರ ಆರೋಪಿಗಳಿಗೆ ಸಂಬಂಧವಿಲ್ಲದಿದ್ದರೂ ಈ ಜಮೀನು ತೋರಿಸಿ 12-15 ಲಕ್ಷಕ್ಕೆ ಪ್ಲಾಟ್ ಕೊಡುವುದಾಗಿ ಹರೀಶ್ ಹಾಗೂ ಅವರ ಅಳಿಯಂದರಿಂದ 10 ಪ್ಲಾಟ್‌ಗಳಿಗೆ 20 ಲಕ್ಷ ರೂ. ಮುಂಗಡವಾಗಿ ಪಡೆದುಕೊಂಡಿದ್ದಾರೆ. ನಂತರ ಭೂಮಿಯ ಮಾಲೀಕರು ಬೇರೆ ಇರುವುದಾಗಿ ತಿಳಿದು ಬಂದಾಗ ಪ್ರಶ್ನೆ ಮಾಡಿದಾಗ 10.50 ಲಕ್ಷ ಮರಳಿಸಿದ್ದು, 9.50 ಲಕ್ಷ ಕೊಡದೆ ಮೋಸ ಮಾಡಿದ್ದಲ್ಲದೆ, ಬೆದರಿಕೆ ಹಾಕಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ವಿದ್ಯುತ್ ಖಾಸಗೀಕರಣಕ್ಕೆ ವಿರೋಧ | ಬರಗಾಲ ಘೋಷಣೆಗೆ ಆಗ್ರಹ

ರೈತರಿಂದ ಬಾರುಕೋಲು ಚಳವಳಿ



• **ಧಾರವಾಡ:** ವಿದ್ಯುತ್ ಇಲಾಖೆ ಖಾಸಗೀಕರಣಕ್ಕೆ ಮುಂದಾದ ರಾಜ್ಯ ಸರ್ಕಾರದ ಕ್ರಮ ಖಂಡಿಸಿ ಕರ್ನಾಟಕ ರಾಜ್ಯ ರೈತ ಸಂಘ-ಹಸಿರು ಸೇನೆಯ ನೇತೃತ್ವದಲ್ಲಿ ರೈತರು, ಜಿಲ್ಲಾಧಿಕಾರಿ ಕಚೇರಿ ಮುಂದೆ ಮಂಗಳವಾರ ಬಾರುಕೋಲು ಚಳವಳಿ ನಡೆಸಿದರು.

ಸುರಿಯುವ ಮಳೆಯನ್ನೂ ಲೆಕ್ಕಿಸದೆ, ಒಂದು ಗಂಟೆಗೂ ಹೆಚ್ಚು ಹೊತ್ತು ಪ್ರತಿಭಟನೆ ನಡೆಸಿದ ನೂರಾರು ರೈತರು, ಟಾಟಾ ಕಂಪನಿಗೆ ವಿದ್ಯುತ್ ಇಲಾಖೆ ಹಸ್ತಾಂತರ ನಿರ್ಧಾರ ಖಂಡಿಸಿದರು. ಅಲ್ಲದೇ, ಕಾಂಗ್ರೆಸ್ ಸರ್ಕಾರದ ವಿರುದ್ಧ ಘೋಷಣೆಗಳು ಕೂಗಿದರು.

ವಿದ್ಯುತ್ ಖಾಸಗೀಕರಣ ಮಾಡುವ ಮೂಲಕ ರಾಜ್ಯದ ರೈತರನ್ನು ಒಕ್ಕಲೆಬ್ಬಿಸುವ ಹುನ್ನಾರ ನಡೆಸಿದೆ. ಅಲ್ಲದೇ, ವಿದ್ಯುತ್ ಖಾಸಗೀಕರಣದಿಂದ ಬಡ, ಮಧ್ಯಮ ವರ್ಗದವರಿಗೆ ಸಾಕಷ್ಟು ತೊಂದರೆಗಳು ಉಂಟಾಗಲಿವೆ ಎಂದು ಪ್ರತಿಭಟನಕಾರರು ತಿಳಿಸಿದರು.

2025-26ನೇ ಸಾಲಿನ ಮಕ್ಕೆಜೋಳ, ಹೆಸರು, ಕಡಲೆ, ಬಟಾಣಿ ಬೆಳೆ ಹಾಗೂ ಮಾವು ಗಿಡದ ಬೆಳೆವಿಮೆ ಹಣ ಈವರೆಗೂ ಬಿಡುಗಡೆ ಮಾಡಿಲ್ಲ. ಇದರಿಂದ ರೈತರಿಗೆ ತೊಂದರೆಯಾಗಿದೆ. ಈ ವಿಮಾ ಹಣ ತಕ್ಷಣ ಬಿಡುಗಡೆ ಮಾಡುವಂತೆ ಆಗ್ರಹಿಸಿದರು.

2026-27ನೇ ಸಾಲಿನ ಅವಧಿ ಮುಂಗಾರು ಮಳೆ ಕ್ಷೀಣಿಸಿದೆ. ಬಿತ್ತನೆಯೂ ಸಹ ಸರಿಯಾಗಿ ಆಗಿಲ್ಲ, ಕೆಲವು ಬಿತ್ತಿದ ಬೆಳೆಗಳು ಸರಿಯಾಗಿ ಹುಟ್ಟಿಲ್ಲ, ಹೀಗಾಗಿ ಈ ವರ್ಷವನ್ನು ಬರಗಾಲ ಅಂತಲೂ ಘೋಷಿಸುವಂತೆ ರಾಜ್ಯ ಸರ್ಕಾರಕ್ಕೆ ಒತ್ತಾಯ ಮಾಡಿದರು.

ಮೈಕ್ರೋ ಫೈನಾನ್ಸ್ ಕಂಪನಿ ಹಳ್ಳಿಗಳ ಜನರಿಗೆ ಸಾಲ ನೀಡಿ, ವಸೂಲಿಗೆ ಬಡವರ ಮನೆ ಕೀಲಿ ಹಾಕಿ, ಕುಟುಂಬ ಬೀದಿಗೆ ತಳ್ಳುತ್ತಿವೆ. ಈ ಕಂಪನಿಗಳಿಗೆ ಕಡಿವಾಣ ಹಾಕುವುದು ಸೇರಿ ಬೇಡಿಕೆ ಈಡೇರಿಸಲು ಜಿಲ್ಲಾಧಿಕಾರಿಗೆ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಜಿಲ್ಲಾ ಘಟಕದ ಅಧ್ಯಕ್ಷ ಫಾರೂಕ್ ಕಿಲ್ಲೇದಾರ, ಉಪಾಧ್ಯಕ್ಷ ಮಾರುತಿ ಸುಂಕದ ಸೇರಿ ಜಿಲ್ಲೆಯ ನೂರಾರು ರೈತರು ಪಾಲ್ಗೊಂಡಿದ್ದರು.

ಮೇಲ್ಸೇತುವೆ ಕಾಮಗಾರಿಯಲ್ಲಿ ಲೋಪದೋಷ

ಮುಖ್ಯ ಅಭಿಯಂತರರಿಗೆ ಸಚಿವ ಜೋಶಿ ಪತ್ರ



• **ಹುಬ್ಬಳ್ಳಿ:** ನಗರದಲ್ಲಿ ನಿರ್ಮಿಸಲಾಗುತ್ತಿರುವ ಮೇಲ್ಸೇತುವೆ ಕಾಮಗಾರಿ ಲೋಪದೋಷಗಳು ಕಂಡು ಬಂದಿವೆ ಎಂಬ ಆರೋಪಗಳು ಕೇಳಿಬಂದಿವೆ. ಲೋಕೋಪಯೋಗಿ ಇಲಾಖೆ ರಾಷ್ಟ್ರೀಯ ಹೆದ್ದಾರಿ ವಿಭಾಗ ಇದನ್ನು ಸರಿಪಡಿಸಿಕೊಳ್ಳಬೇಕು ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಆಗ್ರಹಿಸಿದ್ದಾರೆ.

ಈ ಕುರಿತು ಲೋಕೋಪಯೋಗಿ ಇಲಾಖೆ ರಾಷ್ಟ್ರೀಯ ಹೆದ್ದಾರಿ ವಿಭಾಗ ಉತ್ತರದ ಮುಖ್ಯ ಅಭಿಯಂತರ ಬಿ.ವೈ.ಭಂಡಿವಡ್ಡರ ಅವರಿಗೆ ಪತ್ರ ಬರೆದಿರುವ ಕೇಂದ್ರ ಸಚಿವ ಜೋಶಿ ಅವರು, ಇಂಡಿಯನ್ ಕಾಂಕ್ರೀಟ್ ಇನ್‌ಸ್ಟಿಟ್ಯೂಟ್ ಮತ್ತು ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಎಂಜಿನಿಯರ್ಸ್ ತಂಡ ಎಲಿವೇಟೆಡ್ ಕಾರಿಡಾರ್ ಯೋಜನೆಯ ಕಾಮಗಾರಿಯಲ್ಲಿ ತಾಂತ್ರಿಕ ದೋಷಗಳಿದ್ದು, ಸುರಕ್ಷತೆಯ ದೃಷ್ಟಿಯಿಂದ ಗಂಭೀರ ಸಮಸ್ಯೆ ಕುರಿತು ಕಳವಳ ವ್ಯಕ್ತಪಡಿಸಿದ್ದಾರೆ.

ಈಗಾಗಲೇ ಯೋಜನೆ ಸುಮಾರು ಶೇ.70ರಷ್ಟು ಮುಗಿದಿದೆ. ಈ ಯೋಜನೆ ಕೇಂದ್ರ ಸರ್ಕಾರ ಅನುದಾನ ನೀಡಿದೆ. ಉಳಿದಂತೆ ವಿಸ್ತತ ಯೋಜನಾವರದಿ, ಅನುಮೋದನೆ, ಅನುಷ್ಠಾನ ಎಲ್ಲವನ್ನು ರಾಜ್ಯ ಸರ್ಕಾರ ನಿರ್ವಹಣೆ ಮಾಡುತ್ತಿದೆ. ಯೋಜನೆ ಕುರಿತು ಇಂಡಿಯನ್ ರೋಡ್ ಸೇಫ್ಟಿ ಸ್ಟ್ಯಾಂಡರ್ಡ್ಸ್ ಪ್ರಕಾರ ನಿರ್ಮಾಣ ಹಂತದ, ನಂತರದ ಸುರಕ್ಷತೆ ಹಾಗೂ ಗುಣಮಟ್ಟವನ್ನು ಖಾತ್ರಿಪಡಿಸಿಕೊಳ್ಳಬೇಕು. ಯೋಜನೆ ಪೂರ್ಣಗೊಂಡ ನಂತರ ಕಾರಿಡಾರ್‌ನಲ್ಲಿ ಸೀಮಲೆಸ್ ಟ್ರಾಫಿಕ್ ಮೂವಮೆಂಟ್‌ಗೆ ಅನುಕೂಲವಾಗುವಂತೆ ಮೇಲುಸ್ತುವಾರಿ ವಹಿಸುವಂತೆ ಒತ್ತಾಯಿಸಿದ್ದಾರೆ.

ಲೋಕೋಪಯೋಗಿ ಇಲಾಖೆ ತಕ್ಷಣ ತಾಂತ್ರಿಕ ಪರಿಣಿತರ ತಂಡವನ್ನು ರಚಿಸಿ ಸ್ಥಳದ ವೀಕ್ಷಣೆಯನ್ನು ಕೈಗೊಂಡು ಸುರಕ್ಷತೆ ಮತ್ತು ಉತ್ತಮ ಗುಣಮಟ್ಟದ ಕುರಿತು ಸೂಕ್ತ ವರದಿಯನ್ನು ಪಡೆದುಕೊಳ್ಳಬೇಕು. ಅಸುರಕ್ಷಿತ ಅಂಶಗಳನ್ನು ಮತ್ತು ಕಾಮಗಾರಿ ಸ್ಥಳಗಳು ಕಂಡು ಬಂದಲ್ಲಿ ಇಂಡಿಯನ್ ರೋಡ್ ಸೇಫ್ಟಿ ಸ್ಟ್ಯಾಂಡರ್ಡ್ಸ್ ಪ್ರಕಾರ ಕಾಮಗಾರಿಯ ಅನುಷ್ಠಾನವನ್ನು ಖಾತರಿಪಡಿಸಿಕೊಳ್ಳಲು ಒತ್ತಾಯಿಸಿದ್ದಾರೆ.

ಹಿಡಕಲ್ ಜಲಾಶಯದ ಹೂಳೆತ್ತಲು ಸರ್ಕಾರ ಹಿಂದೇಟು: ರಮೇಶ ಕತ್ತಿ



ಸರ್ಕಾರಕ್ಕೆ ನೀರಾವರಿ ಇಲಾಖೆ ಅಧಿಕಾರಿಗಳು ಕಳೆದ ವರ್ಷ ರಾಜಾ ಲಖಮಗೌಡ ಜಲಾಶಯದ ಹೂಳೆತ್ತಲು 600 ಕೋಟಿ ರೂ.ವೆಚ್ಚದ ಪ್ರಸ್ತಾವನೆ ಸಲ್ಲಿಸಿದ್ದು, ಈ ಯೋಜನೆಗೆ ಯಾವುದೇ ವಿಳಂಬ ಮಾಡದೇ ಕಾಮಗಾರಿ ಆರಂಭಿಸಬೇಕು.

■ ರಮೇಶ ಕತ್ತಿ, ಮಾಜಿ ಸಂಸದರು

• **ಸಂಕೇಶ್ವರ:** ಗಡಿಭಾಗದ ಮೂರು ಜಿಲ್ಲೆಗಳಿಗೆ ಕಾಮಧೇನುವಾಗಿರುವ ಹಿಡಕಲ್ ಜಲಾಶಯದ ಹೂಳೆತ್ತಲು ಸರ್ಕಾರ ಹಿಂದೇಟು ಹಾಕುತ್ತಿದ್ದು, ಇದು ಉತ್ತರ ಕರ್ನಾಟಕದ ಜನರ ಬಗೆಗೆ ಸರ್ಕಾರದ ಧೋರಣೆ ತೋರಿಸುತ್ತದೆ ಎಂದು ಸರ್ಕಾರದ ವಿರುದ್ಧ ಮಾಜಿ ಸಂಸದ ರಮೇಶ ಕತ್ತಿ ವಾಗ್ದಾಳಿ ನಡೆಸಿದರು.

ಪಟ್ಟಣದ ಖಾಸಗಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಹಿಡಕಲ್ ಡ್ಯಾಂನ ರಾಜಾ ಲಖಮಗೌಡ ಜಲಾಶಯ ನಿರ್ಮಾಣದಿಂದ ಈವರೆಗೆ ಹೂಳೆತ್ತದೇ ಇರುವುದರಿಂದ ವರ್ಷದಿಂದ ವರ್ಷಕ್ಕೆ ನೀರು ಸಂಗ್ರಹಣಾ ಸಾಮರ್ಥ್ಯ ಕುಸಿಯುತ್ತಲಿದ್ದರೂ ಸರ್ಕಾರ ಈ ಬಗೆಗೆ ಗಮನ ಹರಿಸದೇ ಇರುವುದು ಬೇಸರ ತರಿಸಿದೆ ಎಂದರು.

ಸುಮಾರು 51 ಟಿಎಂಸಿ ನೀರು ಸಂಗ್ರಹಣಾ ಸಾಮರ್ಥ್ಯ ಹೊಂದಿರುವ ಈ ಜಲಾಶಯದಿಂದ ಬೆಳಗಾವಿ, ಬಾಗಲಕೋಟೆ, ವಿಜಯಪುರ ಜಿಲ್ಲೆಗಳಿಗೆ ನೀರು ಪೂರೈಕೆಯಾಗುತ್ತದೆ. ಈ ಜಲಾಶಯದಲ್ಲಿ ಅಧಿಕಾರಿಗಳು ಸರ್ಕಾರಕ್ಕೆ ಸಲ್ಲಿಸಿರುವ ಮಾಹಿತಿ ಪ್ರಕಾರ 4 ಟಿಎಂಸಿ ಹೂಳು ತುಂಬಿದೆ. ಪ್ರಸ್ತುತ ನೀರಿನ ಮಟ್ಟ ಕಡಿಮೆಯಿರುವ ಸಂದರ್ಭದಲ್ಲಿ ಈ ಯೋಜನೆ ಅನುಷ್ಠಾನಕ್ಕೆ ಕ್ರಮವಹಿಸಬೇಕು ಎಂದರು.

ಈ ಜಲಾಶಯದಿಂದ ಮೂರು ಜಿಲ್ಲೆಯ ಲಕ್ಷಾಂತರ ಜನರಿಗೆ ಕುಡಿಯುವ ನೀರು, ನೀರಾವರಿ ಸೌಲಭ್ಯ ದೊರೆತಿರುವುದರಿಂದ ಇಂತಹ ಜಲಮೂಲಗಳ ಉಳಿವಿಗಾಗಿ ಪಕ್ಷಾತೀತವಾಗಿ ಈ ಭಾಗದ ಸಚಿವರು, ಶಾಸಕರು ಸರ್ಕಾರದ ಮೇಲೆ ಒತ್ತಡ ಹೇರಬೇಕು ಎಂದರು.

ಐಐಟಿ ಭುವನೇಶ್ವರದಲ್ಲಿ ಇಂಟಿಗ್ರೇಟೆಡ್ ಪಿಎಚ್‌ಡಿಗೆ

ಪ್ರವೇಶ ಪಡೆದ ಸರ್ಕಾರಿ ಕಾಲೇಜಿನ ವಿದ್ಯಾರ್ಥಿ



• **ಕಾರವಾರ:** ಸರ್ಕಾರಿ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯ (ಸ್ವಾಯತ್ತ), ವಿಜ್ಞಾನ ವಿಭಾಗದ ಪ್ರತಿಭಾವಂತ ಬಿ.ಎಸ್.ಸಿ.ಆರನೇ ಸೆಮಿಸ್ಟರ್ ವಿದ್ಯಾರ್ಥಿಯಾದ ಅಕ್ಷಯ್ ಡಿ.ನಾಯ್ಕ ಅವರು ರಾಷ್ಟ್ರೀಯ ಮಟ್ಟದ ಅತ್ಯಂತ ಸ್ಪರ್ಧಾತ್ಮಕ ಜಂಟಿ ಪ್ರವೇಶ ಪರೀಕ್ಷೆಯಲ್ಲಿ (JAM-2026) ಅದ್ಭುತ ಸಾಧನೆ ಮಾಡುವ ಮೂಲಕ ಪ್ರತಿಷ್ಠಿತ ಭಾರತೀಯ ತಂತ್ರಜ್ಞಾನ ಸಂಸ್ಥೆ (IIT) ಭುವನೇಶ್ವರದಲ್ಲಿ ಸಮಗ್ರ ಪಿ.ಎಚ್.ಡಿ (Integrated PhD) ಪದವಿಗೆ ಆಯ್ಕೆಯಾಗುವ ಅಪೂರ್ವ ಸಾಧನೆಯ ಮೂಲಕ ಉತ್ತರ ಕನ್ನಡ ಜಿಲ್ಲೆಗೆ ಹಾಗೂ ಸರ್ಕಾರಿ ಶಿಕ್ಷಣ ಸಂಸ್ಥೆಗೆ ಕೀರ್ತಿಯನ್ನು ತಂದಿದ್ದಾರೆ.

ಭಾರತೀಯ ತಂತ್ರಜ್ಞಾನ ಸಂಸ್ಥೆ (IITs) ನಡೆಸಿದ ಈ ಕಠಿಣ ರಾಷ್ಟ್ರಮಟ್ಟದ ಪರೀಕ್ಷೆಯಲ್ಲಿ ಅಕ್ಷಯ್ ಅವರು ತಮ್ಮ ಶೈಕ್ಷಣಿಕ ಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ. ಅವರು ಗಣಿತಶಾಸ್ತ್ರ (JAM Mathematics) ಪತ್ರಿಕೆಯಲ್ಲಿ ಅಖಿಲ ಭಾರತ ಮಟ್ಟದಲ್ಲಿ 686ನೇ ಶ್ರೇಯಾಂಕ ಹಾಗೂ ಭೌತಶಾಸ್ತ್ರ (JAM Physics) ಪತ್ರಿಕೆಯಲ್ಲಿ ಅಖಿಲ ಭಾರತ ಮಟ್ಟದಲ್ಲಿ 1,390ನೇ ಶ್ರೇಯಾಂಕ ಪಡೆಯುವ ಮೂಲಕ ದೇಶದ ಗಮನ ಸೆಳೆದಿದ್ದಾರೆ. ಅವರ ಈ ಅಸಾಧಾರಣ ಪ್ರದರ್ಶನ ಮತ್ತು ಶ್ರೇಯಾಂಕದ ಆಧಾರದ ಮೇಲೆ, ಐಐಟಿ ಭುವನೇಶ್ವರವು ಅವರಿಗೆ ಗಣಿತಶಾಸ್ತ್ರ ವಿಷಯದಲ್ಲಿ ಅತ್ಯುನ್ನತ ಸಮಗ್ರ ಪಿಎಚ್‌ಡಿ ಸೀಟನ್ನು ಹಂಚಿಕೆ ಮಾಡಿದೆ.

ಸರ್ಕಾರಿ ಕಾಲೇಜಿನ ವಿದ್ಯಾರ್ಥಿಯೊಬ್ಬರೂ ರಾಷ್ಟ್ರೀಯ ಮಟ್ಟದ ಐಐಟಿಯಂತಹ ಪ್ರಮುಖ ಸಂಸ್ಥೆಯಲ್ಲಿ ನೇರವಾಗಿ ಸಂಶೋಧನಾ ವಿಭಾಗಕ್ಕೆ ಸೀಟು ಗಿಟ್ಟಿಸಿಕೊಳ್ಳುವುದು ಅತ್ಯಂತ ವಿರಳ ಮತ್ತು ಶ್ಲಾಘನೀಯ ಸಾಧನೆಯಾಗಿದೆ. ಇದು ವಿದ್ಯಾರ್ಥಿ ಅಕ್ಷಯ್ ಅವರ ನಿರಂತರ ಅಧ್ಯಯನ ಶೀಲತೆ, ಕಠಿಣ ಪರಿಶ್ರಮ ಮತ್ತು ಗಣಿತ ಹಾಗೂ ಭೌತಿಕ ವಿಜ್ಞಾನದ ಮೂಲ ಪರಿಕಲ್ಪನೆಗಳ ಮೇಲಿರುವ ಅಪಾರ ಹಿಡಿತಕ್ಕೆ ಸಾಕ್ಷಿಯಾಗಿದೆ.

ಈ ಐತಿಹಾಸಿಕ ಯಶಸ್ಸಿನ ಹಿಂದೆ ಕಾಲೇಜು ಸಂಸ್ಥೆಯ ಮತ್ತು ರಾಜ್ಯ ಸರ್ಕಾರದ ಶೈಕ್ಷಣಿಕ ದೂರದೃಷ್ಟಿಯ ಕೊಡುಗೆಯೂ ಅಪಾರವಾಗಿದ್ದು, ಕಾಲೇಜಿನ 'ವೃತ್ತಿ ಮಾರ್ಗದರ್ಶನ ಕೋಶ' (Career Guidance Cell) ವತಿಯಿಂದ ವಿದ್ಯಾರ್ಥಿಗಳಿಗಾಗಿಯೇ ವಿಶೇಷವಾಗಿ ಆಯೋಜಿಸಲಾಗಿದ್ದ 'ಎಂಜಿ-2026' ಸಮಗ್ರ ದೃಷ್ಟಿಕೋನ ಮತ್ತು ತರಬೇತಿ ಕಾರ್ಯಕ್ರಮವು ಅಕ್ಷಯ್ ಅವರ ಯಶಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸಿದೆ.

ನಾನೂ ಸಚಿವ ಸ್ಥಾನದ ಆಕಾಂಕ್ಷಿ: ರುದ್ರಪ್ಪ ಲಮಾಣಿ

• **ರಾಣೇಬೆನ್ನೂರ:** ನಾನು ಈಗಲೂ ಸಚಿವ ಸ್ಥಾನದ ಆಕಾಂಕ್ಷಿಯಾಗಿದ್ದು, ನನಗೆ ವಿಧಾನಸಭಾ ಹಂಗಾಮಿ ಅಧ್ಯಕ್ಷರಿಗಿಂತಲೂ ಸಚಿವನಾಗಿ ರಾಜ್ಯದ ಅಭಿವೃದ್ಧಿ ಮಾಡುವ ಕಳಕಳಿ, ಮಹದಾಸೆಯಿದೆ ಎಂದು ವಿಧಾನಸಭೆಯ ಹಂಗಾಮಿ ಅಧ್ಯಕ್ಷ ರುದ್ರಪ್ಪ ಲಮಾಣಿ ಹೇಳಿದರು.

ಸ್ಥಳೀಯ ಹಳೆ ಪಿ.ಬಿ.ರಸ್ತೆಯ ಶಿವಾ ಕಾಲೇಜಿನ ಬಳಿ ನೂತನವಾಗಿ ನಿರ್ಮಾಣವಾಗಿರುವ ರಾಣೇಬೆನ್ನೂರು ಗ್ರಾಮೀಣ ಪೊಲೀಸ್ ಠಾಣೆಯ ಕಟ್ಟಡವನ್ನು ಮಂಗಳವಾರ ಉದ್ಘಾಟಿಸಿ ಅವರು ಮಾತನಾಡಿದರು.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರು ಉಪಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ತಮಗೆ ಸಚಿವ ಸ್ಥಾನ ನೀಡುವುದಾಗಿ ಭರವಸೆ ನೀಡಿದ್ದರು. ಈಗ ಡಿ.ಕೆ.ಶಿವಕುಮಾರ ಅವರೇ ಮುಖ್ಯಮಂತ್ರಿಗಳಾಗಿದ್ದಾರೆ. ಮುಂಬರುವ ಸಚಿವ ಸಂಪುಟ ವಿಸ್ತರಣೆಯಲ್ಲಿ ಇಲ್ಲವೇ ಸಚಿವ ಸ್ಥಾನ ಹಂಚಿಕೆಯ ಸಂಬಂಧದಲ್ಲಿ ನನಗೆ ಸಚಿವ ಸ್ಥಾನ ನೀಡುತ್ತಾರೆಂಬ ಭರವಸೆ ನನಗಿದೆ ಎಂದರು. ಇದೀಗ ನಾನು ವಿಧಾನಸಭೆಯ ಹಂಗಾಮಿ ಅಧ್ಯಕ್ಷನಾಗಿದ್ದು ನಾನು ಒಂದು ಪಕ್ಷದ ಪರವಾಗಿ ಮಾತನಾಡಲು ಬರುವುದಿಲ್ಲ, ಅದಕ್ಕಾಗಿ ಮುಖ್ಯಮಂತ್ರಿಗಳು ನನಗೆ ಸಚಿವ ಸ್ಥಾನ ನೀಡುವ ಅಗಾಧವಾದ ವಿಶ್ವಾಸವಿದ್ದು, ಅದಕ್ಕಾಗಿ ನಾನು ಕಾಯುವೆ. ಸಚಿವ ಸ್ಥಾನ ನೀಡುವ ಸಂಬಂಧ ನಾನು ಯಾರ ಮೇಲೂ ಯಾವುದೇ ರೀತಿಯ ಒತ್ತಡ, ಪ್ರಭಾವ ಬೀರಲು ಬರುವುದಿಲ್ಲ, ಕೈ ಹೈಕಮಾಂಡ್ ಬಳಿ ಕೇಳೋದಕ್ಕೂ ಆಗುವುದಿಲ್ಲ, ಅದು ನನ್ನ ಕೆಲಸವೂ ಅಲ್ಲ, ಮುಖ್ಯಮಂತ್ರಿಗಳೇ ಸಚಿವ ಸ್ಥಾನ ನೀಡಿದರೆ ಅದನ್ನು ನಿಭಾಯಿಸಲು ಸಿದ್ಧನಿದ್ದೇನೆ ಎಂದರು.

ಶಾಸಕ ಪ್ರಕಾಶ ಕೋಳಿವಾಡ ಅಧ್ಯಕ್ಷತೆ ವಹಿಸಿದ್ದರು. ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ವೀರೇಶ ಮೋಟಗಿ, ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಮಂಜುನಾಥ ಹಲವಾಗಲ, ಜಿಪಂ ಮಾಜಿ ಅಧ್ಯಕ್ಷ ಏಕನಾಥ ಭಾನುವಳ್ಳಿ, ರವೀಂದ್ರಗೌಡ ಪಾಟೀಲ, ಎಸ್ಪಿ ಯಶೋಧಾ ವಂಟಗೋಡಿ, ಹೆಚ್ಚುವರಿ ಎಸ್‌ಪಿ ಎಲ್.ವೈ. ಶಿರಕೋಳ, ಡಿವೈಎಸ್ಪಿ ಜೆ.ಲೋಕೇಶ್, ಸಿಪಿಐಗಳಾದ ನಾಗಯ್ಯ ಕಾಡದೇವರ, ಎನ್.ವೆಂಕಟರೆಡ್ಡಿ, ಸಿದ್ದೇಶ್, ಹಾಗೂ ಸಿಬ್ಬಂದಿ ವರ್ಗ ಇದ್ದರು.

ಬಿಡದಿ ಟೌನ್‌ಶಿಪ್ ಸಿಎಂ ಪ್ರತಿಷ್ಠೆ ಬಿಟ್ಟು ಸರ್ಕಾರಿ ಜಮೀನಿನಲ್ಲಿ ಯೋಜನೆ ಮಾಡಲಿ

ಬರಗಾಲ ಘೋಷಣೆ ಮಾಡಲಿ: ಬೊಮ್ಮಾಯಿ



• **ಗದಗ:** ಬಿಡದಿ ಟೌನ್‌ಶಿಪ್ ಮಾಡುವ ವಿಚಾರದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಪ್ರತಿಷ್ಠೆ ಮಾಡಿಕೊಳ್ಳದೆ ರೈತರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ, ಸರ್ಕಾರಿ ಜಮೀನಿನಲ್ಲಿ ಸ್ಯಾಟಲೈಟ್ ಟೌನ್‌ಶಿಪ್ ಮಾಡಿ, ಎಲ್ಲಾ ವ್ಯವಸ್ಥೆಗಳನ್ನು ಮಾಡಿದರೆ ಆ ಒಳ್ಳೆಯ ನಿರ್ಧಾರ ಆಗುತ್ತದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಅಭಿಪ್ರಾಯ ಪಟ್ಟಿದ್ದಾರೆ.

ನಗರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸರ್ಕಾರದ ಸಾಕಷ್ಟು ಜಮೀನುಗಳಿವೆ. ನಾವು ಕೂಡ ಸ್ಯಾಟಲೈಟ್ ಟೌನ್‌ಗಳನ್ನು ಮಾಡಬೇಕು ಅಂತ. ನಾವು ಕೋಲಾರ, ಚಿಕ್ಕಬಳ್ಳಾಪುರ ಏರಿಯಾದಲ್ಲಿ ಸುಮಾರು 2000 ಎಕರೆ ಸರ್ಕಾರಿ ಭೂಮಿ ಇದೆ. ಅಲ್ಲಿ ಮಾಡಬೇಕು ಅಂತಹ ಯೋಚನೆ ನಡೀತಿದೆ. ಹಾಗಾಗಿ ಸರ್ಕಾರದ ಭೂಮಿ ಇರುವಂತಹ ಜಾಗದಲ್ಲಿ ಮಾಡಿ, ಅದಕ್ಕೆ ಸಕಲ ಲಾಜಿಸ್ಟಿಕ್ ವ್ಯವಸ್ಥೆಗಳನ್ನ ಮಾಡಬೇಕು. ಉದಾಹರಣೆಗೆ ಸಾಕಷ್ಟು ಕ್ಲಸ್ಟರ್‌ಗಳಿವೆ, ಕಾಲೇಜು, ಯೂನಿವರ್ಸಿಟಿಗಳೂ ಕೂಡ ಇವೆ. ಆ ಕೆಲಸ ಮಾಡಬೇಕು ಹೊರತಾಗಿ, ರೈತರ ಜಮೀನನ್ನು ತೆಗೆದುಕೊಳ್ಳುವುದು ಅಷ್ಟೊಂದು ಸಮಂಜಸ ಅಲ್ಲ ಎಂದು ಹೇಳಿದರು.

ನಾನು ಮುಖ್ಯಮಂತ್ರಿಗಳಿಗೆ ಸಲಹೆ ಮಾಡುವುದು ಇಷ್ಟೇ, ಪ್ರತಿಷ್ಠೆ ಮಾಡಿಕೊಳ್ಳದೆ ರೈತರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ, ತಮ್ಮದೇ ಆದಂತಹ ಒಂದು ವ್ಯವಸ್ಥೆ ಮಾಡಿಕೊಂಡು ಸರ್ಕಾರಿ ಜಮೀನಿನಲ್ಲಿ ಸ್ಯಾಟಲೈಟ್ ಟೌನ್‌ಶಿಪ್ ಅನ್ನು ಮಾಡಿ, ಎಲ್ಲಾ ವ್ಯವಸ್ಥೆಗಳನ್ನು ಮಾಡಿದರೆ ಆ ಒಳ್ಳೆಯ ನಿರ್ಧಾರ ಆಗುತ್ತದೆ ಎಂದರು.

ಹುಬ್ಬಳ್ಳಿ-ಗದಗ ಬೈಪಾಸ್ ಮೂಲಕ ಪ್ಯಾಸೆಂಜರ್ ರೈಲು ಹಾದು ಹೋಗುತ್ತಿರುವ ಗೂಡ್ಸ್ ಗಾಡಿ ಬೈಪಾಸ್ ಮೂಲಕ ಹೋಗಲು ನಮ್ಮದೇನು ತಕರಾರಿಲ್ಲ, ಕೇಂದ್ರ ಸಚಿವರಿಗೆ ಪತ್ರ ಬರೆದು ಈ ಆದೇಶ ವಾಪಸ್ ಪಡೆಯುವಂತೆ ಎಲ್ಲಾ ಪ್ರಯತ್ನ ಮಾಡುತ್ತೇವೆ ಎಂದು ಹೇಳಿದರು.

ವಿಬಿಜಿ ರಾಮ್ ಜಿ ಜಾರಿ ಮಾಡಲಿ

ಉದ್ಯೋಗ ಖಾತರಿ ದಿನಗಳ ಹೆಚ್ಚಳದ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಆ ಯೋಜನೆ ನಿರಂತರವಾಗಿ ಆಗುವುದಕ್ಕೆ ಬದಲಾವಣೆ, ಶೇ.60-40 ಮಾಡಿದೆ ಮತ್ತು 125 ದಿನಗಳಿಗೆ ಹೆಚ್ಚು ಮಾಡಿದ್ದೇವೆ. ಆ ಹೆಚ್ಚಾದ ದಿನಗಳನ್ನು ನೀವು ಕೊಡ್ರಿ ಈಗಲೂ ಕೂಡ, 100 ದಿನಗಳದ್ದು ಎಷ್ಟು ದುಡ್ಡಿದೆ ಅದನ್ನು ಕೇಂದ್ರ ಸರ್ಕಾರನೇ ಕೊಡುತ್ತದೆ. ಮೇಲಿನ 25 ದಿವಸದ್ದು ನೀವು ಕೊಡ್ರಿ ಅಂತ ಕೇಳ್ತಾ ಇದ್ದೀವಿ. ಅದನ್ನು ಕೊಡೋಕೆ ಆಗದೇ ಈಗ ಸುಮ್ನೆ 80ಕ್ಕೆ ಏರಿಸಬೇಕು, 90ಕ್ಕೆ ಏರಿಸಬೇಕು ಅಂತ ಹೇಳಿಕೆಗಳನ್ನು ಕೊಡುತ್ತಿದ್ದಾರೆ ಎಂದು ಹೇಳಿದರು.

---

11 ಪ್ರಯಾಣಿಕರಿಗೆ ಗಂಭೀರ ಗಾಯ

ಮರಕ್ಕೆ ಬಸ್ ಡಿಕ್ಕಿ



• **ಬೀದರ:** ಬಸ್ಸಿನಲ್ಲಿನ ಪ್ರಯಾಣಿಕನೊಬ್ಬ ಕುಡಿದ ನಶೆಯಲ್ಲಿ ಡ್ರೈವರ್ ಬಳಿ ತೆರಳಿ ಬಸ್ಸಿನ ಸ್ಟೇರಿಂಗ್ ಜೋರಾಗಿ ಹಿಡಿದ ಪರಿಣಾಮ ಬಸ್ ಮರಕ್ಕೆ ಡಿಕ್ಕಿಯಾಗಿ 11 ಮಂದಿ ಗಂಭೀರವಾಗಿ ಗಾಯಗೊಂಡ ಘಟನೆ ನಡೆದಿದೆ. ಬೀದರ್ ಹೊರವಲಯದ ಶಹಾಪೂರ ರೈಲ್ವೆ ಗೇಟ್ ಬಳಿ ಸೋಮವಾರ ಸಂಜೆ ಐದು ಗಂಟೆ ಸುಮಾರಿಗೆ ನಡೆದಿದೆ. ಮಹಾರಾಷ್ಟ್ರದ ಸಾರಿಗೆ ಇಲಾಖೆಗೆ ಸೇರಿದ ಕೆಂಪು ಬಸ್ ತೆಲಂಗಾಣದ ಹೈದರಾಬಾದ್‌ದಿಂದ ಉದಗೀರ ಕಡೆಗೆ ತೆರಳುತ್ತಿತ್ತು. ಬಸ್ ಶಹಾಪುರ ಗೇಟ್ ಬಳಿ ಬರುತ್ತಿದ್ದಂತೆ ಕಂಠ ಪೂರ್ತಿ ಕುಡಿದು ಬಂದಿದ್ದ ಮಹಾರಾಷ್ಟ್ರ ಮೂಲದ ಪ್ರಯಾಣಿಕನೊಬ್ಬ ಸ್ಟೇರಿಂಗ್‌ನ್ನು ಗಟ್ಟಿಯಾಗಿ ಹಿಡಿದಿದ್ದಾನೆ. ಇದರಿಂದ ಬಸ್ ಚಾಲಕನ ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿಯಾಗಿದೆ ಎನ್ನಲಾಗಿದೆ. ಬ್ರಿಮ್ಸ್‌ನಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿರುವ ಗಾಯಾಳು ಅಪಘಾತದಲ್ಲಿ ಬಸ್ ಚಾಲಕ ವಿಕಾಸ್, ಉದ್ಗೀರ್ ಮೂಲದ ಬಾಲಾಜಿ, ಪವನ್, ನೂರ್ ಅಹ್ಮದ್, ನರಸಿಂಗ್, ಪೂಜಾ, ಸುರೇಖಾ, ಸೃಷ್ಟಿ ಸೇರಿ 11 ಜನರಿಗೆ ಗಂಭೀರ ಗಾಯಗಳಾಗಿವೆ. ಕುಟುಂಬ ಸಮೇತ ತಿರುಪತಿಗೆ ಹೋಗಿ ವಾಪಸ್ ತೆರಳುತ್ತಿದ್ದ ಒಂದೇ ಕುಟುಂಬದ 8 ಜನರಿಗೆ ಗಾಯಗಳಾಗಿವೆ.

ವಕ್ಫ್ ಜಾಗ ವಿವಾದ: ಅಕ್ರಮ ಪ್ರವೇಶ, ಬೆದರಿಕೆ ಆರೋಪ

• **ದಾಂಡೇಲಿ:** ನಗರದ ಸುಭಾಷ ನಗರದಲ್ಲಿರುವ ವಕ್ಫ್ ಆಸ್ತಿಗೆ ಸಂಬಂಧಿಸಿದ ಜಾಗ ವಿವಾದ ಮತ್ತೆ ತೀವ್ರ ಸ್ವರೂಪ ಪಡೆದಿದ್ದು, ಹಸನ್ ಹುಸೇನ್ ಆಶೂರ್ ಖಾನ್ ಆವರಣಕ್ಕೆ ಅಕ್ರಮ ಪ್ರವೇಶ ಹಾಗೂ ಕೊಲೆ ಬೆದರಿಕೆ ಆರೋಪದಡಿ ಐವರ ವಿರುದ್ಧ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ನಗರದ ಅಂಜುಮನ್-ಎ-ಅಹಲ್ಲೆ ಸುನ್ನತ್ ಸಂಸ್ಥೆಗೆ ಸೇರಿದ ಜಾಗಕ್ಕೆ ಸಂಬಂಧಿಸಿದಂತೆ ಸಲೀಂ ಮಹಮ್ಮದ್ ಗೌಸ್, ವಸೀಂ ಜಂಗುಬಾಯಿ ಜಮಾದಾರ, ಮಹಮ್ಮದ್ ಶರೀಫ್ ಮಹಮ್ಮದ್ ಗೌಸ್ ಮಕಾಂದರ್, ಕಾಸಿಂ ಮಹಮ್ಮದ್ ಗೌಸ್ ಹಾಗೂ ಸಮೀರ್ ಶರೀಫ್ ಕಣವಿ ವಿರುದ್ಧ ಆರೋಪ ಕೇಳಿಬಂದಿದೆ. ಜೂನ್ 20ರ ರಾತ್ರಿ ಸುಮಾರು 8 ಗಂಟೆಗೆ ಆರೋಪಿಗಳು ಹಸನ್ ಹುಸೇನ್ ಆಶೂರ್ ಖಾನಾದ ಬೀಗ ಮುರಿದು ಬಲವಂತವಾಗಿ ಒಳನುಗ್ಗಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಈ ವೇಳೆ ಅಂಜುಮನ್ ಪದಾಧಿಕಾರಿಗಳಿಗೆ ಅವಾಚ್ಯ ಶಬ್ದಗಳಿಂದ ನಿಂದನೆ ನಡೆಸಿ, ಕೊಲೆ ಬೆದರಿಕೆ ಹಾಕಿರುವುದಾಗಿ ಆರೋಪಿಸಲಾಗಿದೆ.

ಮಂಗಳವಾರ ಸುಭಾಷ್ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಂಜುಮನ್-ಎ-ಅಹಲ್ಲೆ ಸುನ್ನತ್ ಸಂಸ್ಥೆಯ ಕಾರ್ಯದರ್ಶಿ ಇಕ್ಬಾಲ್ ಶೇಖ್ ಅವರು ಸುಭಾಷನಗರದಲ್ಲಿರುವ ಮಸೀದಿ ಪಕ್ಕದ ಜಾಗವು ಅಂಜುಮನ್ ಸಂಸ್ಥೆಗೆ ಸೇರಿದ ವಕ್ಫ್ ಆಸ್ತಿ ಆಗಿದ್ದು, ಇದು ಯಾವುದೇ ವ್ಯಕ್ತಿಯ ಖಾಸಗಿ ಆಸ್ತಿ ಅಲ್ಲ ಎಂದು ಸ್ಪಷ್ಟಪಡಿಸಿದರು. ನಗರಸಭೆ ದಾಖಲೆ ಸೇರಿದಂತೆ ಸಂಬಂಧಿತ ಇಲಾಖೆಗಳ ಎಲ್ಲಾ ಕಾನೂನುಬದ್ಧ ದಾಖಲೆಗಳು ಸಂಸ್ಥೆಯ ಬಳಿ ಇರುವುದಾಗಿ ಹೇಳಿದರು. ಜೂನ್ 20ರ ರಾತ್ರಿ ಕೆಲವರು ಅಕ್ರಮವಾಗಿ ಪ್ರವೇಶಿಸಿ ಕಟ್ಟಡಕ್ಕೆ ಹಾನಿ ಮಾಡಿರುವುದನ್ನೂ ಅವರು ಖಂಡಿಸಿದರು.

ಈ ಸಂಬಂಧ ದಾಂಡೇಲಿ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಈ ಹಿಂದೆ ಪಂಜಾ ಪ್ರತಿಷ್ಠಾನದವರು ಜಾಗದ ಮೇಲೆ ಹಕ್ಕು ಹೇಳಿಕೊಂಡು ಪದೇಪದೇ ತೊಂದರೆ ನೀಡುತ್ತಿದ್ದಾರೆ ಎಂದು ಆರೋಪಿಸಿದರು. ಪ್ರಸ್ತುತ ಈ ಜಾಗವು ವಕ್ಫ್ ಬೋರ್ಡ್ ಅಧೀನದಲ್ಲಿ ಅಂಜುಮನ್ ಸಂಸ್ಥೆಗೆ ಸೇರಿದ್ದು, ಸಂಬಂಧಿಸಿದ ಪ್ರಕರಣ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದೆ. ಜಾಗದ ಕುರಿತು ನ್ಯಾಯಾಲಯದಿಂದ ಇಂಜೆಕ್ಷನ್ ಪಡೆಯಲಾಗಿದೆ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಪ್ರಮುಖರಾದ ಗೌಸ್ ಖತೀಬ್, ರಾಜೇಸಾಬ ಸುಂಕದ, ಮಜೀದ್ ಸನದಿ, ರಫೀಕ್ ಹುದ್ದಾರ, ದಾದಾಪೀರ್ ನದಿಮುಲ್ಲಾ, ಇಮ್ತಿಯಾಜ್ ಅತ್ತಾರ ಹಾಗೂ ಮುಜಾವರ್ ಅಲ್ಲಾ ದುಕನಾದಾರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಮೂಕ ಜೋಡಿಯ ಪ್ರೇಮ ವಿವಾಹ

▸ ಮಲ್ಲಿಕಾರ್ಜುನ ತುಂಗಳ



ದಿಗಂತ ವಿಶೇಷ

• **ರಬಕವಿ-ಬನಹಟ್ಟಿ:** ಪ್ರೇಮಕ್ಕೆ ಭಾಷೆಯ ಅಗತ್ಯವಿಲ್ಲ, ಭಾವನೆಗಳೇ ಅದರ ನಿಜವಾದ ಭಾಷೆ ಎಂಬುದನ್ನು ಈ ಮೂಕ-ಮೂಕಿ ಜೋಡಿ ತಮ್ಮ ಜೀವನದ ಮೂಲಕ ಸಾಬೀತುಪಡಿಸಿದ್ದಾರೆ.

ಮಾತು ಕೇಳಿಸದಿದ್ದರೂ, ಮಾತು ಆಡಲಾಗದಿದ್ದರೂ ಪರಸ್ಪರರ ಮನಸ್ಸು ಅರ್ಥ ಮಾಡಿಕೊಂಡು, ಪ್ರೀತಿ ಬಂಧನದಲ್ಲಿ ಒಂದಾದ ಈ ಜೋಡಿಯ ಕಥೆ ಎಲ್ಲರಿಗೂ ಸ್ಫೂರ್ತಿದಾಯಕವಾಗಿದೆ.

ಬನಹಟ್ಟಿಯ ಆದಿಬಣಜಿಗ ಸಮಾಜದ ಮಲ್ಲಿಕಾರ್ಜುನ ಮಿರ್ಜಿ(25) ರಾಯಬಾಗ ತಾಲೂಕಿನ ನಿಪನ್ಯಾಳ ಗ್ರಾಮದ ಮರಾಠ ಸಮುದಾಯದ ಅಮೃತಾ ಕುರಣೆ(19) ಪ್ರೇಮ ವಿವಾಹ ದಂಪತಿ.

ಜಮಖಂಡಿಯ ಕಿವುಡ ಮತ್ತು ಮೂಕರ ವಸತಿ ವಿಶೇಷ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುವ ಸಂದರ್ಭ ಇವರಿಬ್ಬರ ನಡುವೆ ಪ್ರೇಮಾಂಕುರವಾಗಿ ನಂತರ ಮೈಸೂರಿನಲ್ಲಿ ಇದೇ ವಿಶೇಷ ಪದವಿ ಕಾಲೇಜಿನಲ್ಲಿ ಶಿಕ್ಷಣ ಕಲಿಯುವಾಗ ಪ್ರೀತಿ ಮತ್ತಷ್ಟು ಗಟ್ಟಿಯಾಗಿ ವಿವಾಹಕ್ಕೆ ಕಾರಣವಾಯಿತು.

ಜೀವನದಲ್ಲಿ ಅನೇಕ ಸವಾಲುಗಳನ್ನು ಎದುರಿಸುತ್ತಾ ಬೆಳೆದ ಇವರಿಬ್ಬರು, ತಮ್ಮ ದೈಹಿಕ ನ್ಯೂನ್ಯತೆಯನ್ನು ಎಂದಿಗೂ ದುರ್ಬಲತೆಯಾಗಿ ಪರಿಗಣಿಸಲಿಲ್ಲ. ಸಂಜ್ಞಾ ಭಾಷೆ, ಮುಖಭಾವ ಮತ್ತು ಹೃದಯದ ಭಾವನೆಗಳ ಮೂಲಕ ಒಬ್ಬರನ್ನೊಬ್ಬರು ಅರ್ಥ ಮಾಡಿಕೊಂಡು ಸ್ನೇಹ ಬೆಳೆಸಿಕೊಂಡರು. ಆ ಸ್ನೇಹ ಕ್ರಮೇಣ ಪ್ರೀತಿಯಾಗಿ ಮಾರ್ಪಟ್ಟು, ಪರಸ್ಪರ ವಿಶ್ವಾಸ, ಗೌರವ ಮತ್ತು ಆತ್ಮೀಯತೆಯ ಬಾಂಧವ್ಯವನ್ನು ಗಟ್ಟಿಗೊಳಿಸಿತು.

ಸಮಾಜದಲ್ಲಿ ಇನ್ನೂ ಅನೇಕರು ದೈಹಿಕ ನ್ಯೂನ್ಯತೆಯುಳ್ಳವರ ಬಗ್ಗೆ ತಪ್ಪು ಕಲ್ಪನೆಗಳನ್ನು ಹೊಂದಿರುವ ಈ ಸಂದರ್ಭದಲ್ಲಿ ಈ ಜೋಡಿ ತಮ್ಮ ಪ್ರೇಮ ವಿವಾಹದ ಮೂಲಕ ಎಲ್ಲರಿಗೂ ಹೊಸ ಸಂದೇಶವನ್ನು ನೀಡಿದ್ದಾರೆ. ನಿಜವಾದ ಪ್ರೀತಿ ಎಂದರೆ ರೂಪ, ಹಣ ಅಥವಾ ದೈಹಿಕ ಸಾಮರ್ಥ್ಯವಲ್ಲ, ಹೃದಯಗಳ ಸಂಗಮ ಮತ್ತು ಪರಸ್ಪರ ಅರ್ಥೈಸಿಕೊಳ್ಳುವ ಮನೋಭಾವ ಎಂಬುದನ್ನು ಅವರು ತೋರಿಸಿದ್ದಾರೆ.

ವಿವಾಹ ನೋಂದಣಿ: ಪಂಚರ ಸಮ್ಮುಖದಲ್ಲಿ ಕಳೆದ ಮೇ 10, 2026ರಂದು ತೇರದಾಳದ ಉಪನೋಂದಣಿ ಇಲಾಖೆಯಲ್ಲಿ ವಿವಾಹ ನೋಂದಣಿಯಾಗಿದ್ದಾರೆ. ನಂತರದ ದಿನಗಳಲ್ಲಿ ಕುಟುಂಬಸ್ಥರ ವಿರೋಧದ ನಡುವೆಯೂ ಬದುಕು ಸಾಗಿಸಿದರು. ನಂತರ ದಿನಗಳಲ್ಲಿ ರಾಜಿ ಸಂಧಾನದ ಮೂಲಕ ಉಭಯ ಕುಟುಂಬಗಳ ಪರಸ್ಪರ ಒಪ್ಪಿಗೆಯೊಂದಿಗೆ ನಾಳೆ ದಿ.25 ರಂದು ರಬಕವಿ-ಬನಹಟ್ಟಿಯಲ್ಲಿ 'ಮದುವೆ ಆರತಕ್ಷತೆ' ಕಾರ್ಯಕ್ರಮ ಜರುಗುತ್ತಿದೆ.

ವಾಟ್ಸ್‌ಆ್ಯಪ್ ಪ್ರೀತಿ ಸಂದೇಶ

ಇವರಿಬ್ಬರಿಗೂ ಮಾತು ಬಾರದ ಕಾರಣ ವಾಟ್ಸ್‌ಆ್ಯಪ್‌ನಲ್ಲಿರುವ ಚಿಹ್ನೆಗಳ ಮೂಲಕ ಪ್ರೀತಿಯ ಸಂಭಾಷಣೆಯು ಇವರಿಬ್ಬರ ಪ್ರೇಮ ಪತ್ರಗಳಾಗಿದ್ದವು ಎಂದು ಸ್ವತಃ ಪ್ರೇಮಿಗಳೇ ಹೇಳುತ್ತಾರೆ. ಒಟ್ಟಾರೆ ಕುಟುಂಬಸ್ಥರ ಆಶೀರ್ವಾದ ಹಾಗೂ ಬಂಧು-ಬಳಗದ ಶುಭ ಹಾರೈಕೆಗಳ ನಡುವೆ ವೈವಾಹಿಕ ಜೀವನಕ್ಕೆ ಕಾಲಿಟ್ಟ ಈ ನವ ಜೋಡಿ ಸಮಾಜಕ್ಕೆ ಮಾದರಿಯಾಗಿದ್ದಾರೆ. ಅವರ ಈ ಪಯಣವು ವಿಶೇಷ ಚೇತನರಿಗೂ ಆತ್ಮ ವಿಶ್ವಾಸ ತುಂಬುವಂತಿದ್ದು, ಕನಸುಗಳನ್ನು ಸಾಕಾರಗೊಳಿಸಲು ಯಾವದೇ ಅಡೆತಡೆ ಅಡ್ಡಿಯಾಗುವುದಿಲ್ಲವೆಂಬುದನ್ನು ಸಾರುತ್ತದೆ.

ಲಾಳಗಟ್ಟಿ ಗ್ರಾಮದಲ್ಲಿ ಜಿಂಕೆ ಬೇಟೆ: ಇಬ್ಬರ ಬಂಧನ



• **ಧಾರವಾಡ:** ಕಾಡು ಪ್ರಾಣಿಗಳ ಬೇಟೆ ಆಡುತ್ತಿದ್ದ ಕಟುಕರ ಸಂಚು ಅರಣ್ಯ ಇಲಾಖೆ ಅಧಿಕಾರಿಗಳು ಧೂಳೀಪಟ ಮಾಡಿದ್ದು, ತಾಲೂಕಿನ ಲಾಳಗಟ್ಟಿ ಗ್ರಾಮದಲ್ಲಿ ಮಂಗಳವಾರ ನಡೆದ ಮಿಂಚಿನ ದಾಳಿಯಲ್ಲಿ ಚುಕ್ಕೆ ಜಿಂಕೆಯನ್ನು ಭೀಕರವಾಗಿ ಬೇಟೆಯಾಡಿ ಅದರ ಮಾಂಸ ಬೇಯಿಸುತ್ತಿದ್ದ ಇಬ್ಬರು ಪ್ರಮುಖ ಆರೋಪಿಗಳನ್ನು ಅಧಿಕಾರಿಗಳು ಖೆಡ್ಡಾಕ್ಕೆ ಕೆಡವಿದ್ದಾರೆ.

ಖೆಡ್ಡಾಕ್ಕೆ ಬಿದ್ದ ಖದೀಮರು ಯಾರು?: ಬಂಧಿತ ಆರೋಪಿಗಳನ್ನು ಲಾಳಗಟ್ಟಿ ಗ್ರಾಮದ ಫಕೀರಪ್ಪ ಮಡಿವಾಳಪ್ಪ ಮ್ಯಾಗಡಿ (42) ಮತ್ತು ಹೊಸಯಲ್ಲಾಪುರದ ನಿವಾಸಿ ವಾಸುದೇವ ಪರಶುರಾಮ ನಾಯಕ (34) ಎಂದು ಗುರುತಿಸಲಾಗಿದೆ. ಕೈಕೋಳ ತೊಟ್ಟಿರುವ ಇಬ್ಬರೂ ಸದ್ಯ ಜೈಲು ಪಾಲಾಗಿದ್ದಾರೆ.

ರಹಸ್ಯ ಕಾರ್ಯಾಚರಣೆ ಹೇಗೆ?: ಕಲಕೇರಿ ಅರಣ್ಯ ಶಾಖೆಯ ವ್ಯಾಪ್ತಿಯಲ್ಲಿ ಚುಕ್ಕೆ ಜಿಂಕೆಯೊಂದನ್ನು ಕ್ರೂರವಾಗಿ ಬೇಟೆಯಾಡಿದ್ದ ಈ ಖದೀಮರು, ಅದರ ಮಾಂಸವನ್ನು ಅಡುಗೆ ಮಾಡಿ ತಿನ್ನಲು ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಆದರೆ, ಇವರ ಪ್ರತಿಯೊಂದು ಮೂವ್‌ಮೆಂಟ್ ಮೇಲೆಯೂ ಅರಣ್ಯ ಇಲಾಖೆಯ ಗುಪ್ತಚರ ಕಣ್ಣು ಇಟ್ಟಿತ್ತು.

ಆರೋಪಿಗಳು ಮಾಂಸ ಬಳಸುವ ಬಗ್ಗೆ ಅರಣ್ಯ ಅಧಿಕಾರಿಗಳಿಗೆ ಖಚಿತ ಮಾಹಿತಿ ರವಾನೆಯಾಗಿತ್ತು. ತಡಮಾಡದ ಅಧಿಕಾರಿಗಳ ವಿಶೇಷ ತಂಡ, ಲಾಳಗಟ್ಟಿ ಗ್ರಾಮದ ಅಡಗುದಾಣದ ಮೇಲೆ ಏಕಾಏಕಿ ಸಿಡಿಲಂತೆ ಎರಗಿದೆ. ಅಧಿಕಾರಿಗಳನ್ನು ನೋಡಿ ಆರೋಪಿಗಳು ಬೆಚ್ಚಿಬಿದ್ದಿದ್ದು, ತಪ್ಪಿಸಿಕೊಳ್ಳುವ ಮೊದಲೇ ಇಬ್ಬರನ್ನು ವಶಕ್ಕೆ ಪಡೆಯಲಾಗಿದೆ.

ಉಳಿದ ಬೇಟೆಗಾರರಿಗಾಗಿ ಶೋಧ

ಅರಣ್ಯ ಇಲಾಖೆಯ ದಾಳಿಯ ಸುಳಿವು ಸಿಗುತ್ತಿದ್ದಂತೆ ಇನ್ನು ಕೆಲವು ಆರೋಪಿಗಳು ಕತ್ತಲಲ್ಲಿ ಪರಾರಿಯಾಗುವಲ್ಲಿ ಯಶಸ್ವಿಯಾಗಿದ್ದಾರೆ. ಕಾಡಿನ ಮೂಕ ಜೀವಿಗಳ ರಕ್ತ ಹರಿಸಿದ ಆ ಉಳಿದ ನರಹಂತಕರಿಗಾಗಿ ಅರಣ್ಯ ಇಲಾಖೆಯ ವಿಶೇಷ ಪಡೆಗಳು ಜಾಲ ಬೀಸಿದ್ದು, ತೀವ್ರ ಶೋಧ ಕಾರ್ಯ ಕೈಗೊಂಡಿವೆ.

ಮದ್ದುಗುಂಡು, ಮಾರಕಾಸ್ತ್ರ ಜಪ್ತಿ: ಬಂಧಿತರಿಂದ ಬೇಟೆಗೆ ಬಳಸಲಾಗಿದ್ದ ಅಪಾಯಕಾರಿ ಮದ್ದು ಗುಂಡುಗಳು ಹಾಗೂ ಜಿಂಕೆಯನ್ನು ಕಡಿಯಲು ಬಳಸಿದ್ದ ಮಾರಕಾಸ್ತ್ರಗಳನ್ನು ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ಪ್ರಸ್ತುತ ಆರೋಪಿಗಳ ವಿರುದ್ಧ 'ವನ್ಯಜೀವಿ ಸಂರಕ್ಷಣಾ ಕಾಯ್ದೆ'ಯಡಿ ಗಂಭೀರ ಪ್ರಕರಣ ದಾಖಲಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಕಾಡು ಪ್ರಾಣಿಗಳ ಮೇಲೆ ಕಣ್ಣಿಟ್ಟರೆ ಜೈಲು ಗ್ಯಾರಂಟಿ ಎಂಬ ಖಡಕ್ ಸಂದೇಶವನ್ನು ಈ ಕಾರ್ಯಾಚರಣೆಯ ಮೂಲಕ ಧಾರವಾಡ ಅರಣ್ಯ ಇಲಾಖೆ ರವಾನಿಸಿದೆ.

ಕಿರುಸುದ್ದಿ

ಕಣವಿ ಕಾವ್ಯ ಪುರಸ್ಕಾರಕ್ಕೆ ಆಯ್ಕೆ



ಲಕ್ಷ್ಮೇಶ್ವರ: ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡ ಇವರು ನಾಡೋಜ ಡಾ. ಚನ್ನವೀರ ಕಣವಿ ಮತ್ತು ಶಾಂತಾದೇವಿ ಕಣವಿಯವರ ದತ್ತಿ ಅಂಗವಾಗಿ ಪ್ರತಿ ವರ್ಷವೂ ಆಯೋಜಿಸುವ ರಾಜ್ಯಮಟ್ಟದ ಕಾವ್ಯ ಸ್ಪರ್ಧೆಯಲ್ಲಿ 2026ನೇ ಸಾಲಿನ ಕಾವ್ಯ ಪುರಸ್ಕಾರಕ್ಕೆ ಸುರೇಶ ತಂಗೋಡ ಬರೆದಿರುವ "ಅವನಲ್ಲ ಅವಳು" ಕಾವ್ಯಕ್ಕೆ ಲಭಿಸಿದೆ ಎಂದು ಸ್ಪರ್ಧೆಯ ಆಯೋಜಕ ಮತ್ತು ಕ.ವಿ.ವ. ಸಂಘ ಧಾರವಾಡದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಸುಶಿ ಕಾವ್ಯನಾಮದ ಮೂಲಕ ಸಾಹಿತ್ಯ ಕೃಷಿಯಲ್ಲಿ ತೊಡಗಿರುವ ಸುರೇಶ ತಂಗೋಡ ಅವರು [illegible]

ಅವಿರೋಧ ಆಯ್ಕೆ





ಗಜೇಂದ್ರಗಡ: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಗಜೇಂದ್ರಗಡ ತಾಲೂಕು ಯುವ ಘಟಕಕ್ಕೆ ಶಿವಕುಮಾರ ಶಿವಮಠ ಹಾಗೂ ಮಹಿಳಾ ಘಟಕಕ್ಕೆ ಗೀತಾ ಶಿರ್ಡಿದ ವಾಲಿ ಅವಿರೋಧವಾಗಿ ಆಯ್ಕೆಯಾದರು. [illegible]

ವಿದ್ಯುತ್ ವ್ಯತ್ಯಯ ಇಂದು

ನರಗುಂದ: 110, 11 ಕೆವಿ ಕೊಣ್ಣೂರ 33 ಕೆವಿ ಸ್ಟೇಷನ್ ಶಿರೋಳ ವಿದ್ಯುತ್ ವಿತರಣಾ ಉಪ-ಕೇಂದ್ರದಿಂದ ತ್ರೈಮಾಸಿಕ ನಿರ್ವಹಣಾ ಕೆಲಸ ಕೈಗೊಳ್ಳುವುದರಿಂದ ಜೂ.24ರಂದು ಬೆಳಗ್ಗೆ 10ರಿಂದ ಸಂಜೆ .30ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುತ್ತದೆ. 9 ಗ್ರಾಮ ಪಂಚಾಯತಿಗಳಾದ ಶಿರೋಳ, ಕೊಣ್ಣೂರ, ಹಿರೇಕೊಪ್ಪ, ಚಿಕ್ಕನರಗುಂದ, ಹದ್ಲಿ, ರಡ್ಡೇರನಾಗನೂರ, ಬೈರನಹಟ್ಟಿ, ವಾಸನ, ಬೆಣಸಕೊಪ್ಪ ಗ್ರಾಪಂಗೆ ಸಂಬಂಧಪಟ್ಟ ಹಳ್ಳಿಗಳು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ವಿದ್ಯುತ್ ದುರಸ್ತಿ ಕೆಲಸವು ಬೇಗನೆ ಮುಕ್ತಾಯಗೊಂಡಲ್ಲಿ ಯಾವುದೇ ಸೂಚನೆಯಿಲ್ಲದೆ ವಿದ್ಯುತ್ ಸರಬರಾಜು ಮಾಡಲಾಗುವುದು ಎಂದು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನರಗುಂದದ ಕಾರ್ಯ ಮತ್ತು ಪಾಲನೆ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ತಿಳಿಸಿದ್ದಾರೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜೆ ಶೇಂಗಾ	5403-7810
ಅಲಸಂದಿ	5411-5506
ಕಡಲೆ	4543-6185
ಉದ್ದು	5044-5044
ಹವೀಜ	12269-12269
ಹೆಸರು	1144-7012
ಜೋಳ	2413-5127
ಸಾಸಿವೆ	5169-5169
ಕುಸುಬಿ	4069-5069
ಗೋಧಿ	2044-2677
ವಟಾಣಿ	4750-4750
ಶೇಂಗಾ	11800-11800
ಬೆಲ್ಲದ	3870-3870



ಗದಗ: ಮಂತ್ರಾಲಯ ರಾಘವೇಂದ್ರ ಸ್ವಾಮಿಗಳ ಕಲಹಾಪುರ ಶಾಖಾ ಮಠದಲ್ಲಿ ವಾರ್ಷಿಕೋತ್ಸವ ಸಂಭ್ರಮ ಹಾಗೂ ಸಡಗರದಿಂದ ಜರುಗಿತು. ಮಠದ ನಿರ್ಮಾಣ ಕಾರ್ಯಕ್ಕೆ ದಾನ ಮಾಡಿದ ದಾನಿಗಳಿಗೆ ಸನ್ಮಾನಿಸಲಾಯಿತು. ರಾಘವೇಂದ್ರ ಸ್ವಾಮಿಗಳ ಮೃತ್ತಿಕ ಬೃಂದಾವನದ ಅಭಿಷೇಕ ಪೂಜೆ ಅಲಂಕಾರದಿಂದ ಹಾಗೂ ಹೋಮ ಹವನಗಳು ಶಾಸ್ತ್ರೋಕ್ತವಾಗಿ ಜರುಗಿದವು. ಲಘು ರಥೋತ್ಸವ ಸಂಭ್ರಮದಿಂದ ನೆರವೇರಿತು. ಮಂತ್ರಾಲಯ ನಂಜನಗೂಡು ರಾಘವೇಂದ್ರ ಸ್ವಾಮಿಗಳ ಶಾಖಾ ಮಠದಲ್ಲಿ ಮಂತ್ರಾಲಯ ಪೀಠಾಧಿಪತಿ ಸುಬುಧೇಂದ್ರತೀರ್ಥ ಶ್ರೀಗಳ ನೇತೃತ್ವದಲ್ಲಿ ಮೃತ್ತಿಕೆ ಬೃಂದಾವನ ಪ್ರತಿಷ್ಠಾಪಿಸಲಾಯಿತು.

ವಿದ್ಯುತ್ ಕಂಪನಿ ಖಾಸಗೀಕರಣಕ್ಕೆ ವಿರೋಧ

ರೋಣ: ಸರ್ಕಾರಿ ಸ್ವಾಮ್ಯದ ವಿದ್ಯುತ್ ಕಂಪನಿಗಳನ್ನು ಖಾಸಗೀಕರಣ ಗೊಳಿಸುವುದನ್ನು ನಿಲ್ಲಿಸಬೇಕು. ಇಲ್ಲದಿದ್ದರೆ ತೀವ್ರ ಹೋರಾಟ ನಡೆಸಲಾಗುವುದು ಎಂದು ಕರ್ನಾಟಕ ರೈತ ಸೇನಾ ತಾಲೂಕು ಘಟಕದ ಉಪಾಧ್ಯಕ್ಷ ಶಿವಲಿಂಗಪ್ಪ ಬೋಪಳಾಪೂರ ಹೇಳಿದರು.

ಅವರು ಮಂಗಳವಾರ ತಹಶೀಲ್ದಾರ್ ನಾಗರಾಜ ಕೆ. ಅವರಿಗೆ ಮನವಿ ಸಲ್ಲಿಸಿ ಮಾತನಾಡಿ, ವಿದ್ಯುತ್ ಖಾಸಗೀಕರಣ ಗೊಳಿಸಿದರೆ ರೈತರು, ಮಧ್ಯಮವರ್ಗ, ಬಡವರಿಗೆ ತೊಂದರೆಗಳಾಗಲಿದೆ. ಇದರಿಂದ ಬಡವರು ವಿದ್ಯುತ್ ಸೌಲಭ್ಯಗಳಿಂದ ವಂಚಿತಗೊಳ್ಳುವ ಸಾಧ್ಯತೆಯಿದ್ದು, ಖಾಸಗಿ ವ್ಯಕ್ತಿಗಳ ಕೈಯಲ್ಲಿ ಸರ್ಕಾರಿ ಆಸ್ತಿಗಳು ಸಿಕ್ಕರೆ ಖಾಸಗಿ ಕಂಪನಿಗಳ ಮಾಲೀಕರುಗಳು ದರವನ್ನು ನಿಗದಿ ಮಾಡುತ್ತಾರೆ. ಇದರಿಂದ ಬಡವರಿಗೆ ಆರ್ಥಿಕ ಹೊಡೆತ ಬೀಳಲಿದೆ ಎಂದು ಎಚ್ಚರಿಸಿದರು.

ಇನ್ನು ಪ್ರತಿ ವರ್ಷ ರೈತರು ಸಾವಿರಾರು ರೂ.ಗಳನ್ನು ಬೆಳೆವಿಮಾ ಯೋಜನೆಗೆ ಹಾಕುತ್ತಾರೆ. ಆದರೆ ಬೆಳೆವಿಮಾ ಕಂಪನಿಯೂ ರೈತರಿಂದ ಹಣ ವಸೂಲಿ ಮಾಡುತ್ತದೆ ಹೊರತು ವಾಪಸ್ಸು ನಿಡುತ್ತಿಲ್ಲ. ಸತತ ಐದು ವರ್ಷಗಳಿಂದ ಬೆಳೆ ವಿಮಾ ತುಂಬಿದರು ಕೂಡಾ ವಾಪಸ್ಸು ಬರುತ್ತಿಲ್ಲ. ಬೆಳೆ ವಿಮಾ ಹೆಸರಿನಲ್ಲಿ ಹಗಲು ಧರೋಡೆ ನಡೆಯುತ್ತಿದೆ ಎಂಬ ಮಾತುಗಳು ರೈತರಿಂದಲೇ ಕೇಳಿ ಬರುತ್ತಿದ್ದು, ಬೆಳೆವಿಮಾ ತುಂಬುವ ಮೊದಲೇ ರೈತರಿಗೆ ಕಂಪನಿಗಳ ಮಾಹಿತಿಯನ್ನು ಅಧಿಕಾರಿಗಳು ಒದಗಿಸಬೇಕು .ಬೆಳೆ ವಿಮಾ ಕುರಿತು ಜಾಗೃತಿಯನ್ನು ಮೂಡಿಸಬೇಕು ಎಂದರು. ತಹಶೀಲ್ದಾರ್ ನಾಗರಾಜ ಕೆ. ಮನವಿ ಸ್ವೀಕರಿಸಿದರು.



ರೋಣ: ಸರ್ಕಾರಿ ಸ್ವಾಮ್ಯದ ವಿದ್ಯುತ್ ಕಂಪನಿಗಳನ್ನು ಖಾಸಗೀಕರಣ ಗೊಳಿಸುವುದನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿ ಮಂಗಳವಾರ ತಹಶೀಲ್ದಾರ್ ನಾಗರಾಜ ಕೆ. ಅವರಿಗೆ ಮನವಿ ಸಲ್ಲಿಸಲಾಯಿತು. ವಸಂತ ಮಾರನಬಸರಿ, ಶರಣಪ್ಪ ಹೊಸಳ್ಳಿ, ಯಲ್ಲಪ್ಪ ಚಲವಾದಿ, ಮಲ್ಲಯ್ಯ ಪೂಜಾರ, ಹನಮಂತ ಹಳ್ಳಳ್ಳಿ, ಮುದಿಯಪ್ಪ ತಳವಾರ, ಯಲ್ಲಪ್ಪ ಚಳಗೇರಿ, ಶೇಖಸಾಬ ಪಿಂಜಾರ್, ಕಾಶಯ್ಯ ಪಾಟೀಲ, ಶರಣಪ್ಪ ತಹಶೀಲ್ದಾರ್ ,ಪ್ರಭು ಮಾರನಬಸರಿ ಸೇರಿದಂತೆ ಅನೇಕರಿದ್ದರು.

ರಜಾ ದಿನ ಸಾಲು ಮರದ ತಿಮ್ಮಕ್ಕ ವೃಕ್ಷೋದ್ಯಾನವನದತ್ತ ಪ್ರವಾಸಿಗರ ದಂಡು

ಕುಟುಂಬಕ್ಕೆ ಆರಾಮ, ಇಲಾಖೆಗೆ ಆದಾಯ

ಮೆಹೆಬೂಬ ಎಚ್ ಮೋತೆಖಾನ್

ರೋಣ: ರೋಣ ತಾಲೂಕಿನ ಜಿಗಳೂರ ಗ್ರಾಮದ ಬಳಿ 300 ಎಕರೆ ಪ್ರದೇಶದಲ್ಲಿ ಬೃಹತ್ ಕುಡಿಯುವ ನೀರು ಪೂರೈಕೆ ಕೆರೆಯನ್ನು ನಿರ್ಮಿಸಲಾಗಿದ್ದು, ಈ ಕೆರೆಯ ಬಳಿಯಿರುವ ಒಂಬತ್ತು ಎಕರೆ ಪ್ರದೇಶದಲ್ಲಿ ಸಾಲು ಮರದ ತಿಮ್ಮಕ್ಕ ವೃಕ್ಷೋದ್ಯಾನವನವನ್ನು ನಿರ್ಮಿಸಲು ಶಾಸಕ ಜಿ.ಎಸ್.ಪಾಟೀಲ ಕ್ರೀಯಾ ಯೋಜನೆಯನ್ನು ರೂಪಿಸಿ ಉದ್ಯಾನವನವನ್ನು ಜ.26,2026 ರಂದು ಲೋಕಾರ್ಪಣೆಗೊಳಿಸಿದ್ದರು. ಈಗ ತಿಮ್ಮಕ್ಕ ವೃಕ್ಷೋದ್ಯಾನವನ ಪ್ರವಾಸಿಗರಿಂದ ತುಂಬಿಕೊಂಡಿದೆ.

ರೋಣ ಗಜೇಂದ್ರಗಡ ಮುಖ್ಯ ರಸ್ತೆಗೆ ಹೊಂದಿಕೊಂಡು ನಿರ್ಮಿಸಲಾದ ಉದ್ಯಾನವನ ಪ್ರವಾಸಿಗರನ್ನು ಕೈಬಿಸಿ ಕರೆಯುತ್ತದೆ ಎಂಬ ಮಾದರಿಯಲ್ಲಿ ನಿರ್ಮಿಸಲಾಗಿದ್ದು, ಇದರಿಂದ ಶನಿವಾರ ಮತ್ತು ರವಿವಾರ ಪ್ರವಾಸಿಗರು ಮತ್ತು ಕುಟುಂಬಸ್ಥರಿಂದ ಉದ್ಯಾನವನ ಭರ್ತಿಯಾಗಿರುತ್ತದೆ. ಅರಣ್ಯ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಸತತ ಎರಡು ವರ್ಷಗಳ ಪ್ರಯತ್ನದ ಫಲವಾಗಿ ಉದ್ಯಾನವನದಲ್ಲಿ ಎರಡು ಸಾವಿರ ಸಸಿಗಳು ಈಗ ಬೆಳೆದು ನಿಂತಿದ್ದು, ನೋಡುಗರ ಮನವನ್ನು ತಣಿಸುತ್ತಿದೆ.

ಶಾಸಕ ಜಿ.ಎಸ್.ಪಾಟೀಲ ಜಿಗಳೂರ ಕೆರೆಯ ಸೌಂದರ್ಯವನ್ನು ಹೆಚ್ಚಿಸಬೇಕು ಎಂಬ ಉದ್ದೇಶದಿಂದ ಐದು ವರ್ಷದ ನೀಲ ನಕ್ಷೆಯಂತೆ ಮೊದಲು ಉದ್ಯಾನವನ ನಿರ್ಮಿಸುವುದು ಮತ್ತು ಮಕ್ಕಳ ಬೇಸರ ಕಳೆಯಲು ಆಟಿಕೆಗಳ ಸಾಮಾಗ್ರಿಗಳನ್ನು ಅಳವಡಿಸುವುದು, ಎತ್ತರದ ಗೋಪುರವನ್ನು ನಿರ್ಮಿಸುವುದು, ವಾಯು ವಿಹಾರಕ್ಕೆ ಅನುಕೂಲ ಕಲ್ಪಿಸುವ ವ್ಯವಸ್ಥೆಯನ್ನು ಅಳವಡಿಸಲಾಗಿತ್ತು. ಈಗ ಯೋಜನೆಯು ಯಶಸ್ವಿಯಾಗಿದ್ದು ಉದ್ಯಾನವನಲೋಕಾರ್ಪಣೆ ಕೂಡ ಆಗಿದ್ದು, ಪ್ರವಾಸಿಗರ ಸಂಖ್ಯೆ ಕೂಡ ಹೆಚ್ಚಾಗತೊಡಗಿದೆ. ಜ.26,2026 ರಂದು ಮತ್ತೆ 1 ಕೋಟಿ ರೂ. ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾರ್ಯಗಳಿಗೆಶಾಸಕ ಜಿ.ಎಸ್.ಪಾಟೀಲ ಅವರು ಚಾಲನೆ ನೀಡುವ ಮೂಲಕ ಕೆರೆಗೆ ಮತ್ತಷ್ಟು ಕಳೆ ಒದಗಿಸುವ ಕೆಲಸವನ್ನು ಮಾಡಿದ್ದಾರೆ.

ದಿಗಂತ ವಿಶೇಷ

1 ಕೋಟಿ ವೆಚ್ಚದ ಕಾಮಗಾರಿಗಳಲ್ಲಿ ಬೋಟಿಂಗ್ ಹಾಗೂ ಸ್ವಯಂ ಚಾಲಿತ ವಿದ್ಯುತ್ ಕಾರಂಜಿಗಳ ಕಾರ್ಯಗಳು ಸಹ ಅಡಕವಾಗಿದ್ದು, ಈಗ ಈ ಕಾಮಗಾರಿಗಳು ನಡೆಯುತ್ತಿರುವುದು ಕಂಡು ಬರುತ್ತಿದೆ . ಪಾರ್ಕಿಂಗ್ ವ್ಯವಸ್ಥೆಯನ್ನೂ ಮಾಡಲಾಗಿದೆ. ಶನಿವಾರ ಹಾಗೂ ಭಾನುವಾರ ಸೇರಿದಂತೆಸರ್ಕಾರಿ ರಜಾ ದಿನಗಳ ಸಂಧರ್ಭದಲ್ಲಿ ಸಾಲು ಮರದ ತಿಮ್ಮಕ್ಕ ವೃಕ್ಷೋದ್ಯಾನವನ ಪ್ರವಾಸಿಗರಿಂದ ಭರ್ತಿಯಾಗಿರುತ್ತದೆ. ಇನ್ನು ಕುಟುಂಬ ಸಮೇತ ಬರುವ ಪ್ರವಾಸಿಗರು ತಾವೇ ತಯಾರಿಸಿಕೊಂಡು ಬಂದಿರುವ ರುಚಿರುಚಿಯಾದ ಭೋಜನವನ್ನು ಸವಿದು ಉದ್ಯಾನವನದ ಅಂದವನ್ನು ವೀಕ್ಷಿಸುತ್ತಾರೆ. ಮಕ್ಕಳಿಗಾಗಿ ಮನರಂಜನೆ ನೀಡುವಂತ ವಿಶೇಷ ಆಟಿಕೆಯ ಸಾಮಗ್ರಿಗಳಿದ್ದು, ಅವುಗಳು ಮಕ್ಕಳ ಮನವನ್ನು ಮತ್ತಷ್ಟು ಇಮ್ಮಡಿಗೊಳಿಸುತ್ತವೆ. ಹೀಗಾಗಿ ಉದ್ಯಾನವನ ವೀಕ್ಷಿಸಲು ಶಾಲಾ ಮಕ್ಕಳು ಸಾಲುಸಾಲಾಗಿ ಬರುವ ದೃಶ್ಯಗಳು ಕೂಡ ಕಾಣ ಸಿಗುತ್ತವೆ.



ಶೀಘ್ರ ಬೋಟಿಂಗ್, ವಿದ್ಯುತ್ ಕಾರಂಜಿ

ರೋಣದಲ್ಲಿ ಪ್ರವಾಸಿ ತಾಣಗಳಿಲ್ಲ ಎಂಬ ಕೊರಗು ನೀಗಿಸಲಾಗಿದೆ. 5 ಕೋಟಿ ವೆಚ್ಚದಲ್ಲಿ ನಡೆದಿರುವ ಉದ್ಯಾನವನ ಲೋಕಾರ್ಪಣೆಗೊಂಡಿದೆ. 1 ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನಿಡಲಾಗಿದೆ. ಪ್ರವಾಸಿಗರು ಸೇರಿದಂತೆ ಕುಟುಂಬಸ್ಥರು ಉದ್ಯಾನವನದತ್ತ ತೆರಳುತ್ತಿರುವುದು ಸಂತಸ ತಂದಿದ್ದು, ಬೋಟಿಂಗ್ ಮತ್ತು ವಿದ್ಯುತ್ ಕಾರಂಜಿಗಳು ಸಹ ಶೀಘ್ರ ಸಾರ್ವಜನಿಕರ ವೀಕ್ಷಣೆಗೆ ಲಭ್ಯವಾಗಲಿವೆ ಎಂದು ರೋಣ ಶಾಸಕ ಜಿ.ಎಸ್.ಪಾಟೀಲ ಹೇಳಿದ್ದಾರೆ.

> ಶನಿವಾರ ಹಾಗೂ ಭಾನುವಾರ ಉದ್ಯಾನವನದತ್ತ ಪ್ರವಾಸಿಗರ ದಂಡು ಹರಿದು ಬರುತ್ತಿದೆ. ಆದಾಯ ಕೂಡ ಬರುತ್ತಿದೆ. ಉದ್ಯಾನವನ ವೀಕ್ಷಿಸಲು ವಯಸ್ಕರರಿಗೆ 30 ರೂ., 5 ರಿಂದ 12 ವರ್ಷದೊಳಗಿನ ಮಕ್ಕಳಿಗೆ 20 ರೂ.ಗಳ ಟಿಕೆಟ್ ದರವನ್ನು ನಿಗದಿ ಪಡಿಸಲಾಗಿದ್ದು, ಕುಟುಂಬದ ಸಮೇತ ಬಂದು ಉದ್ಯಾನವನದ ಸೌಂದರ್ಯವನ್ನು ವೀಕ್ಷಿಸುತ್ತಿದ್ದಾರೆ.
> ■ ಅನ್ವರ ಕೋಲಾರ, ಅರಣ್ಯಾಧಿಕಾರಿ, ರೋಣ



ನಕಲಿ ವೈದ್ಯರ ವಿರುದ್ಧ ಕ್ರಮ: ಜಿಲ್ಲಾಧಿಕಾರಿ

ಗದಗ: ಜಿಲೆಯಲ್ಲಿ ನಕಲಿ ವೈದ್ಯರ ಹಾವಳಿ ತಡೆಗಟ್ಟಲು ಜಿಲ್ಲಾಡಳಿತ ಕಠಿಣ ಹೆಜ್ಜೆ ಇಟ್ಟಿದ್ದು, ಅನಧಿಕೃತವಾಗಿ ವೈದ್ಯಕೀಯ ವೃತ್ತಿ ನಡೆಸುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳಲು ಜಿಲ್ಲಾ ಮಟ್ಟದ ವಿಶೇಷ ಪಡೆಯನ್ನು ರಚಿಸಲಾಗಿದೆ ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಹೇಳಿದರು.

ನಗರದ ಜಿಲ್ಲಾಧಿಕಾರಿ ಸಭಾಂಗಣದಲ್ಲಿ ಜಿಲ್ಲಾ ನೋಂದಣಿ ಮತ್ತು ಕುಂದು ಕೊರತೆ ನಿವಾರಣಾ ಪ್ರಾಧಿಕಾರ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ತಪಾಸಣೆ ವೇಳೆ ಪತ್ತೆಯಾದ ಮೂವರು ನಕಲಿ ವೈದ್ಯರಿಗೆ ತಲಾ 50 ಸಾವಿರ ರೂಪಾಯಿಗಳ ದಂಡ ವಿಧಿಸಿ ಕಾನೂನು ಕ್ರಮ ಜರುಗಿಸಲಾಗಿದ್ದು, ಅವರಿಂದ ಸಂಗ್ರಹವಾಗುವ ದಂಡದ ಮೊತ್ತವನ್ನು ಸರ್ಕಾರಕ್ಕೆ ಭರಣ ಮಾಡಲಾಗುವುದು ಎಂದರು.

ಜಿಲ್ಲೆಯಲ್ಲಿ ಕೆ.ಪಿ.ಎಂ.ಇ ಅಡಿ ನೋಂದಣಿ ಮಾಡಿಕೊಳ್ಳದೆ ನಡೆಯುತ್ತಿರುವ ಯಾವುದೇ ಖಾಸಗಿ ಆಸ್ಪತ್ರೆ, ಲ್ಯಾಬ್, ಸ್ಕ್ಯಾನಿಂಗ್ ಸೆಂಟರ್, ಬ್ಲಡ್ ಬ್ಯಾಂಕ್ ಹಾಗೂ ಇತರೆ ಆರೋಗ್ಯ ಸಂಸ್ಥೆಗಳು ಈ ಪ್ರಕಟಣೆ ಹೊರಡಿಸಿದ 15 ದಿನಗಳೊಳಗೆ ಕಡ್ಡಾಯವಾಗಿ ಆನ್‌ಲೈನ್ ಮೂಲಕ ನೋಂದಣಿಗೆ ಅರ್ಜಿ ಸಲ್ಲಿಸಬೇಕು. ತಪ್ಪಿದ್ದಲ್ಲಿ ಕಾಯ್ದೆ ಪ್ರಕಾರ ಕಠಿಣ ಕ್ರಮ ಮತ್ತು ದಂಡ ವಿಧಿಸಲಾಗುವುದು ಎಂದರು.

ನೋಂದಾಯಿತ ಖಾಸಗಿ ಆಸ್ಪತ್ರೆಗಳ ಆಡಳಿತ ಮಂಡಳಿಗಳು ತಮ್ಮ ಸಂಸ್ಥೆಯ ನೋಂದಣಿ ಅವಧಿ ಮುಗಿಯುವ ಮೂರು ತಿಂಗಳು ಮೊದಲೇ, ಅಗತ್ಯ ದಾಖಲೆಗಳೊಂದಿಗೆ ನವೀಕರಣಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು ಎಂದು ತಿಳಿಸಿದರು. ಯಾವುದೇ ಸರ್ಕಾರಿ ಆಸ್ಪತ್ರೆಗಳ ಆವರಣದಿಂದ 200 ಮೀಟರ್ ವ್ಯಾಪ್ತಿಯೊಳಗೆ ಯಾವುದೇ ಖಾಸಗಿ ಚಿಕಿತ್ಸಾ ಪ್ರಯೋಗಾಲಯಗಳು ಕಾರ್ಯನಿರ್ವಹಿಸುವಂತಿಲ್ಲ. ನಿಯಮ ಉಲ್ಲಂಘಿಸಿದರೆ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಎಸ್.ಎಸ್. ನೀಲಗುಂದ, ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿ ಹಾಗೂ ಕೆ.ಪಿ.ಎಂ.ಇ, ನೋಡಲ್ ಅಧಿಕಾರಿ ಡಾ. ಎಚ್.ಎಲ್.ಗಿರಡ್ಡಿ, ಐಎಂಎ ಅಧ್ಯಕ್ಷ ಡಾ. ಶ್ರೀಧರ ಕುರಡಗಿ, ಜಿಲ್ಲಾ ಆಯುಷ್ ಅಧಿಕಾರಿ ಡಾ.ಜುಬೇದ ತಿಗಳೆರ, ತಾಲೂಕು ಆರೋಗ್ಯಾಧಿಕಾರಿ ಡಾ.ಪ್ರೀತ್ ಖೋನಾ, ಡಾ.ಬಿ.ಎಸ್. ಭಜಂತ್ರಿ, ಡಾ. ಸುಭಾಸಚಂದ್ರ ದಾಯಗೊಂಡ, ಡಾ.ಸಂತೋಷಗೌಡ ಪಾಟೀಲ, ಡಾ.ಆರ್ .ಸಿ.ಕೊರವನವರ ಸೇರಿದಂತೆ ಇತರರಿದ್ದರು.





ಮುಂಡರಗಿ: ಪಟ್ಟಣದ ಜಗದ್ಗುರು ಅನ್ನದಾನೀಶ್ವರ ಮಠದ ಬಳಿಯಲ್ಲಿ ರೈತರು ಉತ್ತಮ ಮಳೆಗಾಗಿ ಪ್ರಾರ್ಥಿಸಿ ಅನ್ನ ಸಂತರ್ಪಣೆ ನಡೆಸಿದರು. ರೈತರಾದ ಚನ್ನಪ್ಪ ಹೂಗಾರ, ವೀರಣ್ಣ ಗಟ್ಟಿ, ಯಲ್ಲಪ್ಪರಡ್ಡಿ ಮಟ್ಟಣ್ಣವರ, ಶಿವಮೂರ್ತಯ್ಯ ಕೋಟಿಮಠ, ಮಹಾಂತೇಶ ಹಕ್ಕಂಡಿ, ಬಸಪ್ಪ ನವಲಗುಂದ, ಈರಣ್ಣ ಉಳ್ಳಾಗಡ್ಡಿ, ಈರಪ್ಪ ಕಳಕಣ್ಣವರ, ಅಲ್ಲಾಸಾಬ್ ಅಳವಂಡಿ, ಫಕೀರೇಶ ಕುಂಬಾರ ಇತರರಿದ್ದರು.

ಎಚ್.ಕೆ.ಪಾಟೀಲಗೆ ಸಚಿವ ಸ್ಥಾನ ಸಿಗಲು ವಿಶೇಷ ಪೂಜೆ

ಲಕ್ಷ್ಮೇಶ್ವರ: ರಾಜ್ಯದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರ ಮಂತ್ರಿಮಂಡಲದಲ್ಲಿ ಮಾಜಿ ಸಚಿವ ಎಚ್.ಕೆ.ಪಾಟೀಲರಿಗೆ ಸಚಿವಸ್ಥಾನ ಒದಗಿ ಬರಲಿ ಎಂದು ಮಂಗಳವಾರ ಪಟ್ಟಣದ ಸೋಮೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಹಿರಿಯ ಮುಖಂಡ ಚನ್ನಪ್ಪ ಜಗಲಿ ಮಾತನಾಡಿ, ಎಚ್.ಕೆ.ಪಾಟೀಲ ಅವರು ಈ ಹಿಂದಿನ ಅವಧಿಯಲ್ಲಿ ಪ್ರವಾಸೋದ್ಯಮ ಸಚಿವರಾಗಿದ್ದ ಸಂದರ್ಭದಲ್ಲಿ ಲಕ್ಷ್ಮೇಶ್ವರದ ಸೋಮೇಶ್ವರ ದೇವಸ್ಥಾನದ ಉತ್ತರ ಮಹಾದ್ವಾರ ಮರುನಿರ್ಮಾಣಕ್ಕೆ 2.50 ಕೋಟಿ ರೂ.ಗಳ ಅನುದಾನ ಒದಗಿಸಿದ್ದು, ಈ ದೇವಸ್ಥಾನವನ್ನು ಜೀರ್ಣೋದ್ಧಾರಗೊಳಿಸಿದ ಇನ್ಫೋಸಿಸ್ ಮುಖ್ಯಸ್ಥೆ ಡಾ.ಸುಧಾಮೂರ್ತಿ ಅವರು ನೀಡಿದ ಅತಿದೊಡ್ಡ ಕೊಡುಗೆಯ ನಂತರ ಮತ್ತೊಂದು ದೊಡ್ಡ ಕೊಡುಗೆ ನೀಡಿದ ಕೀರ್ತಿ ಡಾ.ಎಚ್. ಕೆ.ಪಾಟೀಲ ಅವರಿಗೆ ಸಲ್ಲುತ್ತದೆ. ಎಚ್.ಕೆ.ಪಾಟೀಲ ಅವರಿಗೆ ಸಚಿವ ಸ್ಥಾನ ದೊರಕಲಿ ಎಂದರು.

ಶ್ರೀ ಸೋಮೇಶ್ವರ ಭಕ್ತರ ಸೇವಾ ಟ್ರಸ್ಟ್ ಕಮಿಟಿ ಅಧ್ಯಕ್ಷ ಗುರುರಾಜ ಪಾಟೀಲಕುಲಕರ್ಣಿ, ವಿರೂಪಾಕ್ಷ ಆದಿ, ಬಸವರಾಜ ಮೆಣಸಿನಕಾಯಿ, ಮಯೂರಗೌಡ ಪಾಟೀಲ, ಬಂಗಾರೆಪ್ಪ ಮುಳಗುಂದ, ಸುರೇಶ ರಾಚನಾಯ್ಕರ್, ಡಿ.ವಿ.ಹಿರೇಮಠ, ನಂದೀಶ ಬಂಡಿವಾಡ, ಕಾಶಪ್ಪ ಉಮಚಗಿ, ಯಲ್ಲಪ್ಪಗೌಡ ಪಾಟೀಲ, ಬಸಣ್ಣ ಉಮಚಗಿ, ಬಾಳಿಹಳ್ಳಿಮಠ ಮುಂತಾದವರಿದ್ದರು.



ಮೊಹರಂ ಸೌಹಾರ್ದ, ಶಾಂತಿಯುತವಾಗಿ ಆಚರಿಸಿ



ಮುಂಡರಗಿ: ಹಿಂದೂ-ಮುಸ್ಲಿಮರ ಭಾವೈಕ್ಯತೆ ಹಾಗೂ ಸೌಹಾರ್ದದ ಸಂಕೇತವಾಗಿರುವ ಮೊಹರಂ ಹಬ್ಬವನ್ನು ಎಲ್ಲರೂ ಶಾಂತಿಯುತವಾಗಿ ಆಚರಿಸಬೇಕು ಎಂದು ಮುಂಡರಗಿ ಪೊಲೀಸ್ ಠಾಣೆಯ ಸಿಪಿಐ ಅಯ್ಯನಗೌಡ ಪಾಟೀಲ ಹೇಳಿದರು.

ಅವರು ತಾಲೂಕಿನ ಡಂಬಳ ಗ್ರಾಮದ ಪೊಲೀಸ್ ಹೊರ ಠಾಣೆಯಲ್ಲಿ ಮೊಹರಂ ಹಬ್ಬದ ಅಂಗವಾಗಿ ಆಯೋಜಿಸಿದ್ದ ಶಾಂತಿ ಪಾಲನಾ ಸಭೆಯಲ್ಲಿ ಮಾತನಾಡಿ, ಹಬ್ಬಗಳು ಸಮಾಜದಲ್ಲಿ ಸೌಹಾರ್ದ ಮತ್ತು ಸಹಬಾಳ್ವೆಯನ್ನು ಬಲಪಡಿಸುವ ಮಾಧ್ಯಮಗಳಾಗಿವೆ. ಪ್ರತಿವರ್ಷದಂತೆ ಈ ಬಾರಿಯೂ ಮೊಹರಂ ಹಬ್ಬವನ್ನು ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗದಂತೆ ಆಚರಿಸಬೇಕು. ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ನೀಡದೆ ಪೊಲೀಸ್ ಇಲಾಖೆಯೊಂದಿಗೆ ಸಾರ್ವಜನಿಕರು ಸಹಕರಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಮೊಹರಂ ಹಬ್ಬದ ಆಚರಣೆಗೆ ಸಂಬಂಧಿಸಿದಂತೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿ ಶಾಂತಿಯುತ ಹಾಗೂ ಸುವ್ಯವಸ್ಥಿತ ಆಚರಣೆಗೆ ಸಂಪೂರ್ಣ ಸಹಕಾರ ನೀಡುವುದಾಗಿ ಭರವಸೆಯನ್ನು ಗ್ರಾಮಸ್ಥರು ನೀಡಿದರು. ಈ ಸಂದರ್ಭದಲ್ಲಿ ಸಿದ್ದಪ್ಪ ಬಂಡಾರಿ, ಶಿವಾನಂದ ಬಂಡಿ, ರಜಾಕಸಾಬ, ರಾಜೇಸಾಬ ಹಿರೇಮನಿ, ಆರ್. ಆಲೂರ, ರಜಾಸಾಬ ಹುಬ್ಬಳ್ಳಿ, ಸಿದ್ದಪ್ಪ ಹೊಂಬಳ, ಮಳ್ಳಪ್ಪ ಕರಿಗಾರ, ಸೋಮಲಿಂಗಪ್ಪ ತಳಗೇರಿ, ಲಕ್ಷ್ಮಣ ಬೇಟಗೇರಿ, ಕೆ.ಎಂ.ಮಠದ, ಮಹೇಶ ಗುಡ್ಡದ, ಎಸ್.ಐ.ಮಠದ, ಮಹಬೂಬಲಿ ಮೂಲಿಮನಿ, ಪೊಲೀಸ್ ಹೆಡ್‌ಕಾನ್ಸ್‌ಟೇಬಲ್ ಎಸ್. ಎಸ್.ಕಂಚಗಾರ, ಪೊಲೀಸರಾದ ಬಾಬುಜಾನ ಕಮ್ಮಾರ, ನಾಗರಾಜ ಪೂಜಾರ ಗ್ರಾಮದ ಹಿರಿಯರು, ಯುವಕರು, ಪೊಲೀಸ್ ಸಿಬ್ಬಂದಿ ಇದ್ದರು.

ವಿದ್ಯುತ್ ವಿತರಣೆ ಖಾಸಗೀಕರಣವಾಗದಿರಲಿ

ಲಕ್ಷ್ಮೇಶ್ವರ: ರಾಜ್ಯದಲ್ಲಿ ವಿದ್ಯುತ್ ವಿತರಣೆಯನ್ನು ಖಾಸಗಿಯವರಿಗೆ ನೀಡಬಾರದು ಎಂದು ಆಗ್ರಹಿಸಿ ಮಂಗಳವಾರ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಲಕ್ಷ್ಮೇಶ್ವರ ತಾಲೂಕು ಘಟಕದ ಕಾರ್ಯಕರ್ತರು ತಹಶೀಲ್ದಾರ್ ಎಂ.ಧನಂಜಯ ಅವರಿಗೆ ಮನವಿ ಸಲ್ಲಿಸಿದರು. ಟಾಟಾ ಕಂಪನಿಗೆ ವಿದ್ಯುತ್ ವಿತರಣೆಯ ಪರವಾನಗಿ ನೀಡಬಾರದು. ಖಾಸಗಿ ಕಂಪನಿಯವರು ವಿದ್ಯುತ್ ಪೂರೈಕೆ ಪರವಾನಗಿ ತೆಗೆದುಕೊಂಡರೆ ರೈತರ ಪಂಪ್‌ಸೆಟ್‌ಗಳಿಗೆ ಮಾರಕವಾಗುತ್ತದೆ ಮತ್ತು ಗೃಹ ಬಳಕೆಗೂ ತೊಂದರೆ ಆಗಲಿದೆ. ನಿರುದ್ಯೋಗದ ಸಮಸ್ಯೆ ಹೆಚ್ಚಾಗಲಿದೆ. ಆದ್ದರಿಂದ ವಿದ್ಯುತ್ ಇಲಾಖೆಯನ್ನು ಖಾಸಗಿಯವರಿಗೆ ವಹಿಸುವ ಪರವಾನಗಿ ನೀಡಬಾರದು. ಒಂದು ವೇಳೆ ವಿದ್ಯುತ್ ಖಾಸಗೀಕರಣವಾದರೆ ರಾಜ್ಯಾದ್ಯಂತ ಬಂದ್‌ಗೆ ಕರೆ ಕೊಡುವುದರ ಮೂಲಕ ರಾಜ್ಯ ಸರ್ಕಾರದ ವಿರುದ್ಧ ಬಾರಕೋಲು ಚಳುವಳಿ ನಡೆಸಲಾಗುವುದು ಎಂದು ಎಚ್ಚರಿಸಿದರು. ರಾಜ್ಯ ರೈತ ಸಂಘದ ತಾಲೂಕು ಘಟಕದ ಅಧ್ಯಕ್ಷ ನಾಗರಾಜ ಕಳ್ಳಿಹಾಳ, ಮಂಜುನಾಥ ಅಣ್ಣಿಗೇರಿ ಮಾತನಾಡಿದರು. ರಾಮಣ್ಣ ಕಾಶಿಕೋವಿ, ಶಿವಾನಂದ ಲಿಂಗಶೆಟ್ಟಿ, ಮಂಜುನಾಥ ಹಾವಳಕೇರಿ, ಮುರುಗೇಶ ಬಳಿಗಾರ, ಶಂಭಣ್ಣ ಬಳಿಗಾರ, ಸಿದ್ದಲಿಂಗಪ್ಪ ಕಳ್ಳಿಹಾಳ, ಪ್ರಕಾಶ ಬಡಿಗೇರ, ಖಾದರ್‌ಸಾಬ್ ರಿತ್ತಿ, ಶಿವಪ್ಪ ಶಿವಸಿಂಪಿಗೇರ, ದಾಲವ್‌ಸಬಾ ತಬ್ಬಲ, ಫಕೀರೇಶ ಶೀರನಹಳ್ಳಿ, ಕುಮಾರ ಕರಡಿಕೊಪ್ಪ, ರಮೇಶ ಕಾಶಿಕೋವಿ ಇದ್ದರು.



ಮೌನ ಅನುಷ್ಠಾನದ ಮಹಾಮಂಗಲೋತ್ಸವ ಇಂದು

ನರಗುಂದ: ತಾಲೂಕಿನ ಶಿರೋಳ ಗ್ರಾಮದ ಜಗದ್ಗುರು ಶ್ರೀ ಯಚ್ಚರಸ್ವಾಮಿಗಳ ಗವಿಮಠದ ಅಭಿನವ ಯಚ್ಚರ ಸ್ವಾಮೀಜಿ 21 ದಿನಗಳ ಪರ್ಯಂತ ಲೋಕ ಕಲ್ಯಾಣಾರ್ಥವಾಗಿ ಜಾಗೃತ ಭೂಮಿ ಹೊಳೆ-ಆಲೂರಿನ ಸುಕ್ಷೇತ್ರ, ಯಚ್ಚರಸ್ವಾಮಿಗಳ ಮಠದಲ್ಲಿ ಕೈಗೊಂಡಿದ್ದ 4ನೇ ವರ್ಷದ ಮೌನ ಅನುಷ್ಠಾನದ ಮಹಾಮಂಗಲೋತ್ಸವವು ಜೂನ್ 24ರ ಬೆಳಗ್ಗೆ 11 ಗಂಟೆಗೆ ಹೊಳೆಆಲೂರಿನಯಚ್ಚರೇಶ್ವರ ಗವಿಮಠದಲ್ಲಿ ಜರುಗಲಿದೆ.

ಸಮಾರಂಭದಲ್ಲಿ ಜಗನ್ನಾಥ ಸ್ವಾಮೀಜಿ, ಮುರನಾಳ ಜಗದ್ಗುರು ಮಳೆರಾಜೇಂದ್ರಸ್ವಾಮಿಮಠ, ತೆಲಂಗಾಣ ಬೆನಹಾಳದ ಸಂಗಮೇಶ್ವರ ಮಠದ ಸದಾಶಿವ ಮಹಾಂತ ಶಿವಾಚಾರ್ಯರು, ಹೊಳೆಆಲೂರು ಉಳವೇಂದ್ರಸ್ವಾಮಿ ಮಠದ ಅಲಮಯ್ಯ ಸ್ವಾಮೀಜಿ, ಲಿಂಗನಬಂಡಿ ಜಗದ್ಗುರು, ಮೌನೇಶ್ವರ ಮಠದ ಉಳವೇಂದ್ರ ಸಾನ್ನಿಧ್ಯ ವಹಿಸುವರು.

ಮಾರನಬಸರಿ ಗ್ರಾಮದಲ್ಲಿ ಅಲಂಕಾರಿಕ ವಿದ್ಯುತ್ ದೀಪಗಳ ಆಕರ್ಷಣೆ

ರೋಣ: ಐತಿಹಾಸಿಕ ಮೊಹರಂ ಹಬ್ಬದ ಸಡಗರ ಮಾರನಬಸರಿ ಗ್ರಾಮದಲ್ಲಿ ಇಮ್ಮಡಿಗೊಂಡಿದ್ದು, ಇಡೀ ಗ್ರಾಮ ಆಕರ್ಷಕ ಹಾಗೂ ಅಲಂಕಾರಿಕ ಝಗಝಗಿಸುವ ವಿದ್ಯುತ್ ದೀಪಗಳಿಂದ ಶ್ರಂಗಾರ ಗೊಂಡಿದ್ದು ನೋಡುಗರ ಕಣ್ಮನವನ್ನು ಸೆಳೆಯುತ್ತಿದೆ.

ಜೂ.24ರಂದು ಬುಧವಾರ ಸಂಧಲ್‌ರಾತ್ರಿಯಿದ್ದು ಗ್ರಾಮಕ್ಕೆ ಭಕ್ತರು ಈಗಾಗಲೇ ಆಗಮಿಸುತ್ತಿದ್ದಾರೆ. ಅಲ್ಲದೇ ಹಬ್ಬದ ವೈಭವದ ದೃಶ್ಯದಿಂದ ಎರಡು ಮಸೂತಿಗಳನ್ನು ಭಕ್ತರು ಶ್ರಂಗರಿಸಿದ್ದು, ಮೊಹರಂ ಹಬ್ಬಕ್ಕೆ ಮತ್ತಷ್ಟು ಮೆರಗನ್ನು ನೀಡಿದ್ದಾರೆ. ಇನ್ನು ಮೊಹರಂ ಹಬ್ಬದ ಅಳ್ಳೊಳ್ಳಿ ಬವ್ವ, ಹುಲಿ ಕುಣಿತ ಮಾರನಬಸರಿ ಗ್ರಾಮದಲ್ಲಿ ವಿರಳವಾಗಿ ಕಂಡು ಬರುತ್ತಿದ್ದು, ಗ್ರಾಮದ ಅಲ್ಲೈ ದೇವರುಗಳ ಮುಂದೆ ತಮ್ಮ ಭಕ್ತಿಯನ್ನು ಸಮರ್ಪಿಸುತ್ತಿದ್ದಾರೆ. ಈ ಬಾರಿ ವಿಶೇಷ ಎನ್ನುವಂತೆ ಗ್ರಾಮದ ಮಹಾದ್ವಾರದವನ್ನು ಆಕರ್ಷಕ ಅಲಂಕಾರಿಕ ವಿದ್ಯುತ್ ದೀಪಗಳಿಂದ ಶ್ರಂಗಾರ ಮಾಡಲಾಗಿದ್ದು, ಮಹಾದ್ವಾರದ ಮೆಲೆ ಎರಡು ಕಡೆಗೆ ಬಸವಣ್ಣ-ಎತ್ತು ನಡುವೆ ಇಷ್ಟಲಿಂಗವನ್ನು ಸ್ಥಾಪಿಸಲಾಗಿದೆ. ಹೀಗಾಗಿ ರಾತ್ರಿ ಬಸವಣ್ಣ ಮತ್ತು ಇಷ್ಟಲಿಂಗವು ನೋಡುಗರ ಮನವನ್ನು ಸೆಳೆಯುವುದರಲ್ಲಿ ಸಂದೇಹವಿಲ್ಲ. ಇನ್ನು ಸಣ್ಣ ಮಸೂತಿ ಹಾಗೂ ದೊಡ್ಡ ಮಸೂತಿಯ ಅಂಗಳದಲ್ಲಿ 50 ಅಡಿಗಳ ಎತ್ತರದಲ್ಲಿ ವಿದ್ಯುತ್ ದೀಪಾಲಂಕಾರಗಳಿಂದ ಝಂಡಾ ಸ್ತಂಭವನ್ನು ನಿರ್ಮಿಸಲಾಗಿದ್ದು, ಝಂಡಾ ಸ್ತಂಭ ಅಲುಗಾಡದಂತೆ ಬೃಹತ್ ಗಾತ್ರದ ಹಗ್ಗಗಳನ್ನು ಬಳಕೆ ಮಾಡಲಾಗಿದೆ. ಇನ್ನು ಸಣ್ಣ ಮಸೂತಿಯಿಂದ ರಾಜಕೀಯ ಭವಿಷ್ಯ ನುಡಿಯುವ ಧ್ವಜ ಸ್ತಂಭದವರೆಗೆ 25 ರಿಂದ 30 ಅಡಿ ಎತ್ತರದಲ್ಲಿ ಆಕರ್ಷಕ ರೀತಿಯಲ್ಲಿ ಸಿದ್ಧಪಡಿಸಲಾಗಿರುವ ಟ್ಯೂಬ್‌ಗಳನ್ನು ಕಟ್ಟಲಾಗಿದೆ. ಅಲ್ಲದೇ ಸಣ್ಣ ಮಸೂತಿ ಹಾಗೂ ದೊಡ್ಡ ಮಸೂತಿಯರು ಹಳೆ ಗ್ರಾಮ ಪಂಚಾಯತ್ ಕಟ್ಟಡದ ವರೆಗೆ ವಿವಿಧ ರೀತಿಯಲ್ಲಿ ಬೆಳಕು ನೀಡುವಂತಹ ವಿದ್ಯುತ್ ದೀಪಗಳ ಸರಮಾಲೆಗಳನ್ನು ಜೋಡನೆ ಮಾಡಿರುವುದು ಮತ್ತೊಂದು ವಿಶೇಷತೆಯಾಗಿದೆ.





- ಬುಧವಾರ ಸಂದಲ್ ರಾತ್ರಿ ಇರುವುದರಿಂದ ಪ್ರಸಕ್ತ ಯಾವ ಬೀಜಗಳನ್ನು ಬಿತ್ತನೆ ಮಾಡಿದರೆ ಹೆಚ್ಚು ಫಸಲು ಬರುತ್ತದೆ ಎಂಬುದು ಮಹತ್ವದ ಧಾರ್ಮಿಕ ಕಾರ್ಯ ದೊಡ್ಡ ಮಸೂತಿಯಲ್ಲಿ ನಡೆಯುತ್ತದೆ
- ದೊಡ್ಡ ಮಸೂತಿ ದೇವರ ಸವಾರಿ ಕೂಡ ನಡೆಯುದರಿಂದ ಸಾವಿರಾರು ಭಕ್ತರ ಆಗಮನ
- ಗಿಗಿ ಪದಗಳ ಮೇಳದವರು ಕೂಡಾ ಎರಡು ಮಸೂತಿಗಳ ಮುಂದೆ ತಮ್ಮ ಕಲಾತನ ಪ್ರದರ್ಶನ

ಸೋಮೇಶ್ವರ ದೇವಸ್ಥಾನದಲ್ಲಿ ಮಳೆಗಾಗಿ ವಿಶೇಷ ಜಲಾಭಿಷೇಕ

ಲಕ್ಷ್ಮೇಶ್ವರ: ಇಲ್ಲಿನ ಸೋಮೇಶ್ವರ ದೇವಸ್ಥಾನದಲ್ಲಿ ಮಳೆಗಾಗಿ ವಿಶೇಷ ಜಲಾಭಿಷೇಕ ಮತ್ತು ಪೂಜಾ ಕೈಂಕರ್ಯಗಳನ್ನು ಸೋಮವಾರ ಮುಂಜಾನೆ 6 ಗಂಟೆಯಿಂದ ಪ್ರಾರಂಭಿಸಲಾಯಿತು. 24 ಗಂಟೆಗಳು ನಿರಂತರವಾಗಿ ಸೋಮೇಶ್ವರನಿಗೆ ಜಲಾಭಿಷೇಕ ನಡೆದಿದ್ದು, ನಿರಂತರವಾಗಿ ಶಿವನ ಮೇಲೆ ನೀರು ಬೀಳುತ್ತಿದೆ.

ಮಳೆಯ ಅಭಾವವಿರುವ ಸಂದರ್ಭಗಳಲ್ಲಿ ರೈತರ ಒಳಿತಿಗಾಗಿ ಮತ್ತು ಉತ್ತಮ ಮಳೆ ಬೆಳೆಗಾಗಿ ಊರಿನ ಜನರು ಹಾಗೂ ಭಕ್ತರು ಒಟ್ಟಾಗಿ ಸೇರಿ ಈ ಪ್ರಾರ್ಥನೆಯನ್ನು ನೆರವೇರಿಸುವುದು ವಾಡಿಕೆಯಾಗಿದ್ದು ಈ ಬಾರಿ ಬಹುತೇಕ ಮುಂಗಾರು ಮಳೆ ಆಗದೆ ಇರುವುದರಿಂದ ರೈತರು ಬಿತ್ತನೆ ಮಾಡಿದ ಬೆಳೆಗಳು ಒಣಗುವ ಪರಿಸ್ಥಿತಿ ನಿರ್ಮಾಣವಾಗಿದ್ದು, ಈ ಹಿನ್ನೆಲೆಯಲ್ಲಿ ಶ್ರೀ ಸೋಮೇಶ್ವರ ಭಕ್ತರ ಸೇವಾ ಟ್ರಸ್ಟ್ ಕಮಿಟಿ, ದೇವಸ್ಥಾನ ಅರ್ಚಕರ ಸಮಿತಿ, ಸೋಮೇಶ್ವರ ಜಾತ್ರಾ ಕಮಿಟಿಯವರು ಸೇರಿ ಸೋಮೇಶ್ವರನಿಗೆ ನಿರಂತರವಾಗಿ 24 ಗಂಟೆಗಳು ಜಲಾಭಿಷೇಕ ಮತ್ತು ವಿಶೇಷ ಪೂಜೆ, ರುದ್ರಾಭಿಷೇಕಗಳನ್ನು ಹಮ್ಮಿಕೊಂಡಿದ್ದು ಅದರಂತೆ ಸೋಮವಾರ ಮುಂಜಾನೆ ಅರ್ಚಕರಾದ ಚಿಕ್ಕರಸ ಪೂಜಾರ, ರಾಘವೇಂದ್ರ ಪೂಜಾರ, ಕೃಷ್ಣಾಜಿ ಪೂಜಾರ ಅವರ ನೇತೃತ್ವದಲ್ಲಿ ರುದ್ರಾಭಿಷೇಕದ ಮೂಲಕ ವಿಶೇಷ ಪೂಜೆ ಸಲ್ಲಿಸಿದರು. ಪೂಜೆ ನಂತರ ನೆನಗಡಲೆ ಬೆಲ್ಲದ ಪ್ರಸಾದವನ್ನು ವಿತರಿಸಲಾಯಿತು. ಈ ವೇಳೆ ಭಕ್ತರ ಸೇವಾ ಟ್ರಸ್ಟ್ ಕಮಿಟಿ ಅಧ್ಯಕ್ಷ ಗುರುರಾಜ ಪಾಟೀಲಕುಲಕರ್ಣಿ, ಸುರೇಶ ರಾಚನಾಯ್ಕರ, ಚನ್ನಪ್ಪ ಜಗಲಿ, ಸೋಮಣ್ಣ ಬಂಡಿವಾಡ, ಜಿ.ಎಸ್. ಗುಡಗೇರಿ, ವಿರೂಪಾಕ್ಷ ಆದಿ, ನಂದೀಶ ಬಂಡಿವಾಡ, ಮಯೂರಗೌಡ ಪಾಟೀಲ, ಜಯಪ್ರಕಾಶ ಹೊಟ್ಟಿ, ಚಂಬಣ್ಣ ಬಾಳಿಕಾಯಿ, ಕುಬೇರಪ್ಪ ಮಹಾಂತಶೆಟ್ಟರ, ಶಿವಯೋಗಿ ಅಂಕಲಕೋಟಿ ಹಾಗೂ ಟ್ರಸ್ಟ್ ಕಮಿಟಿ ಸದಸ್ಯರು, ಅರ್ಚಕರ ಸಮಿತಿ ಅಧ್ಯಕ್ಷ ದಿಗಂಬರ ಪೂಜಾರ, ಕೃಷ್ಣ ಪೂಜಾರ, ನಾಗರಾಜ ಪೂಜಾರ ಹಾಗೂ ಸದಸ್ಯರು ಮತ್ತು ಸೋಮೇಶ್ವರ ಜಾತ್ರಾ ಕಮೀಟಿ, ಪುರಾಣ ಕಮಿಟಿ ಪದಾಧಿಕಾರಿಗಳು, ಭಕ್ತರು ಇದ್ದರು.



ಶಿವನ ಜಪಿಸಿದ ಭಕ್ತರು

ಅನೇಕ ಭಕ್ತರು ಆಗಮಿಸಿ ದೇವಸ್ಥಾನದ ಆವರಣದಲ್ಲಿ ಕುಳಿತುಕೊಂಡು ಭಕ್ತಿಯಿಂದ ಓಂ ನಮಃ ಶಿವಾಯ ಮಂತ್ರವನ್ನು ಜಪಿಸಿದರು. ಸಂಜೆಯಿಂದ ಅಹೋರಾತ್ರಿ ನೂರಾರು ಭಕ್ತರು ಸೇರಿ ಭಜನಾ ತಂಡಗಳೊಂದಿಗೆ ಆಗಮಿಸಿ ಭಕ್ತಿ ಸೇವೆ ಸಮರ್ಪಿಸಿದರು. ಸೋಮವಾರ ಮುಂಜಾನೆಯಿಂದ ಮಂಗಳವಾರ ಮುಂಜಾನೆ 8 ಗಂಟೆಯವರೆಗೂ ಜಲಾಭೀಷೇಕ, ನಂತರ ಋತ್ವಿಜರ ವೇದಘೋಷಗಳ ಮಧ್ಯೆ ರುದ್ರಾಭೀಷೇಕ ನಡೆದಿದ್ದು, ಪೂಜೆ ಮುಕ್ತಾಯದ ನಂತರ ಭಕ್ತರಿಗೆ ಮಹಾಪ್ರಸಾದ ವ್ಯವಸ್ಥೆ ಮಾಡಲಾಗಿದೆ.

40 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಶೇ.5ರಷ್ಟು ಮಾತ್ರ ಬಿತ್ತನೆ

ಕೈಕೊಟ್ಟ ಮಳೆ, ನೆಲ ಕಚ್ಚಿದ ಹೆಸರು ಬೆಳೆ

▸ ಲಕ್ಷ್ಮೀಕಾಂತ್ ಕುಲಕರ್ಣಿ



ದಿಗಂತ ವಿಶೇಷ

ಯಾದಗಿರಿ: ಪ್ರಸಕ್ತ ಸಾಲಿನ ಮುಂಗಾರು ಸಂಪೂರ್ಣ ದುರ್ಬಲಗೊಂಡಿದ್ದು, ವಾಣಿಜ್ಯ ಬೆಳೆಯಾದ ಹೆಸರನ್ನು ನಂಬಿದ್ದ ರೈತಾಪಿ ವರ್ಗ ಇದೀಗ ತಲೆ ಮೇಲೆ ಕೈಹೊತ್ತು ಕೂರುವಂತಾಗಿದೆ.

ಮುಂಗಾರು ಮಳೆ ಪ್ರವೇಶಿಸಿ 20 ದಿನಗಳಾದರೂ ಜಿಲ್ಲೆಯಲ್ಲಿ ವರುಣನ ಆಗಮನವಾಗಿಲ್ಲ. ವಾಣಿಜ್ಯ ಬೆಳೆ ಹೆಸರು ಬಿತ್ತನೆಗೆ ಕಾದು ಕುಳಿತಿದ್ದ ಅನ್ನದಾತರು ಇದೀಗ ನಿರಾಸೆ ಪಡುವಂತಾಗಿದೆ. ಹೆಸರು ಬೆಳೆ ಅಲ್ಪಾವಧಿ ಬೆಳೆ ಮತ್ತು ಇದನ್ನು ಮುಂಗಾರು ಆರಂಭದ ವಾರದಲ್ಲಿಯೇ ಬಿತ್ತನೆ ಮಾಡಬೇಕು. ಇಲ್ಲವಾದರೆ ನಂತರ ಇಳುವರಿ ಬರುವುದಿಲ್ಲ, ಹೀಗಾಗಿ ಜಿಲ್ಲೆಯಲ್ಲಿ ಹೆಸರು ಬಿತ್ತನೆಗೆ ಸಜ್ಜಾಗಿರುವ ರೈತರಿಗೆ ಇದುವರೆಗೂ ಮಳೆ ಬೀಳದಿರುವುದು ನುಂಗಲಾರದ ತುತ್ತಾಗಿ ಪರಿಣಮಿಸಿದೆ.

ಪ್ರಸಕ್ತ ಸಾಲಿನಲ್ಲಿ ಒಟ್ಟು 40 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಹೆಸರು ಬಿತ್ತನೆ ಗುರಿ ಹೊಂದಲಾಗಿದ್ದು, ಕೇವಲ ಶೇ.5ರಷ್ಟು ಪ್ರದೇಶದಲ್ಲಿ ಇದುವರೆಗೂ ರೈತರು ಹೆಸರು ಬಿತ್ತನೆ ಮಾಡಿದ್ದಾರೆ.

ಹೆಸರು, ಮುಂಗಾರು ಹಂಗಾಮಿನ ಬೆಳೆಯಾಗಿದ್ದು, ಕೇವಲ 40 ದಿನಗಳಲ್ಲಿ ಕೈಗೆ ಬರುತ್ತದೆ. ಹೀಗಾಗಿ ಹೆಸರನ್ನು ರೈತರ ಪಾಲಿನ ಎಟಿಎಂ ಎಂದು ಕರೆಯಲಾಗುತ್ತದೆ. ರಾಜಸ್ಥಾನ, ಗುಜರಾತಮತ್ತು ಗೋವಾ, ಗುಜುರಾತ್‌ರಾಜ್ಯಗಳಿಗೆ ಇಲ್ಲಿಂದಲ್ಲೆ ರಫ್ತಾಗುತ್ತದೆ. ಆ ರಾಜ್ಯಗಳಲ್ಲಿ ಅದಕ್ಕೆ ದಾಲ್ ಎಂದು ಕರೆಯುತ್ತಾರೆ. ಹೀಗಾಗಿ ಹೆಸರು ಬೆಳೆದು ಹೆಚ್ಚಿನ ದುಡ್ಡು ಸಂಪಾದಿಸಬೇಕು ಎಂಬ ರೈತರ ಆಸೆಗೆ ಈ ಬಾರಿಯೂ ಮಳೆರಾಯ ತಣ್ಣೀರು ಎರಚಿದ್ದಾನೆ.

ಕಳೆದ ವರ್ಷವೂ ಹೆಸರು ಬೆಳೆ ತಾಲೂಕಿನಲ್ಲಿ ಹೆಸರಿಲ್ಲದಂತೆ ಹಾಳಾಗಿ ಹೋಗಿತ್ತು. ಸಕಾಲಕ್ಕೆ ಮಳೆ ಬಾರದ ಕಾರಣ ಕಾಯಿಗಳು ಬಿಡಲಿಲ್ಲ, ಕೆಲ ಕಡೆ ಬಿಟ್ಟರೂ ಇಳುವರಿ ಕುಂಠಿಗೊಂಡಿತು. ಹೀಗಾಗಿ ರೈತ ಸಮುದಾಯ ತೀವ್ರ ಸಂಕಷ್ಟ ಅನುಭವಿಸಿತ್ತು.

ಪ್ರತಿ ವರ್ಷ ಮುಂಗಾರು ವೇಳೆ ಮಳೆ ಕೈಕೊಡುತ್ತಿರುವ ಕಾರಣ ರೈತ ಸಮೂಹ ಹೈರಾಣಾಗುವಂತಾಗಿದೆ. ಹೆಸರು ಬೆಳೆಯಂತೂ ಹಾಳಾಗಿದ್ದು, ಮುಂದಿನ ವಾರದಲ್ಲಿ ಮಳೆಯಾದರೆ ತೊಗರಿಯಾದರೂ ಬಿತ್ತಲು ಅನ್ನದಾತರು ಸಿದ್ಧತೆ ನಡೆಸಿಕೊಳ್ಳುತ್ತಿದ್ದಾರೆ.

> **ಅಲ್ಪಾವಧಿ ಬೆಳೆಯಾಗಿರುವ ಹೆಸರು ಬೆಳೆ ರೈತನ ಕೈ ಹಿಡಿಯುತ್ತದೆ ಎಂಬ ಆಶಾಭಾವನೆ ಹೊಂದಿದ್ದೇವೆ. ಆದರೆ, ಮಳೆರಾಯನ ದರ್ಶನವಾಗುತ್ತಿಲ್ಲ, ಕಳೆದ ವರ್ಷವೂ ಹೆಸರು ಬೆಳೆ ಮಳೆ ಇಲ್ಲದೆ ಒಣಗಿ, ನೆಲಮಟ್ಟದಿಂದ ಮೇಲೆ ಏಳಲು ಒದ್ದಾಡಿ ಹೋಯಿತು. ಎಪಿಎಂಸಿಗೆ ರೈತರು ಬಾರದಂತಾಗಿದೆ. ಅನ್ನದಾತರ ಬದುಕು ಹಸನಾದರೆ ಮಾತ್ರ ನಾಡಿನ ಜನರ ಬದುಕು ಕೂಡಾ ಹಸನಾಗಲಿದೆ. ಹೀಗಾಗಿ ವರುಣ ಕೃಪೆ ತೋರಬೇಕಷ್ಟೇ.**
> ■ **ವೆಂಕಟರಡ್ಡಿ ಅಬ್ಬೆತುಮಕೂರ,** ಎಪಿಎಂಸಿ ವರ್ತಕ ಯಾದಗಿರಿ

> **ಒಂದೆರೆಡು ದಿನಗಳಲ್ಲಿ ಮಳೆಯಾಗುವ ಸಾಧ್ಯತೆಗಳು ದಟ್ಟವಾಗಿದ್ದು, ಹೆಸರು ಬೆಳೆ ಬೆಳೆಯಲು ಇನ್ನೂ ಅವಕಾಶಗಳಿವೆ. ಇಲಾಖೆಯಲ್ಲಿ ರಸಗೊಬ್ಬರ, ಬೀಜ ದಾಸ್ತಾನು ಇದೆ.**
> ■ **ರಿಥೇಂದ್ರನಾಥ್ ಸೂಗೂರ, ಜಂಟಿ ಕೃಷಿ ನಿರ್ದೇಶಕ ಯಾದಗಿರಿ**

ಆಂಧ್ರದಿಂದ ಬಂತು ಜೋಳ: ಎಸಿ ದಾಳಿ




ಬಳ್ಳಾರಿ: ರೈತರಿಗೆ ಅನುಕೂಲವಾಗಲೆಂದು ಸರ್ಕಾರ ಬೆಂಬಲ ಬೆಲೆಯಲ್ಲಿ ಭತ್ತ, ಜೋಳ ಸೇರಿದಂತೆ ರೈತರು ಬೆಳೆದ ವಿವಿಧ ಉತ್ಪನ್ನಗಳನ್ನು ಖರೀದಿಸಿ, ರೈತರ ಖಾತೆಗೆ ನೇರವಾಗಿ ಹಣ ಪಾವತಿಸಲು ಮುಂದಾಗಿದೆ. ಆದರೆ, ಆಂಧ್ರದಿಂದ ಜೋಳ ಖರೀದಿಸಿ, ಇಲ್ಲಿನ ಖರೀದಿ ಕೇಂದ್ರದಲ್ಲಿ ಮಾರಾಟ ಮಾಡಲು ಮುಂದಾಗಿದ್ದಾರೆ ಎನ್ನುವ ಖಚಿತ ಮಾಹಿತಿ ಮೇರೆಗೆ ಎಸಿ ರಾಜೇಶ್ ಅವರ ನೇತೃತ್ವದಲ್ಲಿ ಮಂಗಳವಾರ ದಿಢೀರ್ ದಾಳಿ ಅಕ್ರಮ ದಂಧೆಕೋರರಿಗೆ ಬಿಸಿ ಮುಟ್ಟಿಸಿದ್ದಾರೆ.

ನೆರೆಯ ಆಂಧ್ರಪ್ರದೇಶದಲ್ಲಿ ಕಡಿಮೆ ದರದಲ್ಲಿ ಇಲ್ಲಿನ ವ್ಯಾಪಾರಿಗಳು ಜೋಳ ಖರೀದಿಸಿ, ಇಲ್ಲಿನ ರೈತರ ಹೆಸರಿನಲ್ಲಿ ಬೆಂಬಲ ಬೆಲೆಯಲ್ಲಿ ಮಾರಾಟ ಮಾಡುವ ಜಾಲವನ್ನು ಪತ್ತೆ ಹಚ್ಚಿದ ಅಧಿಕಾರಿಗಳು ಸಮೀಪದ ಅಸುಂಡಿ ಗ್ರಾಮದಲ್ಲಿ ಬೆಳ್ಳಂಬೆಳಗ್ಗೆ ದಿಢೀರ್ ದಾಳಿ ನಡೆಸಿ, ಉತ್ಪನ್ನ, ಬಳಸಿದ ವಾಹನಗಳನ್ನು ಸೀಜ್ ಮಾಡಿದ್ದಾರೆ. ಕೆಲ ವರ್ಷಗಳ ಹಿಂದೆ ಸಿರುಗುಪ್ಪ ತಾಲೂಕಿನ ಕೆಂಚನಗುಡ್ಡ ಗ್ರಾಮದಲ್ಲಿ ಇಂತಹ ಪ್ರಕರಣವೊಂದನ್ನು ಅಧಿಕಾರಿಗಳು ಪತ್ತೆ ಹಚ್ಚಿ ಅಕ್ರಮ ದಂಧೆಕೋರರಿಗೆ ಬಿಸಿ ಮುಟ್ಟಿಸಿದ್ದರು.

ಕೆಂಚನಗುಡ್ಡ ಗ್ರಾಮದಲ್ಲಿ ಜೋಳ ಬೆಳೆಯದಿದ್ದರೂ ರೈತರ ಹೆಸರಿನಲ್ಲಿ ಆಂಧ್ರದಿಂದ ಖರೀದಿಸಿದ ಜೋಳವನ್ನು ಬೆಂಬಲ ಬೆಲೆಯಲ್ಲಿ ಮಾರಾಟ ಮಾಡಿ ಸಿಕ್ಕಿಬಿದ್ದಿದ್ದರು. ಈ ಪ್ರಕರಣ ಮಾಸುವ ಮುನ್ನವೇ ಅಸುಂಡಿ ಗ್ರಾಮದಲ್ಲಿ ಮತ್ತೊಂದು ಪ್ರಕರಣ ಬಯಲಾಗಿದೆ. ಪ್ರತಿ ಕ್ವಿಂಟಾಲ್‌ಗೆ 3699ರೂ.ಗಳಂತೆ ಸರ್ಕಾರ ಜೋಳವನ್ನು ಬೆಂಬಲ ಬೆಲೆಯಲ್ಲಿ ಖರೀದಿ ಮಾಡುತ್ತಿದೆ. ಸದ್ಯ ಮಾರುಕಟ್ಟೆಯಲ್ಲಿ ಜೋಳದ ಬೆಲೆ ಪಾತಾಳಕ್ಕೆ ಕುಸಿದಿದ್ದು, 2ರಿಂದ 3 ಸಾವಿರ ವರೆಗೆ ಮಾರಾಟ ನಡೆದಿದೆ. ವ್ಯಾಪಾರಿಗಳು ಕಡಿಮೆ ಬೆಲೆಯಲ್ಲಿ ಖರೀದಿಸಿ ರೈತರ ಹೆಸರಿನಲ್ಲಿ ಮಾರಾಟ ಮಾಡಲು ಮುಂದಾಗಿದ್ದರು. ಪಡಿತರ ಧಾನ್ಯ ಅಕ್ರಮ ದಂಧೆ ಸೇರಿದಂತೆ ನಾನಾ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಎಸಿ ರಾಜೇಶ್ ಅವರ ನೇತೃತ್ವದ ತಂಡ ಕಾರ್ಯಾಚರಣೆ ನಡೆಸುತ್ತಿದ್ದು, ಅಕ್ರಮ ದಂಧೆಕೋರರಿಗೆ ನುಂಗಲಾರದ ತುಪ್ಪವಾಗಿ ಪರಿಣಮಿಸಿದೆ.

ಮಹಾದಲ್ಲಿ ಅಡಿಕೆ ಲಾರಿ ಜಪ್ತಿ: ಕಾಗೇರಿ ಆಕ್ರೋಶ



ಶಿರಸಿ: ಯಾವುದೇ ಅಕ್ರಮವಿಲ್ಲದೆ, ಸಂಪೂರ್ಣ ಕಾನೂನುಬದ್ಧ ದಾಖಲೆಗಳೊಂದಿಗೆ ಸಾಗಿಸಲಾಗುತ್ತಿದ್ದ ಅಡಿಕೆ ತುಂಬಿದ ಲಾರಿಗಳನ್ನು ಮಹಾರಾಷ್ಟ್ರದಲ್ಲಿ ಆಹಾರ ಸುರಕ್ಷತಾ ನಿಯಮಗಳ ಉಲ್ಲಂಘನೆಯ ನೆಪದಲ್ಲಿ ವಶಪಡಿಸಿಕೊಂಡಿರುವುದು ತೀರಾ ಅಸಮಂಜಸವಾಗಿದೆ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಉತ್ತರ ಕನ್ನಡ, ಶಿವಮೊಗ್ಗ, ಮಂಗಳೂರು ಸೇರಿದಂತೆ ವಿವಿಧ ಜಿಲ್ಲೆಗಳ ವ್ಯಾಪಾರಸ್ಥರು ಉತ್ತರ ಭಾರತಕ್ಕೆ ನಿರಂತರವಾಗಿ ಅಡಿಕೆ ಕಳುಹಿಸುತ್ತಿದ್ದಾರೆ. ಆದರೆ, ಪ್ರಸ್ತುತ ಅಽಕಾರಿಗಳು ಕಾನೂನನ್ನು ದುರ್ಬಳಕೆ ಮಾಡಿಕೊಂಡು, ಕೇವಲ ತಾಂತ್ರಿಕ ನೆಪ ಮತ್ತು ಶಂಕೆಯ ಆಧಾರದ ಮೇಲೆ ಮಲೆನಾಡಿನ ಅಡಿಕೆ ಲಾರಿಗಳನ್ನು ತಡೆ ಹಿಡಿದು ಜಪ್ತಿ ಮಾಡಿರುವುದು ಬೇಸರದ ಸಂಗತಿ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇಂಡೋನೇಷ್ಯಾ, ಮ್ಯಾನ್ಮಾರ್ಗಳಿಂದ ಆಗುತ್ತಿದ್ದ ಕಳಪೆ ಅಡಿಕೆ ಕಳ್ಳಸಾಗಣೆ ತಡೆಯಲು ಮಹಾರಾಷ್ಟ್ರ ಸರ್ಕಾರ ಕೈಗೊಂಡಿದ್ದ ಕಠಿಣ ಕ್ರಮಗಳು ನಮ್ಮ ರೈತರಿಗೆ ನೆಮ್ಮದಿ ನೀಡಿದ್ದವು. ಆದರೆ, ಇದರ ಬೆನ್ನಲ್ಲೇ ಈಗ ಸ್ಥಳೀಯ ಮತ್ತು ಕಾನೂನುಬದ್ಧ ವ್ಯಾಪಾರಿಗಳ ಲಾರಿಗಳನ್ನು ತಡೆಹಿಡಿದಿರುವುದು ಸೂಕ್ತವಲ್ಲದ ಕ್ರಮವಾಗಿದ್ದು, ಇದು ರೈತರಲ್ಲಿ ಆತಂಕ ಮೂಡಿಸಿದೆ ಎಂದು ಅವರು ವಿಷಾದಿಸಿದ್ದಾರೆ.

ಈ ಗಂಭೀರ ಬಿಕ್ಕಟ್ಟಿನ ಕುರಿತು ಈಗಾಗಲೇ ಅನೇಕ ಅಡಿಕೆ ಸಂಘ-ಸಂಸ್ಥೆಗಳು ಮಾಹಿತಿ ನೀಡಿದ್ದು, ಸಮಸ್ಯೆಯನ್ನು ತಕ್ಷಣವೇ ಕೇಂದ್ರ ಮಂತ್ರಿಗಳು ಹಾಗೂ ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗಿದೆ.

ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಹಾಗೂ ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಮತ್ತು ಸಚಿವರು ಈ ವಿಷಯದ ಕಡೆಗೆ ತಕ್ಷಣವೇ ಗಮನಹರಿಸಿದ್ದು, ಸಮಸ್ಯೆಯನ್ನು ಶೀಘ್ರದಲ್ಲೇ ಇತ್ಯರ್ಥಗೊಳಿಸುವುದಾಗಿ ಸಕಾರಾತ್ಮಕ ಭರವಸೆ ನೀಡಿದ್ದಾರೆ ಎಂದು ವಿವರಿಸಿದ್ದಾರೆ.

ಈ ಬಿಕ್ಕಟ್ಟು ಶೀಘ್ರದಲ್ಲೇ ಸುಖಾಂತ್ಯ ಕಾಣಲಿದ್ದು, ನಮ್ಮ ಭಾಗದ ಅಡಿಕೆ ವ್ಯಾಪಾರಸ್ಥರು ಮತ್ತು ರೈತರು ಯಾವುದೇ ಕಾರಣಕ್ಕೂ ಆತಂಕ ಪಡುವ ಅಗತ್ಯವಿಲ್ಲ ಎಂದು ಸಂಸದರು ಸ್ಪಷ್ಟಪಡಿಸಿದ್ದಾರೆ.

ಮುಂಡಗೋಡಿನಲ್ಲಿ ಲಂಚದಾಟಕ್ಕೆ ಬ್ರೇಕ್

ಅಧಿಕಾರಿಗಳಿಬ್ಬರು 'ಲೋಕಾ' ಬಲೆಗೆ

ಮುಂಡಗೋಡ: ತಾಲೂಕಿನ ಎರಡು ಪ್ರತ್ಯೇಕ ಕಚೇರಿಯ ಮೇಲೆ ಲೋಕಾಯುಕ್ತ ದಾಳಿ ಮಾಡಿ ಲಂಚ ಪಡೆಯುತ್ತಿದ್ದ ವೇಳೆ ಹಣ ಸಮೇತ ಇಬ್ಬರು ಅಧಿಕಾರಿಗಳನ್ನು ವಶಕ್ಕೆ ಪಡೆದ ಘಟನೆ ಮಂಗಳವಾರ ಜರುಗಿದೆ.





ತಾಲೂಕಿನ ಹೆಸ್ಕಾಂ ಪ್ರಬಾರ ಎಇಇ ಧರ್ಮರಾಜ ಬೆಡಸಗಾಂವ ಮತ್ತು ಕಂದಾಯ ನಿರೀಕ್ಷಕ ಬಸವರಾಜ ಬಿಸನಾಳ ಲಂಚ ಸ್ವೀಕರಿಸುತ್ತಿರುವಾಗ ಲೋಕಾಯುಕ್ತ ಅಧಿಕಾರಿಗಳ ಬಲೆಗೆ ಬಿದ್ದಿದ್ದಾರೆ.

ದೂರುದಾರ ವಿದ್ಯುತ್ ಗುತ್ತಿಗೆದಾರ ಶಿವಯೋಗಿ ಕೂಡಲಮಠ ಅವರು ಐದು ಲಕ್ಷ ರೂ. ಕಾಮಗಾರಿ ಬಿಲ್ ಹಾಗೂ ಇನ್ನಿತರ ಕಾಮಗಾರಿ ನೀಡುವಂತೆ ಹೆಸ್ಕಾಂ ಎಇಇ ಧರ್ಮರಾಜ ಬೆಡಸಗಾಂವ ಅವರಿಗೆ ಕೇಳಿದಾಗ, ನಿನ್ನ ಬಿಲ್ ಪಾಸ್ ಮಾಡಲು 75 ರೂ. ಸಾವಿರ ಹಣ ನೀಡಿದರೆ ಮಾತ್ರ ಬಿಲ್ ಪಾಸ್ ಮಾಡುವುದಾಗಿ ಹೇಳಿದಾರೆ ಎನ್ನಲಾಗಿದೆ. ನಂತರ ಗುತ್ತಿಗೆದಾರ ಶಿವಯೋಗಿ ಸೋಮವಾರ ಕಾರವಾರದ ಲೋಕಾಯುಕ್ತ ದೂರು ಸಲ್ಲಿಸಿದ್ದರು. ಈ ದೂರಿನ್ವಯ ಮಂಗಳವಾರ ಗುತ್ತಿಗೆದಾರನಿಂದ ಮುಂಗಡ ಹಣವಾಗಿ ಎಇಇ 65 ಸಾವಿರ ರೂ.ಪಡೆಯುತ್ತಿರುವಾಗ ಲೋಕಾಯುಕ್ತ ಸಿಪಿಐ ವಿನಾಯಕ ಬಿಲ್ಲವ ನೇತೃತ್ವದ ತಂಡ ದಾಳಿ ಮಾಡಿ ಹಣ ಸಮೇತವಾಗಿ ಅಧಿಕಾರಿಯನ್ನು ವಶಕ್ಕೆ ಪಡೆದಿದ್ದಾರೆ.

ಇನ್ನೊಂದು ಪ್ರಕರಣದಲ್ಲಿ ರೈತ ನಾರಾಯಣ ಅರೆಜೊಗಿ ಅವರು ಫಾರ್ಮ್ ಹೌಸ್ ಮಾಡಲು ಕಂದಾಯ ನಿರೀಕ್ಷರಿಗೆ ಅನುಮತಿಗೆ ಅರ್ಜಿ ಸಲ್ಲಿಸಿದಾಗ ಕಂದಾಯ ನಿರೀಕ್ಷಕ ಬಸವರಾಜ ಬಿಸನಾಳ ಅವರು 15 ಸಾವಿರ ರೂ.ಲಂಚ ಕೇಳಿದ್ದರ ಬಗ್ಗೆ ರೈತ ನಾರಾಯಣ ಸೋಮವಾರ ಲೋಕಾಯುಕ್ತರಿಗೆ ದೂರು ನೀಡಿದ್ದರು.

ಈ ದೂರಿನ್ವಯ ಲೋಕಾಯುಕ್ತ ಡಿವೈಎಸ್ಪಿ ಧನ್ಯಾ ನಾಯ್ಕ ನೇತೃತ್ವದ ತಂಡ ಕಂದಾಯ ನಿರೀಕ್ಷಕ 15 ಸಾವಿರ ರೂ. ಲಂಚ ಪಡೆಯುತ್ತಿರುವಾಗ ದಾಳಿ ನಡೆಸಿ ಲಂಚದ ಹಣ ಸಮೇತ ಅಧಿಕಾರಿಯನ್ನು ವಶಕ್ಕೆ ಪಡೆದಿದ್ದಾರೆ. ಲೋಕಾಯುಕ್ತ ಎಸ್ಪಿ ಕುಮಾರ ಚಂದ್ರ ಅವರ ಮಾರ್ಗದರ್ಶನದಲ್ಲಿ ದಾಳಿ ನಡೆದಿದೆ.

> **ತಾಲೂಕಿನಲ್ಲಿ ದಾಳಿ ಮಾಡಲು ಮೂರು ತಂಡಗಳನ್ನು ರಚಿಸಲಾಗಿತ್ತು. ಲೋಕಾಯುಕ್ತ ಡಿವೈಎಸ್ಪಿ ಧನ್ಯಾ ನಾಯ ಹಾಗೂ ಸಿಪಿಐ ವಿನಾಯಕ ಬಿಲ್ಲುವ ನೇತೃತ್ವದಲ್ಲಿ ಈ ಎರಡು ದಾಳಿ ಮಾಡಲಾಗಿದೆ. ಮುಂಡಗೋಡಿನ ಇಬ್ಬರ ಅಧಿಕಾರ ಮೇಲೆ ದೂರು ಬಂದಿತ್ತು. ಮಂಗಳವಾರ ಗುತ್ತಿಗೆದಾರನಿಂದ ಹೆಸ್ಕಾಂ ಎಇಇ 65 ಸಾವಿರ ಲಂಚ ಪಡೆಯುವಾಗ ಮತ್ತು ಕಂದಾಯ ನಿರೀಕ್ಷಕ ರೈತರೊಬ್ಬರಿಂದ 15 ಸಾವಿರ ಲಂಚ ಪಡೆಯುವಾಗ ಸಿಕ್ಕಿ ಬಿದ್ದಿದ್ದಾರೆ. ಇಬ್ಬರನ್ನು ವಶಕ್ಕೆ ಪಡೆದು ಕಾರವಾರ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗುವುದು.**
> ■ **ಕುಮಾರ ಚಂದ್ರ,** ಎಸ್ಪಿ ಲೋಕಾಯುಕ್ತ ಕಾರವಾರ

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಹಲವೆಡೆ ವರುಣನ ಸಿಂಚನ

• **ಗೋಕರ್ಣ:** ಮಳೆ ಪುನಃ ಪ್ರಾರಂಭವಾಗಿದ್ದರಿಂದ ರೈತರು ಸಂತಸದಿಂದ ಕೃಷಿ ಕಾಯಕದತ್ತ ಮುಖ ಮಾಡಿದ್ದಾರೆ. ಒಂದಷ್ಟು ಅಬ್ಬರಿಸಿ ಮತ್ತೆ ಬಿಡುವ ನೀಡುವುದು, ಇಲ್ಲವೇ ಜಿಟಿಜಿಟಿ ಮಳೆ ಸುರಿಯುತ್ತಿದ್ದು, ಇನ್ನೂ ಇಲ್ಲಿನ ಎಲ್ಲಾ ಪ್ರಮುಖ ಮಾರ್ಗಗಳು ಚರಂಡಿ ನೀರು ರಸ್ತೆಗೆ ತುಂಬಿ ನದಿಯಾಗಿ ಮಾರ್ಪಟ್ಟಿತ್ತು. ನಾಡುಮಾಸ್ಕೇರಿ, ಗಂಗಾವಳಿ, ಹನೇಹಳ್ಳಿ, ತದಡಿ, ತೊರ್ಕೆ, ಮಾದನಗೇರಿ,ಹಿರೇಗುತ್ತಿ, ಬರ್ಗಿ ಭಾಗದಲ್ಲಿ ಸಹ ಮಳೆಯಾಗಿದ್ದು, ಯಾವುದೇ ಅವಘಡಗಳು ನಡೆದಿಲ್ಲ.

ನಾಗಪ್ಪ ಬಿ.ಗೆ ಐಜಿಪಿ ಶ್ಲಾಘನಾ ಪದಕ

• **ಶಿರಸಿ:** ದಕ್ಷ, ಪ್ರಾಮಾಣಿಕ ಹಾಗೂ ಜನಸ್ನೇಹಿ ಪೊಲೀಸ್ ಅಧಿಕಾರಿಯಾಗಿ ಗುರುತಿಸಿಕೊಂಡಿರುವ ಪಿಎಸ್ಐ ನಾಗಪ್ಪ.ಬಿ ಅವರಿಗೆ 2025–26ನೇ ಸಾಲಿನ ಡಿಜಿ ಮತ್ತು ಐಜಿಪಿ ಶ್ಲಾಘನಾ ಪದಕ ಲಭಿಸಿದೆ. ಈ ಹಿಂದೆ ಅತ್ಯುತ್ತಮ ಸೇವೆಗಾಗಿ ಮುಖ್ಯಮಂತ್ರಿ ಬಂಗಾರದ ಪದಕಕ್ಕೂ ಭಾಜನರಾಗಿದ್ದ ನಾಗಪ್ಪ ಅವರು, ತಮ್ಮ ಕರ್ತವ್ಯನಿಷ್ಠೆ, ಕಾನೂನು ಸುವ್ಯವಸ್ಥೆ



ಕಾಪಾಡುವಲ್ಲಿ ತೋರಿದ ಕಾರ್ಯಕ್ಷಮತೆ ಹಾಗೂ ಸಾರ್ವಜನಿಕರೊಂದಿಗೆ ಬೆಳೆಸಿಕೊಂಡಿರುವ ಉತ್ತಮ ಬಾಂಧವ್ಯದ ಮೂಲಕ ಪೊಲೀಸ್ ಇಲಾಖೆಯಲ್ಲಿ ವಿಶೇಷ ಗುರುತನ್ನು ಮೂಡಿಸಿದ್ದಾರೆ. ಅವರ ಕಾರ್ಯವೈಖರಿ ಮತ್ತು ಸಾಧನೆಯನ್ನು ಪರಿಗಣಿಸಿ ರಾಜ್ಯ ಪೊಲೀಸ್ ಇಲಾಖೆಯು ಡಿಜಿ ಮತ್ತು ಐಜಿಪಿ ಶ್ಲಾಘನಾ ಪದಕ ನೀಡಿ ಗೌರವಿಸಿದೆ.

ದೇವಸ್ಥಾನಕ್ಕೆ ₹2 ಕೋಟಿ ಮೌಲ್ಯದ ಭೂಮಿ ದಾನ

• **ಕುಮಟಾ:** ಯೆಡ್ತಾರೆ ಬೈಂದೂರು ಮೂಲದ ವಾಸುದೇವ ಬೈಂದೂರು ಅವರು ತಮ್ಮ ಸ್ವಂತ ಒಡೆತನದ 34 ಗುಂಟೆ 8 ಆಣೆ ಕ್ಷೇತ್ರದ ಭೂಮಿಯನ್ನು ಕಂಚಿಕಾ ಪರಮೇಶ್ವರಿ ದೇವಸ್ಥಾನಕ್ಕೆ ಅಧಿಕೃತವಾಗಿ ದಾನ ನೀಡುವ ಮೂಲಕ ಅಪೂರ್ವ ಔದಾರ್ಯ ಮೆರೆದಿದ್ದಾರೆ. ದೇವಸ್ಥಾನದ ಪಶ್ಚಿಮ ಭಾಗದಲ್ಲಿರುವ ಈ ಭೂಮಿಯ ಪ್ರಸ್ತುತ ಮಾರುಕಟ್ಟೆ ಮೌಲ್ಯ ಸುಮಾರು ರೂ. 2 ಕೋಟಿ ರೂ.ಗಳಷ್ಟಿದ್ದು, ಭೂಮಿಯ ದಾನಪತ್ರವನ್ನು ನೋಂದಾಯಿಸಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಎಸ್.ಎಸ್. ಹೆಗಡೆ ಅವರಿಗೆ ಹಸ್ತಾಂತರಿಸಿದರು. ಶ್ರೀ ಕಂಚಿಕಾ ಪರಮೇಶ್ವರಿ ದೇವಿಯ ಸಮಸ್ತ ಭಕ್ತರ ಪರವಾಗಿ ವಾಸುದೇವ ಬೈಂದೂರು ಹಾಗೂ ಅವರ ಕುಟುಂಬದ ಸದಸ್ಯರಿಗೆ ಅಭಿನಂದನೆಗಳನ್ನು ಸಲ್ಲಿಸಿ, ದೇವಿಯ ಕೃಪೆ ಸದಾ ಅವರ ಮೇಲಿರಲಿ ಎಂದು ಹಾರೈಸಿದರು.

ಇಂದು ಹಲವೆಡೆ ವಿದ್ಯುತ್ ವ್ಯತ್ಯಯ

• **ಕಾರವಾರ:** ಕಾರವಾರ ಉಪ ವಿಭಾಗದ ವ್ಯಾಪ್ತಿಯಲ್ಲಿ ಮಧ್ಯಂತರ ಕಂಬ ಅಳವಡಿಕೆ ಕಾಮಗಾರಿ ಇರುವುದರಿಂದ ಜೂ.24ರಂದು ಬೆಳಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ಕೆ.ಎಚ್.ಬಿ, ತೆಲಂಗರೋಡ, ನಂದನಗದ್ದಾ, ಸುಂಕೇರಿ, ಎನ್.ಎಚ್.17, ಕಾರವಾರ ಟೌನ, ಶಿರವಾಡ, ಬೈತಕೋಲ್ ಫೀಡರಿನ ವಿವಿಧ ಪ್ರದೇಶಗಳಲ್ಲಿ ಹಾಗೂ ಹೆಸ್ಕಾಂ, ಕುಮಟಾ ಉಪವಿಭಾಗದ ಗ್ರಾಮೀಣ ಶಾಖೆಯ 11ಕೆ.ವಿ ಬಾಡಾ ಮತ್ತು ಮಾಸೂರ ಮಾರ್ಗದಲ್ಲಿ ಹಾಗು ಧಾರೇಶ್ವರ ಮಾರ್ಗದಲ್ಲಿ 11ಕೆ.ವಿ ಮಾರ್ಗದ ವಾಹಕ ಬದಲಾವಣೆ ಕಾಮಗಾರಿ ಇರುವುದರಿಂದ ಬೆಳಗ್ಗೆ 10 ರಿಂದ ಸಂಜೆ 5 ಗಂಟೆವರೆಗೆ ಹಾಗೂ 33ಕೆ.ವಿ ಗೋಕರ್ಣ ಮತ್ತು ಮಿರ್ಜಾನ್ ಉಪಕೇಂದ್ರದಲ್ಲಿ ತುರ್ತುನಿರ್ವಹಣಾ ಕಾಮಗಾರಿ ಇರುವುದರಿಂದ (ಗೋಕರ್ಣ, ಮಾದನಗೇರಿ, ತದಡಿ, ಬಂಕಿಕೊಡ್ಲ, ಗಂಗಾವಳಿ, ಮಿರ್ಜಾನ್, ಕೋಡ್ಕಣಿ, ಖಂಡಗಾರ, ನಾಗುರು, ಬ್ರಹ್ಮೂರ, ಯಲವಳ್ಳಿ, ಬರಗದ್ದೆ ಭಾಗಗಳಲ್ಲಿ ಬೆಳಗ್ಗೆ 10ರಿಂದ ಮಧ್ಯಾಹ್ನ 1 ಗಂಟೆ ವರೆಗೆ ವಿದ್ಯುತ್ ವ್ಯತ್ಯಯವಾಗಲಿದ್ದು ಗ್ರಾಹಕರು ಸಹಕರಿಸುವಂತೆ ಹೆಸ್ಕಾಂ, ಕುಮಟಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	62005	67899
ಬಿಳಿಗೋಟು	26699	36691
ಕೆಂಪುಗೋಟು	20116	33099
ಬೆಟ್ಟೆ	40629	49009
ರಾಶಿ	49699	53200
ಚಾಲಿ	43500	47915
ಬಿಳಿ ಕಾಳುಮೆಣಸು	70200	75000



ಹಳಿಯಾಳ: ತಾಪಂ ಸಭಾಭವನದಲ್ಲಿ ಜಿಲ್ಲಾ ಪಂಚಾಯತನ ಯೋಜನಾ ನಿರ್ದೇಶಕ ಕರೀಂ ಅಸದಿ ಅವರ ಅಧ್ಯಕ್ಷತೆಯಲ್ಲಿ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ಮಂಗಳವಾರ ನಡೆಯಿತು.

ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ

• **ಹಳಿಯಾಳ:** ತಾಪಂ ಸಭಾಭವನದಲ್ಲಿ ಜಿಲ್ಲಾ ಪಂಚಾಯತನ ಯೋಜನಾ ನಿರ್ದೇಶಕ ಕರೀಂ ಅಸದಿ ಅವರ ಅಧ್ಯಕ್ಷತೆಯಲ್ಲಿ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ಮಂಗಳವಾರ ನಡೆಯಿತು. ಹಳಿಯಾಳ ತಾಲೂಕು ನರೇಗಾ ಯೋಜನೆಯಡಿ ಉತ್ತಮ ಪ್ರಗತಿ ಸಾಧಿಸಿದ್ದು, ಜಿಲ್ಲೆಯ ಎಲ್ಲ ತಾಲೂಕುಗಳಿಗೆ ಮಾದರಿಯಾಗಿದೆ ಎಂದು ಪ್ರಶಂಸಿಸಿದರು.

ಹಾಗೆಯೇ ತಾಲೂಕಿನ ಕೆಲವು ಗ್ರಾಪಂಗಳು ಕಡಿಮೆ ಮಾನವ ದಿನಗಳ ಸೃಜನೆ ಹಾಗೂ ಇ-ಕೆವೈಸಿಯಲ್ಲಿ ನಿರೀಕ್ಷೆಗಿಂತ ಕಡಿಮೆ ಪ್ರಗತಿ ಸಾಧಿಸಿರುವುದು ಕಂಡು ಬಂದಿದ್ದು ಮುಂದಿನ ದಿನಗಳಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸುವಂತೆ ಸೂಚಿಸಿದರು. ಮುಂದುವರಿದು ಜುಲೈ ತಿಂಗಳಿನಿಂದ ಯೋಜನೆಯ ಮರುನಾಮಕರಣವಾಗುತ್ತಿದ್ದು, ಈ ಯೋಜನೆಯಡಿ ಕೈಗೊಂಡ ಕಾಮಗಾರಿಗಳನ್ನು ಮುಕ್ತಾಯಗೊಳಿಸುವಂತೆ ತಿಳಿಸಿದರು. ಹಾಗೆಯೇ ಎನ್ ಆರ್ ಎಲ್ ಎಮ್ ಯೋಜನೆಯ ಕುರಿತು ಚರ್ಚಿಸಿ ಅಗತ್ಯ ಸಲಹೆಗಳನ್ನು ನೀಡಿದರು. ತಾಲೂಕಿನ ಯಡೋಗಾ ಹಾಗೂ ಬಿಕೆ ಹಳ್ಳಿ ಗ್ರಾಪಂಗಳಿಗೆ ಭೇಟಿ ನೀಡಿ ವಿವಿಧ ಯೋಜನೆಯ ಕಡತಗಳನ್ನು ಪರಿಶೀಲಿಸಿದರು. ಯಡೋಗಾ ಗ್ರಾಪಂಯು ಇ-ಕೆವೈಸಿಯಲ್ಲಿ ಅತ್ಯಂತ ಕಡಿಮೆ ಪ್ರಗತಿ ಸಾಧಿಸಿದ್ದು ಅಭಿಯಾನ ಕೈಗೊಂಡು ಪ್ರಗತಿ ಸಾಧಿಸುವಂತೆ ಸೂಚಿಸಿದರು.

ಈ ಸಂದರ್ಭದಲ್ಲಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ವಿಲಾಸರಾಜ ಪ್ರಸನ್ನ, ಸಹಾಯಕ ನಿರ್ದೇಶಕ ಆನಂದ ಬೆನ್ನೂರ, ತಾಲೂಕಿನ ಎಲ್ಲ ಗ್ರಾಪಂ ಅಭಿವೃದ್ಧಿ ಅಧಿಕಾರಿಗಳು, ನರೇಗಾ ಹಾಗೂ ಎನ್ಆರ್ ಎಲ್ ಎಮ್ ಸಿಬ್ಬಂದಿ ಹಾಜರಿದ್ದರು.



ಕುಮಟಾ: ಯೆಡ್ತಾರೆ ಬೈಂದೂರು ಮೂಲದ ವಾಸುದೇವ ಬೈಂದೂರು ಅವರು ತಮ್ಮ ಸ್ವಂತ ಒಡೆತನದ 34 ಗುಂಟೆ 8 ಆಣೆ ಕ್ಷೇತ್ರದ ಭೂಮಿಯನ್ನು ಕಂಚಿಕಾ ಪರಮೇಶ್ವರಿ ದೇವಸ್ಥಾನಕ್ಕೆ ಅಧಿಕೃತವಾಗಿ ದಾನ ನೀಡುವ ಮೂಲಕ ಅಪೂರ್ವ ಔದಾರ್ಯ ಮೆರೆದಿದ್ದಾರೆ.

ಬಿಡಾಡಿ ದನಗಳ ತಾಣವಾದ ದಾಂಡೇಲಿ ನಗರಸಭೆ ಮೈದಾನ

■ ಸಂದೇಶ್ ಎಸ್.ಜೈನ್

• **ದಾಂಡೇಲಿ:** ಅಂದಾಗಾಗೆ ಇದು ಎಪಿಎಂಸಿ ಅವರಣ ಅಂದುಕೊಂಡಿರಾ, ಅಂದ್ಕೊಂಡ್ರೆ ತಪ್ಪೇನಿಲ್ಲ ಬಿಡಿ. ಎಪಿಎಂಸಿ ಆವರಣದ ರೀತಿಯಲ್ಲಿ ಇದು ಕಾಣುತ್ತಿರುವುದಂತು ಸತ್ಯ. ಅಂದಹಾಗೆ ಈ ದೃಶ್ಯ ದಾಂಡೇಲಿ ನಗರದ ಹಳೆ ನಗರಸಭೆಯ ಮೈದಾನದ್ದಾಗಿದೆ.

ಒಂದು ಕಾಲದಲ್ಲಿ ಕೈಗಾರಿಕಾ ನಗರಿ ಎಂಬ ಹಿರಿಮೆಯನ್ನು ಹೊಂದಿದ್ದ ದಾಂಡೇಲಿ, ಇತ್ತೀಚಿನ ಕೆಲವು ವರ್ಷಗಳಿಂದ ಪ್ರವಾಸಿ ನಗರವಾಗಿಯೂ ತನ್ನ ಮೆರುಗನ್ನು ಹೆಚ್ಚಿಸಿಕೊಂಡಿದೆ. ಜಾಗತಿಕ ಮಟ್ಟದಲ್ಲಿ ತನ್ನದೇ ಆದ ಛಾಪನ್ನು ಹೊಂದಿರುವ ದಾಂಡೇಲಿ ನಗರ ಇತ್ತೀಚಿನ ಕೆಲವು ವರ್ಷಗಳಿಂದ ಬಿಡಾಡಿ ದನಕರುಗಳಿಗೆ ಆಶ್ರಯ ನಗರ ಎಂಬ ಅಪಖ್ಯಾತಿಗೂ ಪಾತ್ರವಾಗಿರುವುದು ಮಾತ್ರ ದುಃಖಕರ ಸಂಗತಿ.

ದಾಂಡೇಲಿ ನಗರದಲ್ಲಿ ಎಲ್ಲಿ ನೋಡಿದರೂ ಬಿಡಾಡಿ ದನಕರುಗಳ ಸಂಖ್ಯೆ ಮತ್ತು ಲೆಕ್ಕಕ್ಕೆ ಸಿಗಲಾರದಷ್ಟು ಏರಿಕೆಯಾಗುತ್ತಿದೆ. ನಗರದ ಪ್ರಮುಖ ರಸ್ತೆಗಳಲ್ಲಿ ಅತ್ತಿಂದಿತ್ತ ಓಡಾಡುತ್ತಾ ಹಾಗೂ ರಸ್ತೆ ಮಧ್ಯೆ ಮಲಗಿ ಸುಗಮ ವಾಹನ ಸಂಚಾರಕ್ಕೆ ಅಡಚಣೆಯಾಗುತ್ತಿರುವುದು ನಗರದ ನಿತ್ಯದ ಬವಣೆಯಾಗಿದೆ. ಹಳೆ ನಗರಸಭೆಯ ಮೈದಾನವಂತು ಸ್ವಾತಂತ್ರ್ಯ ದಿನಾಚರಣೆ ಮತ್ತು ಗಣರಾಜ್ಯೋತ್ಸವ ದಿನಾಚರಣೆ, ನವರಾತ್ರಿ ಉತ್ಸವ ಹಾಗೂ ಇನ್ನಿತರ ಕಾರ್ಯಕ್ರಮಗಳು ನಡೆಯುವ ದಿನಗಳನ್ನು ಹೊರತುಪಡಿಸಿ ಮಿಕ್ಕ ವರ್ಷ ಪೂರ್ತಿ ಬಿಡಾಡಿ ದನಕರುಗಳಿಗೆ ಆಶ್ರಯ ತಾಣವಾಗಿ ಮಾರ್ಪಟ್ಟಿದೆ.

ಬಿಡಾಡಿ ದನಕರುಗಳ ನಿಯಂತ್ರಣಕ್ಕೆ ನಗರಸಭೆ ಸಾಕಷ್ಟು ಅಗತ್ಯ ಕ್ರಮವನ್ನು ಕೈಗೊಂಡರು ಇವುಗಳ ಸಂಖ್ಯೆ ಮಾತ್ರ ಇಳಿಕೆ ಕಾಣದೆ ಇರುವುದು ಸೋಜಿಗವಲ್ಲದೆ ಇನ್ನೇನು. ಬಿಡಾಡಿ ದನಕರುಗಳಿಂದ ನಗರದ ಜನತೆಗೆ ವಿಶೇಷವಾಗಿ ಸುಗಮ ವಾಹನ ಸಂಚಾರಕ್ಕೆ, ಸ್ವಚ್ಛತೆಗೆ ತೀವ್ರ ತೊಂದರೆಯಾಗುತ್ತಿದೆ. ಬಿಡಾಡಿ ದನಕರು ಗಳ ನಿಯಂತ್ರಣಕ್ಕೆ ನಗರಸಭೆ ಕಟ್ಟುನಿಟ್ಟಿನ ಕ್ರಮ ಕೈಗೊಂಡಲ್ಲಿ ಮಾತ್ರ ಬಿಡಾಡಿ ದನ ಕರುಗಳ ನಿಯಂತ್ರಣ ತಕ್ಕಮಟ್ಟಿಗಾದರೂ ಆಗಬಹುದು ಎಂಬ ನಿರೀಕ್ಷೆ ನಗರದ ಜನತೆಯತ್ತಾಗಿದೆ.



ದಿಗಂತ ವಿಶೇಷ

ನಿಯಂತ್ರಣಕ್ಕೆ ಕ್ರಮ

ಬಿಡಾಡಿ ದನಕರುಗಳ ನಿಯಂತ್ರಣಕ್ಕೆ ಸಂಬಂಧಪಟ್ಟಂತೆ ಮಂಗಳವಾರ ಮಾಧ್ಯಮದ ಪ್ರಶ್ನೆಗೆ ಉತ್ತರಿಸಿ ಮಾತನಾಡಿದ ಪೌರಾಯುಕ್ತ ವಿವೇಕ ಬನ್ನೆ ಅವರು ಈಗಾಗಲೇ ಬಿಡಾಡಿ ದನಕರುಗಳ ನಿಯಂತ್ರಣಕ್ಕೆ ಸಾಕಷ್ಟು ಕ್ರಮವನ್ನು ಕೈಗೊಳ್ಳಲಾಗಿದೆ. ತಮ್ಮ ತಮ್ಮ ಜಾನುವಾರುಗಳನ್ನು ರಸ್ತೆಗೆ ಬಿಡದಂತೆ ಮಾಧ್ಯಮದ ಮೂಲಕ, ಧ್ವನಿವರ್ಧಕದ ಮೂಲಕ ಜನ ಜಾಗೃತಿಯನ್ನು ಮೂಡಿಸುವ ಕಾರ್ಯ ಮಾಡಲಾಗಿದೆ. ಕೆಲ ತಿಂಗಳ ಹಿಂದೆ ದುಸಗಿಯ ಗೋಶಾಲೆಗೆ ಅಲ್ಲಿಯ ಬಿಡಾಡಿ ದನಕರುಗಳನ್ನು ರವಾನಿಸಲಾಗಿದೆ.

"ವಾರದೊಳಗಡೆ ಬಿಡಾಡಿ ದನಕರುಗಳನ್ನು ಅದರ ಮಾಲಕರು ಕಟ್ಟಿ ಸಾಕಲು ಅಗತ್ಯ ಕ್ರಮವನ್ನು ಕೈಗೊಳ್ಳಬೇಕು. ಒಂದು ವೇಳೆ ಕ್ರಮ ಕೈಗೊಳ್ಳದೆ ರಸ್ತೆ ಬದಿಗೆ ಬಿಟ್ಟಲ್ಲಿ, ಅಂತಹ ಬಿಡಾಡಿ ದನಕರುಗಳನ್ನು ವಶಕ್ಕೆ ಪಡೆದು ದುಸಗಿಯ ಗೋಶಾಲೆಗೆ ಇಲ್ಲವೇ ಹಾವೇರಿಯ ಗೋಶಾಲೆಗೆ ರವಾನಿಸುವ ಕಾರ್ಯ ಮಾಡಲಾಗುವುದು ಎಂದು ತಿಳಿಸಿದ್ದಾರೆ. ಈ ನಿಟ್ಟಿನಲ್ಲಿ ಬಿಡಾಡಿ ದನಕರುಗಳ ಮಾಲಕರು ನಗರಸಭೆಯ ಜೊತೆ ಕೈಜೋಡಿಸಿ.

■ **ವಿವೇಕ ಬನ್ನೆ, ಪೌರಾಯುಕ್ತ**

ಸ್ವಾತಂತ್ರ್ಯ ಹೋರಾಟಗಾರ ಜೀವನ ಯುವ ಪೀಳಿಗೆಗೆ ಪರಿಚಯಿಸಿ

• **ಅಂಕೋಲಾ:** ಸ್ವಾತಂತ್ರ್ಯ ಚಳವಳಿಯಲ್ಲಿ ಅಂಕೋಲಾ ತಾಲೂಕಿನ ಜನತೆ ಮಹತ್ವದ ಪಾತ್ರವಹಿಸಿದ್ದು ತಾಲೂಕಿನಲ್ಲಿ ನಡೆದ ಸ್ವಾತಂತ್ರ್ಯ ಹೋರಾಟ, ಹೋರಾಟಗಾರರ ಜೀವನದ ಕುರಿತಂತೆ ಇಂದಿನ ಮತ್ತು ಮುಂದಿನ ತಲೆಮಾರುಗಳಿಗೆ ಪರಿಚಯಿಸುವ ಕೆಲಸ ನಿರಂತರವಾಗಿ ನಡೆಯಬೇಕು ಎಂದು ಹಿರಿಯ ಚಿಂತಕ ಕಾಳಪ್ಪ ನಾಯಕ ಹೇಳಿದರು.

ಉಪ್ಪಿನ ಸತ್ಯಾಗ್ರಹ ಕರನಿರಾಕರಣೆ ಟ್ರಸ್ಟ್ ಅಂಕೋಲಾ ಇವರ ಆಶ್ರಯದಲ್ಲಿ ಪಟ್ಟಣದ ಸ್ವಾತಂತ್ರ್ಯ ಸಂಗ್ರಾಮ ಸ್ಮಾರಕ ಭವನದ ಸ್ವಾತಂತ್ರ್ಯಯೋಧರನಾಮಫಲಕದಎದುರು ನಡೆದ ವೀರ ಸ್ವಾತಂತ್ರ್ಯ ಸೇನಾನಿಗಳಿಗೆ ಗೌರವ ಸಮರ್ಪಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ತಾಲೂಕಿನ ಸ್ವಾತಂತ್ರ್ಯ ಹೋರಾಟಗಾರರ ಹೆಸರಿನ ನಾಮಫಲಕಗಳ ಅಳವಡಿಕೆ ಸ್ಮಾರಕ ಭವನದ ಆವರಣದಲ್ಲಿ ಪೂರ್ಣಗೊಳಿಸಲು ಆಡಳಿತ ವ್ಯವಸ್ಥೆ ವಿಳಂಬ ಮಾಡಿದರೆ ಉಪವಾಸ ಸತ್ಯಾಗ್ರಹದಂತ ನಿರ್ಧಾರ ತೆಗೆದುಕೊಳ್ಳುವುದು ಅನಿವಾರ್ಯವಾಗುತ್ತದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಉಪ ತಹಶೀಲ್ದಾರ್ ಗಿರೀಶ ಜಾಂಬಾವಳಿಕರ್ ಮಾತನಾಡಿ, ಸ್ವಾತಂತ್ರ್ಯ ಹೋರಾಟ, ಸತ್ಯಾಗ್ರಹಗಳಲ್ಲಿ ಅಂಕೋಲೆಯ ಜನರ ವಿರೋಚಿತ ಪಾಲ್ಗೊಳ್ಳುವಿಕೆ ಐತಿಹಾಸಿಕ ಎಂದರು.

ಉಪ್ಪಿನ ಸತ್ಯಾಗ್ರಹ ಕರನಿರಾಕರಣೆ ಸ್ಮಾರಕ ಟ್ರಸ್ಟಿನ ಅಧ್ಯಕ್ಷ ಶಾಂತಾರಾಮ ನಾಯಕ ಹಿಚ್ಕಡ ಮಾತನಾಡಿ, ಅಂಕೋಲೆಯ ಸ್ವಾತಂತ್ರ್ಯ ಹೋರಾಟಗಾರರ ಹೆಸರು ಶಾಶ್ವತವಾಗಿ ನೆನಪಿರುವಂತೆ ನಾಮಫಲಕ ನಿರ್ಮಾಣ ಯೋಜನೆ ಹಾಕಿಕೊಂಡ ಕಾಳಪ್ಪ ನಾಯಕರ ಮುತುವರ್ಜಿ ಜನರಿಗೆ ಹೋರಾಟದ ಪರಿಚಯ ಮಾಡಿಕೊಡಲು ಉಪಯುಕ್ತವಾಗಲಿದೆ ಎಂದರು.

ಪುರಸಭೆ ಮಾಜಿ ಅಧ್ಯಕ್ಷೆ ಶಾಂತಲಾ ನಾಡಕರ್ಣಿ, ವ್ಯವಸ್ಥಾಪಕ ಬೀರಣ್ಣ ನಾಯಕ, ಅರ್ಬನ್ ಬ್ಯಾಂಕ್ ಅಧ್ಯಕ್ಷ ರಾಜೇಂದ್ರ ಶೆಟ್ಟಿ, ನಿರ್ದೇಶಕ ಭಾಸ್ಕರ ನಾರ್ವೇಕರ, ಉಪನ್ಯಾಸಕ ಮಹೇಶ ನಾಯಕ, ಪ್ರಮುಖರುಗಳಾದ ಗೌರೀಶ ನಾಯಕ, ಸುಬ್ರಹ್ಮಣ್ಯ ಗಾಂವಕರ, ಸೈಯ್ಯದ್ ಪಪ್ಪು ಉಪಸ್ಥಿತರಿದ್ದರು.

ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದ ಅರುಣ ನಾಡಕರ್ಣಿ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ದೇವಾನಂದ ಗಾಂವಕರ ಕಾರ್ಯಕ್ರಮ ನಿರ್ವಹಿಸಿದರು. ಗೋಪಾಲಕೃಷ್ಣ ನಾಯಕ ವಂದಿಸಿದರು.



ಮಾನಸಿಕ ಸ್ಥಿಮಿತ ಕಳೆದುಕೊಂಡ ಈಶ್ವರಪ್ಪ: ಶಾಸಕ ಹೆಬ್ಬಾರ ವಾಗ್ದಾಳಿ

• **ಯಲ್ಲಾಪುರ:** ತಮ್ಮ ರಾಜಕೀಯ ಅಸ್ತಿತ್ವ ಉಳಿಸಿಕೊಳ್ಳಲು ಹೆಣಗಾಡುತ್ತಿರುವ, ವಿವಾದಾತ್ಮಕ ಹಾಗೂ ಬೇಜವಾಬ್ದಾರಿ ಹೇಳಿಕೆಗಳಿಂದಲೇ ಗುರುತಿಸಿಕೊಂಡಿರುವ ಕೆ.ಎಸ್. ಈಶ್ವರಪ್ಪ ಅವರು ಸಂಪೂರ್ಣ ರಾಜಕೀಯ ದಿವಾಳಿತನಕ್ಕೆ ತಲುಪಿರುವುದು ಅವರ ಇತ್ತೀಚಿನ ಹೇಳಿಕೆಗಳಿಂದ ಸ್ಪಷ್ಟವಾಗುತ್ತಿದೆ ಅವರು ತಮ್ಮ ಮಾನಸಿಕ ಸ್ಥಿಮಿತವನ್ನು ಸಂಪೂರ್ಣವಾಗಿ ಕಳೆದುಕೊಂಡಿದ್ದಾರೆ ಅವರನ್ನು ಕೂಡಲೇ ಮಾನಸಿಕ ಆಸ್ಪತ್ರೆಗೆ ಸೇರಿಸಬೇಕು ಎಂದು ಶಾಸಕ ಶಿವರಾಮ್ ಹೆಬ್ಬಾರ್ ಅವರು ತೀವ್ರ ವಾಗ್ದಾಳಿ ನಡೆಸಿದರು.



ರಾಜ್ಯದಲ್ಲಿ ಬಿಜೆಪಿ ಸರ್ಕಾರ ರಚನೆಯಾಗಲು 17 ಕಾಂಗ್ರೆಸ್ ಶಾಸಕರನ್ನು ಹಣ ನೀಡಿ ಖರೀದಿಸಲಾಗಿತ್ತು ಎಂಬ ಕೆ.ಎಸ್. ಈಶ್ವರಪ್ಪ ಅವರ ಹೇಳಿಕೆ ಸಂಪೂರ್ಣ ಆಧಾರರಹಿತ, ಬಾಲಿಶ ಹಾಗೂ ಅವರ ತಲೆ ಸರಿಯಾಗಿದ್ದೇಯೆ ? ಎಂದು ಶಾಸಕರು ಪ್ರಶ್ನಿಸಿದರು. ಒಂದು ವೇಳೆ ಅವರ ಹೇಳಿಕೆಯಲ್ಲಿ ಸತ್ಯಾಂಶವಿದ್ದರೆ, ಯಾರು ಹಣ ನೀಡಿದರು, ಯಾರು ಹಣ ಪಡೆದರು, ಎಷ್ಟು ಹಣ ನೀಡಲಾಯಿತು, ಎಲ್ಲಿ ವ್ಯವಹಾರ ನಡೆಯಿತು ಎಂಬುದರ ಕುರಿತು ದಾಖಲೆ ಸಮೇತ ರಾಜ್ಯದ ಜನತೆಯ ಮುಂದೆ ಬಹಿರಂಗಪಡಿಸಬೇಕು ಎಂದು ಹೆಬ್ಬಾರ್ ಸವಾಲು ಹಾಕಿದರು.

ಸಾಕ್ಷ್ಯಾಧಾರಗಳಿಲ್ಲದೆ ಇಂತಹ ಗಂಭೀರ ಆರೋಪಗಳನ್ನು ಮಾಡುವ ಮೂಲಕ ಈಶ್ವರಪ್ಪ ಅವರು ತಮ್ಮ ರಾಜಕೀಯ ಹತಾಶೆ ಹಾಗೂ ಮಾನಸಿಕ ಅಸ್ಥಿರತೆಯನ್ನು ಪ್ರದರ್ಶಿಸುತ್ತಿದ್ದಾರೆ. ಅವರು ತಮ್ಮ ಆರೋಪಗಳನ್ನು ಸಾಬೀತುಪಡಿಸಲು ವಿಫಲರಾದರೆ ಸಾರ್ವಜನಿಕ ಜೀವನದಲ್ಲಿ ಮುಂದುವರಿಯುವ ಯಾವುದೇ ನೈತಿಕ ಹಕ್ಕು ಅವರಿಗೆ ಉಳಿಯುವುದಿಲ್ಲ. ಕೂಡಲೇ ರಾಜ್ಯದ ಜನತೆಯ ಕ್ಷಮೆಯಾಚಿಸಿ ಸಕ್ರಿಯ ರಾಜಕೀಯದಿಂದ ನಿವೃತ್ತಿ ಪಡೆಯಬೇಕು ಎಂದು ಹೆಬ್ಬಾರ್ ಆಗ್ರಹಿಸಿದರು.

ತಮ್ಮ ಸಚಿವ ಅವಧಿಯಲ್ಲಿ ನಡೆದ ಭ್ರಷ್ಟಾಚಾರದ ಆರೋಪಗಳು, ವಿಶೇಷವಾಗಿ ಬೆಳಗಾವಿಯ ಗುತ್ತಿಗೆದಾರನ ಆತ್ಮಹತ್ಯೆ ಪ್ರಕರಣದ ಸಂದರ್ಭದಲ್ಲಿ ಅವರ ವಿರುದ್ಧ ವ್ಯಕ್ತವಾಗಿದ್ದ ಜನಾಕ್ರೋಶವನ್ನು ರಾಜ್ಯದ ಜನತೆ ಇನ್ನೂ ಮರೆತಿಲ್ಲ. ತಮ್ಮ ವೈಫಲ್ಯಗಳು ಹಾಗೂ ಭ್ರಷ್ಟಾಚಾರದ ಕಪ್ಪು ಚರಿತ್ರೆಯನ್ನು ಮರೆಮಾಚಲು ಈಶ್ವರಪ್ಪ ಅವರು ಈಗ ಅಸಂಬದ್ಧ ಹಾಗೂ ಆಧಾರರಹಿತ ಹೇಳಿಕೆಗಳ ಮೊರೆ ಹೋಗಿದ್ದಾರೆ ಎಂದು ಹೆಬ್ಬಾರ್ ಆರೋಪಿಸಿದರು.

ಆದರೆ ಕೆ.ಎಸ್. ಈಶ್ವರಪ್ಪ ಅವರ ಇತ್ತೀಚಿನ ಹೇಳಿಕೆಗಳನ್ನು ಗಮನಿಸಿದರೆ, ಅವರು ಈ ಮೂರೂ ಮೌಲ್ಯಗಳಿಂದ ಸಂಪೂರ್ಣವಾಗಿ ದೂರವಾಗಿರುವುದು ಸ್ಪಷ್ಟವಾಗಿದೆ. ಜನರ ವಿಶ್ವಾಸ ಕಳೆದುಕೊಂಡಿರುವ ಅವರು ಮೊದಲು ತಮ್ಮ ರಾಜಕೀಯ ಆತ್ಮಾವಲೋಕನ ಮಾಡಿಕೊಳ್ಳಲಿ, ನಂತರ ಇತರರ ಬಗ್ಗೆ ಮಾತನಾಡಲಿ ಎಂದು ಶಾಸಕ ಶಿವರಾಮ ಹೆಬ್ಬಾರ್ ಅವರು ತಿರುಗೇಟು ನೀಡಿದರು.

ಶ್ಯಾಮಪ್ರಸಾದರ ರಾಷ್ಟ್ರಭಕ್ತಿ, ತ್ಯಾಗ ಸದಾ ಸ್ಮರಣೀಯ

• **ಅಂಕೋಲಾ:** ರಾಷ್ಟ್ರದ ಸಮಗ್ರತೆ ಮತ್ತು ಏಕತೆಗಾಗಿ ತಮ್ಮ ಬಲಿದಾನ ನೀಡಿರುವ ಭಾರತೀಯ ಜನಸಂಘದ ಸಂಸ್ಥಾಪಕ ಶ್ಯಾಮಪ್ರಸಾದ ಮುಖರ್ಜಿ ಅವರ ರಾಷ್ಟ್ರಭಕ್ತಿ, ತ್ಯಾಗ ಸದಾ ಸ್ಮರಣೀಯ ಅವರ ಕನಸಿನ ಜನಸಂಘದ ತತ್ವ ಸಿದ್ಧಾಂತಗಳನ್ನು ಪಾಲಿಸುವ ಮೂಲಕ ಅವರನ್ನು ಗೌರವಿಸುವ ಕೆಲಸವನ್ನು ಪಕ್ಷದ ಕಾರ್ಯಕರ್ತರು ಮಾಡಬೇಕು ಎಂದು ಭಾರತೀಯ ಜನತಾ ಪಕ್ಷದ ಅಂಕೋಲಾ ಮಂಡಲದ ಅಧ್ಯಕ್ಷ ಗೋಪಾಲಕೃಷ್ಣ ವೈದ್ಯ ಹೇಳಿದರು.



ತಾಲೂಕಿನ ಕಲ್ಲೇಶ್ವರದಲ್ಲಿ ಜನಸಂಘದ ಸಂಸ್ಥಾಪಕ, ರಾಷ್ಟ್ರೀಯವಾದಿ ದಿವಂಗತ ಶ್ಯಾಮಪ್ರಸಾದ ಮುಖರ್ಜಿಯವರ ಪುಣ್ಯತಿಥಿ ಪ್ರಯುಕ್ತ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದ ಅವರು, ಜನಸಂಘದಿಂದ ಭಾರತೀಯ ಜನತಾಪಕ್ಷವಾಗಿ ಬೆಳೆದು ಇಂದು ದೇಶದಲ್ಲಿ ಆಡಳಿತ ನಡೆಸುವ ಮೂಲಕ ಮುಖರ್ಜಿಯವರ ಕನಸು ನನಸು ಮಾಡುವ ಕಾರ್ಯಗಳು ನರೇಂದ್ರ ಮೋದಿ ಅವರಿಂದ ನಡೆದಿದೆ ಎಂದರು.

ರೈತ ಮೋರ್ಚಾದ ಜಿಲ್ಲಾ ಕಾರ್ಯದರ್ಶಿ ವಿ.ಎಸ್.ಭಟ್ಟ ಮಾತನಾಡಿ, ಶ್ಯಾಮಪ್ರಸಾದ ಮುಖರ್ಜಿ ಅವರು ಒಬ್ಬ ಅಪ್ರತಿಮ ರಾಷ್ಟ್ರಪ್ರೇಮಿ, ನಿಸ್ವಾರ್ಥ ಮನೋಭಾವದ ಮಹಾನ್ ವ್ಯಕ್ತಿಯಾಗಿದ್ದರು ದೇಶದ ಸಮಗ್ರತೆಯ ವಿಷಯದಲ್ಲಿ ರಾಜಿ ಮಾಡಿಕೊಳ್ಳದೇ ಮಂತ್ರಿ ಪದವಿಯನ್ನೇ ಬಿಟ್ಟು ಕೊಟ್ಟ ಅವರ ದಿಟ್ಟತನ ಮಾದರೀಯ ಎಂದರು.

ಅಗಸೂರು ಮಹಾಶಕ್ತಿ ಕೇಂದ್ರದ ಅಧ್ಯಕ್ಷ ನಾರಾಯಣ ಹೆಗಡೆ, ಶಕ್ತಿ ಕೇಂದ್ರದ ಅಧ್ಯಕ್ಷ ಶೇಖರ ಗಾಂವಕರ ಪ್ರಮುಖರುಗಳಾದ ಮಹಾಬಲೇಶ್ವರಭಟ್ಟ,ರಾಮಾಸಿದ್ದಿ, ಸುಧಾಕರ ಭಟ್ಟ ಉಪಸ್ಥಿತರಿದ್ದರು.

ದೇಶದ ಅಖಂಡತೆಗೆ ಡಾ.ಶ್ಯಾಮಪ್ರಸಾದ ಕೊಡುಗೆ ಅಪಾರ

• **ಅಂಕೋಲಾ:** ಭಾರತೀಯ ಜನತಾ ಪಕ್ಷದ ಅಂಕೋಲಾ ಮಂಡಲದ ವತಿಯಿಂದ ಜನಸಂಘದ ಸಂಸ್ಥಾಪಕ ಡಾ.ಶ್ಯಾಮಪ್ರಸಾದ ಮುಖರ್ಜಿ ಅವರ ಪುಣ್ಯತಿಥಿಯನ್ನು ಬಲಿದಾನ ದಿನವನ್ನಾಗಿ ಆಚರಿಸಲಾಯಿತು.

ಶ್ಯಾಮಪ್ರಸಾದ ಮುಖರ್ಜಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದ ಬಿಜೆಪಿ ಪ್ರಮುಖರು ಭಾರತ ಮಾತೆಗೆ ಪೂಜೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾದ ಜಿಲ್ಲಾಧ್ಯಕ್ಷ ರಾಜೇಂದ್ರ ನಾಯ್ಕ ಮಾತನಾಡಿ, ದೇಶದ ಅಖಂಡತೆಗೆ ಶ್ಯಾಮಪ್ರಸಾದ ಮುಖರ್ಜಿಯವರ ದೃಢ ಸಂಕಲ್ಪ ಸಂವಿಧಾನದ 370 ನೇ ವಿಧಿಯ ವಿರೋಧವಾಗಿ ವ್ಯಕ್ತವಾಗಿದ್ದು, ಜನಸಂಘದ ಸ್ಥಾಪನೆಗೆ ಕಾರಣವಾಯಿತು. ಜನ ಸಂಘ ಇಂದು ಭಾರತೀಯ ಜನತಾ ಪಕ್ಷವಾಗಿ ದೇಶಾದ್ಯಂತ ಜನತೆಯ ವಿಶ್ವಾಸಗಳಿಸಿದೆ ಎಂದರು.



ಬಿಜೆಪಿ ನಿಕಟಪೂರ್ವ ಮಂಡಲಾಧ್ಯಕ್ಷ ಸಂಜಯ ನಾಯ್ಕ, ಜಿಲ್ಲಾ ಮಾಧ್ಯಮ ಸಂಚಾಲಕ ಜಗದೀಶ ನಾಯಕ ಮೊಗಟ, ಮಂಡಲ ಪ್ರಧಾನ ಕಾರ್ಯದರ್ಶಿ ಚಂದ್ರಕಾಂತ ನಾಯ್ಕ, ಶ್ರೀಧರ ನಾಯ್ಕ, ಬೆಳಸೆ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಮಂಕಾಳ ಗೌಡ, ಶೆಟಗೇರಿ ಮಹಾಶಕ್ತಿಕೇಂದ್ರದಅಧ್ಯಕ್ಷಪ್ರವೀಣ ನಾಯ್ಕ ಪ್ರಮುಖರುಗಳಾದ ಸಂದೀಪ ಗಾಂವಕರ, ಮೋಹನ ಖಾರ್ವಿ,ರಘುವೀರ ನಾಯ್ಕ, ನಾಗರಾಜನಾಯ್ಕಮೊದಲಾದವರು ಇದ್ದರು.

ಮಧುಕೇಶ್ವರ ದೇವಾಲಯಕ್ಕೆ ಶ್ರೀಗಳು ಭೇಟಿ

• **ಬನವಾಸಿ:** ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾ ಪೀಠದ ಜಗದ್ಗುರುಗಳಾದ ಶ್ರೀ ವಿಧುಶೇಖರ ಭಾರತೀ ಶ್ರೀಗಳು ಐತಿಹಾಸಿಕ ಶ್ರೀ ಉಮಾ ಮಧುಕೇಶ್ವರ ದೇವಾಲಯಕ್ಕೆ ಆಗಮಿಸಿ ವಿಶೇಷ ಪೂಜೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಶ್ರೀಗಳು ಉಮಾ ಮಧುಕೇಶ್ವರ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ ಲೋಕಕಲ್ಯಾಣಕ್ಕಾಗಿ ಪ್ರಾರ್ಥನೆ ಸಲ್ಲಿಸಿದರು. ಬಳಿಕ ದೇವಾಲಯ ಆವರಣದಲ್ಲಿರುವ ಪ್ರಸಿದ್ಧ ಶಾಂತ ಲಕ್ಷ್ಮೀ ನರಸಿಂಹ ದೇವಾಲಯದಲ್ಲಿ ವಿಶೇಷ ಪೂಜೆ ನೆರವೇರಿಸಿದರು. ಶಾಂತ ಲಕ್ಷ್ಮೀ ನರಸಿಂಹ ದೇವರಿಗೆ ಶೃಂಗೇರಿ ಶ್ರೀಮಠದೊಂದಿಗೆ ಅವಿನಾಭಾವ ಸಂಬಂಧವಿದ್ದು, ಆ ಪವಿತ್ರ ಬಾಂಧವ್ಯವನ್ನು ಸ್ಮರಿಸಲಾಯಿತು.

ನಂತರ ದೇವಾಲಯದ ಎಲ್ಲಾ ಪರಿವಾರ ದೇವತೆಗಳಿಗೆ ಪೂಜೆ ಸಲ್ಲಿಸಿದ ಶ್ರೀಗಳು, ಭಕ್ತಾದಿಗಳಿಗೆ ಆಶೀರ್ವಾದ ಮಾಡಿದರು. ಶ್ರೀಗಳ ದಿವ್ಯ ದರ್ಶನ ಹಾಗೂ ಆಶೀರ್ವಾದ ಪಡೆದ ಭಕ್ತರು ಧನ್ಯತೆ ವ್ಯಕ್ತಪಡಿಸಿದರು.



ಈ ವೇಳೆ ದೇವಸ್ಥಾನದ ಅಧ್ಯಕ್ಷ ಸುಧಾಕರ ಹೇಮಾದ್ರಿ, ಕಾರ್ಯದರ್ಶಿ ಲತಾ ಶೆಟ್ಟಿ, ಖಜಾಂಚಿ ಮೇಘರಾಜ ನರೆಗಲ್, ಅರ್ಚಕರಾದ ವಿನಾಯಕ ಮಂಗಳೂರು, ಸದಸ್ಯರಾದ ಗೀತಾ ಯಜಮಾನ, ಗಣಪತಿ ಹೆಗಡೆ, ಪರಮೇಶ್ವರ ಉಪ್ಪಾರ, ರಾಜಶೇಖರ ಒಡೆಯರ್ ಸೇರಿದಂತೆ ದೇವಾಲ ಯದ ಅರ್ಚಕರು, ಸಿಬ್ಬಂದಿ, ಬಾಬುದಾರರು ಹಾಗೂ ಊರಿನ ಭಕ್ತಾದಿಗಳು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಿಗೆ ಶಾಲಾ ಪರಿಕರ ವಿತರಣೆ

• **ಭಟ್ಕಳ:** ತಾಲೂಕಿನ ಮಾರುಕೇರಿಯ ಶಿವಶಾಂತಿಕಾ ಪರಮೇಶ್ವರಿ ಪ್ರೌಢಶಾಲೆಯ ಎಲ್ಲಾ ವಿದ್ಯಾರ್ಥಿಗಳಿಗೆ ಇನ್ಸ್ಟಿಟ್ಯೂಟ್ ಆರ್ಗನೈಸೇಶನ್ ವತಿಯಿಂದ ಶಾಲಾ ಬ್ಯಾಗ್, ಪಟ್ಟಿ, ಕಂಪಾಸ್ ಮತ್ತಿತರ ಪರಿಕರಗಳನ್ನು ವಿತರಿಸಲಾಯಿತು.

ವಿದ್ಯಾರ್ಥಿಗಳಿಗೆ ಪರಿಕರ ವಿತರಿಸಿ ಮಾತನಾಡಿದ ಇನ್ಸ್ಟಿಟ್ಯೂಟ್ ಆರ್ಗನೈಸೇಶನ್ ಇದರ ಮುಖ್ಯಸ್ಥೆ ಮತ್ತು ಸಾಹಿತಿ ಡಾ. ನಿವಿಯಾ ಗೋಮ್ಸ, ಇನ್ಸ್ಟಿಟ್ಯೂಟ್ ಆರ್ಗನೈಸೇಶನ್ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುತ್ತಿದೆ. ಎಲ್ಲರೂ ಶಿಕ್ಷಣ ಪಡೆಯಬೇಕು ಎನ್ನುವುದು ಆರ್ಗನೈಸೇಶನ್ ನ ಆಶಯವಾಗಿದೆ. ಇಂದಿನ ದಿನಗಳಲ್ಲಿ ಪ್ರತಿಯೊಬ್ಬರಿಗೂ ಶಿಕ್ಷಣದ ಅವಶ್ಯಕತೆ ಇದೆ. ವಿದ್ಯಾರ್ಥಿಗಳು ಇದನ್ನು ಬಳಸಿಕೊಂಡು ಉತ್ತಮ ಅಂಕಗಳಿಸಿ ಶಾಲೆಗೆ, ಊರಿಗೆ ಕೀರ್ತಿ ತರಬೇಕು ಎಂದರು.

ರಾಘವೇಂದ್ರ ಹೆಬ್ಬಾರ ಮಾತನಾಡಿ, ಶಿವಶಾಂತಿಕಾ ಪ್ರೌಢಶಾಲೆಗೆ 60 ವರ್ಷದ ಇತಿಹಾಸ ಇದೆ. ಹಿರಿಯ ಕಷ್ಟಪಟ್ಟು ಕಟ್ಟಿದ ಶಾಲೆಯನ್ನು ನಾವೆಲ್ಲರೂ ಉಳಿಸಿಕೊಳ್ಳಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಶಾಲೆಯ ಆಡಳಿತ ಮಂಡಳಿ ಅಧ್ಯಕ್ಷ ಶ್ರೀಕಂಠ ಹೆಬ್ಬಾರ ಮಾತನಾಡಿದರು.

ತೆರೆಸಾ ನೊರೋನಾ, ಪೀಟರ್ ಗೋಮ್ಸ್, ವೆಂಕಟೇಶ ದೇವಡಿಗ, ಗಣೇಶ ಅಡಿಗ, ವೆರೋನಿಕಾ. ಶ್ರುತಿ ರಾಕೇಶ, ರಾಕೇಶ, ದೇವ್ ಇದ್ದರು.

ಮುಖ್ಯ ಶಿಕ್ಷಕ ಪಿ ಟಿ.ಚವ್ಹಾಣ ಸ್ವಾಗತಿಸಿದರು. ಶಿಕ್ಷಕ ದಿನೇಶ ನಿರೂಪಿಸಿದರು. ದೈಹಿಕ ಶಿಕ್ಷಕ ವಿನಾಯಕ ಭಟ್ಟ ವಂದಿಸಿದರು. ಶಾಲಾ ಬ್ಯಾಗ್, ಕಂಪಾಸ್ ಮತ್ತಿತರ ಪರಿಕರ ಪಡೆದ ವಿದ್ಯಾರ್ಥಿಗಳು ಸಂತಸ ಪಟ್ಟರು.



ಅಧ್ಯಕ್ಷರಾಗಿ ರವಿ ಬೆಳ್ಳಿಮನೆ ಆಯ್ಕೆ



• **ಶಿರಸಿ:** ರಾಜ್ಯ ಪ್ರಸಿದ್ಧ ಶಿರಸಿಯ ಶ್ರೀ ಮಾರಿಕಾಂಬಾ ದೇವಾಲಯದ ನೂತನ ಅಧ್ಯಕ್ಷರಾಗಿ ರವಿ ಬೆಳ್ಳಿಮನೆ, ಉಪಾಧ್ಯಕ್ಷರಾಗಿ ಅಶೋಕ ಪವಾರ ಆಯ್ಕೆಯಾಗಿದ್ದಾರೆ. ದೇವಸ್ಥಾನದ ಆಡಳಿತ ಮಂಡಳಿಯ ಅವಧಿ ಜೂ. 21ರಂದು ಮುಕ್ತಾಯಗೊಳ್ಳುವ ಹಿನ್ನೆಲೆ ಜಿಲ್ಲಾ ನ್ಯಾಯಾಧೀಶರು ನೂತನ ಧರ್ಮದರ್ಶಿಗಳಾಗಿ ನಿವೃತ್ತ ಖಜಾನೆ ಅಧಿಕಾರಿ, ನಿವೃತ್ತ ಸೈನಿಕ ರವಿ ಬೆಳ್ಳಿಮನೆ, ಕೆಡಿಸಿಸಿ ಬ್ಯಾಂಕ್ ಮಾಜಿ ವ್ಯವಸ್ಥಾಪಕ ಅಶೋಕ ಪರವಾರ, ಸಮೃದ್ಧಿ ಮಹಿಳಾ ಮಂಡಳದ ಅಧ್ಯಕ್ಷೆ ಅರ್ಚನಾ ಹೊನ್ನಾವರ, ನಿವೃತ್ತ ಸೈನಿಕ ಕೇಶವ ಹೆಗಡೆ ಮತ್ತು ಲೋಕೋಪಯೋಗಿ ಇಲಾಖೆ ನಿವೃತ್ತ ಇಂಜಿನಿಯರ್ ವಿನಾಯಕ ಶೇಟ್ ಅವರನ್ನು ಆಯ್ಕೆ ಮಾಡಿದ್ದರು. ಐವರು ಧರ್ಮದರ್ಶಿಗಳು ಸೇರಿಕೊಂಡು ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಆಯ್ಕೆ ಮಾಡಬೇಕಿತ್ತು. ಐವರು ಸೇರಿಕೊಂಡು ರವಿ ಬೆಳ್ಳಿಮನೆ ಅವರನ್ನು ಅಧ್ಯಕ್ಷರನ್ನಾಗಿ, ಅಶೋಕ ಪವಾರ ಅವರನ್ನು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಿಕೊಂಡು ಕಾರವಾರ ಜಿಲ್ಲಾ ನ್ಯಾಯಾಧೀಶರಿಗೆ ಪತ್ರ ಸಲ್ಲಿಕೆ ಮಾಡಿದ್ದರು. ಜೂ.22ರಂದು ಬೆಳಗ್ಗೆ ಕಾರವಾರದಲ್ಲಿ ಐವರು ಧರ್ಮದರ್ಶಿಗಳಿಗೆ ಪ್ರಮಾಣವಚನ ಬೋಧಿಸಿದ್ದಾರೆ. ನಂತರ ದೇವಾಲಯಕ್ಕೆ ಆಗಮಿಸಿ, ಹಾಲಿ ಅಧ್ಯಕ್ಷರಿಂದ ನೂತನ ಅಧ್ಯಕ್ಷರು ಅಧಿಕಾರ ವಹಿಸಿಕೊಂಡಿದ್ದಾರೆ.

ಉತ್ತಮ ಆರೋಗ್ಯಕ್ಕೆ ಯೋಗ ಮಾಡಿ

• **ಹಳಿಯಾಳ:** ಕೆಎಲ್ಎಸ್ ವಿಡಿಐಟಿ ಹಳಿಯಾಳದಲ್ಲಿ ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥ ಡಾ. ವೆಂಕಟೇಶ್ ಶಂಕರ್ ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ಯೋಗವು ಸಹಕಾರಿಯಾಗಿರುವುದರಿಂದ, ಪ್ರತಿನಿತ್ಯ ಯೋಗಾಭ್ಯಾಸವನ್ನು ಮಾಡಬೇಕೆಂದು ಹೇಳಿದರು.

ಮಹಾವಿದ್ಯಾಲಯದ ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಸೂರ್ಯ ನಮಸ್ಕಾರ, ಚಕ್ರಾಸನ, ಪದ್ಮಾಸನ, ವಜ್ರಾಸನ, ಸರ್ವಾಂಗಾಸನಗಳನ್ನು ಈ ಸಂದರ್ಭದಲ್ಲಿ ಮಾಡಿದರು.

ದೈಹಿಕ ಶಿಕ್ಷಣ ನಿರ್ದೇಶಕ ಗದಿಗೆಪ್ಪ ಎಳ್ಳುರ್ ಹಾಗೂ ಗ್ರಂಥಾಲಯದ ಮುಖ್ಯಸ್ಥ ಸುನಿಲ್ ಯರಗಟ್ಟಿ ಕಾರ್ಯಕ್ರಮವನ್ನು ಸಂಯೋಜಿಸಿದ್ದರು.



ಕಿರುಸುದ್ದಿ

ಇಂದು ವಿದ್ಯುತ್ ವ್ಯತ್ಯಯ

ರಾಣೇಬೆನ್ನೂರ: ತಾಲೂಕಿನ ಹೊಸಹೊನ್ನತ್ತಿ 110ಕೆ ವಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣೆ ಕೆಲಸ ಕೈಗೊಳ್ಳುವುದರಿಂದ ಸದರಿ ಕೇಂದ್ರದಿಂದ ಹೊರಡುವ ಎಲ್ಲಾ 11ಕೆ ವಿ ಮಾರ್ಗ ಹಾಗೂ 33ಕೆ ವಿ ಬುಡಪನಹಳ್ಳಿ ಎಲ್‌ಐಎಸ್ ಮಾರ್ಗಗಳಿಗೆ ಸಂಬಂಧಿಸಿದ ಬುಡಪನಹಳ್ಳಿ ಎಲ್.ಐ.ಎಸ್ ಮಾರ್ಗಗಳಿಗೆ ಜೂ.24ರ ಬೆ.10ಗಂಟೆಯಿಂದ ಸಂಜೆ.6ಗಂಟೆವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ. ಆದ್ದರಿಂದ ಚಿಕ್ಕಹರಳಹಳ್ಳಿ, ನೂಕಾಪುರ, ಯಲ್ಲಾಪುರ, ಚೌಡಯ್ಯದಾನಪುರ, ಹನುಮಾಪುರ, ಕೆರಿಮಲ್ಲಾಪುರ, ಹೊನ್ನತ್ತಿ ಭಾಗದ ಕೃಷಿ ಪಂಪಸೆಟ್ ಗ್ರಾಹಕರು ಹಾಗೂ ಹೊನ್ನತ್ತಿ ಎನ್. ಜೆ.ವೈ ಮಾರ್ಗದ ಗ್ರಾಮದ ಗ್ರಾಹಕರು ಸಹಕರಿಸುವಂತೆ ಹೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಹಂಪ್ಸ್ ಅಳವಡಿಸಲು ಕ್ರಮ

ರಾಣೇಬೆನ್ನೂರ: ಕಳೆದ ವರ್ಷ ಜಿಲ್ಲೆಯಲ್ಲಿ ಅಪರಾಧ ಪ್ರಕರಣಗಳು ಸಾಕಷ್ಟು ಇಳಿಮುಖವಾಗಿದ್ದು ಕಳುವು ಮಾಡಿದ ವಸ್ತುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಜಪ್ತು ಮಾಡಲಾಗಿದೆ ಎಂದು ಎಸ್‌ಪಿ ಯಶೋಧಾ ವಂಟಗೋಡಿ ಹೇಳಿದರು. ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾರ್ವಜನಿಕರು ಪರಸ್ಥಳಕ್ಕೆ ತೆರಳಿದಾಗ ಇಲಾಖೆಯಿಂದ ಅವರ ಮನೆ ಕಾಯುವ ಸೇವೆಯನ್ನು ಒದಗಿಸುವ (ಲಾಕ್ಡ್ ಹೌಸ್ ಬೀಟ್ ಸಿಸ್ಟಮ್) ಇತ್ತೀಚಿಗೆ ಜಿಲ್ಲೆಯಲ್ಲಿ ಜಾರಿಗೆ ತರಲಾಗಿದೆ. ಇದುವರೆಗೂ ಸುಮಾರು ನೂರಕ್ಕೂ ಅಧಿಕ ಜನರು ಇದರ ಪ್ರಯೋಜನ ಪಡೆದುಕೊಂಡಿದ್ದಾರೆ ಎಂದರು. ಅಪ್ರಾಪ್ತರು ವಾಹನ ಚಾಲನೆ ಮಾಡುತ್ತಿರುವ ಕುರಿತು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ಇದರ ಬಗ್ಗೆ ಗಮನಹರಿಸಲಾಗವುದು. ಪೋಷಕರು ಕೂಡಾ ತಮ್ಮ ಮಕ್ಕಳ ಕೈಯಲ್ಲಿ ವಾಹನಗಳನ್ನು ನೀಡಬಾರದು. ನಗರದ ವಿವಿಧ ಭಾಗದಲ್ಲಿ ರಸ್ತೆಗೆ ಹಂಪ್ಸ್ ಅಳವಡಿಸಲು ಲೋಕೋಪಯೋಗಿ ಇಲಾಖೆ ಅಧಿಕಾರಿಗಳ ಜೊತೆ ಸರ್ವೆ ನಡೆಸಿ ಕ್ರಮ ಕೈಗೊಳ್ಳಲಾಗುವುದು ಎಂದರು. ಎಸ್‌ಪಿ ಶಿರಕೋಳ, ಡಿವೈಎಸ್ ಪಿ ಲೋಕೇಶ ಜೆ., ಗ್ರಾಮೀಣ ಪಿಐ ಎನ್.ಸಿ.ಕಾಡದೇವರಮಠ ಇದ್ದರು.

1.30ಲಕ್ಷ ರೂ. ಹಣ ಕಳ್ಳತನ

ಹಾವೇರಿ: ವ್ಯಕ್ತಿಯೊಬ್ಬರು ಮಟನ್ ತರಲೆಂದು ಅಂಗಡಿಯೊಳಗೆ ಹೋದಾಗ ಬೈಕ್‌ನಲ್ಲಿದ್ದ ಸುಮಾರು 1.30ಲಕ್ಷ ರೂ.ಹಣವನ್ನು ಕಳ್ಳರು ಕಳ್ಳತನ ಮಾಡಿಕೊಂಡು ಪರಾರಿಯಾಗಿರುವ ಘಟನೆ ಬ್ಯಾಡಗಿ ಪಟ್ಟಣದ ಇಸ್ಲಾಂಪೂರ ಓಣಿಯಲ್ಲಿ ನಡೆದಿದೆ. ತಾಲೂಕಿನ ತಡಸ ಗ್ರಾಮದ ದುರಗಪ್ಪ ಮರಿಯಪ್ಪ ಕಾಳೇರ ಎಂಬುವವರಿಗೆ ಸೇರಿದ ಹಣವನ್ನು ಕಳ್ಳರು ಕದ್ದುಕೊಂಡು ಹೋಗಿದ್ದಾರೆ. ದುರಗಪ್ಪ ಕಾಳೇರ ಹಾಗೂ ಆತನ ಪತ್ನಿ ಶಕುಂತಲಾ ತಮ್ಮ ತಮ್ಮ ಪ್ರತ್ಯೇಕ ಬ್ಯಾಂಕ್ ಖಾತೆಗಳಲ್ಲಿ (80,000 ಮತ್ತು 50,000) 1.30ಲಕ್ಷ ರೂ.ಹಣವನ್ನು ಡ್ರಾ ಮಾಡಿಕೊಂಡಿದ್ದಾರೆ. ಬಳಿಕ ಹಣವನ್ನು ಪ್ಲಾಸ್ಟಿಕ್ ಕವರ್‌ನಲ್ಲಿ ಹಾಕಿಕೊಂಡು ರೇನ್‌ಕೋಟ್ ಒಳಗೆ ಸುತ್ತಿ ಬೈಕ್‌ನ ಸೈಡ್ ಬಾಕ್ಸ್‌ನಲ್ಲಿಟ್ಟು ಲಾಕ್ ಮಾಡಿದ್ದಾರೆ. ನಂತರ ಇಸ್ಲಾಂಪುರ ಓಣಿಗೆ ಮಟನ್ ತೆಗೆದುಕೊಳ್ಳಲು ಬಂದಿದ್ದ ದಂಪತಿಗಳು, ಅಂಗಡಿಯೊಳಗೆ ಹೋಗಿ ಮಟನ್ ಖರೀದಿಸುವ ಸಮಯದಲ್ಲಿ ಯಾರೋ ಆರೋಪಿತರು ಬೈಕ್‌ನ್ನು ಹಿಂಬಾಲಿಸಿಕೊಂಡು ಬಂದು ಲಾಕ್ ತೆಗೆದು ಹಣವನ್ನು ದೋಚಿಕೊಂಡು ಪರಾರಿಯಾಗಿದ್ದಾರೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದೆ. ಬ್ಯಾಡಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಕ್ರಮ ಮಾಂಸ ಮಾರಾಟ: ದೂರು ದಾಖಲು

ಹಾವೇರಿ: ಅಕ್ರಮವಾಗಿ ಜಾನುವಾರು ಮಾಂಸ ಸಾಗಾಟ ಮಾಡುತ್ತಿದ್ದ ಆರೋಪದಡಿ ಮೂರು ಜನರ ವಿರುದ್ಧ ಠಾಣೆಯಲ್ಲಿ ದೂರು ದಾಖಲಾಗಿದೆ. ರಾಣೇಬೆನ್ನೂರಿನ ಮಹ್ಮದಸಲೀಂ ಅಬ್ದುಲ್‌ಖಾದರ್ ಆದೋನಿ, ಮಹ್ಮದ್ ಜಾವೀದ ಅಬ್ದುಲ್‌ಖಾದರ ಆದೋನಿ ಹಾಗೂ ಜಬೀವುಲ್ಲಾ ಶಬ್ಬೀರಅಹ್ಮದ್ ಮುಲ್ಲಾ ಎಂಬುವವರ ವಿರುದ್ಧ ದೂರು ದಾಖಲಿಸಿದೆ. ಆರೋಪಿತರು ಜಾನುವಾರುಗಳ ಹತ್ಯೆಗೈದು, ಅದರ ಮಾಂಸವನ್ನು ಪ್ಯಾಸೆಂಜರ್ ಆಟೋದಲ್ಲಿ ಹಾವೇರಿಗೆ ಸಾಗಾಟ ಮಾಡುತ್ತಿದ್ದರು. ಪೊಲೀಸರು ತಾಲೂಕಿನ ನೆಲೋಗಲ್ ಬಳಿ ಪರಿಶೀಲನೆ ನಡೆಸಿದ್ದಾಗ ಮಾಲು ಸಹಿತ ಸಿಕ್ಕಿಬಿದ್ದಿದ್ದಾರೆ ಎಂದು ದೂರಿನಲ್ಲಿ ತಿಳಿಸಿದೆ. ಹಾವೇರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಲು ಜಾರಿ ನದಿಗೆ ಬಿದ್ದು ಸಾವು

ಹಾವೇರಿ: ವರದಾ ನದಿಯಲ್ಲಿ ಆಕಸ್ಮಿಕವಾಗಿ ಕಾಲು ಜಾರಿ ಬಿದ್ದು ವ್ಯಕ್ತಿಯೊಬ್ಬರು ಸಾವನ್ನಪ್ಪಿರುವ ಘಟನೆ ತಾಲೂಕಿನ ವರದಾಹಳ್ಳಿ ಗ್ರಾಮದಲ್ಲಿ ನಡೆದಿದೆ. ಗುಡ್ಡಪ್ಪ ಭರಮಪ್ಪ ಹರಿಜನ (72) ಮೃತ ವ್ಯಕ್ತಿಯಾಗಿದ್ದಾರೆ. ಮೃತ ವ್ಯಕ್ತಿಯು ಜಮೀನು ಕಡೆಗೆ ಹೋಗಿ ಬರುತ್ತೇನೆಂದು ಮನೆಯಿಂದ ಹೋಗಿದ್ದಾರೆ. ವರದಾ ನದಿಯ ಬಳಿ ಆಕಸ್ಮಿಕವಾಗಿ ಬಹಿರ್ದೆಸೆಗೋ ಅಥವಾ ನೀರಿನಲ್ಲಿ ಕೈಕಾಲು ತೊಳೆದುಕೊಳ್ಳಲೆಂದೋ ನದಿಯ ಬಳಿ ಹೋಗಿದ್ದಾಗ ಕಾಲು ಜಾರಿ ನೀರಿನಲ್ಲಿ ಬಿದ್ದು ಮೃತಪಟ್ಟಿದ್ದಾರೆ ಎಂದು ಮೃತರ ಮಗ ಶೇಖಪ್ಪ ಹರಿಜನ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಹಾವೇರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಹಾವೇರಿ: ಜಿಲ್ಲೆಯಾದ್ಯಂತ ಮಳೆ ಕೊರತೆ ಎದುರಾಗಿದ್ದು, ಬಿತ್ತನೆ ಮಾಡಿದ ಬೆಳೆಗಳು ಒಣಗುವ ಆತಂಕ ಸೃಷ್ಟಿಯಾಗಿರುವ ಹಿನ್ನೆಲೆಯಲ್ಲಿ ರೈತರು ಹಾಗೂ ಭಕ್ತರು ಮಳೆಗಾಗಿ ವಿಶೇಷ ಪೂಜೆ ಸಲ್ಲಿಸಿದರು.

ಮಳೆಗಾಗಿ ಪ್ರಾರ್ಥಿಸಿ ದೇವರ ಪಲ್ಲಕ್ಕಿ ಉತ್ಸವ

ಹಾವೇರಿ: ಜಿಲ್ಲೆಯಾದ್ಯಂತ ಮಳೆ ಕೊರತೆ ಎದುರಾಗಿದ್ದು, ಬಿತ್ತನೆ ಮಾಡಿದ ಬೆಳೆಗಳು ಒಣಗುವ ಆತಂಕ ಸೃಷ್ಟಿಯಾಗಿರುವ ಹಿನ್ನೆಲೆಯಲ್ಲಿ ರೈತರು ಹಾಗೂ ಭಕ್ತರು ಮಳೆಗಾಗಿ ವಿಶೇಷ ಪೂಜೆ ಸಲ್ಲಿಸಿ ದೇವರ ಮೊರೆ ಹೋದರು. ನಗರದಲ್ಲಿ ಮಂಗಳವಾರ ವೀರಭದ್ರೇಶ್ವರ ಸ್ವಾಮಿ, ಗ್ರಾಮದೇವತೆ ದ್ಯಾಮವ್ವ ದೇವಿ ಹಾಗೂ ಬಸವಣ್ಣನ ಮೂರ್ತಿಗಳನ್ನು ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಿ ವಿಶೇಷ ಮೆರವಣಿಗೆ ನಡೆಸಲಾಯಿತು. ವಿವಿಧ ಕಲಾತಂಡಗಳೊಂದಿಗೆ ನಡೆದ ಮೆರವಣಿಗೆಯಲ್ಲಿ ನೂರಾರು ಭಕ್ತರು ಉತ್ತಮ ಮಳೆಯಾಗುವಂತೆ ಪ್ರಾರ್ಥಿಸಿದರು. ಜಿಲ್ಲೆಯಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಮಳೆ ಸುರಿಯದ ಕಾರಣ ಮೆಕ್ಕೆಜೋಳ, ಸೋಯಾಬಿನ್, ಹತ್ತಿ ಸೇರಿದಂತೆ ವಿವಿಧ ಬೆಳೆಗಳು ಬಾಡುತ್ತಿವೆ. ಈಗಾಗಲೇ ಬಿತ್ತನೆ ಕಾರ್ಯ ಪೂರ್ಣಗೊಳಿಸಿರುವ ರೈತರು ಮಳೆಯ ಅಭಾವದಿಂದ ಸಂಕಷ್ಟಕ್ಕೆ ಸಿಲುಕಿದ್ದು, ಬರಗಾಲದ ಛಾಯೆ ಆವರಿಸುವ ಆತಂಕ ಎದುರಿಸುತ್ತಿದ್ದಾರೆ. ಸುಮಾರು 13 ವರ್ಷಗಳ ಬಳಿಕ ಜಿಲ್ಲೆಯಲ್ಲಿ ಮತ್ತೆ ಬರಗಾಲದ ಪರಿಸ್ಥಿತಿ ನಿರ್ಮಾಣವಾಗುವ ಲಕ್ಷಣಗಳು ಕಾಣಿಸುತ್ತಿವೆ. ಹೀಗಾಗಿ ವರುಣ ದೇವನಿಗೆ ವಿಶೇಷ ಪೂಜೆ ಸಲ್ಲಿಸಿ ಮಳೆಗಾಗಿ ಪ್ರಾರ್ಥನೆ ನಡೆಸಲಾಯಿತು ಎಂದು ರೈತರು ಹೇಳಿದರು. ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿದ ಪಲ್ಲಕ್ಕಿ ಉತ್ಸವವು ಕೊನೆಗೆ ಹೆಗ್ಗೇರಿ ಕೆರೆಯ ತಟದಲ್ಲಿ ಗಂಗೆ ಪೂಜೆಯೊಂದಿಗೆ ಸಮಾಪ್ತಿಗೊಂಡಿತು. ಈ ವೇಳೆ ಜಿಲ್ಲೆಯಲ್ಲಿ ಸಮರ್ಪಕ ಮಳೆಯಾಗಿ ಬೆಳೆಗಳು ಉಳಿಯಲಿ ಹಾಗೂ ರೈತರ ಬದುಕು ಸುಧಾರಿಸಲಿ ಎಂದು ಭಕ್ತರು ಪ್ರಾರ್ಥಿಸಿದರು. ಜಿಲ್ಲೆಯ ವಿವಿಧ ಭಾಗಗಳಲ್ಲಿ ಮಳೆಗಾಗಿ ಪೂಜೆ, ಹೋಮ-ಹವನ ಹಾಗೂ ಧಾರ್ಮಿಕ ಕಾರ್ಯಕ್ರಮಗಳು ನಡೆಸಲಾಗುತ್ತಿದೆ.



ಬ್ಯಾಡಗಿ: ತಾಲೂಕಿನ ಅರಭಗೊಂಡ ಗ್ರಾಮದ ಹಾವೇರಿ ಜಿಲ್ಲಾ ಹಾಲು ಒಕ್ಕೂಟದ ನಿರ್ಮಾಣ ಹಂತದಲ್ಲಿರುವ ಮೆಗಾ ಡೈರಿಗೆ ಮಂಗಳವಾರ ಸಂಸದ ಬಸವರಾಜ ಬೊಮ್ಮಾಯಿ ವೀಕ್ಷಣೆ ಮಾಡಿದರು. ಈ ಸಂದರ್ಭದಲ್ಲಿ ಮಾಜಿ ಶಾಸಕ ಹಾವೇರಿ ಜಿಲ್ಲಾ ಬಿಜೆಪಿ ಅಧ್ಯಕ್ಷ ವಿರುಪಾಕ್ಷಪ್ಪ ಬಳ್ಳಾರಿ, ಕೆಎಂಎಫ್ ಅಧ್ಯಕ್ಷರಾದ ಮಂಜನ ಗೌಡ ಪಾಟೀಲ್, ಉಪಾಧ್ಯಕ್ಷರಾದ ಉಜ್ಜನಗೌಡ ಮಾವಿನ ತೋಪು, ಎಮ್ ಡಿ. ಪ್ರದೀಪ್ ಎಂ ಎಸ್. ಪ್ರಕಾಶ್ ಬನ್ನಿಹಟ್ಟಿ ಸೇರಿದಂತೆ ಎಲ್ಲ ನಿರ್ದೇಶಕರು ಉಪಸ್ಥಿತರಿದ್ದರು.

ಜೂ.28ಕ್ಕೆ ಪಲ್ಸ್ ಪೋಲಿಯೋ | ಡಿಸಿ ಡಾ.ವಿಜಯಮಹಾಂತೇಶ ಸೂಚನೆ

ಪೋಲಿಯೋ ಲಸಿಕೆ ಕಡ್ಡಾಯ

ಹಾವೇರಿ: ಜಿಲ್ಲೆಯಲ್ಲಿ ಜೂ.28ರಂದು ಪಲ್ಸ್ ಪೋಲಿಯೋ ಕಾರ್ಯಕ್ರಮ ಜರುಗಲಿದ್ದು, 5ವರ್ಷದೊಳಗಿನ ಯಾವುದೇ ಮಗು ಪಲ್ಸ್ ಪೋಲಿಯೋ ಲಸಿಕೆಯಿಂದ ಹೊರಗುಳಿ ಯದಂತೆ ನೋಡಿಕೊಳ್ಳಬೇಕು ಹಾಗೂ ಎಲ್ಲರೂ ಸಮನ್ವಯದಿಂದ ಕಾರ್ಯನಿರ್ವಹಿಸುವ ಮೂಲಕ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ ದಾನಮ್ಮನವರ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಜರುಗಿದ ಪಲ್ಸ್ ಪೋಲಿಯೋ ಕಾರ್ಯಕ್ರಮದ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಪಲ್ಸ್ ಪೋಲಿಯೋ ಕಾರ್ಯಕ್ರಮದ ಕುರಿತು ಮುಂಚಿತವಾಗಿ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಹೆಚ್ಚಿನ ಪ್ರಚಾರ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಶಾಲಾ ಮಕ್ಕಳಿಂದ ಪಲ್ಸ್ ಪೋಲಿಯೋ ಕಾರ್ಯಕ್ರಮದ ಬಗ್ಗೆ ಜಾಥಾ ಮೂಲಕ ಜಾಗೃತಿ ಮೂಡಿಸಬೇಕು. ಗಾಪಂಗಳಿಂದ ಗ್ರಾಮಗಳಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮದ ಬಗ್ಗೆ ಟಾಂಟಾಂ ಮೂಲಕ ಪ್ರಚಾರ ಕೈಗೊಳ್ಳಲು, ಪಲ್ಸ್ ಪೋಲಿಯೋ ದಿನದಂದು ಅಂಗನವಾಡಿ ಕೇಂದ್ರಗಳು ಆರಂಭ ಇರುವಂತೆ ನೋಡಿಕೊಳ್ಳಬೇಕು. ನಗರಸಭೆ ಹಾಗೂ ಪುರಸಭೆ ವ್ಯಾಪ್ತಿಯ ಕೊಳಚೆ ಪ್ರದೇಶಗಳಲ್ಲಿ ಮುಂಚಿತವಾಗಿ ಪ್ರಚಾರ ಕೈಗೊಳ್ಳಲು, ಬ್ಯಾನರ್ ಹಾಗೂ ಬಿತ್ತಿ ಪತ್ರ ಪ್ರದರ್ಶಿಸಲು ಹಾಗೂ ಕುರಿ ಕಾಯುವವರು ಸೇರಿದಂತೆ ಇತರೆ ವಲಸೆ ಕಾರ್ಮಿಕರ ಐದು ವರ್ಷದೊಳಗಿನ ಮಕ್ಕಳನ್ನು ಗುರುತಿಸಿ ಲಸಿಕೆ ಹಾಕಿಸುವಂತೆ ನಗರಾಭಿವೃದ್ಧಿ ಇಲಾಖೆ, ಕಾರ್ಮಿಕ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.



ಮೇಲ್ವಿಚಾರಕರ ನೇಮಕ

1996 ವ್ಯಾಕ್ಸಿನೇಟರ್‌ಗಳನ್ನು ಹಾಗೂ 201 ಮೇಲ್ವಿಚಾರಕರನ್ನು ನಿಯೋಜಿಸಲಾಗಿದೆ ಈಗಾಗಲೇ ಜಿಲ್ಲೆಗೆ ಅಗತ್ಯ ಲಸಿಕೆ ಸರಬರಾಜಾಗಿದೆ. 92 ಕೋಲ್ಡ್ ಚೈನ್ ಪಾಯಿಂಟ್‌ಗಳನ್ನು ಗುರುತಿಸಲಾಗಿದೆ.

> ಜಿಲ್ಲೆಯಲ್ಲಿ ಗ್ರಾಮೀಣ ಭಾಗದಲ್ಲಿ 1,13,173 ಹಾಗೂ ನಗರ ಪ್ರದೇಶದಲ್ಲಿ 38,135 ಸೇರಿ 1,51,308 ಸೊನ್ನೆಯಿಂದ ಐದು ಮಕ್ಕಳನ್ನು ಗುರುತಿಸಲಾಗಿದೆ. ಗ್ರಾಮೀಣ ಭಾಗದಲ್ಲಿ 806 ಹಾಗೂ ನಗರ ಪ್ರದೇಶದಲಿ 192 ಸೇರಿ 998 ಬೂತ್‌ಗಳನ್ನು ಗುರುತಿಸಲಾಗಿದೆ.
> ■ ಎಂ.ಜಯಾನಂದ, ಡಿಎಚ್‌ಒ, ಹಾವೇರಿ

ಪೋಲಿಯೋ ಲಸಿಕೆಯನ್ನು ಸುರಕ್ಷಿತವಾಗಿಡಲು ಹಾಗೂ ಶೀತಲ ಪ್ಯಾಕ್‌ಗಳನ್ನು ತಯಾರಿಸಲು ನಿರಂತರ ವಿದ್ಯುತ್ ಅವಶ್ಯಕತೆ ಇರುವುದರಿಂದ ಪ್ರಾಥಮಿಕ ಮತ್ತು ಸಮುದಾಯ ಆರೋಗ್ಯ ಕೇಂದ್ರ ಪ್ರದೇಶಗಳಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮದ ಮೊದಲ ಒಂದು ವಾರ ಹಾಗೂ ನಂತರದ ಮೂರು ದಿನಗಳವರೆಗೆ ವಿದ್ಯುತ್ ವ್ಯತ್ಯಯವಾಗದಂತೆ ನಿರಂತರ ವಿದ್ಯುತ್ ಸರಬರಾಜು ಮಾಡುವಂತೆ ಹೆಸ್ಕಾಂ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಂ.ಜಯಾನಂದ ಅವರು ಮಾತನಾಡಿ, ಜೂ.28ರಿಂದ ಜು.1ರವರೆಗೆ ಪಲ್ಸ್ ಪೋಲಿಯೋ ಕಾರ್ಯಕ್ರಮ ಜರುಗಲಿದ್ದು, ಜೂ.28ರಂದು ಬೂತ್ ಮಟ್ಟದಲ್ಲಿ ಹಾಗೂ ನಂತರದ ದಿನಗಳಲ್ಲಿ ಮನೆ ಮನೆ ಭೇಟಿ ನೀಡಲಾಗುವುದು. ಇದಲ್ಲದೇ ಬಸ್ ನಿಲ್ದಾಣದಲ್ಲಿ ಹಾಗೂ ರೈಲು ನಿಲ್ದಾಣದಲ್ಲಿ ನಿಲುಗಡೆಯಾದ ರೈಲಿನಲ್ಲಿರುವ ಮಕ್ಕಳಿಗೂ ಪೋಲಿಯೋ ಲಸಿಕೆ ಹಾಕಲು ವ್ಯವಸ್ಥೆ ಮಾಡಿಕೊಳ್ಳಲಾಗಿದೆ. 1,438 ಆಶಾ ಕಾರ್ಯಕರ್ತೆಯರು ಹಾಗೂ 1,895 ಅಂಗನವಾಡಿ ಕಾರ್ಯಕರ್ತೆಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಸಭೆಗೆ ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ಪಲ್ಸ್ ಪೋಲಿಯೋ ಕಾರ್ಯಕ್ರಮದ ಪ್ರಚಾರ ಸಾಮಗ್ರಿ ಬಿಡುಗಡೆಗೊಳಿಸಿದರು.

ಸಭೆಯಲ್ಲಿ, ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ.ಪಿ.ಆರ್. ಹಾವನೂರ, ಡಾ.ಜಗದೀಶ ಪಾಟೀಲ, ಡಾ.ನಿಲೇಶ, ಡಾ.ಚನ್ನವೀರಯ್ಯ ವಿರಕ್ತಮಠಮಠ, ಡಾ.ಸರಿತಾ, ಡಾ.ಪ್ರಭಾಕರ ಕುಂದೂರ ಸೇರಿದಂತೆ ತಾಲೂಕಾ ಆರೋಗ್ಯಾಧಿಕಾರಿಗಳು, ವಿವಿಧ ಇಲಾಖೆ ಅಧಿಕಾರಿಗಳು, ಇತರರು ಉಪಸ್ಥಿತರಿದ್ದರು.

ಬಾಕಿ ಇರುವ ಪ್ರಕರಣ ಶೀಘ್ರ ಅನುಮೋದಿಸಿ: ಶಾಸಕ ಮಾನೆ

ಹಾನಗಲ್ಲ: ಕಂದಾಯ ಗ್ರಾಮಕ್ಕೆ ಸಂಬಂಧಿಸಿದ ಅಧಿಸೂಚನೆಗೆ ಸಲ್ಲಿಸುವ ಬಾಕಿ ಇರುವ ಪ್ರಕರಣಗಳನ್ನು ಕೂಡಲೇ ಅನುಮೋದಿಸಿ ಜಿಲ್ಲಾಧಿಕಾರಿಗಳಿಗೆ ಸಲ್ಲಿಸುವಂತೆ ಶಾಸಕ ಶ್ರೀನಿವಾಸ ಮಾನೆ ಅವರು ತಹಶೀಲ್ದಾರ್ ವಿಠ್ಠಲ್ ಚೌಗಲಾ ಅವರಿಗೆ ಸೂಚಿಸಿದರು.

ಇಲ್ಲಿ ತಹಶೀಲ್ದಾರ್ ಅವರೊಂದಿಗೆ ಸಭೆ ನಡೆಸಿದ ಅವರು ಕೆಲವು ಉಪಗ್ರಾಮ ಎಂದು ಘೋಷಣೆಯಾಗಿ ಹಕ್ಕುಪತ್ರ ಅನುಮೋದಿಸಲಾಗಿದೆ. ಆದರೆ ಕೆಲವರ ಮನೆಗಳು ಬಿಟ್ಟು ಹೋಗಿರುವ ಬಗ್ಗೆ ಮಾಹಿತಿ ಇದೆ. ಪರಿಶೀಲನೆ ನಡೆಸಿ ಬಡವರಿಗೆ ಅನ್ಯಾಯವಾಗದಂತೆ ಕ್ರಮ ಜರುಗಿಸಿ. ಕೆಲ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಪ್ರಕರಣ ಇರುವುದರಿಂದ ಬಡವರಿಗೆ ನ್ಯಾಯ ದೊರಕಿಸಲು ಸಾಧ್ಯವಾಗುತ್ತಿಲ್ಲ. ಪ್ರಕರಣ ಕಾನೂನಾತ್ಮಕವಾಗಿ ಇತ್ಯರ್ಥ ಪಡಿಸಲು ಗಮನ ನೀಡಬೇಕು. ತ್ವರಿತಗತಿಯಲ್ಲಿ ವಿಚಾರಣೆ ನಡೆಸಿ ಹಕ್ಕುಪತ್ರ ವಿತರಣೆ ಮಾಡುವಂತೆ ಸೂಚನೆ ನೀಡಿದರು.

ತಹಶೀಲ್ದಾರ್ ಕಾರ್ಯಾಲಯದಲ್ಲಿ ಕಾರ್ಯ ನಿರ್ವಹಿಸುವ ಸಿಬ್ಬಂದಿ ಹಾಗೂ ಗ್ರಾಮ ಆಡಳಿತ ಅಧಿಕಾರಿಗಳು ಸಾರ್ವಜನಿಕರಿಂದ ಸ್ವೀಕರಿಸುವ ಅರ್ಜಿಗಳನ್ನು ನಿಗದಿತ ಅವಧಿಯೊಳಗೆ ಇತ್ಯರ್ಥ ಪಡಿಸಲು ಸೂಚಿಸಿ. ಸರ್ಕಾರದ ಮಹತ್ವ ಯೋಜನೆಗಳಾಗಿರುವ ನಮೂನೆ 1 ರಿಂದ 5 ಪ್ರಕರಣಗಳು ಸಮಯಕ್ಕೆ ವಿಲೇವಾರಿ ಮಾಡಬೇಕು. ರೈತರ ಕೆಲಸದಲ್ಲಿ ಯಾವುದೇ ವಿಳಂಬವಾಗದಂತೆ ಗಮನ ಹರಿಸುವಂತೆ ಸೂಚನೆ ನೀಡಿದರು.

ಕೆಲ ಗ್ರಾಮಗಳಲ್ಲಿ ಪಡಿತರ ವಿತರಣೆ ಕೇಂದ್ರ ಇಲ್ಲದಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ತಾಲೂಕಿನಲ್ಲಿ 23 ಹೊಸ ಪಡಿತರ ವಿತರಣಾ ಕೇಂದ್ರಗಳನ್ನು ಅನುಮೋದಿಸಿ ಅಧಿಸೂಚಿಸಲಾಗಿದ್ದು, ಹೊಸ ಕೇಂದ್ರಗಳಿಗೆ ಕಾರ್ಯಾದೇಶ ನೀಡುವಂತೆ ಸೂಚಿಸಿದರು. ಕೆಲವು ಗ್ರಾಮಗಳಲ್ಲಿ ಸ್ಮಶಾನ ಇಲ್ಲದೇ ತೊಂದರೆ ಅನುಭವಿಸುವಂತಾಗಿದ್ದು, ಸೂಕ್ತ ಕ್ರಮಕ್ಕೆ ಶ್ರೀನಿವಾಸ ಮಾನೆ ಸೂಚಿಸಿದರು.



ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕದಂತೆ ಮನವಿ

ಹಾವೇರಿ: ಮುಂಬರಲಿರುವ ಭಾರತ-ಅಮೆರಿಕ ಮಧ್ಯಂತರ ಮುಕ್ತ ವ್ಯಾಪಾರ ಒಪ್ಪಂದದಿಂದ ದೇಶದ ಕೃಷಿ ವಲಯಕ್ಕೆ ಭಾರಿ ಪೆಟ್ಟು ಬೀಳಲಿದ್ದು, ಯಾವುದೇ ಕಾರಣಕ್ಕೂ ರೈತರ ಹಿತಾಸಕ್ತಿ ಬಲಿಗೊಡುವ ಒಪ್ಪಂದಕ್ಕೆ ಸಹಿ ಹಾಕಬಾರದು ಎಂದು ಕರ್ನಾಟಕ ರಾಜ್ಯ ರೈತ ಸಂಘದ ಪದಾಧಿಕಾರಿಗಳು ಜಿಲ್ಲಾಧಿಕಾರಿಗಳ ಮೂಲಕ ಪ್ರಧಾನಮಂತ್ರಿ ಮೋದಿಯವರಿಗೆ ತುರ್ತು ಮನವಿ ಸಲ್ಲಿಸಿದರು.

ಜಿಲ್ಲಾಧಿಕಾರಿಗಳನ್ನು ಭೇಟಿಯಾಗಿ ಮನವಿ ಸಲ್ಲಿಸಿದ ರೈತ ಮುಖಂಡರು, ಅಮೆರಿಕದ ವ್ಯಾಪಾರ ಪ್ರತಿನಿಧಿ ಜೇಮಿಸನ್ ಗ್ರೀರ್ ಜೂ. 23, 24ರಂದು ನವದೆಹಲಿಗೆ ಭೇಟಿ ನೀಡಲಿದ್ದು, ಒಪ್ಪಂದ ಅಂತಿಮಗೊಳ್ಳುವ ಸಾಧ್ಯತೆಯಿದೆ. ಇದರಿಂದ ರೈತ ಸಮುದಾಯದಲ್ಲಿ ತೀವ್ರ ಆತಂಕ ಸೃಷ್ಟಿಯಾಗಿದೆ ಎಂದು ತಿಳಿಸಿದರು.

ಹತ್ತಿ, ಜೋಳ, ಸೋಯಾಬೀನ್ ಎಣ್ಣೆ ಹಾಗೂ ಸಂಸ್ಕರಿಸಿದ ಹಣ್ಣುಗಳ ಮೇಲಿನ ಆಮದು ಸುಂಕ ಕಡಿತಗೊಳಿಸಿದರೆ, ಅಮೆರಿಕದ ಸಬ್ಸಿಡಿಯುಕ್ತ ಉತ್ಪನ್ನಗಳ ಎದುರು ನಮ್ಮ ರೈತರು ಸ್ಪರ್ಧಿಸಲು ಸಾಧ್ಯವಿಲ್ಲ. ತಾಂತ್ರಿಕ ಅಡೆತಡೆಗಳ ನಿವಾರಣೆಯಿಂದ ವಿದೇಶಿ ಹಾಲು, ಮಾಂಸ, ಜೋಳ ಭಾರತದ ಮಾರುಕಟ್ಟೆ ಪ್ರವೇಶಿಸಿ ಸ್ಥಳೀಯ ಮಾರುಕಟ್ಟೆ ನಾಶವಾಗಲಿದೆ. ವಿಶ್ವ ವ್ಯಾಪಾರ ಸಂಸ್ಥೆಯಲ್ಲಿ ಅಮೆರಿಕವು ಭಾರತದ ಕನಿಷ್ಠ ಬೆಂಬಲ ಬೆಲೆ ಯೋಜನೆಗೆ ತರಲು ಒತ್ತಡ ಹೇರುತ್ತಿದೆ. ಈಗಾಗಲೇ ಸೂಪರ್ ಎಲ್-ನಿನೋ ಮುಂಗಾರು ಭೀತಿಯಿರುವಾಗ, ಎಂ.ಎಸ್.ಪಿಗೆ ಧಕ್ಕೆಯಾದರೆ ಭತ್ತ ಮತ್ತು ಗೋಧಿ ಬೆಳೆಯುವ ಕೋಟ್ಯಂತರ ರೈತರು ಬೀದಿಪಾಲಾಗಲಿದ್ದಾರೆ. ಯಾವುದೇ ಕಾರಣಕ್ಕೂ ಕೃಷಿಕರು, ಹಾಲು ಉತ್ಪಾದಕರು ಹಾಗೂ ಮೀನುಗಾರರನ್ನು ಸಂಕಷ್ಟಕ್ಕೆ ತಳ್ಳುವ ಈ ಒಪ್ಪಂದಕ್ಕೆ ಭಾರತ ಸರ್ಕಾರ ಸಹಿ ಹಾಕಬಾರದು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ರೈತ ಮುಖಂಡರಾದ ಮಲ್ಲಿಕಾರ್ಜುನ ಬಳ್ಳಾರಿ, ಶಿವಯೋಗಿ ಹೊಸಗೌಡ್ರ, ಜಾನ್ ಪುನಿತ್, ಸುಭಾಸ ಬನ್ನಿಹಟ್ಟಿ, ರಾಜು ತರ್ಲಗಟ್ಟ ಇತರರು ಇದ್ದರು



ಕೃಷಿ ಕಾಯಕ ವೃತ್ತಿಯಾಗಿ ಸ್ವೀಕರಿಸಿ: ಡಾ.ಶಂಭು ಬಳಿಗಾರ

ಹಾವೇರಿ: ಪ್ರತಿ ವಿದ್ಯಾರ್ಥಿಯಲ್ಲಿಯೂ ವಿಶೇಷ ಪ್ರತಿಭೆ, ಸಾಮರ್ಥ್ಯಗಳಿದ್ದು, ಅವುಗಳನ್ನು ಹೊರಗೆ ತರುವಲ್ಲಿ ಪಠ್ಯೇತರ ಚಟುವಟಿಕೆಗಳ ಪಾತ್ರ ಮಹತ್ವದ್ದು ಎಂದು ಖ್ಯಾತ ಜಾನಪದ ವಿದ್ವಾಂಸ ಪ್ರೊ. ಶಂಭು ಬಳಿಗಾರ ಹೇಳಿದರು.

ಹಾವೇರಿ ವಿಶ್ವವಿದ್ಯಾಲಯದಲ್ಲಿ ಮಂಗಳವಾರ ನಡೆದ ಸ್ನಾತಕೋತ್ತರ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿ, ಕಠಿಣ ಪರಿಶ್ರಮ, ನಿರಂತರ ಪ್ರಯತ್ನಗಳಿಂದ ವಿದ್ಯಾರ್ಥಿಗಳು ತಮ್ಮ ವೃತ್ತಿಜೀವನವನ್ನು ರೂಪಿಸಿಕೊಳ್ಳಬೇಕು. ಸರ್ಕಾರಿ ಉದ್ಯೋಗಾವಕಾಶಗಳು ಪ್ರತಿಶತ ಕೇವಲ ಶೇ.5ರಷ್ಟು ಇದ್ದು, ಕೃಷಿ ವಲಯದಲ್ಲಿ ಲಭ್ಯವಿರುವ ಉದ್ಯೋಗಾವಕಾಶಗಳು ಇಂದಿನ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಬಲ್ಲವು. ಎಂಜಿನಿಯರಿಂಗ್ ವೃತ್ತಿಯಲ್ಲಿದ್ದವರೂ ಕೂಡ ಇಂದು ಆ ಕ್ಷೇತ್ರವನ್ನು ಬಿಟ್ಟು ಕೃಷಿಯಲ್ಲಿ ಸಾಧನೆ ಮಾಡುತ್ತಿರುವುದು ಸ್ವಾಗತಾರ್ಹ ಬೆಳವಣಿಗೆಯಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕುಲಪತಿ ಪ್ರೊ. ಸುರೇಶ ಜಂಗಮಶೆಟ್ಟಿ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಶಿಸ್ತು ಅಗತ್ಯವಾಗಿದ್ದು, ಭಾವೀ ಜೀವನವನ್ನು ರೂಪಿಸಿಕೊಳ್ಳಲು ಲಭ್ಯ ಅವಕಾಶಗಳನ್ನು ಬಳಸಿಕೊಂಡು ಸಾಧನೆ ಮಾಡಬೇಕು ಎಂದು ಕಿವಿಮಾತು ಹೇಳಿದರು. ವಿಶ್ವವಿದ್ಯಾಲಯವು ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಕಾರ್ಯಪ್ರವೃತ್ತವಾಗಿದೆ. ಮುಂದಿನ ದಿನಗಳಲ್ಲಿ ಕ್ರೀಡಾಂಗಣ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಕುಲಸಚಿವ ಪ್ರೊ. ಎಸ್.ಟಿ. ಬಾಗಲಕೋಟಿ ಅವರು ಮಾತನಾಡಿದರು.

ಜಿಮಖಾನಾ ಅಧ್ಯಕ್ಷ ಡಾ. ವೈ.ಟಿ. ಭಜಂತ್ರಿ ಪ್ರಶಸ್ತಿ ವಿತರಣೆ ಕಾರ್ಯಕ್ರಮ ನಡೆಸಿಕೊಟ್ಟರು. ಉಪಾಧ್ಯಕ್ಷೆ ಡಾ. ರೇಖಾ ಬಾಳೋಜಿ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿದ್ಯಾರ್ಥಿ ಪ್ರತಿನಿಧಿಗಳಾದ ಲತಾ ಪಾಟೀಲ, ವಿನಾಯಕ ಕೆ ಉಪಸ್ಥಿತರಿದ್ದರು. ವಾಣಿ ನಿರೂಪಿಸಿದರು.



ಸರ್ಕಾರಿ ಪ್ರೌಢಶಾಲೆಯಲ್ಲಿ ಯೋಗ ದಿನಾಚರಣೆ

ಹಾವೇರಿ: ಮೇವುಂಡಿ ಸರ್ಕಾರಿ ಪ್ರೌಢಶಾಲೆಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು.

ಮುಖ್ಯೋಪಾಧ್ಯಾಯ ವೀರೇಶ್ ಗಡ್ಡದೇವರಮಠ, ಸಹ ಶಿಕ್ಷಕರಾದ ಡಿ.ಎಸ್. ರಿತ್ತಿ, ಬಿ.ಕೆ. ಶ್ರೀನಿವಾಸ ಹಾಗೂ ಶಿಕ್ಷಕಿ ಸುಜಾತಾ ಕಡಕೋಳ ಅವರು ಯೋಗದ ಮಹತ್ವದ ಕುರಿತು ಮಾತನಾಡಿದರು.

ಗಾಯತ್ರಿ ಮುಂಡರಗಿ ಹಾಗೂ ಹನುಮೇಶ್ ಭೋವಿ ಅವರ ನೇತೃತ್ವದಲ್ಲಿ ಯೋಗಾಭ್ಯಾಸ ಜರುಗಿತು. ಕಳೆದ ಒಂದು ವಾರದಿಂದ ಯೋಗಸಪ್ತಾಹ ಕಾರ್ಯಕ್ರಮದಲ್ಲಿ ಉತ್ತಮ ಯೋಗ ಪ್ರದರ್ಶನ ನೀಡಿದ ಯೋಗಪಟುಗಳಿಗೆ ಬಹುಮಾನ ವಿತರಣೆ ಮಾಡಲಾಯಿತು.



ಕಾರ್ಯಕ್ರಮದಲ್ಲಿ ಶಿಕ್ಷಕರಾದ ಬಸವರಾಜ ಪೂಜಾರ, ಕಮಲ ಹಾವನೂರ, ಶಬೀನಾ ನದಾಫ್, ಪ್ರದೀಪ ಬಿಜಾಪುರ, ಪುಷ್ಪಾವತಿ ಗುಂಜಾಳ ಹಾಜರಿದ್ದರು. ಭಾಗ್ಯಲಕ್ಷ್ಮೀ ಹಿರೇಮಠ ನಿರೂಪಿಸಿದರು. ಫಯಾಜ್ ನದಾಫ್ ವಂದಿಸಿದರು.

ವಿಶ್ವ ಯೋಗ ದಿನಾಚರಣೆ

ಹಾನಗಲ್ಲ: ಬಿಜೆಪಿ ತಾಲೂಕು ಯುವ ಮೋರ್ಚಾದಿಂದ ಕುಮಾರೇಶ್ವರ ಮಠದ ಆವರಣದಲ್ಲಿ ಯೋಗ ದಿನ ಆಚರಿಸಲಾಯಿತು. ಹಿರಿಯ ವಿಭಾಗದ ನ್ಯಾಯಾಧೀಶ ಆಮೋಲ್ ಹಿರಿಕುಡೆ, ಕಿರಿಯ ವಿಭಾಗದ ನ್ಯಾಯಾಧೀಶೆ ಐಶ್ವರ್ಯ ಪಟ್ಟಣಶೆಟ್ಟಿ, ವಕೀಲರ ಸಂಘದ ಅಧ್ಯಕ್ಷ ಎಂ.ಸಿ.ಮಹಾಂತಿನಮಠ, ಕಾರ್ಯದರ್ಶಿ ಸತೀಶ ತಿಳವಳ್ಳಿ, ವಕೀಲರು ಇದ್ದರು. ಗುಡಗುಡಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮೈದಾನದಲ್ಲಿ ವಿದ್ಯಾರ್ಥಿಗಳು ಯೋಗಾಸನ ಮಾಡಿದರು. ಮುಖ್ಯ ಶಿಕ್ಷಕ ಅನಿಲಕುಮಾರ ಗೋಣಣ್ಣನವರ, ಶಿಕ್ಷಕಿ ಅಮೃತಾ ಹಿರೇಮಠ ಇದ್ದರು. ಹಾನಗಲ್ಲ ಸೇವಾ ಭಾರತಿ ಛಾತ್ರಾಲಯದ ವಿದ್ಯಾರ್ಥಿಗಳು ಇದ್ದರು. ಬಿಜೆಪಿ ತಾಲ್ಲೂಕು ಅಧ್ಯಕ್ಷ ಮಹೇಶ ಕಮಡೊಳ್ಳಿ, ಯುವ ಮೋರ್ಚಾ ಅಧ್ಯಕ್ಷ ಅಮಿತ್ ಶಡಗರವಳ್ಳಿ ಇದ್ದರು.

ಕಸಾಯಿಖಾನೆ ಬಂದ್‌ಗೆ ಸಾರ್ವಜನಿಕರ ಒತ್ತಾಯ

ರಾಣೇಬೆನ್ನೂರ: ಅಕ್ರಮ ಕಸಾಯಿ ಖಾನೆಗಳನ್ನು ಶಾಶ್ವತವಾಗಿ ಬಂದ್ ಮಾಡುವಂತೆ ಆಗ್ರಹಿಸಿ ಹಾಗೂ ಕಸಾಯಿ ಖಾನೆ ಕುರಿತು ಮಾಹಿತಿ ನೀಡಿದ ಬಜರಂಗದಳದ ಕಾರ್ಯಕರ್ತನ ಮೇಲೆ ನಡೆದ ಹಲ್ಲೆಯನ್ನು ಖಂಡಿಸಿ ವಿಶ್ವ ಹಿಂದೂ ಪರಿಷದ್ ಮತ್ತು ಬಜರಂಗದಳದ ವತಿಯಿಂದ ಮಂಗಳವಾರ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

ನಗರದ ಕೆಇಬಿ ಗಣೇಶ ದೇವಸ್ಥಾನದಿಂದ ಆರಂಭವಾದ ಮೆರವಣಿಗೆ ಬಸ್ ನಿಲ್ದಾಣ, ಜಗಜ್ಯೋತಿ ಬಸವೇಶ್ವರ (ಕೋರ್ಟ್) ವೃತ್ತ, ಹಲಗೇರಿ ಕ್ರಾಸ್, ಕುರುಬಗೇರಿ ಕ್ರಾಸ್, ಹಳೆಯ ಪಿಬಿ ರಸ್ತೆಯ ಮೂಲಕ ಸಾಗಿ ಮಿನಿ ವಿಧಾನಸೌಧ ತಲುಪಿತು. ಮೆರವಣಿಗೆಯಲ್ಲಿ ನೂರಾರು ಕಾರ್ಯಕರ್ತರು ಭಾಗವಹಿಸಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು.

ಕಳೆದ ಮೇ 24ರಂದು ಅಕ್ರಮ ಕಸಾಯಿ ಖಾನೆ ಕುರಿತು ಮಾಹಿತಿ ನೀಡಿದ ಬಜರಂಗದಳದ ಕಾರ್ಯಕರ್ತನ ಮೇಲೆ ನಡೆದ ಹಲ್ಲೆಯನ್ನು ಖಂಡಿಸಿದ ಪ್ರತಿಭಟನಾಕಾರರು, ಕೇವಲ ಮೂವರು ಯುವಕರ ಬಂಧನದಿಂದ ವಿಷಯ ಮುಗಿದಂತಾಗುವುದಿಲ್ಲ. ಈ ಹಲ್ಲೆಗೆ ಕುಮ್ಮಕ್ಕು ನೀಡಿದ ಕಸಾಯಿ ಖಾನೆ ಮಾಲೀಕರು ಸೇರಿದಂತೆ ಎಲ್ಲಾ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.



ಪ್ರತಿಭಟನೆ ವೇಳೆ ಗೋಮಾತೆ ರಕ್ಷಿಸಿ-ದೇಶ ಉಳಿಸಿ, ಭಾರತ ಮಾತಾ ಕೀ ಜೈ, ಜೈ ಶ್ರೀರಾಮ್ ಎಂಬ ಘೋಷಣೆಗಳು ಮೊಳಗಿದವು.

ಬಂಜಾರ ಗುರು ಬಾಲ ತಪಸ್ವಿ ಮಹಾರಾಜ (ಕೃಷ್ಣಾಪುರ ಮಠ), ಮಾಜಿ ಶಾಸಕ ಅರುಣಕುಮಾರ ಪೂಜಾರ, ಉತ್ತರ ಪ್ರಾಂತ ವಿಶ್ವ ಹಿಂದೂ ಪರಿಷದ್ ಸಹ ಕಾರ್ಯದರ್ಶಿ ಪುಂಡಲೀಕ್ ದಳವಾಯಿ, ಧಾರವಾಡ ವಿಭಾಗ ಬಜರಂಗದಳ ಸಂಚಾಲಕ ಅನಿಲ ಹಲವಾಗಿಲ, ಹಾವೇರಿ ಜಿಲ್ಲಾ ವಿಶ್ವ ಹಿಂದೂ ಪರಿಷದ್ ಕಾರ್ಯದರ್ಶಿ ಮೃತ್ಯುಂಜಯ ಬೆಣ್ಣಿ ಮಾತನಾಡಿ, ಅಕ್ರಮ ಚಟುವಟಿಕೆಗಳು ಸಮಾಜದ ಶಾಂತಿ, ಸುರಕ್ಷತೆ ಹಾಗೂ ಕಾನೂನು ಸುವ್ಯವಸ್ಥೆಗೆ ಧಕ್ಕೆ ತರುತ್ತಿದ್ದು, ಇವುಗಳನ್ನು ತಡೆಯಲು ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ನ್ಯಾಯವಾದಿ ಕೆ.ಶಿವಲಿಂಗಪ್ಪ, ಜಿಪಂ ಮಾಜಿ ಸದಸ್ಯ ಸಂತೋಷಕುಮಾರ ಪಾಟೀಲ, ನಗರಸಭೆ ಮಾಜಿ ಸದಸ್ಯರಾದ ಮಂಜುನಾಥ ಗೌಡಶಿವಣ್ಣನವರ, ಪ್ರಕಾಶ ಬುರಡಿಕಟ್ಟಿ, ಎಪಿಎಂಸಿ ಮಾಜಿ ಸದಸ್ಯ ಪರಮೇಶಪ್ಪ ಗೂಳಣ್ಣನವರ, ರೈತ ಮುಖಂಡ ಹನುಮಂತಪ್ಪ ಕಬ್ಬಾರ, ಚನ್ನಬಸಪ್ಪ ಓಂಕಾರಣ್ಣನವರ, ವಿನಾಯಕ ಕರ್ನೂಲ, ವಿನಯಗೌಡ ಬಾಳನಗೌಡ್ರ, ಬಿರೇಶ್ ಗುದಿಗೇರ, ವಿಜಯ ಮಾಯಮ್ಮನವರ, ನಾಗರಾಜ ಕೊರವರ, ಅನಿಲ ಮಳವಳ್ಳಿ, ಶಶಿ ಬಳ್ಳಾರಿ, ರುದ್ರೇಶ ಬುಕ್ಕಶೆಟ್ಟಿ, ಶರತ ನೂಲಗೇರಿ, ಕಿರಣ ಮೆಡ್ಲೇರಿ, ನಾಗರಾಜ ಕಲಾಲ, ಮಂಜುನಾಥ ಚಲವಾದಿ, ಆಕಾಶ ಹುಲ್ಲತ್ತಿ, ವಿಶ್ವ ಹಿಂದೂಪರಿಷತ್ ಹಾಗೂ ಭಜರಂಗದಳದ ಕಾರ್ಯಕರ್ತರು ಇದ್ದರು.

ಜತ್ತಿಕಟ್ಟಿ ಕೆರೆಗೆ ನೀರು ಹರಿಸುವಂತೆ ರೈತರ ಒತ್ತಾಯ

ಬ್ಯಾಡಗಿ: ಅಗಸನಹಳ್ಳಿ ಹಾಗೂ ರಾಮಗುಂಡೇನಹಳ್ಳಿ ಗ್ರಾಮಕ್ಕೆ ಹೊಂದಿಕೊಂಡಿರುವ ಜತ್ತಿಕಟ್ಟಿ ಕೆರೆಗೆ ನೀರು ಬಿಡುವಂತೆ ಆಗ್ರಹಿಸಿ ರೈತರು ಇಂದು ಪ್ರತಿಭಟನೆ ನಡೆಸಿದರು.

ಅಗಸನಹಳ್ಳಿ ಗ್ರಾಮದ ಶಿಬಾರಗಟ್ಟಿಯ ಮಹಾ ದ್ವಾರದಿಂದ ನೂರಾರು ರೈತರು ಹಾಗೂ ಗ್ರಾಮಸ್ಥರು ಎತ್ತಿನ ಗಾಡಿ ಮೂಲಕ ಹೊರಟ ಮೆರವಣಿಗೆಯು ಮುಖ್ಯ ರಸ್ತೆ ಮೂಲಕ ಹಾದು ತಹಶೀಲ್ದಾರ್ ಕಚೇರಿ ತಲುಪಿ ತಹಶೀಲ್ದಾರ್ ಅವರಿಗೆ ಮನವಿ ಪತ್ರ ನೀಡಿದರು.

ಪ್ರತಿಭಟನೆಯಲ್ಲಿ ನೇತೃತ್ವ ವಹಿಸಿದ್ದ ಎಂ ಎನ್.ನಾಯಕ್ ಮಾತನಾಡಿ, ಅಗಸನಹಳ್ಳಿ ಗ್ರಾಮಸ್ಥರಿಗೆ ಸಂಬಂಧಪಟ್ಟ ಸರ್ವೆ ನಂಬರ್ 46 ಈ ಆಸ್ತಿಯ 24 ಎಕರೆ 31ಗುಂಟೆ ಇರುವ ವಿಸ್ತೀರ್ಣದ ಕೆರೆ ಇದ್ದು ಈ ಕೆರೆಯನ್ನು ಹಲವು ವರ್ಷಗಳಿಂದ ಹೂಳು ಎತ್ತಿರುವುದಿಲ್ಲ ಮಳೆಯ ಬಂದರೆ ನೀರು ನಿಲ್ಲುತ್ತಿಲ್ಲ ಹರಿದು ಹೋಗುತ್ತಿದೆ ಕೂಡಲೇ ಕೆರೆಯನ್ನು ಹುಳೆತ್ತಿರಿ ಮತ್ತು ಈ ಕೆರೆಗೆ ಆಣೂರು ಶೀಡೆನೂರ ಮಾರ್ಗವಾಗಿ ಹೋಗಿರುವ ಪೈಪ್‌ಲೈನ್ ಇದ್ದು ಆ ಪೈಪ್ ಲೈನ್‌ನ್ನು ಅಗಸನಹಳ್ಳಿಯ ಜತ್ತಿಕಟ್ಟಿ ಕೆರೆ ತುಂಬಿಸಲು ಅನುಮೋದನೆ ಮಾಡಬೇಕು ಇದರಿಂದ ಆ ಗ್ರಾಮಕ್ಕೆ ಹೊಂದಿಕೊಂಡಿರುವ ರೈತರ ಹೊಲಗಳಿಗೆ ನೀರು ಸಿಕ್ಕಂತಾಗುತ್ತದೆ ಮತ್ತು ಬೋರ್‌ವೆಲ್‌ಗಳಿಗೆ ಅಂತರ್ಜಲ ಮಟ್ಟ ಹೆಚ್ಚುತ್ತದೆ ಇದರಿಂದ ರೈತರಿಗೆ ಅನುಕೂಲವಾಗುತ್ತದೆ ಮತ್ತು ಧನಕರುಗಳಿಗೆ ನೀರು ಸಿಕ್ಕಂತಾಗುತ್ತದೆ ಕೂಡಲೇ ಪೈಪ್ಲೈನ್ ಮೂಲಕ ನೀರನ್ನು ನೀಡಬೇಕು.



ಜಾಗ ತೆರವು ಮಾಡಿಸಿ

ಕೆರೆ ವಿಸ್ತೀರ್ಣ 24 ಎಕರೆ ಇದ್ದು ಕೆರೆಯ ಜಾಗವನ್ನು ಕೆಲವೊಂದು ಜನರು ಒತ್ತುವರಿ ಮಾಡಿಕೊಂಡಿದ್ದು ಇರುತ್ತದೆ ಕೆರೆಯ ಜಾಗವನ್ನು ಖಾಲಿ ಮಾಡುವಂತೆ ಸೂಚಿಸಿದರು ಕ್ಯಾರೆ ಅನ್ನುತ್ತಿಲ್ಲ ಸೂಚಿಸಿದವರ ಮೇಲೆ ದಬ್ಬಾಳಿಗೆ ಮಾಡುತ್ತಿದ್ದಾರೆ ಕೂಡಲೇ ತಹಶೀಲ್ದಾರ್ ಅವರು ಎಚ್ಚೆತ್ತುಕೊಂಡು ಅತಿಕ್ರಮಣ ಮಾಡಿರುವ ಕೆರೆಯ ಜಾಗವನ್ನು ತೆರವುಗೊಳಿಸಬೇಕೆಂದು ಈಶ್ವರ್ ಮಠದ ಜತ್ತಿಕಟ್ಟಿ ಹೇಳಿದರು. ಈ ಸಂದರ್ಭದಲ್ಲಿ ಗ್ರಾಮದ ಮುಖಂಡರು ನಾಗರಿಕರು ಹಾಗೂ ರೈತರು ಉಪಸ್ಥಿತರಿದ್ದರು.

ಗ್ರಾಮದ ರೈತ ಅಮೃತ ಗೌಡ ಕೆಂಚನಗೌಡ್ರು ಮಾತನಾಡಿ, ಅಗಸನಹಳ್ಳಿ ಮತ್ತು ಅರಳಿಕಟ್ಟಿ ಮಾರ್ಗವಾಗಿ ರಸ್ತೆಯನ್ನು ಹೊಂದಿದ್ದು ರೈತರಿಗೆ ನಡೆದು ಹೋಗಲು ದಾರಿಯ ಸಮಸ್ಯೆ ಇರುವುದರಿಂದ ಈ ರಸ್ತೆಯನ್ನು ಕಾಂಕ್ರೀಟ್ ಕರಣ ಅಥವಾ ಸಿಸಿ ರಸ್ತೆ ಕೂಡಲೇ ಮಾಡಿಕೊಡಬೇಕು ಈ ಎಲ್ಲಾ ಬೇಡಿಕೆಗಳನ್ನು ಕೂಡಲೇ ಮಾಡಬೇಕು ಇಲ್ಲವಾದರೆ ತಹಶೀಲ್ದಾರ್ ಕಚೇರಿ ಬಂದ್ ಮಾಡಿ ಪ್ರತಿಭಟನೆ ಮಾಡಲಾಗುತ್ತದೆ ಎಂದರು.

ಕಿರುಸುದ್ದಿ

ರಸ್ತೆ ಅಭಿವೃದ್ಧಿಗೆ ಚಾಲನೆ

•ರಾಯಬಾಗ: ತಾಲೂಕಿನ ಮಾಡಲಗಿ ಗ್ರಾಮದಲ್ಲಿ 2024–25 ನೇ ಸಾಲಿನಲ್ಲಿ ಸಂಸದರ ಪ್ರದೇಶಾಭಿವೃದ್ಧಿ ಯೋಜನೆಯಡಿ ಸುಮಾರು 5 ಲಕ್ಷ ರೂ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಆಪ್ತರಾದ ಶಿವನಗೌಡ ಪಾಟೀಲ ಅವರು ಭೂಮಿಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಸುಸಜ್ಜಿತ ರಸ್ತೆ ಅಭಿವೃದ್ಧಿ ಮಾಡಿ ಜನರಿಗೆ ಅನುಕೂಲ ಮಾಡಿಕೊಡಬೇಕು. ಜನರೂ ಸಹಿತ ಇದಕ್ಕೆ ಅನುಕೂಲ ಮಾಡಿಕೊಡಬೇಕು ಎಂದರು. ಈ ವೇಳೆ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮಹಾವೀರ ಮೊಹಿತೆ, ಜ್ಯೋತಿ ಕೆಂಪಟ್ಟಿ, ಹಾಜಿ ಮುಲ್ಲಾ, ಸಿದ್ರಾಮ್ ಪೂಜೇರಿ, ಮಹಾದೇವ ಐಹೊಳೆ, ಭರಮಾನಂದ ಚೌಗಲಾ, ನಾಗೇಶ ಗೋಟೂರ, ಗುರುಪಾದ ಮರಡಿ, ಸಿದ್ದಲಿಂಗ ಚೌಗಲಾ, ಪ್ರವೀಣ ಚಿಂಚಲಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ವಿವಿಧ ಜಯಂತಿಗಳ ಸಿದ್ಧತೆಗೆ ಸೂಚನೆ

•ಬೆಳಗಾವಿ: ಸರ್ಕಾರದ ನಿರ್ದೇಶನದಂತೆ ನಾಡಪ್ರಭು ಕೆಂಪೇಗೌಡ ಜಯಂತಿ ಜೂ. 27ರಂದು ಹಾಗೂ ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಅವರ ಜಯಂತಿ ಜು.2 ರಂದು ನಗರದ ಕುಮಾರ ಗಂಧರ್ವ ಕಲಾ ಮಂದಿರದಲ್ಲಿ ಆಚರಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ವಿಜಯಕುಮಾರ ಹೊನಕೇರಿ ಹೇಳಿದರು.

ಮಂಗಳವಾರ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಡೆದ ವಿವಿಧ ಜಯಂತಿಗಳ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ನಾಡಪ್ರಭು ಕೆಂಪೇಗೌಡ ಜಯಂತಿ, ವಚನ ಪಿತಾಮಹ ಫ. ಗು. ಹಳಕಟ್ಟಿಯವರ ಜಯಂತಿಯ ಆಚರಣೆಗೆ ಅವಶ್ಯವಿರುವ ಸಿದ್ಧತೆ ಮಾಡಿಕೊಳ್ಳಬೇಕು. ವೇದಿಕೆ ಕಾರ್ಯಕ್ರಮದಲ್ಲಿ ಉಪನ್ಯಾಸ, ಸಂಗೀತ ಕಾರ್ಯಕ್ರಮ ಸೇರಿದಂತೆ ಇನ್ನಿತರ ಅಗತ್ಯ ಸಿದ್ಧತೆ ಮುಂಚಿತವಾಗಿಯೇ ಮಾಡಿಕೊಳ್ಳಬೇಕು ಎಂದು ತಿಳಿಸಿದರು. ಜಯಂತಿಗಳ ಆಮಂತ್ರಣ ಪತ್ರಿಕೆ ಮುಂಚಿತವಾಗಿ ಗಣ್ಯರಿಗೆ, ಅಧಿಕಾರಿಗಳಿಗೆ ಮತ್ತು ಸಮಾಜದ ಮುಖಂಡರಿಗೆ ತಲುಪಿಸಬೇಕು ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪ ನಿರ್ದೇಶಕಿ ವಿದ್ಯಾವತಿ ಭಜಂತ್ರಿ, ಕೆಂಪೇಗೌಡ ಜಯಂತಿ, ವಚನ ಪಿತಾಮಹ ಫ. ಗು. ಹಳಕಟ್ಟಿಯವರ ಜಯಂತಿ ಆಚರಣೆಗೆ ಅಗತ್ಯವಿರುವ ರೂಪರೇಷೆಗಳ ಕುರಿತು ವಿವರಿಸಿದರು. ಸಭೆಯಲ್ಲಿ ಸಮಾಜದ ಮುಖಂಡರಾದ ಬಸವರಾಜ ರೊಟ್ಟಿ, ಮುರಗೇಶ ಶಿವಪೂಜಿ ಸೇರಿದಂತೆ ಅಧಿಕಾರೇತರ ಗಣ್ಯರು ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

•ಬೆಳಗಾವಿ: 2026–27 ನೇ ಸಾಲಿನ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ವಿವಿಧ ಕಾರ್ಯಕ್ರಮಗಳಡಿ ತೋಟಗಾರಿಕೆಯಲ್ಲಿ ಕೊಯ್ಲೋತ್ತರ ನಿರ್ವಹಣಾ ಚಟುವಟಿಕೆಗಳಿಗೆ ಪ್ರೋತ್ಸಾಹ, ತೋಟಗಾರಿಕೆ ಬೆಳೆಗಳಲ್ಲಿ ಗುಣಮಟ್ಟದ ಉತ್ಪಾದನೆಗೆ ವಿಶೇಷ ಉತ್ತೇಜನ ಕಾರ್ಯಕ್ರಮದಡಿಯಲ್ಲಿ ಸಹಾಯಧನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ತೋಟಗಾರಿಕೆ ಬೆಳೆಗಳ ಕೊಯ್ಲಾದ ನಂತರ ಉತ್ಪನ್ನ ಸುಧಾರಿತ ಉತ್ಪನ್ನಗಳ ನಿರ್ವಹಣೆಗಾಗಿ ನಮೂದಿಸಿರುವ ಘಟಕಗಳಿಗೆ ಸಹಾಯಧನ ಸೌಲಭ್ಯ ಒದಗಿಸಲಾಗುವುದು. ಪ್ಲಾಸ್ಟಿಕ್ ಕ್ರೇಟ್ ಖರೀದಿಗಾಗಿ ಶೇ. 25 ರಷ್ಟು ಸಹಾಯಧನ, ಕ್ಷೇತ್ರ ಮಟ್ಟದಲ್ಲಿ ಎಂಗಡಣೆ, ಪ್ಯಾಕಿಂಗ್ ಮತ್ತು ಸಂಗ್ರಹಣೆ ಘಟಕ ನಿರ್ಮಾಣಕ್ಕಾಗಿ ಶೇ. 50 ರಷ್ಟು ಸಹಾಯಧನ, ಈರುಳ್ಳಿ ಶೇಖರಣಾ ಘಟಕ ನಿರ್ಮಾಣಕ್ಕೆ ಶೇ.50 ರಷ್ಟು ಸಹಾಯಧನ, ಕಡಿಮೆ ವೆಚ್ಚದ ಹಣ್ಣು ಮಾಗಿಸುವ ಘಟಕ ಶೇ.50 ರಷ್ಟು ಸಹಾಯಧನ ಲಭ್ಯವಿದೆ.

ಲಘು ಪೋಷಕಾಂಶಗಳ ಮಿಶ್ರಣ ಮತ್ತು ಮಾವು ಬೆಳೆ ಸ್ಪೆಷಲ್ ಶೇ. 25 ರಷ್ಟು ಸಹಾಯಧನ, 3 ಎಚ್.ಪಿ ಮತ್ತು 5 ಎಚ್.ಪಿ ಸೋಲಾರ್ ಪಂಪ್ ಸೆಟಗಳಿಗೆ ಶೇ. 50 ರಷ್ಟು ಸಹಾಯಧನ, ಸ್ವಯಂಚಾಲಿತ ಹವಾಮಾನ ಮುನ್ಸೂಚನಾ ಘಟಕ ಶೇ. 50 ರಷ್ಟು ಸಹಾಯಧನ ಲಭ್ಯವಿದೆ. ಅರ್ಜಿಗಳನ್ನು ತಾಲೂಕು ಹಾಗೂ ಹೋಬಳಿ ಮಟ್ಟದ ತೋಟಗಾರಿಕೆ ಅಧಿಕಾರಿಗಳನ್ನು ಸಂಪರ್ಕಿಸಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

ರಸ್ತೆ ಅಪಘಾತ: ಬೈಕ್ ಸವಾರ ಸಾವು

•ಖಾನಾಪುರ: ಎರಡು ಬೈಕ್‌ಗಳ ನಡುವೆ ನಡೆದ ಡಿಕ್ಕಿಯಲ್ಲಿ ಓರ್ವ ಬೈಕ್ ಸವಾರ ಮೃತಪಟ್ಟು, ಇನ್ನೋರ್ವ ಗಂಭೀರವಾಗಿ ಗಾಯಗೊಂಡ ಘಟನೆ ಪಟ್ಟಣದ ಹೊರವಲಯದ ಶಿವಾಜಿನಗರದ ಬಳಿ ಜಾಂಬೋಟಿ ಜತ್ತ ರಾಜ್ಯ ಹೆದ್ದಾರಿಯಲ್ಲಿ ಮಂಗಳವಾರ ಸಂಭವಿಸಿದೆ. ಮೃತನನ್ನು ತಾಲೂಕಿನ ಮಂತುರ್ಗಾ ಗ್ರಾಮದ ನಿವಾಸಿ, ನಿವೃತ್ತ ಪೋಸ್ಟ್ ಮಾಸ್ಟರ್ ಮಾರುತಿ ನಾರಾಯಣ ದಳವಿ (68) ಎಂದು ಗುರುತಿಸಲಾಗಿದೆ. ಮತ್ತೋರ್ವ ಸವಾರ ಸಣ್ಣಪುಟ್ಟ ಗಾಯಗಳೊಂದಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಖಾನಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ರಾಯಬಾಗ: ತಾಲೂಕಿನ ಮಾಡಲಗಿ ಗ್ರಾಮದಲ್ಲಿ 2024-25 ನೇ ಸಾಲಿನಲ್ಲಿ ಸಂಸದರ ಪ್ರದೇಶಾಭಿವೃದ್ಧಿ ಯೋಜನೆಯಡಿ ಸುಮಾರು 5 ಲಕ್ಷ ರೂ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಆಪ್ತರಾದ ಶಿವನಗೌಡ ಪಾಟೀಲ ಅವರು ಭೂಮಿಪೂಜೆ ನೆರವೇರಿಸಿದರು.

ಭಕ್ತಿಯಿಂದ ಚಂಚಲ ಮನಸ್ಸು ನಿಯಂತ್ರಣ

•ಚಿಕ್ಕೋಡಿ: ಭಕ್ತಿಯಿಂದ ಚಂಚಲ ಮನಸ್ಸು ನಿಯಂತ್ರಣವಾಗುತ್ತದೆ. ಮನುಷ್ಯ ಜೀವಿಗೆ ಜ್ಞಾನ ಎಂಬುವುದು ರತ್ನಕ್ಕೆ ಸರಿಸಮವಾಗಿದೆ. ಸದ್ಗುರು ಬಸವಪ್ರಭು ಮಹಾರಾಜರು ತಮ್ಮ ಶಿಷ್ಯವೃಂದಕ್ಕೆ ಭಕ್ತಿ, ಜ್ಞಾನ, ವೈರಾಗ್ಯ ಹೇಳಿಕೊಟ್ಟಿದ್ದಾರೆ ಎಂದು ನಿಡಸೋಶಿಯ ಸಿದ್ಧ ಸಂಸ್ಥಾನ ಮಠದ ಪಂಚಮ ಶಿವಲಿಂಗೇಶ್ವರ ಸ್ವಾಮೀಜಿ ಹೇಳಿದರು.

ತಾಲೂಕಿನ ಮಜಲಟ್ಟಿ ಗ್ರಾಮದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಸದ್ಗುರು ಬಸವಪ್ರಭು ಮಹಾರಾಜರ ಪ್ರಥಮ ಪುಣ್ಯಸ್ಮರಣೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿ, ಆಧ್ಯಾತ್ಮಿಕ ಜೀವನದಲ್ಲಿ ನೆಮ್ಮದಿ ಇದೆ. ಇದನ್ನು ಅರಿತುಕೊಂಡು ಭಗವಂತನ ನಾಮಸ್ಮರಣೆ ಮಾಡಬೇಕು. ಪ್ರಾಪಂಚಿಕ ಜಂಜಾಟದ ನಡುವೆಯೂ ಪರಮಾತ್ಮನನ್ನು ಒಲಿಸಿಕೊಳ್ಳುವ ಧಾರ್ಮಿಕ ಕಾರ್ಯಕ್ರಮದಲ್ಲಿ ಜನರು ಹೆಚ್ಚಿನ ಪ್ರಮಾಣದಲ್ಲಿ ಭಾಗಿಯಾಗಬೇಕು ಎಂದರು.

ಮೌಜಿ ವಡಗಾಂವದ ಆದಿನಾಥ ಮಹಾರಾಜರು ಮಾತನಾಡಿದರು. ಇದಕ್ಕೂ ಮೊದಲು ಸದ್ಗುರು ಬಸವಪ್ರಭು ಮಹಾರಾಜರ ಪ್ರಥಮ ಪುಣ್ಯಸ್ಮರಣೆ ನಿಮಿತ್ತ ಸದ್ಗುರು ಬಸವಪ್ರಭು ಮಹಾರಾಜರ ಭಾವಚಿತ್ರವನ್ನು ಭಜನೆ, ಕುಂಭಮೇಳದೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಚಿಕ್ಕೋಡಿಯ ಚರಮೂರ್ತಿ ಮಠದ ಸಂಪಾದನಾ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಾವಿತ್ರಮ್ಮ ಪಾಟೀಲ, ರಾಮು ಶಿರಡೋಣಿ, ಕಲ್ಲಪ್ಪ ಜನವಾಡೆ, ಹನುಮಂತ ಶಾಸ್ತ್ರಿ, ಬಸವಪ್ರಭು ಕುಂಡ್ರೂಕ, ಶರತ ಪಾಟೀಲ, ಗೌತಿ ಶಿಂಧಿಹಟ್ಟಿ, ಲಗಮಣ್ಣಾ ತೋರಣಹಳ್ಳಿ ಇತರರು ಇದ್ದರು.



ಚಿಕ್ಕೋಡಿ: ತಾಲೂಕಿನ ಮಜಲಟ್ಟಿ ಗ್ರಾಮದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಸದ್ಗುರು ಬಸವಪ್ರಭು ಮಹಾರಾಜರ ಪ್ರಥಮ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ನಿಡಸೋಶಿಯ ಸಿದ್ಧ ಸಂಸ್ಥಾನ ಮಠದ ಪಂಚಮ ಶಿವಲಿಂಗೇಶ್ವರ ಸ್ವಾಮೀಜಿ ಮಾತನಾಡಿದರು. ಮೌಜಿ ವಡಗಾಂವದ ಆದಿನಾಥ ಮಹಾರಾಜರು, ಕಾರ್ಯಕ್ರಮದಲ್ಲಿ ಸಾವಿತ್ರಮ್ಮ ಪಾಟೀಲ, ರಾಮು ಶಿರಡೋಣಿ, ಕಲ್ಲಪ್ಪ ಜನವಾಡೆ, ಹನುಮಂತ ಶಾಸ್ತ್ರಿ, ಬಸವಪ್ರಭು ಕುಂಡ್ರೂಕ, ಶರತ ಪಾಟೀಲ, ಗೌತಿ ಶಿಂಧಿಹಟ್ಟಿ, ಇತರರು ಇದ್ದರು.

ಶೀಘ್ರದಲ್ಲೇ ನಿರಂತರ ನೀರು | ಸಚಿವ ಸತೀಶ ಜಾರಕಿಹೊಳಿ ಸ್ಪಷ್ಟನೆ

24X7 ನೀರು ಯೋಜನೆ ಪೂರ್ಣಗೊಂಡಿಲ್ಲ

•ಬೆಳಗಾವಿ: ಬೆಳಗಾವಿ ನಗರದಲ್ಲಿ 24★7 ಗಂಟೆಗಳ ನಿರಂತರ ನೀರು ಸರಬರಾಜು ಯೋಜನೆಯ ಕಾಮಗಾರಿಗಳು ಇನ್ನೂ ಸಂಪೂರ್ಣವಾಗಿ ಪೂರ್ಣಗೊಂಡಿಲ್ಲ ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದರು.



ಮಂಗಳವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಸ್ತುತ ಕೆಲ ಪ್ರದೇಶಗಳಲ್ಲಿ ಹದಿನೈದು ದಿನಕ್ಕೊಮ್ಮೆ ಮಾತ್ರ ನೀರು ಪೂರೈಕೆಯಾಗುತ್ತಿರುವ ಕುರಿತು ಮಾಧ್ಯಮ ಪ್ರತಿನಿಧಿಗಳು ಕೇಳಿದ ಪ್ರಶ್ನೆಗೆ ಸ್ಪಷ್ಟನೆ ನೀಡಿದರು.

ನಗರದಲ್ಲಿ ಲಭ್ಯವಿರುವ ನೀರಿನ ಪ್ರಮಾಣ, ವಿತರಣಾ ವ್ಯವಸ್ಥೆ ಹಾಗೂ ತಾಂತ್ರಿಕ ಅಡಚಣೆಗಳನ್ನು ಪರಿಗಣಿಸಿ ನೀರು ಪೂರೈಕೆ ಮಾಡಲಾಗುತ್ತಿದೆ. ಯೋಜನೆ ಸಂಪೂರ್ಣವಾಗಿ ಕಾರ್ಯರೂಪಕ್ಕೆ ಬಂದ ಬಳಿಕ ನಿರಂತರ ನೀರು ಸರಬರಾಜಿನ ಉದ್ದೇಶವನ್ನು ಸಾಧಿಸಲಾಗುವುದು ಎಂದು ಅವರು ಹೇಳಿದರು.

ಧಾರವಾಡ ಕೈಗಾರಿಕಾ ಪ್ರದೇಶಕ್ಕೆ ಹೆಚ್ಚುವರಿ ನೀರು ಪೂರೈಸುತ್ತಿಲ್ಲ: ಧಾರವಾಡ ಕೈಗಾರಿಕಾ ಪ್ರದೇಶಕ್ಕೆ ಹೆಚ್ಚುವರಿಯಾಗಿ ನೀರು ಪೂರೈಸಲಾಗುತ್ತಿದೆ ಎಂಬ ಆರೋಪಗಳನ್ನು ತಳ್ಳಿಹಾಕಿದ ಸಚಿವರು, ಧಾರವಾಡ ಕೈಗಾರಿಕಾ ಪ್ರದೇಶಕ್ಕೆ ಯಾವುದೇ ಹೆಚ್ಚುವರಿ ನೀರು ಪೂರೈಕೆ ಮಾಡಲಾಗುತ್ತಿಲ್ಲ, ಕೈಗಾರಿಕೆಗಳಿಗೆ ನೀರು ಪೂರೈಕೆ ಮಾಡುವುದಕ್ಕೂ ನಿಗದಿತ ನಿಯಮಗಳು ಮತ್ತು ಮಿತಿಗಳಿದ್ದು, ಅವುಗಳ ವ್ಯಾಪ್ತಿಯಲ್ಲಿಯೇ ನೀರು ಒದಗಿಸಲಾಗುತ್ತಿದೆ ಎಂದು ಹೇಳಿದರು.

ಬಳಕೆಗೆ ಅವಕಾಶವಿಲ್ಲ

ಖಾಸಗಿ ಕೈಗಾರಿಕೆಗಳು ತಮ್ಮ ಇಚ್ಛೆಯಂತೆ ನೀರು ಸಾಗಿಸಲು ಅಥವಾ ಬಳಕೆ ಮಾಡಲು ಅವಕಾಶವಿಲ್ಲ. ನೀರಿನ ಬಳಕೆ ಮತ್ತು ಸಾಗಣೆಗೆ ಸಂಬಂಧಿಸಿದ ಕಾನೂನು ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗುತ್ತದೆ. ಜಿಲ್ಲೆಯಲ್ಲಿ ಕುಡಿಯುವ ನೀರಿನ ಲಭ್ಯತೆಗೆ ಮೊದಲ ಆದ್ಯತೆ ನೀಡಲಾಗುತ್ತಿದ್ದು, ಸಾರ್ವಜನಿಕರ ಅಗತ್ಯಗಳಿಗೆ ಯಾವುದೇ ತೊಂದರೆಯಾಗದಂತೆ ಸರ್ಕಾರ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ಸಚಿವ ಜಾರಕಿಹೊಳಿ ಹೇಳಿದರು.

ಪಾಲಿಕೆ ವಿರುದ್ಧ ಅಸಮಾಧಾನ

ಮಹಾನಗರ ಪಾಲಿಕೆಯ ಕಾರ್ಯವೈಖರಿಯ ಕುರಿತು ಪ್ರತಿಕ್ರಿಯಿಸಿದ ಸಚಿವರು, ಸ್ಥಳೀಯ ನೀರಿನ ಸಮಸ್ಯೆ ಸೇರಿದಂತೆ ವಿವಿಧ ನಾಗರಿಕ ಸಮಸ್ಯೆಗಳನ್ನು ಮಹಾನಗರ ಪಾಲಿಕೆ ಸರ್ಕಾರದ ಗಮನಕ್ಕೆ ಸಮರ್ಪಕವಾಗಿ ತರುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಸಮಸ್ಯೆಗಳ ಕುರಿತು ಸ್ಪಷ್ಟ ಮತ್ತು ಸಮಗ್ರ ಮಾಹಿತಿ ದೊರೆತರೆ ಮಾತ್ರ ಸರ್ಕಾರದಿಂದ ಅಗತ್ಯ ಕ್ರಮ ಕೈಗೊಂಡು ಸೂಕ್ತ ಪರಿಹಾರ ಕಲ್ಪಿಸಲು ಸಾಧ್ಯವಾಗುತ್ತದೆ ಎಂದು ಸಚಿವ ಜಾರಕಿಹೊಳಿ ಹೇಳಿದರು.

ಬೆಳಗಾವಿ ಜಿಲ್ಲಾಧಿಕಾರಿ ಕಚೇರಿ ನವೀಕರಣ ಕಾಮಗಾರಿ

ಸಚಿವ ಜಾರಕಿಹೊಳಿ ಖುದ್ದಾಗಿ ಪರಿಶೀಲನೆ

•ಬೆಳಗಾವಿ: ಇಲ್ಲಿನ ಜಿಲ್ಲಾಧಿಕಾರಿ ಕಚೇರಿಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿರುವ ನವೀಕರಣ ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆ ಸಚಿವರಾದ ಸತೀಶ್ ಜಾರಕಿಹೊಳಿ ಅವರು ಮಂಗಳವಾರ ಖುದ್ದಾಗಿ ವೀಕ್ಷಿಸಿ, ಪರಿಶೀಲನೆ ನಡೆಸಿದರು.

ಕಚೇರಿ ಆವರಣದ ಸೌಂದರ್ಯೀಕರಣ ಮತ್ತು ಸಾರ್ವಜನಿಕ ಸೌಲಭ್ಯಗಳ ವೃದ್ಧಿಗೆ ಸರ್ಕಾರ ಆದ್ಯತೆ ನೀಡಿದ್ದು, ಕಾಮಗಾರಿಗಳನ್ನು ಗುಣಮಟ್ಟದಿಂದ ಮತ್ತು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವಂತೆ ಸಚಿವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸುಸಜ್ಜಿತ ರಸ್ತೆ, ವಿಶಾಲ ಪಾರ್ಕಿಂಗ್ ವ್ಯವಸ್ಥೆ ಜಿಲ್ಲಾಧಿಕಾರಿ ಕಚೇರಿಗೆ ಪ್ರತಿದಿನ ನೂರಾರು ಸಾರ್ವಜನಿಕರು ಬಂದು ಹೋಗುವುದರಿಂದ, ಅವರಿಗೆ ಯಾವುದೇ ತೊಂದರೆಯಾಗದಂತೆ ಸಮಗ್ರ ಆವರಣ ಯೋಜನೆಯನ್ನು ರೂಪಿಸಲಾಗಿದೆ. ಕಚೇರಿ ಆವರಣದಲ್ಲಿ ಸುಸಜ್ಜಿತ ರಸ್ತೆಗಳ ನಿರ್ಮಾಣ ಹಾಗೂ ಸಾರ್ವಜನಿಕರ ವಾಹನಗಳ ನಿಲುಗಡೆಗಾಗಿ ವಿಶಾಲವಾದ ಪಾರ್ಕಿಂಗ್ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಶನ್ ಅವರು ಸಚಿವರಿಗೆ ನಕ್ಷೆಯ ಮೂಲಕ ವಿವರಿಸಿದರು. ಜಿಲ್ಲಾಧಿಕಾರಿ ಮೊಹಮ್ಮದ್ ರೋಶನ, ಜಿಪಂ ಸಿಇಒ ರಾಹುಲ್ ಶಿಂಧೆ, ಬೆಳಗಾವಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ರಾಮರಾಜನ್ ಹಾಗೂ ಲೋಕೋಪಯೋಗಿ ಇಲಾಖೆಯ ಉನ್ನತ ಅಧಿಕಾರಿಗಳು ಉಪಸ್ಥಿತರಿದ್ದರು.

ಹಲ್ಮಿಡಿ ಶಾಸನದ ಪ್ರತಿಕೃತಿ ವೀಕ್ಷಣೆ

ಇದೇ ಸಂದರ್ಭದಲ್ಲಿ ಕಚೇರಿ ಆವರಣದಲ್ಲಿ ಹೊಸದಾಗಿ ನಿರ್ಮಿಸಲಾಗುತ್ತಿರುವ ನೂತನ ಧ್ವಜ ಸ್ತಂಭದ ಕಾಮಗಾರಿಯನ್ನು ಸಚಿವರು ವೀಕ್ಷಿಸಿದರು. ಅಷ್ಟೇ ಅಲ್ಲದೆ, ಕನ್ನಡದ ಹೆಮ್ಮೆಯ ಸಂಕೇತವಾಗಿ ಆವರಣದಲ್ಲಿ ಸ್ಥಾಪಿಸಲಾಗಿರುವ ಐತಿಹಾಸಿಕ ಹಲ್ಮಿಡಿ ಶಾಸನದ ಪ್ರತಿಕೃತಿಯ ಸದ್ಯದ ಸ್ಥಿತಿಗತಿ ಹಾಗೂ ಅದರ ಸಂರಕ್ಷಣೆಯ ಕುರಿತು ಲೋಕೋಪಯೋಗಿ ಇಲಾಖೆಯ ಮುಖ್ಯ ಇಂಜಿನಿಯರ್‌ಗಳು ಮತ್ತು ಜಿಲ್ಲಾಧಿಕಾರಿಗಳಿಂದ ಸಂಪೂರ್ಣ ಮಾಹಿತಿಯನ್ನು ಸಚಿವರು ಪಡೆದುಕೊಂಡರು.



ಆಕ್ಷೇಪಣೆಗೆ ಆಹ್ವಾನ

•ಬೆಳಗಾವಿ: ಬೆಳಗಾವಿ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಜೂನ್ 19 ರಂದು ಜರುಗಿದ ಡಿಪಿಸಿ ಸಮಿತಿ ಸಭೆಯ ನಡಾವಳಿಯಂತೆ, ಕರವಸೂಲಿಗಾರ, ಕ್ಲರ್ಕ್/ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್‌ಗಳು ವೃಂದದಿಂದ ಗ್ರೇಡ್–2 ಕಾರ್ಯದರ್ಶಿ/ದ್ವಿತೀಯ ದರ್ಜೆ ಲೆಕ್ಕ ಸಹಾಯಕ ಹುದ್ದೆಗೆ ಸೇವೆಯೊಳಗೆ ಆಂತರಿಕ ನೇಮಕಾತಿ ಮಾಡಲು ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಸಂಭವನೀಯ ಪಟ್ಟಿಗಳನ್ನು ಜಿಲ್ಲಾ ಪಂಚಾಯತಿಯ ವೆಬ್‌ಸೈಟ್ https://zpbelagavi.karnataka.gov.in ನಲ್ಲಿ ಹಾಗೂ ತಾಲೂಕು ಪಂಚಾಯತ, ಗ್ರಾಮ ಪಂಚಾಯತ ನೋಟಿಸ್ ಬೋರ್ಡಗಳಿಗೆ ಪ್ರಚುರ ಪಡಿಸಲಾಗಿದೆ. ಸದರಿ ತಾತ್ಕಾಲಿಕ ಸಂಭವನೀಯ ಪಟ್ಟಿಗೆ ಆಕ್ಷೇಪಣೆಗಳಿದ್ದರೆ ಲಿಖಿತವಾಗಿ ಸಂಬಂಧಿಸಿದ ದಾಖಲಾತಿಗಳೊಂದಿಗೆ ಜೂನ್ 29 ರೊಳಗಾಗಿ ನೇರವಾಗಿ ಜಿಲ್ಲಾ ಪಂಚಾಯತ ಕಾರ್ಯಾಲಯಕ್ಕೆ ಸಲ್ಲಿಸಲು ಸೂಚಿಸಲಾಗಿದೆ. ಆಕ್ಷೇಪಣೆಗಳನ್ನು ಜೂ. 30 ರಂದು ಜಿಲ್ಲಾ ಪಂಚಾಯತ ಕಾರ್ಯಾಲಯದಲ್ಲಿ ಪರಿಶೀಲಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಛತ್ರಪತಿ ಶಾಹು ಮಹಾರಾಜರ ಜಯಂತಿ ಆಚರಿಸಿ



•ಬೆಳಗಾವಿ: ಛತ್ರಪತಿ ಶಾಹು ಮಹಾರಾಜರ ಜಯಂತಿಯನ್ನು ಕರ್ನಾಟಕ ಸರ್ಕಾರದವು ಅಧಿಕೃತವಾಗಿ ಆಚರಿಸುವಂತೆ ಹಾಗೂ ಬೆಳಗಾವಿ ನಗರದಲ್ಲಿ ಮಂಜೂರಾಗಿರುವ ಶಾಹು ಮಹಾರಾಜರ ಪುತ್ಥಳಿ ಶೀಘ್ರ ಸ್ಥಾಪಿಸುವಂತೆ ಬೆಳಗಾವಿ ಜಿಲ್ಲಾ ಛಲವಾದಿ ಮಹಾಸಭಾ ಸಂಘಟನೆಯ ಕಾರ್ಯಕರ್ತರು ಮಂಗಳವಾರ ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಅವರಿಗೆ ಮನವಿ ಮಾಡಿಕೊಂಡರು.

ಛತ್ರಪತಿ ಶಾಹು ಮಹಾರಾಜರು ಸಾಮಾಜಿಕ ಪ್ರಜಾಪ್ರಭುತ್ವದ ರೂವಾರಿಯಾಗಿದ್ದು, ಹಿಂದುಳಿದ ವರ್ಗಗಳು ಮತ್ತು ಅಸ್ಪೃಶ್ಯರ ಶಿಕ್ಷಣ, ಸಾಮಾಜಿಕ ಸ್ಥಾನಮಾನ ಹಾಗೂ ಅಧಿಕಾರದಲ್ಲಿ ಸಮಾನ ಪಾಲುದಾರಿಕೆಗೆ ಮಹತ್ತರ ಕೊಡುಗೆ ನೀಡಿದ ಮಹಾನ್ ಸಮಾಜ ಸುಧಾರಕರಾಗಿದ್ದಾರೆ ಎಂದು ಮನವಿಯಲ್ಲಿ ತಿಳಿಸಿದರು. 1874ರ ಜೂನ್ 26ರಂದು ಜನಿಸಿದ ಶಾಹು ಮಹಾರಾಜರು ಮಹಾತ್ಮ ಜ್ಯೋತಿರಾವ್ ಫುಲೆ ಅವರ ಚಿಂತನೆಗಳನ್ನು ಮುಂದುವರಿಸಿ ಸಾಮಾಜಿಕ ಪರಿವರ್ತನೆಗೆ ಮುನ್ನುಡಿ ಬರೆದಿದ್ದರು. ವಿಧವಾ ಪುನರ್ವಿವಾಹ, ಅಸ್ಪೃಶ್ಯತೆ ನಿರ್ಮೂಲನೆ, ಅಂತರಜಾತಿ ವಿವಾಹ, ದೇವದಾಸಿ ಪದ್ಧತಿ ನಿರ್ಮೂಲನೆ ಸೇರಿದಂತೆ ಹಲವು ಪ್ರಗತಿಪರ ಸುಧಾರಣೆಗಳನ್ನು ಜಾರಿಗೆ ತಂದಿದ್ದರು. ಅಲ್ಲದೆ, ಡಾ. ಬಿ.ಆರ್. ಅಂಬೇಡ್ಕರ್ ಅವರ ಉನ್ನತ ಶಿಕ್ಷಣಕ್ಕೂ ಸಹಕಾರ ನೀಡಿದ ಮಹಾನ್ ನಾಯಕರಾಗಿದ್ದರು ಎಂದು ಮಹಾಸಭೆ ಸ್ಮರಿಸಿದೆ ಎಂದರು.

ಜೂನ್ 26ರಂದು ನಡೆಯಲಿರುವ ಶಾಹು ಮಹಾರಾಜರ ಜಯಂತಿಯನ್ನು ರಾಜ್ಯ ಸರ್ಕಾರದಿಂದ ಅಧಿಕೃತವಾಗಿ ಆಚರಿಸಿ, ಅವರ ಸಾಮಾಜಿಕ ಕೊಡುಗೆಗಳನ್ನು ಜನರಿಗೆ ಪರಿಚಯಿಸಬೇಕು ಎಂದು ಒತ್ತಾಯಿಸಲಾಯಿತು. ಇದೇ ವೇಳೆ, ಬೆಳಗಾವಿಯ ಕೆ.ಎಲ್.ಇ. ಆಸ್ಪತ್ರೆ ಸಮೀಪದ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಬೆಳಗಾವಿ ಮಹಾನಗರ ಪಾಲಿಕೆಯಿಂದ ಮಂಜೂರಾಗಿರುವ ಛತ್ರಪತಿ ಶಾಹು ಮಹಾರಾಜರ ಪುತ್ಥಳಿಯನ್ನು ಸರ್ಕಾರ ಕೂಡಲೇ ಸ್ಥಾಪಿಸಬೇಕೆಂದು ಛಲವಾದಿ ಮಹಾಸಭಾ ಜಿಲ್ಲಾ ಘಟಕವು ಒತ್ತಾಯಿಸಿದೆ.

ಈ ವೇಳೆ ಛಲವಾದಿ ಮಹಾಸಭಾ ಸಂಘಟನೆಯ ಅಧ್ಯಕ್ಷರು ಉಪಾಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರು ಸೇರಿದಂತೆ ಹಲವು ಕಾರ್ಯಕರ್ತರು ಪಾಲ್ಗೊಂಡಿದರು.

ಗಿಡ ಕಡಿಯುವವರ ವಿರುದ್ಧ ಕ್ರಮ ಕೈಗೊಳ್ಳಿ

•ಸವದತ್ತಿ: ತಾಲೂಕಿನ ಹಂಚಿನಾಳ ಗ್ರಾಮದ ಸುತ್ತಮುತ್ತ ಅರಣ್ಯ ಇಲಾಖೆಯವರು ಬೆಳೆಸಿದ 1,600 ಹೆಚ್ಚು ಸಸಿಗಳಲ್ಲಿ 600 ಮಾತ್ರ ಉಳಿದಿವೆ. ಅವುಗಳನ್ನಾದರೂ ರಕ್ಷಿಸಬೇಕು ಎಂದು ಜಯ ಕರ್ನಾಟಕ ಗ್ರಾಮ ಘಟಕ ಹಂಚಿನಾಳ ಅವರು ವಲಯ ಅರಣ್ಯ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಸಂಘಟನೆ ಮುಖಂಡರಾದ ದೇವಪ್ಪ ಮಾದರ್, ರಂಗಪ್ಪ ಚನ್ನದಾಸರ ಮಾತನಾಡಿ, ತಾಲೂಕಿನ ಹಿರೇಕುಂಬಿ ರಸ್ತೆ ಮಾರ್ಗದ ಅಕ್ಕ ಪಕ್ಕದಲ್ಲಿ ಅರಣ್ಯ ಇಲಾಖೆಯವರು ಸಸಿಗಳನ್ನು ನೆಟ್ಟು ಪಾಲನೆ ಪೋಷಣೆ ಮಾಡಿ ಅವುಗಳನ್ನು ಬೆಳೆಸಿದ್ದರು. ಈಗ ಕೆಲವು ದುಷ್ಕರ್ಮಿಗಳು ಅವುಗಳನ್ನು ಕಡಿದು ಹಾನಿ ಮಾಡುತ್ತಿದ್ದಾರೆ. ಗ್ರಾಮದಿಂದ ಹೋಗುವ ಅಳಗವಾಡಿ ರಸ್ತೆ ಅಕ್ಕಪಕ್ಕದಲ್ಲಿನ ಸಸಿಗಳನ್ನು ಕಡಿದು ಹಾನಿ ಮಾಡಿದ್ದಾರೆ. ಆದ್ದರಿಂದ ಅಂಥವರ ಮೇಲೆ ಕಾನೂನಿನ ಪ್ರಕಾರ ಕ್ರಮ ಜರುಗಿಸಬೇಕು ಮತ್ತು ಪರಿಸರ ಹಾಳು ಮಾಡುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಗಿಡ ಮರಗಳನ್ನು ನಾಶ ಮಾಡಿದವರ ಮೇಲೆ ಕ್ರಮ ಜರುಗಿಸಬೇಕು ಎಂದರು.

ಈ ಸಂದರ್ಭದಲ್ಲಿ ಸಂಘಟನೆಯ ಮುಖಂಡರಾದ ಮಂಜುನಾಥ್ ಜಟ್ಟೆನ್ನವರ, ಬಸನಗೌಡ ಪಾಟೀಲ್, ದೇವಪ್ಪ ಪಾಣೆಗಟ್ಟಿ, ಸಿದ್ದಪ್ಪ ಹುಲಗಣ್ಣವರು ಉಪಸ್ಥಿತರಿದ್ದರು.

ಈ ಕುರಿತು ಮಾತನಾಡಿದ ಪ್ರಾದೇಶಿಕ ವಲಯ ಅರಣ್ಯ ಅಧಿಕಾರಿ ಸಂಜೀವ್ ಸಂಸುದ್ದಿ ನಮ್ಮ ಇಲಾಖೆಯವರು ನೆಟ್ಟಿರುವ ಸಸಿಗಳನ್ನು ನಾವು ಅಷ್ಟೇ ಜಾಗೃತಿಯಿಂದ ರಕ್ಷಣೆ ಮಾಡುತ್ತಿದ್ದೇವೆ. ಅಕ್ರಮವಾಗಿ ಗಿಡಮರಗಳನ್ನು ಕಡಿದು ನಾಶ ಮಾಡುವವರ ಮೇಲೆ ಪ್ರಕರಣ ದಾಖಲಿಸಿ ನ್ಯಾಯಾಲಯಕ್ಕೆ ಒಪ್ಪಿಸಲಾಗಿದೆ ಎಂದರು.



100 ಎಂಎಲ್‌ಡಿ ನೀರು ಪೂರೈಕೆಗೆ ಯೋಜನೆ



•ಬೆಳಗಾವಿ: ನಗರದ ಕುಡಿಯುವ ನೀರಿನ ಲಭ್ಯತೆ ಹಾಗೂ ನೀರು ಸರಬರಾಜು ವ್ಯವಸ್ಥೆಯ ಕುರಿತು ಪರಿಶೀಲನೆ ನಡೆಸುವ ಉದ್ದೇಶದಿಂದ ರಕ್ಕಸಕೊಪ್ಪ ಡ್ಯಾಮ್‌ನಲ್ಲಿ ನೀರಿನ ಪ್ರಮಾಣವನ್ನು ಮಂಗಳವಾರ ವೀಕ್ಷಿಸಲಾಯಿತು.

ಈ ಸಂದರ್ಭದಲ್ಲಿ ಮಹಾಪೌರ ಪ್ರೀತಿ ಕಾಮಕರ, ಉಪ ಮಹಾಪೌರ ಹಣಮಂತ ಕೊಂಗಾಲಿ ಹಾಗೂ ದಕ್ಷಿಣ ಕ್ಷೇತ್ರದ ಶಾಸಕ ಅಭಯ ಪಾಟೀಲ ಅವರ ನೇತೃತ್ವದಲ್ಲಿ ನಗರಸೇವಕರು ಮತ್ತು ವಿವಿಧ ಇಲಾಖೆಗಳ ಅಧಿಕಾರಿಗಳ ತಂಡ ಡ್ಯಾಮ್‌ಗೆ ಭೇಟಿ ನೀಡಿ ಪರಿಸ್ಥಿತಿಯನ್ನು ಅವಲೋಕಿಸಿತು. ಬಳಿಕ ನೀರು ಸರಬರಾಜು ಯೋಜನೆ ಕುರಿತು ಗಂಭೀರ ಚರ್ಚೆ ನಡೆಸಲಾಯಿತು.

ಸಭೆಯಲ್ಲಿ ಶಾಸಕ ಅಭಯ್ ಪಾಟೀಲ ಮಾತನಾಡಿ ಅವರು, ಅಧಿಕಾರಿಗಳ ಮಾಹಿತಿ ಪ್ರಕಾರ, ಪ್ರಸ್ತುತ ರಕ್ಕಸ್ಕೊಪ್ ಡ್ಯಾಮ್‌ನಿಂದ 20 ಎಂಎಲ್‌ಡಿ, ಹಿಡಕಲ್ ಡ್ಯಾಮ್‌ನಿಂದ 60 ಎಂಎಲ್‌ಡಿ ನೀರು ಪೂರೈಕೆ ಮಾಡಲಾಗುತ್ತಿದೆ. ಇದಲ್ಲದೆ ಟ್ಯಾಂಕರ್‌ಗಳು ಮತ್ತು ಬೋರ್‌ವೆಲ್‌ಗಳ ಮೂಲಕ ಹೆಚ್ಚುವರಿ ನೀರು ಒದಗಿಸಿ, ನಗರದ ಅಗತ್ಯಕ್ಕೆ ಅನುಗುಣವಾಗಿ ಒಟ್ಟು 100 ಎಂಎಲ್‌ಡಿ ನೀರನ್ನು ಪ್ರತಿದಿನ ಪೂರೈಸುವ ಯೋಜನೆ ರೂಪಿಸಲಾಗಿದೆ ಎಂದರು.

ರಕ್ಕಸಕೊಪ್ಪ ಡ್ಯಾಮ್ ನೀರಿನ ಪ್ರಮಾಣ ವೀಕ್ಷಣೆ

ನಗರದಲ್ಲಿ ನೀರಿನ ಕೊರತೆ ಉಂಟಾಗುವ ಸಾಧ್ಯತೆಯನ್ನು ಗಮನದಲ್ಲಿಟ್ಟುಕೊಂಡು, ನಾಗರಿಕರು ನೀರನ್ನು ಮಿತವಾಗಿ ಹಾಗೂ ಜವಾಬ್ದಾರಿಯಿಂದ ಬಳಸುವಂತೆ ಮಹಾಪೌರರು ಮನವಿ ಮಾಡಿದ್ದಾರೆ. ನೀರಿನ ಸಂರಕ್ಷಣೆಗೆ ಎಲ್ಲರೂ ಸಹಕರಿಸಿ ಎಂದರು.

ಈ ವೇಳೆ ಮಹಾಪೌರ ಪ್ರೀತಿ ಕಾಮಕರ, ಉಪಮಾಹಾಪೌರ ಹಣಮಂತ ಕೊಂಗಾಲಿ, ಮುರುಗೇಂದ್ರಗೌಡ ಪಾಟೀಲ, ಸೇರಿದಂತೆ ಇತರರು ಇದ್ದರು.

ಅಂತಾರಾಷ್ಟ್ರೀಯ ಯೋಗ ದಿನಾಚರಣೆ



•ಮೂಡಲಗಿ: ಸಮೀಪದ ಅರಭಾವಿಯ ಕಿತ್ತೂರ ರಾಣಿ ಚನ್ನಮ್ಮ ತೋಟಗಾರಿಕೆ ಮಹಾವಿದ್ಯಾಲಯದಲ್ಲಿ ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಯಿತು.

ಈ ಕಾರ್ಯಕ್ರಮಕ್ಕೆ ಪತಂಜಲಿ ಯೋಗ ಸಮಿತಿ, ಯೋಗಗುರು ಚಿದಾನಂದ ಮೆಣಸಿನಕಾಯಿ ಮುಖ್ಯ ಅತಿಥಿಯಾಗಿ ಆಗಮಿಸಿ ಸೂರ್ಯ ನಮಸ್ಕಾರ ಹಾಗೂ ಯೋಗಾಭ್ಯಾಸಗಳನ್ನು ಹೇಳಿಕೊಟ್ಟರು. ನಂತರ ಅವರು ಯೋಗಾಭ್ಯಾಸದ ಕುರಿತು ಮಾತನಾಡಿದರು ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಲು ಯೋಗದ ಮಹತ್ವವನ್ನು ವಿವರಿಸಿದರು. ವಿದ್ಯಾರ್ಥಿಗಳಿಗೆ ಪ್ರತಿದಿನ ಯೋಗಾಭ್ಯಾಸ ಮಾಡಲು ಪ್ರೇರೇಪಿಸಿದರು.

ಈ ಕಾರ್ಯಕ್ರಮದಲ್ಲಿ ಡಾ. ಎಸ್.ಜಿ. ಪ್ರವೀಣಕುಮಾರ, ಸಹಾಯಕ ಪ್ರಾಧ್ಯಾಪಕರು ದೈಹಿಕ ಶಿಕ್ಷಣ ಮುಂದಾಳು ವಹಿಸಿದರು. ಕಾರ್ಯಕ್ರಮದಕೊನೆಗೆ ಅತಿಥಿಗಳಿಗೆ, ಯೋಗಾಭ್ಯಾಸದಲ್ಲಿ ಪಾಲ್ಗೊಂಡ ಎಲ್ಲ ಶಿಕ್ಷಕ, ಶಿಕ್ಷಕೇತರ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳಿಗೆ ವಂದಿಸಿದರು.

ಎಸ್ಐಆರ್ ಸಿಬ್ಬಂದಿಗೆ ತರಬೇತಿ

•ಬೆಳಗಾವಿ: ಉತ್ತರ ಮತಕ್ಷೇತ್ರದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯನಿರ್ವಹಿಸಲಿರುವ ಮತಗಟ್ಟೆ ಅಧಿಕಾರಿಗಳು, ಮೇಲ್ವಿಚಾರಕರು, ಇತರೆ ಸಿಬ್ಬಂದಿ ಹಾಗೂ ರಾಷ್ಟ್ರಮಟ್ಟದ ವಿವಿಧ ರಾಜಕೀಯ ಪಕ್ಷಗಳ ಮತಗಟ್ಟೆ ಏಜೆಂಟರುಗಳಿಗೆ ಮಂಗಳವಾರ ನಗರದ ಸರ್ದಾರ್ ಶಾಲೆಯಲ್ಲಿ ಮಹಾನಗರ ಪಾಲಿಕೆಯಿಂದ ತರಬೇತಿ ಹಾಗೂ ಮಾಹಿತಿ ಕಾರ್ಯಾಗಾರ ಆಯೋಜಿಸಲಾಗಿತ್ತು.

ಪಾಲಿಕೆ ಉತ್ತರ ಭಾಗದ ಚುನಾವಣಾ ಅಧಿಕಾರಿ ಹಾಗೂ ಆಡಳಿತ ವಿಭಾಗದ ಉಪ ಆಯುಕ್ತ ಉದಯಕುಮಾರ್ ಟಿ ಹಾಗೂ ದಕ್ಷಿಣ ಭಾಗದ ಸ.ಚುನಾವಣಾಧಿಕಾರಿ, ಲಕ್ಷ್ಮೀ ನಿಪ್ಪಾಣಿಕರ್ ಪ್ರಾತ್ಯಕ್ಷಿಕೆಸಹಿತ ಮಾಹಿತಿ ನೀಡಿ ಸಿಬ್ಬಂದಿ ಪ್ರಶ್ನೆಗಳಿಗೆ ಪರಿಹಾರ ನೀಡಿದರು. ಜೂ.30 ರಿಂದ ಜು.29ರವರೆಗೆ ಎಸ್ಐಆರ್ ಕಾರ್ಯನಿರ್ವಹಣಾ ಅವಧಿಯಾಗಿದ್ದು, ಸಿಬ್ಬಂದಿಗಳು ತರಬೇತಿಯಲ್ಲಿ ಸರಿಯಾದ ಮಾಹಿತಿ ಪಡೆದುಕೊಂಡು ಯಾವುದೇ ಲೋಪದೋಷಗಳಾಗದಂತೆ ನಿಗದಿತ ಅವಧಿಯಲ್ಲಿ ಸರಿಯಾಗಿ ಕಾರ್ಯನಿರ್ವಹಿಸಬೇಕೆಂದು ಸೂಚಿಸಲಾಯಿತು.

ಮಾಹಿತಿ ಕಾರ್ಯಾಗಾರದಲ್ಲಿ ನಗರಸೇವಕರು ಹಾಗೂ ಸಂಪನ್ಮೂಲ ವ್ಯಕ್ತಿಗಳಾದ ಆನಂದ ಯಲ್ಲಟ್ಟಿಕರ, ಗೌತಮ, ಗೊರಗೊಂಡ, ಯಡ್ರಾವಿ, ಜಗದೀಶ ಯಮಕನಮರಡಿ ಇತರರು ಉಪಸ್ಥಿತರಿದ್ದರು.



ಬಸಾಪುರದಲ್ಲಿ ಪರಿಸರ ದಿನಾಚರಣೆ



•ಹಿರೇಬಾಗೇವಾಡಿ: ಪಟ್ಟಣದ ಯೋಜನಾ ಕಚೇರಿ ವ್ಯಾಪ್ತಿಯ ಸಮೀಪದ ಬಸಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಂಗಳವಾರ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಹಿರೇಬಾಗವಾಡಿ ವತಿಯಿಂದ ಪರಿಸರ ದಿನಾಚರಣೆ ಮತ್ತು ಮಾಹಿತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಶಿಕ್ಷಕ ರಮೇಶ ಮುನಿಯಪ್ಪನವರ ಮಾತನಾಡಿ, ಶಾಲಾ ಶಿಕ್ಷಕರು ಪರಿಸರ ರಕ್ಷಣೆಯಿಂದ ನಮಗೆ ಆಗುವ ಅನುಕೂಲಗಳ ಬಗ್ಗೆ ತಿಳಿದುಕೊಂಡು ಪರಿಸರಸ್ವಚ್ಛತೆಕಾಪಾಡೊಕೊಳ್ಳಬೇಕು ಮತ್ತು ಪ್ರತಿಯೊಬ್ಬರು ನಮ್ಮ ಹುಟ್ಟು ಹಬ್ಬದಂದು ಒಂದು ಸಸಿ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಬೇಕು ಎಂದರು.

ಮುಖ್ಯೋಪಾಧ್ಯಾಯ ಉಮೇಶ ಹಿರೇಮಠ ಉದ್ಘಾಟನೆ ಮಾಡಿದರು. ಕೃಷಿ ಮೇಲ್ವಿಚಾರಕ ರಿಯಾಜ್ ದರಗಾದ ಮಾತನಾಡಿದರು. ಪ್ರಬಂಧ ಸ್ಪರ್ಧೆ ಮತ್ತು ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ವಲಯದ ಶಾಲೆಗಳ ಶಿಕ್ಷಕರು, ಮಕ್ಕಳು ಸದಸ್ಯರು, ಸೇವಾ ಪ್ರತಿನಿಧಿಗಳು ಭಾಗವಹಿಸಿದ್ದರು.

ಸಮುದಾಯ ಭವನ ನಿರ್ಮಾಣಕ್ಕೆ ಚಾಲನೆ

•ರಾಯಬಾಗ: ತಾಲೂಕಿನ ನಿಪನಾಳ ಗ್ರಾಮದಲ್ಲಿ 2024–25 ನೇ ಸಾಲಿನ ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ 5 ಲಕ್ಷ ವೆಚ್ಚದಲ್ಲಿ ಶ್ರೀ ರೇಣುಕಾದೇವಿ ದೇವಸ್ಥಾನದ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮಹಾವೀರ ಅವರು ಭೂಮಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಸರ್ಕಾರ ಹಲವು ಜನಪರ ಯೋಜನೆಗಳನ್ನು ಜಾರಿಗೊಳಿಸುತ್ತಿದೆ. ಅದರ ಅಂಗವಾಗಿ ನಾವೂ ಹಲವು ಯೋಜನೆಗಳು ತಂದು ಜನರಿಗೆ ಮುಟ್ಟಿಸುವ ಕೆಲಸ ಮಾಡುತ್ತಿದ್ದೇನೆ. ಜನರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂಸರು.

ಈ ಸಂದರ್ಭದಲ್ಲಿ ಶಿವನಗೌಡ ಪಾಟೀಲ, ಜ್ಯೋತಿ ಕೆಂಪಟ್ಟಿ, ಹಾಜಿ ಮುಲ್ಲಾ, ಸಿದ್ರಾಮ್ ಪೂಜೇರಿ, ಆನಂದ ಘೋರ್ಪಡೆ, ಯಲ್ಲಪ್ಪ ಕುರಣೆ, ಕೇದಾರಿ ಜಿದ್ದಿಮಣಿ, ಮಲ್ಲಿಕ ನಧಾಪ್ , ಕಾಶಪ್ಪ ಮೇಗಾಡಿ, ಸಪೀಕ್ ನಧಾಪ್, ನಾಗಪ್ಪ ಪಡತರೆ, ಬಡೇಸಾಹೇಬ್ ನಧಾಪ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಕಿರುಸುದ್ದಿ

ನಾಳೆ ಪ್ರತಿಭಟನೆ

ಬೆಳಗಾವಿ: ನೀಟ್ ಪರೀಕ್ಷೆಯಲ್ಲಿನ ಅಕ್ರಮಗಳು ಹಾಗೂ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣವನ್ನು ಖಂಡಿಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಮತ್ತು ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಿ ಎಬಿವಿಪಿ ನೇತೃತ್ವದಲ್ಲಿ ವಿದ್ಯಾರ್ಥಿಗಳ ಪ್ರತಿಭಟನೆ ನಡೆಸಲಾಗುವುದು ಎಂದು ಸಂಘಟನೆಯ ಜಿಲ್ಲಾ ಸಂಚಾಲಕ ಮಹಾಂತೇಶ ಬಿರ್ಜೂರ್ ತಿಳಿಸಿದ್ದಾರೆ.

ಈ ವಿಚಾರವಾಗಿ ಪತ್ರಿಕಾ ಪ್ರಕಟಣೆ ಬಿಡುಗಡೆ ಮಾಡಿ, ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯಿಂದ ಲಕ್ಷಾಂತರ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದ್ದು, ಪರೀಕ್ಷೆ ರದ್ದುಗೊಳಿಸುವಿಕೆ ಹಾಗೂ ಮರುಪರೀಕ್ಷೆಯ ಅನಿಶ್ಚಿತತೆಯಿಂದ ವಿದ್ಯಾರ್ಥಿಗಳು ತೀವ್ರ ಮಾನಸಿಕ ಒತ್ತಡಕ್ಕೆ ಒಳಗಾಗಿದ್ದಾರೆ ಎಂದು ಆರೋಪಿಸಿದರು.

ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸಬೇಕು, ಅಕ್ರಮಗಳಲ್ಲಿ ಭಾಗಿಯಾದವರ ವಿರುದ್ಧ ಕಠಿಣ ಶಿಕ್ಷೆ ವಿಧಿಸಬೇಕು ಹಾಗೂ ವಿದ್ಯಾರ್ಥಿಗಳ ಹಿತಾಸಕ್ತಿಯನ್ನು ಕಾಪಾಡಬೇಕು ಎಂಬ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಮಹಾಂತೇಶ ಬಿರ್ಜೂರ್, ಜಿಲ್ಲಾ ಸಂಚಾಲಕ ಎಬಿವಿಪಿ ಅವರು ತಿಳಿಸಿದರು.

ಪ್ರತಿಭಟನೆ ಜೂನ್ 24ರಂದು ಬೆಳಿಗ್ಗೆ 11 ಗಂಟೆಗೆ ಬೆಳಗಾವಿಯ ಚೆನ್ನಮ್ಮ ವೃತ್ತದಲ್ಲಿ ನಡೆಯಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ ಎಂದು ಅವರು ಹೇಳಿದರು.

ಇಂದು ನೇರ ಸಂದರ್ಶನ

ಬೆಳಗಾವಿ: ನಗರದ ಕಾ.ರಾ.ವಿ ಆಸ್ಪತ್ರೆ ಹಾಗೂ ಇಲ್ಲಿನ ಚಿಕಿತ್ಸಾಲಯಗಳಿಗೆ ಗುತ್ತಿಗೆ ಆಧಾರದ ಮೇಲೆ 5 ವಿಮಾ ವೈದ್ಯಾಧಿಕಾರಿಗಳನ್ನು (ಮೆರಿಟ್ ಕಮ್ ರೋಸ್ಟರ್) ಮೂಲಕ ನೇರ ಸಂದರ್ಶನದ ಮೂಲಕ ನೇಮಕ ಮಾಡಿಕೊಳ್ಳಲಾಗುವುದು. ಜೂನ್ 24 ರಂದು ಬೆಳಗ್ಗೆ 10.30 ರಿಂದ ಸಂಜೆ 4, ಗಂಟೆಯವರೆಗೆ ಬೆಳಗಾವಿಯ ಕಾ.ರಾ.ವಿ ಆಸ್ಪತ್ರೆಯಲ್ಲಿ ನೇರ ಸಂದರ್ಶನ ನಡೆಯಲಿದ್ದು ಆಸಕ್ತ ಅಭ್ಯರ್ಥಿಗಳು ಭಾಗವಹಿಸಬಹುದಾಗಿದೆ.

ಗೋ ರಕ್ಷಕರ ಬಿಡುಗಡೆಗೆ ಕೇಂದ್ರ ಸರ್ಕಾರಕ್ಕೆ ಒತ್ತಾಯ

ಬೆಳಗಾವಿ: ಮಧ್ಯಪ್ರದೇಶದ ನರಮದಪುರದಲ್ಲಿ 2018-19ರಲ್ಲಿ ನಡೆದ ಘಟನೆಯೊಂದಕ್ಕೆ ಸಂಬಂಧಿಸಿದಂತೆ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ 14 ಗೋ ರಕ್ಷಕರನ್ನು ತಕ್ಷಣ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿ ಕಾಮಧೇನು ಅಯ್ಯಪ್ಪ ಸಾಮಾಜಿಕ ಸೇವಾ ಸಂಸ್ಥೆ ಸದಸ್ಯರು ಜಿಲ್ಲಾಧಿಕಾರಿಗಳ ಮೂಲಕ ಪ್ರಧಾನಮಂತ್ರಿ, ರಾಷ್ಟ್ರಪತಿ ಹಾಗೂ ಕೇಂದ್ರ ಗೃಹ ಸಚಿವರಿಗೆ ಮನವಿ ಸಲ್ಲಿಸಿದರು.

ಸನಾತನ ಹಿಂದೂ ಧರ್ಮದಲ್ಲಿ ಗೋ ಮಾತೆಯನ್ನು ಪೂಜೆ ಮಾಡಲಾಗುತ್ತದೆ. ಗೋಹತ್ಯೆಯನ್ನು ತಡೆಯಲು ತೆರಳಿದ್ದ ಸುಮಾರು 800-1000 ಜನರ ಪೈಕಿ 14 ಜನರನ್ನು ಬಂಧಿಸಿ, ಬಳಿಕ ನ್ಯಾಯಾಲಯವು ಅವರಿಗೆ ಜೀವಾವಧಿ ಶಿಕ್ಷೆ ವಿಧಿಸಿರುವುದಾಗಿ ಉಲ್ಲೇಖಿಸಲಾಗಿದೆ. ಗೋಮಾತೆಯ ರಕ್ಷಣೆಗೆ ಮುಂದಾದವರಿಗೆ ಶಿಕ್ಷೆ ವಿಧಿಸಿರುವುದು ನ್ಯಾಯಸಮ್ಮತವಲ್ಲ ಎಂದು ಅಸಮಾಧಾನ ಹೊರ ಹಾಕಿದರು. ಗೋಹತ್ಯೆ ತಡೆಯಲು ಪ್ರಯತ್ನಿಸಿದವರ ವಿರುದ್ಧ ಕ್ರಮ ಕೈಗೊಳ್ಳುವುದಕ್ಕಿಂತ, ಗೋ ಹಂತಕರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕಿತ್ತು. ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ 14 ಮಂದಿಯನ್ನು ಕೂಡಲೇ ಬಿಡುಗಡೆಗೊಳಿಸುವಂತೆ ಆಗ್ರಹಿಸಿ ಜಿಲ್ಲಾಧಿಕಾರಿಗಳ ಮೂಲಕ ಪ್ರಧಾನಮಂತ್ರಿ, ರಾಷ್ಟ್ರಪತಿ ಹಾಗೂ ಕೇಂದ್ರ ಗೃಹ ಸಚಿವರಿಗೆ ಪತ್ರವನ್ನು ಬರೆಯಲಾಗಿದೆ. ಈ ವೇಳೆ ಗೋ ರಕ್ಷಕ ನಿಲೇಶ, ಪ್ರಕಾಶ ಲಡವಾ, ಆನಂದ ನವಲೆ, ಮಹೇಶ, ಕಿರಣ, ನಾಗರಾಜ್, ರಿತು ಇತರರು ಇದ್ದರು.

ವಿಮಾ ಯೋಜನೆಯಡಿ ನೋಂದಣಿಗೆ ಅವಕಾಶ

ಬೆಳಗಾವಿ: 2026 ನೇ ಸಾಲಿನ ರಾಯಬಾಗ ತಾಲೂಕಿನ ಮುಂಗಾರು ಹಂಗಾಮಿನ ತೋಟಗಾರಿಕೆ ಬೆಳೆಗಳಿಗೆ ಬೆಳೆ ವಿಮೆ ಪಾವತಿಸಲು ರೈತರಿಗೆ ಅವಕಾಶ ಕಲ್ಪಿಸಲಾಗಿದೆ.

ಮರು ವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ ರಾಯಬಾಗ ತಾಲೂಕಿನ ಕಪ್ಪಲಗುದ್ದಿ, ಪಾಲಭಾಂವಿ, ಬ್ಯಾಕೂಡ, ನಂದಿಕುರಳಿ, ನಸಲಾಪೂರ, ಮೊರಬ, ಮೇಖಳಿ, ಸವಸುದ್ದಿ, ಆಲಖನೂರ, ಹಿಡಕಲ್ಲ, ಹುಬ್ಬರವಾಡಿ, ನಿಡಗುಂದಿ, ಚಿಂಚಲಿ , ಕೆಂಪಟ್ಟಿ, ಕುಡಚಿ ಹಾಗೂ ರಾಯಬಾಗ ಗ್ರಾಪಂ, ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿರುವ ಗ್ರಾಮದ ದ್ರಾಕ್ಷೀ ಬೆಳೆಗಾರರು ರೈತರ ವಿಮಾ ವಂತಿಗೆ ರೂ.14000/- ಪ್ರತಿ ಹೆಕ್ಟರ ಪ್ರದೇಶಕ್ಕೆ ಪಾವತಿಸಿ ರೂಪಾಯಿ 280000/- ಗಳ ವರೆಗೆ ವಿಮಾ ಸೌಲಭ್ಯವನ್ನು ಪಡೆಯಬಹುದು. ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ ಭಿಮಾ ಯೋಜನೆಯಡಿ ರಾಯಬಾಗ ತಾಲೂಕಿನ ಕುಡಚಿ ಮತ್ತು ರಾಯಬಾಗ ಹೋಬಳಿ ವ್ಯಾಪ್ತಿಯಲ್ಲಿನ ಎಲ್ಲಾ ಅರಿಶಿನ ಬೆಳೆಗಾರರು ರೈತರ ಪಾಲಿನ ವಿಮಾ ಕಂತು ರೂ. 8210/- ಪ್ರತಿ ಹೆಕ್ಟರ ಪ್ರದೇಶಕ್ಕೆ ಪಾವತಿಸಿ ರೂ. 164200/- ಗಳ ವರೆಗೆ ವಿಮಾ ಸೌಲಭ್ಯ ಪಡೆಯಬಹುದು. ಜುಲೈ 31ರವರೆಗೆ ಕೊನೆಯ ದಿನ ನಿಗಧಿಪಡಿಸಲಾಗಿರುತ್ತದೆ.



ನೇಸರಗಿ: ಸಮೀಪದ ಮತ್ತಿಕೊಪ್ಪದ ಐಸಿಎಆರ್-ಕೆಎಲ್‌ಇ ಕೃಷಿ ವಿಜ್ಞಾನ ಕೇಂದ್ರದಲ್ಲಿ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ರೈತ ಪರ ಯೋಜನೆಯಾದ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯ 23ನೇ ಕಂತಿನ ಹಣ ಬಿಡುಗಡೆ ಸಮಾರಂಭದ ನೇರ ಪ್ರಸಾರವನ್ನು ವೀಕ್ಷಿಸಲು ರೈತರಿಗೆ ವ್ಯವಸ್ಥೆ ಮಾಡಲಾಗಿತ್ತು.


ಎಂಇಎಸ್ ನಿಷೇಧಕ್ಕೆ ಕರವೇ ಆಗ್ರಹ

ಬೆಳಗಾವಿ: ದಶಕಗಳಿಂದ ಬೆಳಗಾವಿ ಜಿಲ್ಲೆಯಲ್ಲಿ ಭಾಷಾ ಸಾಮರಸ್ಯಕ್ಕೆ ಧಕ್ಕೆ ಉಂಟುಮಾಡುವ ಚಟುವಟಿಕೆಗಳನ್ನು ನಡೆಸುತ್ತಿರುವ ಎಂಇಎಸ್ ಸಂಘಟನೆಯನ್ನು ನಿಷೇಧಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಶೆಟ್ಟಿ ಬಣ) ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಿದರು.

ನಗರದ ಚೆನ್ನಮ್ಮ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಕರವೇ ಜಿಲ್ಲಾಧ್ಯಕ್ಷ ಅಭಿಲಾಷ್ ಅವರ ನೇತೃತ್ವದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದ ಕಾರ್ಯಕರ್ತರು, ಸರ್ಕಾರದ ಕನ್ನಡ ಕಡ್ಡಾಯ ನೀತಿಯನ್ನು ಎಂಇಎಸ್ ವಿರೋಧಿಸುತ್ತಿರುವುದು ಕನ್ನಡಿಗರು ಹಾಗೂ ಮರಾಠಿಗರ ನಡುವಿನ ಸಾಮರಸ್ಯವನ್ನು ಹಾಳು ಮಾಡುವ ಪ್ರಯತ್ನವಾಗಿದೆ ಎಂದು ಆರೋಪಿಸಿದರು.

ಪ್ರತಿಭಟನೆಯ ಬಳಿಕ ಮುಖ್ಯಮಂತ್ರಿಗಳಿಗೆ ಉದ್ದೇಶಿಸಿದ ಮನವಿಯನ್ನು ಜಿಲ್ಲಾಧಿಕಾರಿಗಳ ಮೂಲಕ ಸಲ್ಲಿಸಿ, ಭಾಷಾ ವಿವಾದಕ್ಕೆ ಕಾರಣವಾಗುತ್ತಿರುವ ಎಂಇಎಸ್ ಸಂಘಟನೆಯನ್ನು ನಿಷೇಧಿಸುವಂತೆ ಒತ್ತಾಯಿಸಿದರು.

ಈ ವೇಳೆ ಜಿಲ್ಲಾ ವ್ಯಾಪಾರಿ ಘಟಕದ ಅಧ್ಯಕ್ಷ ಬಾಲಾಸಾಹೇಬ ಉದಗಟ್ಟಿ, ಮಹಿಳಾ ಘಟಕದ ಅಧ್ಯಕ್ಷೆ ಗಿರಿಜಾ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜೇಶ್ ಗಲಗಲಿ, ರಾಜು ಕಲಪತ್ರಿ, ಸಚಿನ, ಸುರೇಶ್ ಉದ್ದಣ್ಣವರ, ಪ್ರಕಾಶ, ಸತ್ಯೆಪ್ಪ ಗುರುಲಿಂಗ ಸೇರಿದಂತೆ ಹಲವು ಮುಖಂಡರು ಕಾರ್ಯಕರ್ತರು ಇದ್ದರು.



ಬೆಳಗಾವಿ: ದಶಕಗಳಿಂದ ಬೆಳಗಾವಿ ಜಿಲ್ಲೆಯಲ್ಲಿ ಭಾಷಾ ಸಾಮರಸ್ಯಕ್ಕೆ ಧಕ್ಕೆ ಉಂಟುಮಾಡುವ ಚಟುವಟಿಕೆಗಳನ್ನು ನಡೆಸುತ್ತಿರುವ ಎಂಇಎಸ್ ಸಂಘಟನೆಯನ್ನು ನಿಷೇಧಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಶೆಟ್ಟಿ ಬಣ) ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಿದರು.

ಕಾನೂನು ಬಾಹಿರ ಕೃತ್ಯದ ತನಿಖೆ ನಡೆಸಲು ಗ್ರಾಮಸ್ಥರ ಆಗ್ರಹ

ಖಾನಾಪುರ: ತಾಲೂಕಿನ ಕೇರವಾಡ ಗ್ರಾಮ ಪಂಚಾಯತಿ ವ್ಯಾಪ್ತಿಯ ಮೂಕಬಸವನಗರ ಜನವಸತಿ ಪ್ರದೇಶದ ವಹಿವಾಟಿನಲ್ಲಿರುವ ಸರ್ಕಾರಿ ಆಸ್ತಿಯನ್ನು ಖಾನಾಪುರ ತಹಶೀಲ್ದಾರ್ ಕಚೇರಿಯ ಸಿಬ್ಬಂದಿಯೊಬ್ಬರೂ ಕಳೆದ ಕೆಲ ವರ್ಷಗಳ ಹಿಂದೆ ತಮ್ಮ ಹಾಗೂ ತಮ್ಮ ಕುಟುಂಬದ ಸದಸ್ಯರ ಹೆಸರಿನಲ್ಲಿ ದಾಖಲಿಸಿಕೊಂಡಿದ್ದು, ಈ ಪ್ರಕರಣದ ತನಿಖೆ ಕೈಗೊಂಡು ಸರ್ಕಾರಿ ಆಸ್ತಿಯನ್ನು ಮರಳಿ ಸರ್ಕಾರದ ಸುಪರ್ದಿಗೆ ಪಡೆಯಬೇಕು ಮತ್ತು ಈ ಆಸ್ತಿಯನ್ನು ಮೂಕಬಸವನಗರದ ಸಾರ್ವಜನಿಕರ ಬಳಕೆಗೆ ಮೀಸಲಿಡಬೇಕು ಎಂದು ಗ್ರಾಮಸ್ಥರು ಈಚೆಗೆ ಬೆಳಗಾವಿ ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿ, ತಹಸೀಲ್ದಾರ್ ಮತ್ತು ಕಂದಾಯ ಇಲಾಖೆಯ ಕಾರ್ಯದರ್ಶಿಗೆ ಸಲ್ಲಿಸಿದ ಮನವಿಯಲ್ಲಿ ಆಗ್ರಹಿಸಿದ್ದಾರೆ.

ಪಟ್ಟಣದಲ್ಲಿ ಈಚೆಗೆ ತಹಶೀಲ್ದಾರ್‌ರಿಗೆ ಸಲ್ಲಿಸಿದ ಲಿಖಿತ ಮನವಿ ಸಲ್ಲಿಸಿದ ಗ್ರಾಮಸ್ಥರು ಮನವಿಯ ಮೂಲಕ, ಮೂಕಬಸವನಗರ ವ್ಯಾಪ್ತಿಯ 5 ಎಕರೆ 8 ಗುಂಟೆ ಸರ್ಕಾರಿ ಪಡ ಜಮೀನಿನಲ್ಲಿ ಮೂಕಬಸವನಗರದ ಜನರ ಮನೆಗಳಿವೆ. 12ನೇ ಶತಮಾನದ ಹಿನ್ನೆಲೆ ಹೊಂದಿರುವ ಬಸವೇಶ್ವರ ದೇವಾಲಯವಿದೆ. ಈ ದೇವಾಲಯದ ಪಕ್ಕದಲ್ಲಿ ಗ್ರಾಮದ ಸರ್ಕಾರಿ ಶಾಲೆಯಿದೆ. ಇನ್ನುಳಿದ ಖುಲ್ಲಾ ಜಮೀನು ಗ್ರಾಮದ ಜಾನುವಾರುಗಳ ಮೇವಿಗಾಗಿ ಮೀಸಲಿದೆ. ಇದಕ್ಕೆ ಹೊಂದಿಕೊಂಡಿರುವ 13 ಎಕರೆ 7 ಗುಂಟೆ ಜಮೀನನ್ನೂ ಕಳೆದ ನೂರಾರು ವರ್ಷಗಳಿಂದ ಮೂಕಬಸವನಗರದ ಜನರು ಸಾಮೂಹಿಕವಾಗಿ ಉಪಯೋಗಿಸಿಕೊಂಡು ಬಂದಿದ್ದಾರೆ. ಆದರೆ, 1982-83ರಲ್ಲಿ ಖಾನಾಪುರ ತಹಶೀಲ್ದಾರ್ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಿಬ್ಬಂದಿಯೊಬ್ಬರೂ ಈ ಎಲ್ಲ ಜಮೀನುಗಳಲ್ಲಿ ನಮೂದು ಇದ್ದ ಸರ್ಕಾರಿ ಪಡ ತೆಗೆಯಿಸಿ ತಮ್ಮ ಹಾಗೂ ತಮ್ಮ ಕುಟುಂಬದ ಸದಸ್ಯರ ಹೆಸರುಗಳನ್ನು ನೊಂದಾಯಿಸಿಕೊಂಡಿದ್ದಾರೆ. ಈ ಜಮೀನಿನ ದಾಖಲೆಗಳನ್ನು ಪರಿಶೀಲಿಸಿದಾಗ ಕಾನೂನು ಉಲ್ಲಂಘಿಸಿ ಪರಭಾರೆ ಮಾಡಲಾಗಿದೆ ಎಂಬ ಮಾಹಿತಿ ಲಭ್ಯವಾಗಿದೆ. ಈ ಕುರಿತು ನಿಷ್ಪಕ್ಷಪಾತ ತನಿಖೆ ಕೈಗೊಂಡು ತಮಗೆ ನ್ಯಾಯ ಒದಗಿಸಿಕೊಡಬೇಕು'' ಎಂದು ತಹಸೀಲ್ದಾರರನ್ನು ಆಗ್ರಹಿಸಿದರು.



▸▸ ಖಾನಾಪುರ ತಹಶೀಲ್ದಾರ್ ಕಚೇರಿಯ ಸಿಬ್ಬಂದಿಯಿಂದ ಮೂಕಬಸವನಗರಕ್ಕೆ ಸೇರಿದ ಆಸ್ತಿ ಪರಭಾರೆ

ಮನವಿ ಸಲ್ಲಿಸುವ ಸಂದರ್ಭದಲ್ಲಿ ಕರವೇ ತಾಲೂಕು ಘಟಕದ ಅಧ್ಯಕ್ಷ ವಿಠ್ಠಲ ಹಿಂಡಲಕರ, ಮೂಕಬಸವನಗರ ಗ್ರಾಮದ ಮುಖಂಡರಾದ ವಾಸುದೇವ ಬಾಗೇವಾಡಿ, ಮಂಜು ಅಂಕಲಗಿ, ಯಲ್ಲಪ್ಪ ಕಾರಕದ, ಮಲ್ಲಪ್ಪ ಇಟಗಿ, ಸಿದ್ದಪ್ಪ ಕೂಗಿ, ಅರ್ಜುನ ಮಾತಾರಿ, ಶಮ್ಮಿರ ಸಾಹೇಬಖಾನ, ವಿನಾಜ ತಿಗಡಿ, ಇಮಾಮಸಾಬ್ ಗಡಾದ, ಯಲ್ಲಪ್ಪ ಹಿತ್ತಲಮನಿ, ಬಿಷ್ಟಪ್ಪ ಸಾತಪ್ಪನವರ, ದುಂಡಪ್ಪ ಅಂಕಲಗಿ, ಈರಪ್ಪ ನೇಗಿನಹಾಳ ಮತ್ತಿತರರು ಇದ್ದರು.

ನಶಾಮುಕ್ತ ಭಾರತ ಸಪ್ತಾಹಕ್ಕೆ ಚಾಲನೆ ಮಾದಕ ವಸ್ತುಗಳಿಂದ ದೂರವಿರಿ

ಚಿಕ್ಕೋಡಿ: ವಿದ್ಯಾರ್ಥಿಗಳು ಮಾದಕ ದ್ರವ್ಯ ಹಾಗೂ ಇತರೆ ನಿಷೇಧಿತ ವಸ್ತುಗಳ ಆಕರ್ಷಣೆ ಮತ್ತು ಸೇವನೆಯಿಂದ ದೂರ ಇರಬೇಕು. ದೈಹಿಕ, ಮಾನಸಿಕ ಮತ್ತು ಭಾವನಾತ್ಮಕ ಆರೋಗ್ಯ ಕಾಪಾಡಿಕೊಂಡಾಗ ಮಾತ್ರ ವಿದ್ಯಾರ್ಥಿ ಜೀವನ ಯಶಸ್ವಿಯಾಗಲು ಸಾಧ್ಯವಿದೆ ಎಂದು ಪ್ರೊಬೆಷನರಿ ಪಿಎಸ್‌ಐ ಚೇತನ ಪಾಟೀಲ ಹೇಳಿದರು.

ಪಟ್ಟಣದ ಸಿಟಿಇ ಸಂಸ್ಥೆಯ ಆರ್ ಡಿ ಪಿಯು ಕಾಲೇಜಿನಲ್ಲಿ ಬೆಳಗಾವಿ ಜಿಲ್ಲಾ ಪೊಲೀಸ್ ಹಾಗೂ ಚಿಕ್ಕೋಡಿ ಪೊಲೀಸ್ ಠಾಣೆ ಸಹಯೋಗದಲ್ಲಿ ಮಂಗಳವಾರ ಹಮ್ಮಿಕೊಂಡ ನಶಾಮುಕ್ತ ಭಾರತ ಅಭಿಯಾನ ಸಪ್ತಾಹ-2026 ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಾದಕ ದ್ರವ್ಯ ಸೇವನೆಯ ದುಷ್ಪರಿಣಾಮ ಕುರಿತು ಸಮಾಜದಲ್ಲಿ ಜಾಗೃತಿ ಮೂಡಬೇಕು. ಆರೋಗ್ಯಕರ, ಸೃಜನಶೀಲ ಮತ್ತು ವ್ಯಸನಮುಕ್ತ ಜೀವನ ನಡೆಸಲು ಇತರರನ್ನು ಪ್ರೋತ್ಸಾಹಿಸಬೇಕು ಎಂದರು.

ಸ್ಪರ್ಧಾತ್ಮಕ ಪರೀಕ್ಷೆ ಎದುರಿಸುವ ವಿದ್ಯಾರ್ಥಿಗಳಿಗಾಗಿ ಸ್ಮಾರ್ಟ್ ಬೋರ್ಡ್ ಲೋಕಾರ್ಪಣೆಗೊಳಿಸಿ ಪ್ರೊಬೆಷನರಿ ಪಿಎಸ್‌ಐ ರಾಜಕುಮಾರ ಕಣ್ಣೂರ ಮಾತನಾಡಿ, ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ವಿದ್ಯಾರ್ಥಿಗಳು ನಿರಂತರ ಅಧ್ಯಯನ ಮಾಡಬೇಕು. ವಿವಿಧ ಪತ್ರಿಕೆ, ನಿಯತಕಾಲಿಕೆಗಳನ್ನು ಓದಬೇಕು. ಪಿಯುಸಿ ಹಂತದಲ್ಲಿಯೇ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆ ಎದುರಿಸುವ ಮನೋಭಾವನೆ ಹೊಂದಬೇಕು ಎಂದು ಹೇಳಿದರು.

ಆರ್ ಡಿ ಪಿಯು ಕಾಲೇಜಿನ ಪ್ರಾಚಾರ್ಯ ಯು ಎಸ್ ಶಿಂದೆ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಉಪನ್ಯಾಸಕಾರದ ಎನ್ ಪಿ ಚಿಟ್ನಿಸ್, ಸುರೇಶ ಪಾಟೀಲ, ಎಂ ಆರ್ ಗುಗ್ಗರಿ, ಡಿ ಸಿ ಕಸೆಟ್ಟಿ, ಎಂ ಬಿ ಮಸಾಯಿ, ಎಸ್ ಎ ಶಿರಗಾಂವಿ, ಲಕ್ಷ್ಮೀ ತೋಟಗಿ, ಎಸ್ ಎಸ್ ಸಿಂಧೆ, ಬಿರಂಗಿ, ಎಸ್ ಎ ಭೋಸಲೆ, ಎಂ ಎಸ್ ಕುಲಕರ್ಣಿ, ರವಿ ಕುಲಕರ್ಣಿ, ಪಿ ಆರ್ ಮನಗೂಳಿ ಇತರರು ಇದ್ದರು.



ಬಿಜೆಪಿ ಮುಖಂಡರಿಂದ ಪುಷ್ಪನಮನ ಡಾ. ಶ್ಯಾಮಪ್ರಸಾದ್ ಮುಖರ್ಜಿ ಪುಣ್ಯಸ್ಮರಣೆ

ಬೆಳಗಾವಿ: ಭಾರತೀಯ ಜನಸಂಘದ ಸ್ಥಾಪಕರಾದ ಡಾ. ಶ್ಯಾಮಪ್ರಸಾದ್ ಮುಖರ್ಜಿ ಅವರ ಪುಣ್ಯಸ್ಮರಣೆಯ ಅಂಗವಾಗಿ ಮಂಗಳವಾರ ಬೆಳಗಾವಿ ನಗರದ ಬಿಜೆಪಿ ಕಾರ್ಯಾಲಯದಲ್ಲಿ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಗೌರವ ಸಮರ್ಪಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಮುಖಂಡರು, ಡಾ. ಶ್ಯಾಮಪ್ರಸಾದ್ ಮುಖರ್ಜಿ ಅವರು ರಾಷ್ಟ್ರದ ಏಕತೆ ಮತ್ತು ಅಖಂಡತೆಯ ಪರವಾಗಿ ಹೋರಾಡಿದ ಮಹಾನ್ ನಾಯಕರು ಎಂದು ಸ್ಮರಿಸಿದರು. ಅವರ ಆದರ್ಶಗಳು ಮತ್ತು ದೇಶಸೇವೆಯ ಸಂಕಲ್ಪವು ಇಂದಿನ ಪೀಳಿಗೆಗೆ ಪ್ರೇರಣೆಯಾಗಿವೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಂಸದ ಜಗದೀಶ್ ಶೆಟ್ಟರ್, ಬಿಜೆಪಿ ಜಿಲ್ಲಾಧ್ಯಕ್ಷ ಸುಭಾಸ್ ಪಾಟೀಲ, ಮಾಜಿ ಶಾಸಕ ಸಂಜಯ ಪಾಟೀಲ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ ಮಾದಮ್ಮನವರ, ಯುವ ಮೋರ್ಚಾ ರಾಜ್ಯ ಉಪಾಧ್ಯಕ್ಷ ಈರಣ್ಣ ಅಂಗಡಿ, ರಾಜ್ಯ ಸಾಮಾಜಿಕ ಜಾಲತಾಣ ಸದಸ್ಯ ನಿತಿನ್ ಚೌಗಲೆ, ಜಿಲ್ಲಾ ಕೋಶಾಧ್ಯಕ್ಷ ಸಂತೋಷ ದೇಶನೂರ, ಪ್ರಕೋಷ್ಠಗಳ ಸಂಯೋಜಕ ಮಹೇಶ ಮೋಹಿತೆ, ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ಯಲ್ಲೇಶ ಕೋಲಕಾರ, ಮುಖಂಡರಾದ ಮಂಜುನಾಥ ಪಮ್ಮಾರ, ಚೇತನ ಅಂಗಡಿ, ಸಾಮಾಜಿಕ ಜಾಲತಾಣ ಸಹ ಸಂಚಾಲಕ ಮನೋಜ ಪಾಟೀಲ, ವೀರಭದ್ರ ಪೂಜಾರಿ, ಶ್ವೇತಾ ಜಗದಾಳೆ, ಪ್ರವೀಣ ಮಾಳೇದವರ ಸೇರಿದಂತೆ ಪಕ್ಷದ ಕಾರ್ಯಕರ್ತರು ಉಪಸ್ಥಿತರಿದ್ದರು.

ಕಾರ್ಯಕ್ರಮವು ಡಾ. ಶ್ಯಾಮಪ್ರಸಾದ್ ಮುಖರ್ಜಿ ಅವರ ಜೀವನ, ಸಾಧನೆಗಳು ಹಾಗೂ ರಾಷ್ಟ್ರ ನಿರ್ಮಾಣದಲ್ಲಿ ಅವರ ಕೊಡುಗೆಗಳನ್ನು ಸ್ಮರಿಸುವ ಮೂಲಕ ಅರ್ಥಪೂರ್ಣವಾಗಿ ನಡೆಯಿತು.



ಭಾಷಾ ಅಲ್ಪಸಂಖ್ಯಾತರ ಕಾನೂನು ಜಾರಿಗೆ ಒತ್ತಾಯಿಸಿ ಮನವಿ

ಬೆಳಗಾವಿ: ಗಡಿಭಾಗದಲ್ಲಿ ಭಾಷಾ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ, ಕಾನೂನುಗಳ ಜಾರಿ ಹಾಗೂ ಶಾಂತಿ, ಸೌಹಾರ್ದತೆ ಕಾಪಾಡುವ ಉದ್ದೇಶದಿಂದ ಜಿಲ್ಲಾ ಮಟ್ಟದ ಸಮನ್ವಯ ಸಮಿತಿಯನ್ನು ಸ್ಥಾಪಿಸಲಾಗುವುದು ಎಂದು ಜಿಲ್ಲಾಧಿಕಾರಿ ಮೊಹ್ಮದ್ ರೋಷನ್ ತಿಳಿಸಿದ್ದಾರೆ.

ಸಮನ್ವಯ ಸಮಿತಿ ಸ್ಥಾಪನೆಗೆ ಡಿಸಿ ಭರವಸೆ

ಮಹಾರಾಷ್ಟ್ರ ಏಕೀಕರಣ ಸಮಿತಿಯ ಅಧ್ಯಕ್ಷ ಪ್ರಕಾಶ್ ಮರಗಾಳೆ, ಮಾಜಿ ಶಾಸಕ ಮನೋಹರ ಕಿಣೇಕರ್ ಸೇರಿದಂತೆ ನಿಯೋಗವು ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಬೆಳಗಾವಿಯಲ್ಲಿ ಕನ್ನಡಕ್ಕೆ ಶೇ.60ರಷ್ಟು ಹಾಗೂ ಇತರೆ ಭಾಷೆಗಳಿಗೆ ಶೇ.40ರಷ್ಟು ಅವಕಾಶ ಕಲ್ಪಿಸುವ ರಾಜ್ಯ ಸರ್ಕಾರದ ನಿಯಮವನ್ನು ಜಾರಿಗೊಳಿಸಬೇಕು ಹಾಗೂ ಭಾಷಾ ಅಲ್ಪಸಂಖ್ಯಾತರಿಗೆ ಕಾನೂನುಬದ್ಧ ಸೌಲಭ್ಯಗಳನ್ನು ನೀಡಬೇಕು ಎಂದು ಸಮಿತಿ ಒತ್ತಾಯಿಸಿತು.

ಮನವಿ ಸ್ವೀಕರಿಸಿದ ಜಿಲ್ಲಾಧಿಕಾರಿ ಮೊಹ್ಮದ್ ರೋಷನ್ ಅವರು, ಮಹಾರಾಷ್ಟ್ರದಲ್ಲಿನ ಕನ್ನಡಿಗರು ಹಾಗೂ ಬೆಳಗಾವಿ ಗಡಿಭಾಗದ ಮರಾಠಿ ಭಾಷಿಕರ ಸಮಸ್ಯೆಗಳನ್ನು ಸಂವಿಧಾನ ಬದ್ಧವಾಗಿ ಚರ್ಚಿಸಿ ಪರಿಹರಿಸಲು ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ರಚಿಸಲಾಗುವುದು ಎಂದು ಭರವಸೆ ನೀಡಿದರು. ಭಾಷಾ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ ಹಾಗೂ ಶಾಂತಿ ಕಾಪಾಡುವುದು ಜಿಲ್ಲಾಡಳಿತದ ಜವಾಬ್ದಾರಿಯಾಗಿದೆ ಎಂದು ಅವರು ಹೇಳಿದರು.



ಆರೋಗ್ಯಕರ ಜೀವನ ನಡೆಸಲು ದಿನನಿತ್ಯ ಯೋಗ ಮಾಡಿ

ಮೂಡಲಗಿ: ಆರೋಗ್ಯಕರ ಜೀವನ ನಡೆಸಲು ದಿನ ನಿತ್ಯ ಯೋಗ ಮಾಡಬೇಕು. ಮನುಷ್ಯ ದೈಹಿಕವಾಗಿ ಮಾನಸಿಕವಾಗಿ ಸದೃಢ ಇರಬೇಕಾದರೆ ಯೋಗ ಅತಿ ಅವಶ್ಯಕವಾಗಿದೆ ಎಂದು ನಾಗನೂರಿನ ಡಾ. ಕಾವ್ಯಶ್ರೀ ಅಮ್ಮನವರು ಹೇಳಿದರು.

ಅವರು ಯಾದವಾಡ ಗ್ರಾಮದ ಪ್ರಭುಲಿಂಗೇಶ್ವರ ಆರ್ ಸಿಎಂ ಶಾಲಾ ಮೈದಾನದಲ್ಲಿ ಭಾರತ ಸರ್ಕಾರ ಮೈ ಭಾರತ ಕೇಂದ್ರ ಬೆಳಗಾವಿ ಹಾಗೂ ವಿವಿಧ ಸಂಘಗಳ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿರುವ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಸಸಿಗೆ ನೀರು ಹನಿಸುವ ಮೂಲಕ ಚಾಲನೆ ನೀಡಿ ಮಾತನಾಡಿದರು.

ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟದ ಬೆಳಗಾವಿ ಜಿಲ್ಲಾಧ್ಯಕ್ಷ ಸಿದ್ದಣ್ಣ ದುರದುಂಡಿ ಪ್ರಾಸ್ತಾವಿಕವಾಗಿ ಮಾತನಾಡಿ ಯುವಕರು ಯೋಗ ಮತ್ತು ವ್ಯಾಯಾಮವನ್ನು ದಿನನಿತ್ಯ ಜೀವನದಲ್ಲಿ ಅಳವಡಿಸಿಕೊಂಡರೆ ಆರೋಗ್ಯವಂತ ಸಮಾಜ ನಿರ್ಮಾಣ ಮಾಡಲು ಸಾಧ್ಯ ಆ ನಿಟ್ಟಿನಲ್ಲಿ ಯುವ ಕಾರ್ಯ ಹಾಗೂ ಕ್ರೀಡಾ ಸಚಿವಾಲಯದ ಮೈ ಭಾರತ ಕೇಂದ್ರ ಹಲವಾರು ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದು ಇದರ ಸದುಪಯೋಗವನ್ನು ಜಿಲ್ಲೆಯ ಯುವಕರು ಪಡೆದುಕೊಳ್ಳಬೇಕೆಂದು ಹೇಳಿದರು.



ರಾಜ್ಯ ಯುವ ಪ್ರಶಸ್ತಿ ಪುರಸ್ಕೃತರು ಮತ್ತು ರಾಷ್ಟ್ರೀಯ ವಿಲ್ ಚೇರ್ ಕ್ರಿಕೆಟ್ ಆಟಗಾರ ಹನುಮಂತ ಹಾವನ್ನವರ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷ ಮಲ್ಲಪ್ಪ ಚೆಕ್ಕೆನ್ನವರ ವಹಿಸಿ ಮಾತನಾಡಿದರು.

ಮೂಡಲಗಿಯ ಸುಭಾ?ಗೊಡ್ಯಾಗೋಳ ದುರ್ಗಪ್ಪ ಮ್ಯಾಗಡಿ ವಿ. ಡಿ. ಹಿರೇಮಠ, ಎಸ್ ವಾಯ್ ಪೂಜೇರಿ ಶಶಿಕುಮಾರ್ ಪಟಗೊಂದಿ, ದನಪಾಲ್ ಮ್ಯಾಗಡಿ, ಬಿ ಎಮ್ ಪರಗುಣಿ, ಲಕ್ಷ್ಮಿ ಹಿಪ್ಪರಗಿ, ಜುಬೇದಾ ಹುಂಡೇಕರ್, ಹಾಗೂ ಶಾಲೆಯ ಗುರುಗಳು, ಗುರುಮಾತೆಯರು ಮುಂತಾದವರು ಉಪಸ್ಥಿತರಿದ್ದರು. ಕಾಲೇಜು ಉಪನ್ಯಾಸಕಿ ಸೀಮಾ ಚೆಕ್ಕೆನ್ನವರ ನಿರೂಪಿಸಿ ವಂದಿಸಿದರು.

ಪತ್ರಕರ್ತನ ಮೇಲೆ ಹಲ್ಲೆ: ಕ್ರಮಕ್ಕೆ ಆಗ್ರಹ



ಚಿಕ್ಕೋಡಿ: ಕರ್ತವ್ಯಕ್ಕೆ ತೆರಳುತ್ತಿದ್ದ ಖಾಸಗಿ ಮಾಧ್ಯಮ ವರದಿಗಾರನ ಬೈಕ್ ಅಡ್ಡಗಟ್ಟಿ ಹಲ್ಲೆ ನಡೆಸಿದವರ ಮೇಲೆ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಚಿಕ್ಕೋಡಿ ಪತ್ರಿಕಾ ಮಾಧ್ಯಮ ವತಿಯಿಂದ ಸೋಮವಾರ ಮಿನಿವಿಧಾನಸೌಧದಲ್ಲಿ ಉಪತಹಶೀಲ್ದಾರ ಕಚೇರಿಯ ಗ್ರೇಡ್ 2 ತಹಶೀಲ್ದಾರ್ ಪರಿಮಳಾ ದೇಶಪಾಂಡೆ ಅವರಿಗೆ ಮನವಿ ಸಲ್ಲಿಸಲಾಯಿತು.

ತಾಲೂಕಿನ ಖಜಗೌಡನಹಟ್ಟಿ ಗ್ರಾಮದಲ್ಲಿ ಜಮೀನು ವಿವಾದಕ್ಕೆ ಸಂಬಂಧಿಸಿ ಸುದ್ದಿ ಸಂಗ್ರಹಿಸಲು ತೆರಳಿದ್ದ ಖಾಸಗಿ ವಾಹಿನಿ ವರದಿಗಾರ ಅಜೀತ ಖೋತ ಮೇಲೆ ಭಾನುವಾರ ದುಷ್ಕರ್ಮಿಗಳು ತೀವ್ರವಾಗಿ ಹಲ್ಲೆ ನಡೆಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಪತ್ರಕರ್ತರ ಮೇಲೆ ಹಲ್ಲೆಗಳು ಹೆಚ್ಚುತ್ತಿದ್ದು, ಜೀವರಕ್ಷಣೆಗೆ ಆತಂಕ ಎದುರಾಗಿದೆ. ಚಿಕ್ಕೋಡಿ ಪೊಲೀಸ್ ಠಾಣೆಯಲ್ಲಿ ಈ ಕುರಿತು ಪ್ರಕರಣ ದಾಖಲಾಗಿದ್ದು, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಿ ಬಂಧಿಸಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಚಿಕ್ಕೋಡಿ ಪತ್ರಕರ್ತರಾದ ಅಜೀತ ಸಣ್ಣಕ್ಕಿ, ದುರದುಂಡಯ್ಯ ಭಾವಿಮನಿ, ಶಾಬಾಜ ಮಕಾಂದಾರ, ರಾಘವೇಂದ್ರ ಲಿಂಬಿಗಿಡದ, ಅನಿಲ ದಲಾಲ, ಉದಯ ಹೊಸಮನಿ, ಸಚಿನ ಜಮಖಂಡಿ ಇದ್ದರು.

ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಮೂಡಲಗಿ: ಸರಕಾರಿ ಮಾದರಿ ಕನ್ನಡ ಹಿರಿಯ ಪ್ರಾಥಮಿಕ ಹಾಗೂ ಉನ್ನತೀಕರಿಸಿದ ಪ್ರೌಢಶಾಲೆ ತುಕ್ಕಾನಟ್ಟಿಯಲ್ಲಿ 12ನೆಯ ಅಂತಾರಾಷ್ಟ್ರೀಯ ವಿಶ್ವಯೋಗ ದಿನವನ್ನು ಆಚರಿಸಲಾಯಿತು.

ಚಿಕ್ಕೋಡಿ ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕ ಸಂಘದ ನಿಕಟಪೂರ್ವ ಅಧ್ಯಕ್ಷ ಸಿದ್ರಾಮ ಲೋಕನ್ನವರ ಪ್ರಧಾನ ಗುರು ಎ.ವ್ಹಿ ಗಿರೆಣ್ಣವರ, ಬಸವರಾಜ ನಾಯಕ, ಎಮ್.ಡಿ.ಗೋಮಾಡಿ. ವಿಮಲಾಕ್ಷಿ ತೋರಗಲ್ಲ, ಹೊಳೆಪ್ಪಾ ಗದಾಡಿ, ಸುಜಾತಾ ಕೋಳಿ, ಪುಷ್ಪಾ ಭರಮಧೆ, ವಾಸಂತಿ ಬೋರಗುಂಡಿ, ಭಾಗೀರಥಿ ಕಳ್ಳಿಗುದ್ದಿ, ರೂಪಾ ಹೂಲಿಕಟ್ಟಿ, ಎಮ್.ಎಲ್.ಖಾನಗೌಡ್ರ, ಪವಿತ್ರಾ ಬಡಿಗೇರ ಮುಂತಾದವರು ಭಾಗವಹಿಸಿದ್ದರು.

ಯೋಗ ಶಿಕ್ಷಕರಾಗಿ ಗೋಕಾಕದ ಗೀತಾ ಹುಕ್ಕೇರಿ ಹಾಗೂ ಶೋಭಾ ಬೆಟಗೇರಿ ಆಗಮಿಸಿದ್ದರು. ಯೋಗ ಕಾರ್ಯಕ್ರಮದಲ್ಲಿ ನೂರಾರು ಮಕ್ಕಳು ಭಾಗವಹಿಸಿದ್ದರು.

ಇದೇಸಂದರ್ಭದಲ್ಲಿ ಅಖಿಲ ಭಾರತ ಪ್ರಾಥಮಿಕ ಶಿಕ್ಷಕರ ಫೆಡರೇಷನ್ ನವದೆಹಲಿ ಕಾರ್ಯಕಾರಿ ಸಮಿತಿ ಸದಸ್ಯರಾಗಿ ನೇಮಕಗೊಂಡಿರುವ ಸಿದ್ರಾಮ ಲೋಕನ್ನವರ ಗುರುಗಳನ್ನು ಹಾಗೂ ತುಕ್ಕಾನಟ್ಟಿ ಶಾಲೆಯಿಂದ ವರ್ಗಾವಣೆಗೊಂಡಿರುವ ಲಕ್ಷ್ಮೀ ಹೆಬ್ಬಾಳ ಗುರುಮಾತೆಯವರನ್ನು ಗೌರವಿಸಲಾಯಿತು.



ಜಿಪಂ-ಗೋಗಟೆ ಕಾಲೇಜ್ ಒಡಂಬಡಿಕೆ



ಬೆಳಗಾವಿ: ಎಂಜಿನಿಯರಿಂಗ್ ವಿದ್ಯಾರ್ಥಿಗಳು ಗ್ರಾಮೀಣ ಭಾಗದ ಜನರ ಸ್ಥಿತಿಗತಿ ಅಧ್ಯಯನ ಮಾಡುವುದು ಹಾಗೂ ಜನರಲ್ಲಿ ಸ್ವಚ್ಛತೆ, ಸಮುದಾಯ ಸಹಭಾಗಿತ್ವ, ನೀರಿನ ಬಳಕೆ ಹಾಗೂ ಇನ್ನಿತರೇ ವಿಷಯಗಳ ಕುರಿತು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಜಿಲ್ಲಾ ಪಂಚಾಯತ ಹಾಗೂ ಗೋಗಟೆ ಇನಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಪರಸ್ಪರ ಒಡಂಬಡಿಕೆ ಮಾಡಿಕೊಂಡಿವೆ.

ಜಿಪಂ ಸಿಇಒ ರಾಹುಲ್ ಶಿಂಧೆ ಮತ್ತು ಕೆ.ಎಲ್.ಎಸ್. ಗೋಗಟೆ ಇನಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಗೌರ್ನಿಂಗ ಕೌನ್ಸಿಲ್ ಚೇರಮನ್ ರಾಜೇಂದ್ರ ಬೆಳಗಾವಕರ್ ಅವರು ಮಂಗಳವಾರ ಕಾಲೇಜಿನ ಸಭಾಂಗಣದಲ್ಲಿ ಈ ಕುರಿತು ಚರ್ಚಿಸಿ, ಒಡಂಬಡಿಕೆಗೆ ಸಹಿ ಹಾಕಿದರು. ಗೌರ್ನಿಂಗ ಕೌನ್ಸಿಲ್ ಸದಸ್ಯರಾದ ಉದಯ ಕುಲಕುಂದ್ರಿಕರ, ಆರ್. ಎಸ್. ಮುತಾಲಿಕ, ಕೆಎಲ್‌ಎಸ್ ಸಂಸ್ಥೆಯ ಕಾರ್ಯದರ್ಶಿ ಎಸ್.ವಿ. ಗಣಾಚಾರಿ, ಜಿಲ್ಲಾ ಪಂಚಾಯತ ಸಹಾಯಕ ಯೋಜನಾಧಿಕಾರಿ ಭಾಗ್ಯಶ್ರೀ ಜಹಾಗೀರದಾರ, ಪ್ರಾಂಶುಪಾಲ ಡಾ. ವಿಜಯ ಆಟಾವಲೆ, ಡೀನ್ (ಆಡಳಿತ) ಡಿ.ಎ. ಕುಲಕರ್ಣಿ, ಡಾ. ಸಂಜಯ ದೇಶಪಾಂಡೆ ಸೇರಿ ಜಿಪಂ ಹಾಗೂ ಕಾಲೇಜಿನ ಅಧಿಕಾರಿಗಳು, ಸಿಬ್ಬಂದಿ ಹಾಜರಿದ್ದರು.

ನಮ್ಮ ಭೂಮಿ ಹಸಿರಾಗಿಸೋಣ: ಸ್ವಾಮೀಜಿ

ಕಾಗವಾಡ: ಪರಿಸರವನ್ನು ನಾವು ರಕ್ಷಿಸಿದರೆ, ಪರಿಸರ ನಮ್ಮನ್ನು ರಕ್ಷಿಸುತ್ತದೆ.ಪ್ರಕೃತಿ ಇಲ್ಲದೆ ಮಾನವನ ಅಸ್ತಿತ್ವ ಸಾಧ್ಯವಿಲ್ಲ, ನಮ್ಮ ಭೂಮಿಯನ್ನು ಹಸಿರಾಗಿಸಲು ಇಂದೇ ಪ್ರತಿಜ್ಞೆ ಮಾಡೋಣ ಎಂದು ಗುರುದೇವಾಶ್ರಮದ ಬಸವೇಶ್ವರ ಸ್ವಾಮೀಜಿ ಹೇಳಿದರು

ತಾಲೂಕಿನ ಐನಾಪುರ ಗ್ರಾಮದ ಪಿ ಎಂಶ್ರೀ ಸರ್ಕಾರಿ ಗಂಡು ಮಕ್ಕಳ ಹಿರಿಯ ಪ್ರಾಥಮಿಕ ಶಾಲೆಯ ಕೇಂದ್ರ ಭವನದಲ್ಲಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ತಾಲೂಕು ಘಟಕ ಕಾಗವಾಡ ಇವರ ಸಹಯೋಗದೊಂದಿಗೆ ಹಮ್ಮಿಕೊಂಡ ಪರಿಸರ ಜಾಗೃತಿ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿ, ಗಿಡ ನಾಟಿಯಿಂದಾಗಿ ಪರಿಸರದ ಮೇಲೆ ಉತ್ತಮ ಪ್ರಭಾವ ಬೀರಲಿದೆ ಎಂದರು.

ಕಾಗವಾಡ ತಾಲೂಕು ಯೋಜನಾಧಿಕಾರಿ ಸಂಜೀವ ಮರಾಠಿ ಅವರು ಪ್ರಾಸ್ತವಿಕವಾಗಿ ಮಾತನಾಡಿದರು. ಮುಖ್ಯ ಅತಿಥಿಗಳಾದ ಪಪಂ ಸದಸ್ಯ ಅರುಣ ಗಾಣಿಗೇರ, ಪಿಕೆಪಿಎಸ್ ಅಧ್ಯಕ್ಷ ತಮ್ಮಣ್ಣಾ ಪಾರಶೇಟ್ಟಿ, ಮಾತನಾಡಿದರು. ಇ ಸಂದರ್ಭದಲ್ಲಿ ಪ್ರಕಾಶ ಕೊರ್ಬು,ವಿರೂಪಾಕ್ಷ ಡೂಗನವರ,ಅರವಿಂದ ಕಾರ್ಚಿ, ಅರಣ್ಯಧಿಕಾರಿ ಕುಂಬಾರ, ಶಿಕ್ಷಕರ ಸಂಘದ ಅಧ್ಯಕ್ಷ ಕುಮಾರ ಗಾಣಿಗೇರ, ಪ್ರಧಾನ ಕಾರ್ಯದರ್ಶಿ ಕೆ ಬಿ ರಾವುತ ಎಸ್ ಎಸ್ ಕೋಳಿ,ಎ ಬಿ ಶಿರಹಟ್ಟಿ ,ಎನ್ ಎನ್ ಹರಳೆ ಸಂಜೀವ ರಡ್ಡಿ , ಇಸಾಕ ರಾವತ, ಮುಖ್ಯೋಪಾಧ್ಯಾಯಕಿ ಅವಟಿ , ಇದ್ದರು.



ಕಿರುಸುದ್ದಿ

ರಸ್ತೆ ದುರಸ್ತಿಗೆ ಮನವಿ



• **ಕಲಾದಗಿ:** ಗ್ರಾಮದ ಶೆಲ್ಲಿಕೇರಿ ಕ್ರಾಸ್‌ನಿಂದ ಯಂಡಿಗೇರಿ ಗ್ರಾಮವನ್ನು ಸಂಪರ್ಕಿಸುವ ರಸ್ತೆ ಮತ್ತು ಕಳಸಕೊಪ್ಪ ಕಾಲುವೆಯ ರಸ್ತೆ ಸಂಪೂರ್ಣ ಹಾಳಾಗಿದ್ದು ಈ ಎರಡು ರಸ್ತೆಗಳನ್ನು ಶೀಘ್ರವೇ ದುರಸ್ತಿ ಮಾಡಿಕೊಡಬೇಕೆಂದು ಜಿಲ್ಲಾಧಿಕಾರಿಗಳಿಗೆ ರೈತರು ಮನವಿ ಸಲ್ಲಿಸಿದರು.

ಮಳೆಗಾಲದ ಹಿನ್ನೆಲೆ ಈ ರಸ್ತೆಗಳು ಸಂಪೂರ್ಣ ಹಾಳಾಗಿದ್ದು ಈ ಮಾರ್ಗದಲ್ಲಿ ಬರುವ ರೈತರ ರೈತಾಪಿ ಕೆಲಸಗಳಿಗೆ ತುಂಬಾ ತೊಂದರೆಯಾಗುತ್ತಿರುವ ಬಗ್ಗೆ ಹಾಗೂ ಇತ್ತೀಚೆಗೆ ಸುರಿದ ಅತಿಯಾದ ಮಳೆಯಿಂದಾಗಿ ಬೆಳೆ ಹಾನಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ಕಲಾದಗಿ, ಗೋವಿಂದಕೊಪ್ಪ, ಕಳಸಕೊಪ್ಪ, ಶೆಲ್ಲಿಕೇರಿ ಭಾಗದ ರೈತರ ಪರವಾಗಿ ಬಾಗಲಕೋಟೆ ಜಿಲ್ಲಾಡಳಿತ ಭವನಕ್ಕೆ ತೆರಳಿ ಜಿಲ್ಲಾಧಿಕಾರಿಗಳ ಅನುಪಸ್ಥಿತಿಯಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಅಶೋಕ ತೇಲಿ, ಬಾಗಲಕೋಟೆ ತಹಶೀಲ್ದಾರ ವಾಸುದೇವ ಸ್ವಾಮಿ ಅವರಿಗೆ ಮನವಿ ಸಲ್ಲಿಸಿದರು. ಕಲಾದಗಿ ಪಿಕೆಪಿಎಸ್ ನಿರ್ದೇಶಕ ಸದಸ್ಯ ಮಳಿಯಪ್ಪ ಅಡಗಲ್, ಮುಖಂಡರಾದ ಸಂತೋಷ ಮಂಟೂರ, ಅರ್ಜುನ ನೀಲನ್ನವರ, ಲಾಲಸಾಬ ಬಾವಾಖಾನ, ಮಹಾಂತೇಶ ಕಾಳೆ, ಮುಸ್ತಾಕಸಾಬ ಸೌದಾಗರ ಸೇರಿದಂತೆ ಇತರರಿದ್ದರು.

ಅರ್ಜಿ ಆಹ್ವಾನ

• **ಲೋಕಾಪುರ:** ಪಟ್ಟಣದ-ಲಕ್ಷಾನಟ್ಟಿ ಸರಕಾರಿ ಆದರ್ಶ ವಿದ್ಯಾಲಯ (ಆರ್.ಎಂ.ಎಸ್.ಎ)ದ 2026-27ನೇ ಸಾಲಿನ 7, 8 ಮತ್ತು 9 ನೇ ತರಗತಿಯಲ್ಲಿ ಖಾಲಿ ಇರುವ ಸೀಟುಗಳನ್ನು ಭರ್ತಿ ಮಾಡಲು ಸಾಮಾನ್ಯ ಪ್ರವೇಶ ಪರೀಕ್ಷೆಗಾಗಿ 2026-27ನೇ ಸಾಲಿನ 7, 8 ಮತ್ತು 9ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮೀಸಲಾತಿವಾರು 7ನೇ ತರಗತಿಗೆ 19 ಖಾಲಿ ಸೀಟುಗಳಿವೆ. 8ನೇ ತರಗತಿಗೆ 19 ಖಾಲಿ ಸೀಟುಗಳಿವೆ, 9ನೇ ತರಗತಿಗೆ 10 ಖಾಲಿ ಇರುವ ಸೀಟುಗಳಿಗೆ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಗಳು ಸರ್ಕಾರಿ ಆದರ್ಶ ವಿದ್ಯಾಲಯದಲ್ಲಿಯೇ ಲಭ್ಯವಿದ್ದು, ತಾಲೂಕಿನ ಆಸಕ್ತ ವಿದ್ಯಾರ್ಥಿಗಳು ಜೂ.22ರಿಂದ ಜು.30ರಂದು ಸಂಜೆ 5ಗಂಟೆಯವರೆಗೆ ಶಾಲೆಯಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಜು.6ರಂದು ಬೆಳಿಗ್ಗೆ 10.30ರಿಂದ 1.30ರ ವರೆಗೆ ಸರ್ಕಾರಿ ಆದರ್ಶ ವಿದ್ಯಾಲಯ ಲೋಕಾಪುರ-ಲಕ್ಷಾನಟ್ಟಿ ಶಾಲೆಯಲ್ಲಿ ಪ್ರವೇಶ ಪರೀಕ್ಷೆಗಳು ನಡೆಯಲಿವೆ. ಮಾಹಿತಿಗಾಗಿ ಶಾಲೆಯ ಪ್ರಾಂಶುಪಾಲ ಸಿದ್ದಣ್ಣ ಕೆ.ಸತ್ತಿಗೇರಿ ಮೊ-9448831212, 9448484870 ಅವರನ್ನು ಸಂಪರ್ಕಿಸಲು ಕ್ಷೇತ್ರ ಶಿಕ್ಷಣಾಧಿಕಾರಿ ಸಮೀರ. ಎಂ.ಮುಲ್ಲಾ ತಿಳಿಸಿದ್ದಾರೆ.

ಪಡಿತರ ಅಕ್ಕಿ ವಶ

• **ಬೀಳಗಿ:** ಪಟ್ಟಣದ ದುರಗಮ್ಮದೇವಿ ದೇವಸ್ಥಾನದ ಮುಂದಗಡೆ ನೇಕಾರ ಗಲ್ಲಿಯಿಂದ ಸಿದ್ಧೇಶ್ವರ ದೇವಸ್ಥಾನಕ್ಕೆ ಹೋಗುವ ಸಾರ್ವಜನಿಕ ರಸ್ತೆಯ ಪಕ್ಕದಲ್ಲಿ ಸರ್ಕಾರದ ವಿವಿಧ ಯೋಜನೆ ಅಡಿಯಲ್ಲಿ ಸಾರ್ವಜನಿಕರಿಗೆ ಹಂಚಿಕೆಯಾದ ಅಕ್ಕಿಯನ್ನು ಯಾವುದೇ ದಾಖಲಾತಿ ಇಲ್ಲದೇ ಅನಧಿಕೃತವಾಗಿ 44335.20 ರೂ. ಕಿಮ್ಮತ್ತಿನ 1911 ಕೆಜಿ ಅಕ್ಕಿಯನ್ನು ಅಕ್ಕಿಯನ್ನು ಆಹಾರ ಇಲಾಖೆ ಅಧಿಕಾರಿಗಳು ವಶ ಪಡಿಸಿಕೊಂಡಿರುವರು. ಅರ್ಧಮುರ್ದ ತುಂಬಿದ 41 ಪ್ಲಾಸ್ಟಿಕ್ ಚೀಲಗಳಲ್ಲಿ ಸಂಗ್ರಹಣೆ ಮಾಡಿ ಸಾಗಾಟ ಮಾಡುವ ಉದ್ದೇಶದಿಂದ ಸಂಗ್ರಹಿಸಿಟ್ಟಾಗ ಆಹಾರ ಇಲಾಖೆ ಅಧಿಕಾರಿಗಳು ದಾಳಿ ಮಾಡಿ ವಶಕ್ಕೆ ಪಡೆದು ಪೊಲೀಸ್ ಠಾಣೆಯಲ್ಲಿ ಆಹಾರ ಶಿರಸ್ತೇದಾರ ಸಂತೋಷ ಅಶೋಕ ರಬಕವಿ ದೂರು ದಾಖಲಿಸಿದ್ದು, ಆಹಾರ ನಿರೀಕ್ಷಕರಾದ ಶಶಿಧರ ಕೃಷ್ಣಪ್ಪ ಭಜಂತ್ರಿ, ಅನ್ವರ ಲಾಲಸಾಬ ಸನದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಶೋಭಾ ಸಣ್ಣಕ್ಕಿ ನಿಧನ

• **ಕಲಾದಗಿ:** ಶೋಭಾ ಮನೋಹರ ಸಣ್ಣಕ್ಕಿ(70) ನಿಧನರಾದರು. ಮೃತರಿಗೆ ಪತಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗ ಇದ್ದಾರೆ.



ಸಂತಾಪ: ಇವರ ನಿಧನಕ್ಕೆ ಮಾಜಿ ಸಚಿವ ಮುರುಗೇಶ ನಿರಾಣಿ, ವಿಧಾನ ಪರಿಷತ್ ಸದಸ್ಯರಾದ ಪಿ.ಎಚ್.ಪೂಜಾರ, ಹಣಮಂತ ನಿರಾಣಿ, ಕಲಾದಗಿ ಪಿಕೆಪಿಎಸ್ ಅಧ್ಯಕ್ಷರು ಹಾಗೂ ಸರ್ವ ಸದಸ್ಯರು ಮತ್ತು ಸ್ಥಳೀಯ ಭಾಜಪಾ ಮುಖಂಡರು ಸೇರಿದಂತೆ ಮುಂತಾದವರು ಸಂತಾಪ ವ್ಯಕ್ತಮಾಡಿದ್ದಾರೆ.



ಬಾದಾಮಿ: ಹಾಲುಮತ ನೌಕರರ ಸಂಘ, ಕರ್ನಾಟಕ ಪ್ರದೇಶ ಕುರುಬರ ಸಂಘ, ಬೀರಲಿಂಗೇಶ್ವರ ಸೇವಾ ಸಮಿತಿ, ನಿವೃತ್ತ ನೌಕರರ ಸಂಘ ಹಾಗೂ ಸಮಾಜದ ಎಲ್ಲ ಸಂಘಟನೆಗಳ ಸಹಯೋಗದೊಂದಿಗೆ ಜೂ.28ರಂದು ಭಾನುವಾರ ಬೀರಲಿಂಗೇಶ್ವರ ಸಮುದಾಯ ಭವನದಲ್ಲಿ ಆಯೋಜಿಸಿರುವ ಹಾಲುಮತ ಸಮಾಜದ ಪ್ರತಿಭಾ ಪುರಸ್ಕಾರದ ನಿಮಿತ್ತ ಪೂರ್ವಭಾವಿ ಸಭೆ ಬೀರಲಿಂಗೇಶ್ವರ ಸಮುದಾಯ ಭವನದಲ್ಲಿ ಜರುಗಿತು. ಕ್ಷೇತ್ರ ಸಮನ್ವಯಾಧಿಕಾರಿ ಎಂ.ಬಿ.ದೊಡ್ಡಪ್ಪನ್ನವರ, ತಾಲೂಕು ಸರಕಾರಿ ನೌಕರರ ಸಂಘದ ಅಧ್ಯಕ್ಷ ಡಾ.ಎಂ.ಎನ್. ಸಿದ್ಲಿಂಗಪ್ಪನವರ, ನಿವೃತ್ತ ನೌಕರ ವೈ.ವೈ.ದಳವಾಯಿ, ಹನಮಂತ ಅಪ್ಪನ್ನವರ, ಮಂಜುನಾಥ ಹೊಸಮನಿ ಇದ್ದರು.

ಆರೋಗ್ಯಯುತ ಬದುಕಿಗೆ ಯೋಗ ಅಗತ್ಯ

• **ಬೀಳಗಿ:** ದಿನನಿತ್ಯ ನಾವು ಜೀವನದಲ್ಲಿ ಯೋಗ ಅಳವಡಿಸಿಕೊಂಡು ಯಾವುದೇ ರೋಗರುಜಿನಗಳು ಬರದಂತೆತಡೆಯುವದು, ಮಾನಸಿಕ ಒತ್ತಡ, ಆತಂಕ ನಿವಾರಣೆಯಾಗಿ ದೈಹಿಕವಾಗಿ ಸದೃಢವಾಗಬಹುದು. ಅದರಿಂದ ಪ್ರತಿಯೊಬ್ಬರೂ ಯೋಗ ಮಾಡಿ ಆರೋಗ್ಯವಂತ ಬದುಕು ಸಾಗಿಸಿ ಎಂದು ಯೋಗಪಟು ಸಂಗಪ್ಪ ಅಗಸರ ಹೇಳಿದರು. ತಾಲೂಕಿನ ಗಿರಿಸಾಗರ ಗ್ರಾಮದ ಮಾದರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಗ್ರಾಮ ಪಂಚಾಯತಿ ಹಾಗೂ ಕೆ.ಜಿ.ಎಸ್ ಶಾಲೆ ಸಹಯೋಗದಲ್ಲಿ ಜರುಗಿದ ವಿಶ್ವಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಯೋಗ ದಿನಾಚರಣೆಗೆ ಭಾರತೀಯ ಕಿಸಾನ ಸಂಘದ ಜಿಲ್ಲಾಧ್ಯಕ್ಷ ವಿರುಪಾಕ್ಷಯ್ಯ ಹಿರೇಮಠ ಸರಸ್ವತಿದೇವಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವದರೊಂದಿಗೆ ಚಾಲನೆ ನೀಡಿ ಮಾತನಾಡಿ, ಪತಂಜಲಿ ಋಷಿಗಳು ಯೋಗದಿಂದ ನಿರೋಗಿಗಳು ಆಗಬಹುದು ಎಂದು ಕಂಡುಕೊಂಡಿದ್ದು, ಇಂದು ವಿಶ್ವಯೋಗದಿನಾಚರಣೆ ನಮ್ಮ ದೇಶದಲ್ಲಷ್ಟೇ ಅಲ್ಲದೇ ಬೇರೆ ಬೇರೆ ರಾಷ್ಟ್ರಗಳಲ್ಲಿ ವಿಶ್ವ ಯೋಗದಿನಾಚರಣೆಯನ್ನು ಆಚರಿಸುತ್ತಿದ್ದಾರೆ. ಭಾರತದ ಹೆಮ್ಮೆ, ಪ್ರಧಾನಿ ನರೇಂದ್ರ ಮೋದಿ 12 ವರ್ಷದಿಂದ ಯೋಗಕ್ಕೆ ಮಹತ್ವ ನೀಡಿ ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಆರೋಗ್ಯವಂತರಾಗಿ ತಮ್ಮನ್ನು ದೇಶ ಸೇವೆಯಲ್ಲಿ ತೊಡಗಿಸಿಕೊಂಡು ಯೋಗವನ್ನು ಜಗತ್ತಿನಾದ್ಯಂತ ಪ್ರಚುರಪಡಿಸಿದ್ದಾರೆಂದು ಹೇಳಿದರು. ಸಾಮಾಜಿಕ ಕಾರ್ಯಕರ್ತ ಶೇಖರ ಕಾಖಂಡಕಿ, ತಾಪಂ ಮಾಜಿ ಸದಸ್ಯ ಶ್ರೀಕಾಂತ ಸಂದಿಮನಿ, ಗ್ರಾಪಂ ಮಾಜಿ ಸದಸ್ಯ ಪ್ರಕಾಶ ಹೆಗ್ಗೂರ ಯೋಗದಿಂದ ಶರೀರಕ್ಕೆ ಆಗುವ ಲಾಭದ ಕುರಿತು ಮಾತನಾಡಿದರು.



ಬೀಳಗಿ: ತಾಲೂಕಿನ ಗಿರಿಸಾಗರ ಗ್ರಾಮದ ಮಾದರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಗ್ರಾಮ ಪಂಚಾಯತಿ ಹಾಗೂ ಕೆ.ಜಿ.ಎಸ್ ಶಾಲೆ ಸಹಯೋಗದಲ್ಲಿ ಜರುಗಿದ ವಿಶ್ವಯೋಗ ದಿನಾಚರಣೆ ಕಾರ್ಯಕ್ರಮ ನಡೆಯಿತು. ಪ್ರಮುಖರಾದ ಸತೀಶ ಸಿತಾಳೆ, ಭೀಮಣ್ಣ ಹರದೊಳ್ಳಿ, ಬಾಲನಗೌಡ ಪಾಟೀಲ, ಆಕಾಶರಾಜ ದೇಸಾಯಿ, ಶಿಕ್ಷಕರಾದ ಎಸ್.ಆರ್.ನದಾಫ, ಎಸ್.ಎಸ್.ಹದಗಲ್, ಜೆ.ಆರ್.ಗೋಲಗೊಂಡ, ಎಸ್.ಎ.ಕನಸೆ, ಎಲ್.ಬಿ.ಈಳಗಾರ, ಎಸ್.ಜಿ.ಗಾಣಿಗೇರ, ಟಿ.ಎಲ್.ಗುಡಿಸಾಗರ, ನೀಲಮ್ಮ ಮುಳವಾಡ, ಕೆ.ಜಿ.ದಿವಾನದ, ಎಸ್.ಜಿ.ಬಿಜ್ಜರಗಿ ಇದ್ದರು.

ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ವಿವಿಧ ಅಭಿವೃದ್ಧಿ ಕಾರ್ಯಕ್ರಮ ಅಳವಡಿಸಿಕೊಳ್ಳಿ

• **ಬಾಗಲಕೋಟೆ:** ಜಿಪಂ ಸಿಇಒ ಗಜಾನನ ಬಾಲೆ ಅವರ ಅಧ್ಯಕ್ಷತೆಯಲ್ಲಿ ಲಿಂಗ್ ಡಾಕ್ಯೂಮೆಂಟ್ ಹಾಗೂ ಅನಿರ್ಬಂಧಿತ ಅನುದಾನದ ವಾರ್ಷಿಕ ಕ್ರೀಯಾ ಯೋಜನೆ ಕುರಿತು ಪರಿಶೀಲನಾ ಸಭೆ ಜರುಗಿತು.

ಜಿಲ್ಲಾ ಪಂಚಾಯತಿ ಸಭಾಭವನದಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಪ್ರಸಕ್ತ ಸಾಲಿನ ಲಿಂಕ್ ಡಾಕ್ಯೂಮೆಂಟ್ ತಯಾರಿಕೆ, ವಿವಿಧ ಇಲಾಖೆಗಳ ಅಭಿವೃದ್ಧಿ ಕಾರ್ಯಕ್ರಮಗಳ ಸಮನ್ವಯ, ಗ್ರಾಮೀಣ ಪ್ರದೇಶಗಳ ಮೂಲಸೌಕರ್ಯ ಅಭಿವೃದ್ಧಿ ಹಾಗೂ ಜನಪರ ಯೋಜನೆಗಳ ಪರಿಣಾಮಕಾರಿ ಅನುಷ್ಠಾನದ ಕುರಿತು ಚರ್ಚೆ ನಡೆಸಲಾಯಿತು.

ಈ ವೇಳೆ ಜಿಪಂ ಸಿಇಒ ಗಜಾನನ ಬಾಲೆ ಮಾತನಾಡಿ, ಅನಿರ್ಬಂಧಿತ ಅನುದಾನದಡಿ ಕೈಗೊಳ್ಳಬೇಕಾದ ಕಾಮಗಾರಿಗಳು, ಕುಡಿಯುವ ನೀರು, ರಸ್ತೆ, ಸ್ವಚ್ಛತೆ, ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರಗಳಿಗೆ ಸಂಬಂಧಿಸಿದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಆದ್ಯತೆ ಮೇರೆಗೆ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಕ್ರಿಯಾ ಯೋಜನೆ ಅನುಮೋದನೆಗೊಂಡ ಮೇಲೆ ಮೊದಲ ಹಂತವಾಗಿ ನಿಗದಿಪಡಿಸಿದ ಅನುದಾನದಲ್ಲಿ ಪೇಮೆಂಟ್ ಆಗಬೇಕು. ವಿವಿಧ ಇಲಾಖೆಗಳ ಸ್ಟೇಷನರಿ ಖರೀದಿಗೆ ಒಂದು ಅವಧಿಗೆ ಮಾತ್ರ ಅನುಮೋದನೆ ನೀಡಲಾಗುತ್ತದೆಎಂದುತಿಳಿಸಿದರು. ಔಷಧಿ, ಶಾಲೆಗಳಿಗೆ ಡೆಸ್ಕ ಹಾಗೂ ಕ್ರೀಡಾ ಸಾಮಗ್ರಿಗಳ ಖರೀದಿ ಕಾರ್ಯ ಅಕ್ಟೋಬರ್ ಅಥವಾ ಡಿಸೆಂಬರ್ ಮಾಹೆಯಲ್ಲಿ ಖರೀದಿ ಪ್ರಕ್ರಿಯೆ ಪೂರ್ಣಗೊಳಿಸಬೇಕು. ಈ ಬಗ್ಗೆ ಜಿಲ್ಲಾ ಮಟ್ಟದ ಅಧಿಕಾರಿಗಳು ನಿರ್ವಹಣೆಗೆ ತಮ್ಮ ಹಂತದಲ್ಲಿ ತಾಲೂಕಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಲು ಸೂಚನೆ ನೀಡಿದರು. ಅಧಿಕಾರಿಗಳು ಜವಾಬ್ದಾರಿಯಿಂದ ಕೆಲಸ ನಿರ್ವಹಿಸಬೇಕು. ನೂರಕ್ಕೆ ನೂರರಷ್ಟು ನನ್ನಿಂದ ಎಲ್ಲ ರೀತಿಯ ಸಹಕಾರ ನಿಮಗೆ ದೊರೆಯುತ್ತದೆ. ಕೆಲಸ ಆಗಿಲ್ಲ ಎಂದರೆ ನಾನು ಕೇಳಲ್ಲ, ನಿಮ್ಮ ಮೇಲೆ ಸೂಕ್ತ ವಹಿಸಲಾಗುತ್ತದೆ ಎಂದರು. ಕಚೇರಿಗೆ ಬರುವ ಜನ ಸಾಮಾನ್ಯರಿಗೆ ಇಲಾಖೆಯಿಂದ ದೊರೆಯಬಹುದಾದ ಸೌಲಭ್ಯಗಳನ್ನು ತಲುಪಿಸುವ ಕೆಲಸವಾಗಬೇಕು. ಕಚೇರಿಯಿಂದ ಹೊರಗೆ ಹೋಗುವಾಗ ಸಂತೋಷದಿಂದ ಹೋಗುಂತಾಗಬೇಕು ಈ ನಿಟ್ಟಿನಲ್ಲಿ ಕೆಲಸ ಮಾಡಲು ತಿಳಿಸಿದು. ವಸತಿ ನಿಲಯಗಳಿಗೆ ಸಂಬಂಧಿಸಿದಂತೆ ಮೂಲಸೌಕರ್ಯ ಒದಗಿಸುವ ಕೆಲಸವಾಗಬೇಕು. ಅನಿರೀಕ್ಷಿತವಾಗಿ ಭೇಟಿ ನೀಡಿದ ಸಮಯದಲ್ಲಿ ಅವ್ಯವಸ್ಥೆ ಕಂಡುಬಂದಲ್ಲಿ ಸೂಕ್ತ ಕ್ರಮವಹಿಸಲಾಗುತ್ತದೆ ಎಂದು ತಿಳಿಸಿದರು.

ಅನುದಾನ ಸದ್ಬಳಕೆ, ಯೋಜನೆಗಳ ಸಕಾಲಿಕ ಅನುಷ್ಠಾನ ಹಾಗೂ ಗುರಿ ಸಾಧನೆಗೆ ಇಲಾಖೆಗಳ ನಡುವೆ ಸಮನ್ವಯ ಅಗತ್ಯವಾಗಿದೆ. ಅಭಿವೃದ್ಧಿ ಕಾಮಗಾರಿಗಳಲ್ಲಿ ಗುಣಮಟ್ಟ ಮತ್ತು ಪಾರದರ್ಶಕತೆಗೆ ಹೆಚ್ಚಿನ ಆದ್ಯತೆ ನೀಡುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಿಪಂ ಉಪ ಕಾರ್ಯದರ್ಶಿ ಎನ್.ವಾಯ್. ಬಸರಿಗಿಡದ, ಮುಖ್ಯ ಯೋಜನಾಧಿಕಾರಿ ಅಲ್ಲಮಪ್ರಭು, ಮುಖ್ಯ ಲೆಕ್ಕಾಧಿಕಾರಿ ಸಿದ್ದರಾಮೇಶ್ವರ ಉಕ್ಕಲಿ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.



ಕಾಮಗಾರಿ ಪರಿಶೀಲನೆ ನಡೆಸಿ

ಪ್ರಸಕ್ತ ಸಾಲಿಗೆ ಅನುಮೋದನೆಗೊಂಡ ಸಿವಿಲ್ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಆಗಸ್ಟ್‌ರೊಳಗಾಗಿ ಟೆಂಡರ ಪ್ರಕ್ರಿಯೆ ಮುಗಿಸಿಕೊಂಡು ಕಾಮಗಾರಿ ಪ್ರಾರಂಭವಾಗಬೇಕು. ದುರಸ್ಥಿ ಕೆಲಸಗಳಿಗೆ ಪಡೆದ ಅನುದಾನದಲ್ಲಿ ಸರಿಯಾಗಿ ಕೆಲಸ ಆಗಿರುವ ಬಗ್ಗೆ ಸಂಬಂಧಿಸಿದ ಜಿಲ್ಲಾಮಟ್ಟದ ಅಧಿಕಾರಿಗಳಿಗೆ ಕಾಮಗಾರಿ ಗುಣಮಟ್ಟದಿಂದ ಕೂಡಿರುವ ಬಗ್ಗೆ ಪರಿಶೀಲನೆ ನಡೆಸಬೇಕು. ಈ ವರ್ಷ ಕೈಗೊಂಡ ದುರಸ್ಥಿ ಕೆಲಸ ಮುಂದಿನ ವರ್ಷ ತೆಗೆದುಕೊಂಡಿರುವುದು ಕಂಡುಬಂದಲ್ಲಿ ನಿರ್ದಾಕ್ಷಣ್ಯವಾಗಿ ಕ್ರಮ ಜರುಗಿಸಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಡಾ.ಹಳಕಟ್ಟಿಯವರ ಸಾಹಿತ್ಯ ಸೇವೆ ಅನನ್ಯ

• **ತೇರದಾಳ:** ಡಾ.ಹಳಕಟ್ಟಿಯವರು ವಚನ ಸಾಹಿತ್ಯ ಉಳಿಸುವುದಕ್ಕಾಗಿ ತಮ್ಮ ಇಡೀ ಜೀವನವನ್ನೇ ಮುಡುಪಾಗಿಟ್ಟರು. ಹಳಕಟ್ಟಿಯವರು ವಚನ ಸಾಹಿತ್ಯದ ಶೋಧಕ್ಕಾಗಿ ಅನ್ನ, ನೀರು ಲೆಕ್ಕಿಸದೆ ಸೈಕಲ್ ಮೇಲೆ ಊರೂರು ಅಲೆದಾಡಿ ಸಾಕಷ್ಟು ವಚನ ಸಾಹಿತ್ಯ ಸಂಗ್ರಹ ಮಾಡಿದರು. ಡಾ.ಫ.ಗು. ಹಳಕಟ್ಟಿಯವರು ವಚನಸಾಹಿತ್ಯಕ್ಕಾಗಿ ಮಾಡಿದ ಸೇವೆ ಹಾಗೂ ತ್ಯಾಗ ನಾವು ಮರೆಯಲು ಸಾಧ್ಯವಿಲ್ಲ ಎಂದು ವಚನ ಪಿತಾಮಹ ಡಾ.ಫ.ಗು.ಹ.ರಾ. ಟ್ರಸ್ಟ್(ರಿ)ರಾಯಬಾಗದ ರಾಜ್ಯಾಧ್ಯಕ್ಷ ಡಾ.ಬಿ.ಎಂ.ಪಾಟೀಲ ಹೇಳಿದರು.

ಪಟ್ಟಣದ ಪ್ರಭುಲಿಂಗೇಶ್ವರ ಅನ್ನಪ್ರಸಾದ ಸಮಿತಿಯ ಸಭಾಭವನದಲ್ಲಿ ಜೂ.21 ರಂದು ಹಮ್ಮಿಕೊಂಡಿದ್ದ ಡಾ.ಫ.ಗು.ಹಳಕಟ್ಟಿ ರಾಷ್ಟ್ರೀಯ ಟ್ರಸ್ಟ(ರಿ)ದ ತೇರದಾಳ ತಾಲೂಕಿನ ನೂತನಘಟಕದಉದ್ಘಾಟನಾಸಮಾರಂಭದಲ್ಲಿ ಉದ್ಘಾಟಪರ ನುಡಿಗಳನ್ನಾಡಿದ ಅವರು ಫ.ಗು ಹಳಕಟ್ಟಿಯವರು ವಚನಗಳಿಗೆ ಪುನರ್ಜನ್ಮ ನೀಡಿದರು. ಹೀಗಾಗಿ ಕರ್ನಾಟಕ ಸರಕಾರ ಅವರ ಜನ್ಮದಿನವನ್ನು ವಚನಸಂರಕ್ಷಣೆ ದಿನವನ್ನಾಗಿ ಆಚರಿಸಬೇಕೆಂದು ಆದೇಶಿಸಿತು. ಇತಿಹಾಸಕಾರರುಕೇವಲ50ವಚನಕಾರರುಬಗ್ಗೆ ತಿಳಿಸಿದ್ದರು. ಆದರೆ ಹಳಕಟ್ಟಿಯವರು ಹಳ್ಳಿಹಳ್ಳಿ ತಿರುಗಾಡಿ ಸುಮಾರು 250ಕ್ಕಿಂತಲೂ ಹೆಚ್ಚು ವಚನಕಾರರನ್ನು ಹುಡುಕಿತೆಗೆದು ಇತಿಹಾಸ ಸೃಷ್ಟಿಸಿದರು. ದೇಹಕ್ಕೆ ಖಾಯಿಲೆಯಾದರೆ ಔಷಧ ತೆಗೆದುಕೊಳ್ಳಬಹುದು, ಆದರೆ ಮನಸ್ಸಿನ ಖಾಯಿಲೆಗೆ ಔಷಧವಿದೆಯೇ ಅಷ್ಟೆ ಅಲ್ಲ ನಮ್ಮಲ್ಲಿರುವ ಕೋಪ,ತಾಪ,ಶಾಪ ಎಲ್ಲದಕ್ಕೂ ವಚನಸಾಹಿತ್ಯವೇ ಪರಮ ಶ್ರೇಷ್ಠ ಔಷಧಿ?ಯಾಗಿದೆ. ವಚನ ಸಾಹಿತ್ಯವು ನಮಗೆ ಶ್ರೇಷ್ಠ ಬದುಕನ್ನು ನೀಡುತ್ತದೆ.

ಕಾರಣ ಪ್ರತಿಮನೆಯಲ್ಲೂ ವಚನಸಾಹಿತ್ಯ ವಿರಬೇಕು. ಒಳ್ಳೆಯ ಸಮಾಜಕ್ಕಾಗಿ ಮಕ್ಕಳಿಗ ವಚನಸಾಹಿತ್ಯವನ್ನು ಓದುವ ಹವ್ಯಾಸ ಬೆಳೆಸಬೇಕು. ಅಧ್ಯಕ್ಷಪರ ನುಡಿಗಳನ್ನಾಡಿದ ಪ್ರವೀಣ ನಾಡಗೌಡ ಕನ್ನಡ ನಾಡು, ನುಡಿ, ಜಲ, ಭಾಷೆಗಾಗಿ ಸದಾ ನಿಮ್ಮೊಂದಿಗೆ ಇರುತ್ತೇವೆ ಎಂದರು. ತೇರದಾಳ ತಾಲೂಕು ನೂತನ ಘಟಕದ ಅಧ್ಯಕ್ಷ ಎಸ್.ಆರ್. ರಾವಳ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಜಾಪ ಅಧ್ಯಕ್ಷ ಅಶೋಕ ಮಹಾಲಿಂಗಪುರ ಮಾತನಾಡಿದರು. ಸತ್ಯಪ್ಪ ಸುಣಗಾರ ಪ್ರಾರ್ಥಿಸಿದರು. ಪದ್ಮಸಾಗರ ನಾಗನೂರ ಸ್ವಾಗತಿಸಿದರು. ಅರ್ಚಕರಾದ ಬಸವಪ್ರಭು ತೆಳಗಿನಮನಿ, ರಾಮಣ್ಣ ಹಿಡಕಲ್, ಬಸವರಾಜ ನೀಲನೂರ ಇದ್ದರು. ಡಿ.ಎ.ಉಗಾರ ನಿರೂಪಿಸಿದರು. ವಿಠ್ಠಲ ಸನಾಯಿ ವಂದಿಸಿದರು.



ವಿದ್ಯುತ್ ಖಾಸಗೀಕರಣ ವಿರೋಧಿಸಿ ಪ್ರತಿಭಟನೆ

• **ಲೋಕಾಪುರ:** ರಾಜ್ಯ ಸರ್ಕಾರ ವಿದ್ಯುತ್ ಇಲಾಖೆಯನ್ನು ಖಾಸಗೀಕರಣಕ್ಕೆ ಮುಂದಾಗಿರುವುದು ರೈತ ಕುಲಕ್ಕೆ ಅಪಾಯಕಾರಿ ಸೂಚನೆಯಾಗಿದೆ ಎಂದು ಬಿಜೆಪಿ ಮುಖಂಡ ಅರುಣ ಕಾರಜೋಳ ಹೇಳಿದರು.

ವಿದ್ಯುತ್ ಖಾಸಗೀಕರಣ ವಿರೋಧಿಸಿ ಭಾರತೀಯ ಜನತಾ ಪಾರ್ಟಿ ಮುಧೋಳ ಗ್ರಾಮೀಣ ಮಂಡಳ ವತಿಯಿಂದ ಹಮ್ಮಿಕೊಂಡ ಪ್ರತಿಭಟನಾ ವೇಳೆಯಲ್ಲಿ ಮಾತನಾಡಿದ ಅವರು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರು ಖಾಸಗೀಕರಣ ವಿಚಾರದಲ್ಲಿ ಎಚ್ಚರಿಕೆಯಿಂದ ಹೆಜ್ಜೆ ಇಡಿ ಇಲ್ಲವಾದಲ್ಲಿ ನಿಮ್ಮ ಸರ್ಕಾರಕ್ಕೆ ತಕ್ಕ ಪಾಠ ಕಲಿಸಲಾಗುವುದು ಎಂದು ಹೇಳಿದರು.

ರೈತ ಮುಖಂಡ ವೈ.ಜಿ.ದಾಸರಡ್ಡಿ ಮಾತನಾಡಿ ಡಿ.ಕೆ ಶಿವಕುಮಾರ ಅವರೇ ಸರ್ಕಾರ ವ್ಯವಸ್ಥೆ ಮೇಲೆ ನಿಯಂತ್ರಣ ಸಾಧಿಸಲಾಗದ್ದಕ್ಕೆ ಖಾಸಗೀಕರಣ ಮಾಡಲು ಹೊರಟ್ಟಿದ್ದಾರೆ, ವಿದ್ಯುತ್ ಖಾಸಗೀಕರಣ ಆದರೆ ರೈತರ ಪರಿಸ್ಥಿತಿ ಮತ್ತಷ್ಟು ಹದಗೆಡುತ್ತದೆ ಎಂದರು.

ರೈತ ಮುಖಂಡ ಶಿವಗಿರಿಯಪ್ಪ ಅಕ್ಕಿಮರಡಿ ಮಾತನಾಡಿ, ದೇಶ ಮತ್ತು ರಾಜ್ಯಕ್ಕೆ ವಿದ್ಯುತ್ ವಲಯ ಪ್ರಾಥಮಿಕ ಆದ್ಯತೆಯಲ್ಲಿದ್ದು ವಿದ್ಯುತ್ ಇರಲಾರದೆ ಯಾರು ಸಹ ಬದುಕಲಾಗದ ಸ್ಥಿತಿ ಇದೆ, ಹೀಗಿರುವಾಗ ಜನರ, ರೈತರ ದುಡಿಯುವರ್ಗದವರ ಜೀವನಾಡಿಯಾಗಿ ಈ ವಿದ್ಯುತ್ ಕೆಲಸ ಮಾಡುತ್ತಿದೆ ಕಾರಣ ಸಾರ್ವಜನಿಕರ ನೆಮ್ಮದಿಗೆ ಸ್ಪಂದಿಸಿ ಸರ್ಕಾರ ಈ ವಿಚಾರದಿಂದ ಕೂಡಲೇ ಹೊರಗೆ ಬರದಿದ್ದರೆ ಉಗ್ರ ಚಳುವಳಿಕೆ ನಡೆಸಬಾಕಾಗುವುದು ಎಂದರು. ಬಿಜೆಪಿ ಮುಖಂಡ ಲೋಕಣ್ಣ ಕತ್ತಿ, ವಿ.ಎಂ.ತೆಗ್ಗಿ, ಎಂ.ಎಂ.ವಿರಕ್ತಮಠ ಮಾತನಾಡಿ ಟಾಟಾ ಕಂಪನಿಗೆ ಸರ್ಕಾರ ವಿದ್ಯುತ್ ಖಾಸಗೀಕರಣ ಮಾಡುತ್ತಿರುವುದುನ್ನು ಕೂಡಲೇ ಕೈ ಬಿಡಬೇಕು ಸರ್ಕಾರಿ ಸಂಸ್ಥೆಯನ್ನು ಖಾಸಗಿ ಕಂಪನಿಗೆ ವಹಿಸುವುದರಿಂದ ರೈತರ ಬದುಕಿಗೆ ಬೆಂಕಿ ಇಟ್ಟಂತಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಬಿಜೆಪಿ ಗ್ರಾಮೀಣ ಘಟಕದ ಅಧ್ಯಕ್ಷ ಸಂಗನಗೌಡ ಕಾತರಕಿ, ನಾಗಪ್ಪ ಅಂಬಿ, ಶ್ರೀಶೈಲ ಚಿನ್ನಣ್ಣವರ, ನಾರಾಯಣ(ರಾಜು) ಯಡಹಳ್ಳಿ, ಯಮನಪ್ಪ ಹೊರಟ್ಟಿ, ಬಿ.ಎಲ್. ಬಬಲಾದಿ, ಪಿಕೆಪಿಎಸ್ ಅಧ್ಯಕ್ಷ ಹೊಳಬಸು ಕಾಜಗಾರ, ವಿರೇಶ ಪಂಚಕಟ್ಟಿಮಠ, ವಿನೋದ ಘೋರ್ಪಡೆ, ಆನಂದ ಹವಳಖೋಡ, ಮಾರುತಿ ರಂಗಣ್ಣವರ, ಕೃಷ್ಣಾ ಸಾಳುಂಕಿ, ಗೋಪಾಲಗೌಡ ಪಾಟೀಲ, ಎಸ್.ಎಂ.ಹಗ್ಗದ, ಚಂಬಣ್ಣ ಕಟಗೇರಿ, ಸುರೇಶ ಹುಗ್ಗಿ, ರಮೇಶ ಪರಮೇಶ್ವರ, ಅರ್ಜುನ ಕೊಪ್ಪದ, ಶಂಕರ ರುದ್ರಾಕ್ಷಿ, ಉಮೇಶ ಕಾಗಿ, ನಿಂಗಪ್ಪ ಮುದ್ದಾಪುರ, ಕಾಶಲಿಂಗ ಮಾಳಿ, ಭೀಮಸಿ ಬೂಸರಡ್ಡಿ, ಸಿದ್ರಾಮಪ್ಪ ದೇಸಾಯಿ ಅಪಾರ ಬಿಜೆಪಿ ಮುಖಂಡರು, ಕಾರ್ಯಕರ್ತರು, ಹೋರಾಟಗಾರರು ಪಾಲ್ಗೊಂಡಿದ್ದರು.



ಅಗತ್ಯ ದಾಖಲೆಗಳ ಆಧಾರದ ಮೇಲೆ ಮಾಹಿತಿ ನೀಡಿ ಅರ್ಜಿ ಸಲ್ಲಿಸಿ

• **ಜಮಖಂಡಿ:** ಕೇಂದ್ರ ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರ ಪಟ್ಟಿಯ ವಿಶೇಷಸಂಕ್ಷಿಪ್ತ ಪರಿಷ್ಕರಣೆಯ ಅಂಗವಾಗಿ ಮತದಾರರು 2002ರ ಮತದಾರರ ಪಟ್ಟಿ ಸೇರಿದಂತೆ ಅಗತ್ಯ ದಾಖಲೆಗಳ ಆಧಾರದ ಮೇಲೆ ಮಾಹಿತಿ ನೀಡಿ ಅರ್ಜಿ ಸಲ್ಲಿಸಬೇಕು ಎಂದು ಉಪವಿಭಾಗಾಧಿಕಾರಿ ಶ್ವೇತಾ ಬೀಡಿಕರ ತಿಳಿಸಿದರು.



ನಗರದ ತಹಶೀಲ್ದಾರ್ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿಮಾತನಾಡಿದಅವರು, ಮತದಾರರ ಪಟ್ಟಿಯನ್ನು ಅತ್ಯಂತ ನಿಖರಗೊಳಿಸುವ ಉದ್ದೇಶದಿಂದ ಬೂತಮಟ್ಟದ ಅಧಿಕಾರಿಗಳು ಮನೆಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲಿದ್ದಾರೆ. ಈ ವೇಳೆ ಸಾರ್ವಜನಿಕರು ಅಗತ್ಯ ದಾಖಲೆ ಒದಗಿಸಿ ಸಹಕರಿಸಬೇಕು ಎಂದರು. ಮತದಾರರಿಗೆ ಅನುಕೂಲವಾಗುವಂತೆ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಸಹಾಯ ಕೇಂದ್ರ ತೆರೆಯಲಾಗುವುದು. ಮತದಾರರ ಪಟ್ಟಿಗೆಸಂಬಂಧಿಸಿದ ಅರ್ಜಿಗಳ ಸಲ್ಲಿಕೆ, ತಿದ್ದುಪಡಿ ಹಾಗೂ ಮಾಹಿತಿ ಪಡೆಯಲು ಸಾರ್ವಜನಿಕರು ಈ ಕೇಂದ್ರಗಳ ಸೌಲಭ್ಯ ಬಳಸಿಕೊಳ್ಳಬಹುದು. ತಾಲೂಕಿನ ಒಟ್ಟು 24 ಗ್ರಾಪಂ ಪೈಕಿ ಈಗಾಗಲೇ 12 ಗ್ರಾಪಂಗಳಲ್ಲಿ ತಹಶೀಲ್ದಾರ್ ಮತ್ತು ತಾಪಂ ಇಒ ಅವರು ತರಬೇತಿ ನೀಡಿದ್ದಾರೆ ಎಂದರು. ಬಿಎಲ್‌ಒಗಳು ನೀಡುವ ಅರ್ಜಿಗಳನ್ನು ಪ್ರತಿಯೊಬ್ಬ ಮತದಾರರು ಭರ್ತಿ ಮಾಡಿ ಕೊಡಬೇಕು. ಅರ್ಜಿ ಪಡೆದು ವಾಪಸ್ ನೀಡದಿದ್ದರೆ ಅವರನ್ನು ವಿಚಾರಣೆಗೆ ಕರೆದು ದಾಖಲೆ ಪರಿಶೀಲಿಸಲಾಗುವುದು. ಬಿಎಲ್‌ಒಗಳು ಮನೆಗೆ ಭೇಟಿ ನೀಡಿದ ಸಮಯದಲ್ಲಿ ಬೀಗ ಹಾಕಿದ್ದರೆ, ಒಟ್ಟು ಮೂರು ಬಾರಿ ಬಂದು ಹೋಗುತ್ತಾರೆ. ಆದಾಗ್ಯೂ ಮನೆ ಬಾಗಿಲು ಹಾಕಿದ್ದರೆ ಬಾಗಿಲಿಗೆ ಪರ್ಪಲ್ (ನೇರಳೆ) ಬಣ್ಣದ ಸ್ಟಿಕರ್ ಅಂಟಿಸಿ, ಅವರನ್ನು ಪತ್ತೆ ಹಚ್ಚಿ ಅರ್ಹ ಅಥವಾ ಅನರ್ಹತೆಯ ಬಗ್ಗೆ ಖಚಿತಪಡಿಸಿಕೊಳ್ಳಲಾಗುವುದು ಎಂದು ಎಚ್ಚರಿಸಿದರು. ತಹಶೀಲ್ದಾರ್ ಅನಿಲ್ ಬಡಿಗೇರ, ಗ್ರೇಡ್-2 ತಹಶೀಲ್ದಾರ್ ಬಸವರಾಜ ಸಿಂಧೂರ, ಕಂದಾಯ ನಿರೀಕ್ಷಕ ಮಂಜುನಾಥ ದೊಡ್ಡಮನಿ, ಅಶ್ಫಾಕ್ ಮೇಸ್ತ್ರಿ ಮಹಾದೇವ ಕುರಂದವಾಡ ಇದ್ದರು.

ಭಾರತದ ಅಖಂಡತೆ ಪ್ರೇರಣಾದಾಯಕ: ಚರಂತಿಮಠ

• **ಬಾಗಲಕೋಟೆ:** ರಾಷ್ಟ್ರಭಕ್ತಿ, ಸಿದ್ಧಾಂತ ನಿಷ್ಠೆ ಹಾಗೂ ಭಾರತದ ಅಖಂಡತೆ ಕಾಯ್ದುಕೊಳ್ಳಲು ಡಾ.ಶ್ಯಾಮ ಪ್ರಸಾದ್ ಮುಖರ್ಜಿ ತೋರಿದ ಬದ್ಧತೆ ಮತ್ತು ಆದರ್ಶಗಳು ಪ್ರತಿಯೊಬ್ಬರಿಗೂ ನಿರಂತರ ಪ್ರೇರಣೆಯಾಗಿವೆ ಎಂದು ಮಾಜಿ ಶಾಸಕ ವೀರಣ್ಣ ಚರಂತಿಮಠ ಹೇಳಿದರು.



ನಗರದ ಶಿವಾನಂದ ಜಿನದಲ್ಲಿರುವ ಬಿಜೆಪಿ ಕಾರ್ಯಾಲಯದಲ್ಲಿ ಭಾರತೀಯ ಜನತಾ ಪಾರ್ಟಿ ಬಾಗಲಕೋಟೆ ಮತಕ್ಷೇತ್ರದ ವತಿಯಿಂದ ಮಂಗಳವಾರ ಆಯೋಜಿಸಿದ್ದ ಭಾರತೀಯ ಜನಸಂಘದ ಸಂಸ್ಥಾಪಕ ಡಾ.ಶ್ಯಾಮ ಪ್ರಸಾದ ಮುಖರ್ಜಿ ಅವರ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾಂಜಲಿ ಸಲ್ಲಿಸುವ ಮೂಲಕ ಗೌರವ ನಮನ ಸಲ್ಲಿಸಿ ಮಾತನಾಡಿದ ಅವರು, ಪ್ರಖರ ರಾಷ್ಟ್ರೀಯವಾದಿಯಾಗಿದ್ದ ಡಾ.ಮುಖರ್ಜಿ ಅವರು ದೇಶದ ಅಖಂಡತೆ ಮತ್ತು ಏಕತೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದರು. ಭಾರತದ ಏಕತೆಗಾಗಿ ಅವರು ತೋರಿದ ಬದ್ಧತೆ ಮತ್ತು ಆದರ್ಶಗಳು ಇಂದಿಗೂ ದೇಶದ ಜನತೆಗೆ ಮಾರ್ಗದರ್ಶಿಯಾಗಿವೆ ಎಂದು ಹೇಳಿದರು.

ರಾಜ್ಯಸಭಾ ಸದಸ್ಯ ನಾರಾಯಣಸಾ ಬಾಂಡಗೆ ಮಾತನಾಡಿ, ಡಾ.ಶ್ಯಾಮ ಪ್ರಸಾದ್ ಮುಖರ್ಜಿ ಅವರು 1946ರಲ್ಲಿ ಅಖಿಲ ಭಾರತೀಯ ಹಿಂದೂ ಮಹಾಸಭೆಯ ಅಧ್ಯಕ್ಷರಾಗಿದ್ದರು. ನಂತರದಲ್ಲಿ ಆರ್‌ಎಸ್‌ಎಸ್‌ನ ಗೋಲ್ವಾಲ್ಕರ್ ಗುರೂಜಿಯವರೊಂದಿಗೆ ಸಮಾಲೋಚಿಸಿದ ಬಳಿಕ 1951ರ ಅಕ್ಟೋಬರ್ 21ರಂದು ದೆಹಲಿಯಲ್ಲಿ ಭಾರತೀಯ ಜನಸಂಘವನ್ನು ಸ್ಥಾಪಿಸಿದರು. ಅಂತಹ ಮಹನೀಯರು ಸ್ಥಾಪಿಸಿದ ಪಕ್ಷದಲ್ಲಿ ಕಾರ್ಯನಿರ್ವಹಿಸುವುದು ನಮ್ಮ ಪಾಲಿಗೆ ಹೆಮ್ಮೆಯ ಸಂಗತಿ. ರಾಷ್ಟ್ರ ರಕ್ಷಣೆ ಮತ್ತು ಸರ್ವರ ಕಲ್ಯಾಣವೇ ನಮ್ಮ ಧ್ಯೇಯವಾಗಿದ್ದು, 'ಸರ್ವೇ ಜನಾಃ ಸುಖಿನೋ ಭವಂತು' ಎಂಬ ಆಶಯದೊಂದಿಗೆ ಬಿಜೆಪಿ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿದರು.

ಡಾ.ಎಂ.ಎಸ್.ದಡ್ಡೆನ್ನವರ, ಗುಂಡುರಾವ ಶಿಂಧೆ, ಬಸವರಾಜ ಯಂಕಂಚಿ, ಸತ್ಯನಾರಾಯಣ ಹೆಮಾದ್ರಿ, ಸುರೇಶ ಕೋಣ್ಣೂರ, ಕಲ್ಲಪ್ಪ ಭಗವತಿ, ಮಲ್ಲೇಶ ವಿಜಾಪುರ, ಸವಿತಾ ಲಂಕೆನ್ನವರ, ರೇಖಾ ಕಲಬುರಗಿ, ಬಸವರಾಜ ಹುನಗುಂದ, ಉಮೇಶ ಹಂಚಿನಾಳ, ರವಿ ದಾಮಜಿ ಉಪಸ್ಥಿತರಿದ್ದರು.

ಯಲ್ಲನಗೌಡ ಪಾಟೀಲರ ಕಾರ್ಯ ಮಾದರಿ



• **ಮಹಾಲಿಂಗಪುರ:** ನಮ್ಮ ಪೂರ್ವಜರು ನಮಗೆ ನೀಡಿರುವ ಕೃಷಿ ಮತ್ತು ಗ್ರಾಮೀಣ ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ತಲುಪಿಸುವುದು ಪ್ರತಿಯೊಬ್ಬರ ಜವಾಬ್ದಾರಿ. ಯಂತ್ರಗಳ ಬಳಕೆ ಹೆಚ್ಚಾದರೂ ರೈತರು ಮತ್ತು ಎತ್ತುಗಳ ನಡುವಿನ ಬಾಂಧವ್ಯ ಎಂದಿಗೂ ಕಡಿಮೆಯಾಗುವುದಿಲ್ಲ, ಪುರಸಭಾ ಮಾಜಿ ಅಧ್ಯಕ್ಷ ಯಲ್ಲನಗೌಡ ಪಾಟೀಲ ಅವರು ಎತ್ತುಗಳ ಸಾಮರ್ಥ್ಯ ಗುರುತಿಸುವ ಹಾಗೂ ರೈತರ ಪರಿಶ್ರಮಕ್ಕೆ ಗೌರವ ಸಲ್ಲಿಸುವ ತೆರೆಬಂಡಿ ಉತ್ಸವ ಆಯೋಜಿಸುತ್ತಿರುವುದು ಮಾದರಿ ಕಾರ್ಯ ಎಂದು ಪಂಚಮಸಾಲಿ ಸಮಾಜದ ಜಿಲ್ಲಾಧ್ಯಕ್ಷ ಧರೆಪ್ಪ ಸಾಂಗಲಿಕರ ಹೇಳಿದರು.

ಬಸವೇಶ್ವರ ಜಾತ್ರಾ ಸಮಿತಿಯ ಆಶ್ರಯದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದರು. ಬಸವೇಶ್ವರ ಜಾತ್ರಾ ಸಮಿತಿಯ ಅಧ್ಯಕ್ಷ ಯಲ್ಲನಗೌಡ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ರಬಕವಿ-ಬನಹಟ್ಟಿ ಸಿಪಿಐ ಆರ್.ಆರ್.ಪಾಟೀಲ, ಚಲನಚಿತ್ರ ನಿರ್ಮಾಪಕ ಶ್ರೀಶೈಲ ಭಜಂತ್ರಿ, ನಿಂಗಪ್ಪ ಬಾಳಕಾಯಿ, ಅಶೋಕ ಅಂಗಡಿ, ಮಹಾದೇವ ಮೇಟಿ, ಯಲ್ಲಪ್ಪ ಹಟ್ಟಿ, ವಿಜುಗೌಡ ಪಾಟೀಲ, ಸದಾಶಿವ ಗೊಬ್ಬರದ, ಮಹೇಶ ಹುಬ್ಬಳ್ಳಿ, ಲಕ್ಷ್ಮಣ ಚಮಕೇರಿ, ಭೀಮಶಿ ಸನಾಲಟ್ಟಿ, ಬಸವರಾಜ ಬಂಡಿವಡ್ಡರ, ವಿಠ್ಠಲ ಧವಳೇಶ್ವರ, ಅರ್ಜುನ ದೊಡ್ಡಮನಿ, ದೇವರೇಶ ಉಳ್ಳಾಗಡ್ಡಿ, ವಿಠ್ಠಲ ಕುಳಲಿ, ಹೊಳೆಪ್ಪ ಬಾಡಗಿ, ಅರ್ಜುನ ಮೋಪಗಾರ ಇತರರಿದ್ದರು.

ಗುಡ್ಡದ ಬಸವಣ್ಣ ದೇವರ ಅನ್ನಸಂತರ್ಪಣೆ

• **ಗುಳೇದಗುಡ್ಡ:** ಇಲ್ಲಿನ ಗುಡ್ಡದಮೇಲಿನ ಗುಡ್ಡದಬಸವೇಶ್ವರ ದೇವಸ್ಥಾನದ ಬಸವಣ್ಣ ದೇವರ ಅನ್ನ ಸಂತರ್ಪಣೆ ಕಾರ್ಯಕ್ರಮ ಸಡಗರ, ಸಂಭ್ರಮದಿಂದ ನಡೆಯಿತು. ಪ್ರತಿ ವರ್ಷ ಉತ್ತಮ ಮಳೆಯಾಗಲಿ, ಒಳ್ಳೆಯ ಬೆಳೆ ಬರಲಿ ಎನ್ನುವ ಸದುದ್ದೇಶದಿಂದ ಗುಡ್ಡದ ಬಸವಣ್ಣ ದೇವರಿಗೆ ಅನ್ನ ಸಂತರ್ಪಣೆ ಕಾರ್ಯಕ್ರಮ ಪ್ರತಿವರ್ಷ ನಡೆಯುತ್ತದೆ. ಬಸವಣ್ಣ ದೇವರ ಉತ್ಸವ ಹಾಗೂ ಅನ್ನ ಸಂತರ್ಪಣೆಯನ್ನು ಬಹಳಷ್ಟು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು. ಬೆಳಗ್ಗೆ ಬಸವಣ್ಣನಿಗೆ ವಿಶೇಷ ರುದ್ರಾಭಿಷೇಕ, ಪೂಜೆಯನ್ನು ನೆರವೇರಿಸಲಾಯಿತು. ಗುಳೇದಗುಡ್ಡ, ಕೋಟೆಕಲ್ಲ, ತೋಗುಣಸಿ ಒಳಗೊಂಡು ಅನೇಕ ಗ್ರಾಮಗಳ ಅಪಾರ ಸಂಖ್ಯೆಯ ಭಕ್ತರು ದೇವಸ್ಥಾನಕ್ಕೆ ಬಂದು ಗುಡ್ಡದ ಬಸವಣ್ಣ ದೇವರ ಅನ್ನ ಸಂತರ್ಪಣೆಯಲ್ಲಿ ಪಾಲ್ಗೊಂಡು ಪುನಿತರಾದರು. ನಗರದ ಗಚ್ಚಿನಕಟ್ಟಿ ಯುವಕ ಮಿತ್ರರು ಹಾಗೂ ಹಿರಿಯರು ಸಂಘಟಿಸಿದ ಈ ಬಸವಣ್ಣ ದೇವರ ಉತ್ಸವ ಹಾಗೂ ಅನ್ನಸಂತರ್ಪಣೆಯಲ್ಲಿ ಶಿವಾನಂದ ಮಳ್ಳಿಮಠ, ಅಶೋಕ ಬೆಣ್ಣಿ, ಮಹಾದೇವಪ್ಪ ಹುನಗುಂದ, ನೂರಂದಪ್ಪ ಅಲದಿ, ಶೇಖರಪ್ಪ ಅಲದಿ, ಲಚ್ಚಪ್ಪ ಗೌಳಿ, ಶ್ರವಣ ತೊರಲಿ, ಪ್ರಶಾಂತ ಬೆಣ್ಣಿ, ಸೋಮು ಕಲ್ಬುರ್ಗಿ, ಗುರು ಜವಳಗಿ, ಸಂಜು ಬರಗುಂಡಿ, ಮಂಜು ಬರಗುಂಡಿ, ಪ್ರವೀಣ ತಿಪ್ಪಾ, ಗೋಪಾಲ ಗೌಳಿ, ರವಿ ಜೀವನಗಿ ಮತ್ತಿತರರು ಪಾಲ್ಗೊಂಡಿದ್ದರು.



ದ್ವಿದಳ ಧಾನ್ಯಗಳ ಬಗ್ಗೆ ಒತ್ತು ನೀಡಿ



• **ಕೆರೂರ:** ಮುಂಗಾರು ಮಳೆ ವಾಡಿಕೆಗಿಂತ ಕಡಿಮೆ ಪ್ರಮಾಣದಲ್ಲಿ ಸುರಿದಿದ್ದು, ರೈತರು ದ್ವಿದಳ ದಾನ್ಯಕ್ಕೆ ಹೆಚ್ಚು ಒತ್ತು ನೀಡಬೇಕು ಎಂದು ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ ಮಾಂತೇಶ ಹಟ್ಟಿ ಹೇಳಿದರು.

ಪಟ್ಟಣದ ರೈತ ಸಂಪರ್ಕ ಕೇಂದ್ರಕ್ಕೆ ಸೋಮವಾರ ಬೇಟಿ ನೀಡಿ, ರೈತರಿಗೆ ಬೀಜಗಳನ್ನು ವಿತರಿಸಿ ಮಾತನಾಡಿದರು. ಗೊಬ್ಬರದ ಅಭಾವವು ಹೆಚ್ಚಾಗುವ ಸಾಧ್ಯತೆ ಇದ್ದು, ರೈತರ ಆದಷ್ಟು ಸಾವಯುವ ಕೃಷಿ ಬಳಕೆ ಮಾಡುವುದು ಉತ್ತಮ ಎಂದು ಹೇಳಿದರು. ರೈತರು ಕಡ್ಡಾಯವಾಗಿ ಎಫ್‌ಐಡಿ ಸಂಖ್ಯೆ ಹೊಂದಿರಬೇಕು.

ಇಲ್ಲದಿದ್ದರೆ ಯಾವುದೇ ಕೃಷಿ ಸೌಲಭ್ಯಗಳು ದೊರಕುವುದಿಲ್ಲ ಎಂದರು. ರೈತರಾದ ಮಲ್ಲಪ್ಪ ಬೂವನ್ನವರ, ಹನಮಂತ ನಾಯ್ಕರ, ಚನ್ನಯ್ಯ ಆಲೂರ, ಸಹಾಯಕ ಕೃಷಿ ಅಧಿಕಾರಿ ಪರಶುರಾಮ ಗಣಿ, ಸಿಬ್ಬಂದಿ ತಿಮ್ಮರೆಡ್ಡಿ ಅರಗಂಜಿ ಇದ್ದರು.

ಉತ್ತಮ ಜೀವನಕ್ಕೆ ಯೋಗ ಅವಶ್ಯ

• **ಇಳಕಲ್:** ಚಿತ್ತರಗಿ ವಿಜಯ ಮಹಾಂತೇಶ ಎಜ್ಯುಕೇಶನ್ ಸೊಸೈಟಿ, ಇಳಕಲ್ ವಿಜಯ ಮಹಾಂತೇಶ ಕನ್ನಡ ಮತ್ತು ಆಂಗ್ಲ ಮಾಧ್ಯಮ ಪೂರ್ವ ಪ್ರಾಥಮಿಕ, ಪ್ರಾಥಮಿಕ ಹಾಗೂ ಪ್ರೌಢ ಶಾಲೆಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮ ಜರುಗಿತು.

ಶಾಲೆಯ ದೈಹಿಕ ಶಿಕ್ಷಕ ಗುರುಲಿಂಗಯ್ಯ ಎಸ್.ಮಠಪತಿ ಹಾಗೂ ಶಿಕ್ಷಕರಿಂದ ತರಬೇತಿ ಪಡೆದ ಶಾಲೆಯ ವಿದ್ಯಾರ್ಥಿಗಳು ಯೋಗಾಸನ ಮಾಡಿ, ಎಲ್ಲರ ಗಮನ ಸೆಳೆದರು. ಅಧ್ಯಕ್ಷತೆ ವಹಿಸಿದ್ದ ಪ್ರೌಢ ವಿಭಾಗದ ಮುಖ್ಯಗುರು ಆರ್.ಎಂ.ಮಾನೆ ಮಾತನಾಡಿ, ಗೊಂದಲಮಯ ಜೀವನದಿಂದ ಹೊರಬರಲು ಯೋಗ ಅತ್ಯವಶ್ಯಕ ಎಂದು ಹೇಳಿದರು. ಎಚ್‌ಪಿಎಸ್ ಇಳಕಲ್ ಶಾಲೆಯ ಮುಖ್ಯಗುರು ಸಂಗಮೇಶ ಬಂಡರಗಲ್ ಮಾತನಾಡಿ, ಪ್ರತಿದಿನ ಯೋಗಾಸನ ಮಾಡುವುದರಿಂದ ಬುದ್ಧಿಶಕ್ತಿ ಬೆಳೆಯುತ್ತದೆ ಎಂದು ಹೇಳಿದರು. ವಿದ್ಯಾರ್ಥಿಗಳು ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢವಾಗಿ ಬೆಳೆಯಲು ದಿನನಿತ್ಯ ಒಂದು ಗಂಟೆ ಯೋಗ ಮಾಡಬೇಕೆಂದು ಹೇಳಿದರು. ಯೋಗಾಸನದ ಕುರಿತು ವಿದ್ಯಾರ್ಥಿಗಳು ಭಾಷಣ ಮಾಡಿದರು. ಎಲ್ಲಾ ವಿಭಾಗದ ಮುಖ್ಯಗುರುಗಳು ಶಿಕ್ಷಕ-ಶಿಕ್ಷಕೇತರರು ಸಿಬ್ಬಂದಿ ಉಪಸ್ಥಿತರಿದ್ದರು. ತೇಜಶ್ವೀ ಕಾಟವಾ ಮತ್ತು ದಿವ್ಯಶ್ರೀ ಗೌಡರ ಪ್ರಾತಿಸಿದರು. ಸಹ-ಶಿಕ್ಷಕರಾದ ಡಿ.ಎಮ್.ಚಳಗೇರಿ ನಿರೂಪಿಸಿದರು. ಎಂ.ಬಿ.ಗಡೇದ ಸ್ವಾಗತಿಸಿದರು. ಮತ್ತು ವಾ.ಬಿ.ಕಟಂಬ್ಲಿ ವಂದಿಸಿದರು.



ವಿಜಯಪುರ

ಕಿರುಸುದ್ದಿ

ಟೂರ್ನಮೆಂಟ್ ಯಶಸ್ವಿ

ಕೊಲ್ಹಾರ: ತಾಲೂಕಿನ ಕೂಡಗಿ ಎನ್‌ಟಿಪಿಸಿಯಲ್ಲಿ ಕ್ರೀಡಾ ಮಂಡಳಿ ಮಂಡಳಿ ಹಾಗೂ ರಾಷ್ಟ್ರೀಯ ಉಷ್ಣ ವಿದ್ಯುತ್ ಘಟಕದ ಸಹಯೋಗದಲ್ಲಿ ಭಾನುವಾರ ಕೃಷ್ಣನ್ ಟೆನಿಸ್ ಕಾಂಪ್ಲೆಕ್ಸ್, ನೇತಾಜಿ ಸುಭಾಷ್ ಚಂದ್ರ ಬೋಸ್ ಕ್ರೀಡಾಂಗಣದಲ್ಲಿ ಪವರ್ ಕಪ್ 2026-ಟೆನಿಸ್ ಟೂರ್ನಮೆಂಟ್'' ಅನ್ನು ಯಶಸ್ವಿಯಾಗಿ ಆಯೋಜಿಸಲಾಗಿತ್ತು. ಪಂದ್ಯಾವಳಿಯಲ್ಲಿ ಸೋಲಾಪುರ, ಕರ್ನಾಟಕ ಪೊಲೀಸ್ ಇಲಾಖೆ, ಕಂದಾಯ ಇಲಾಖೆ, ಕೆಬಿಜೆಎನ್‌ಎಲ್-ಆಲಮಟ್ಟಿ ಮತ್ತು ಆತಿಥೇಯ-ಕೂಡಗಿಯನ್ನು ಪ್ರತಿನಿಧಿಸುವ ಆರು ತಂಡಗಳು ಉತ್ಸಾಹದಿಂದ ಭಾಗವಹಿಸಿದ್ದವು. ಉದ್ಘಾಟನಾ ಸಮಾರಂಭವನ್ನು ಕೂಡಗಿ ಎನ್‌ಟಿಪಿಸಿ-ಮುಖ್ಯಸ್ಥ ಮಧು ಎಸ್ ಮತ್ತು ಇತರ ಗಣ್ಯರು ಅಲಂಕರಿಸಿದ್ದರು. ಬಹುನಿರೀಕ್ಷಿತ ಅಂತಿಮ ಪಂದ್ಯವು ಕರ್ನಾಟಕ ಪೊಲೀಸ್ ತಂಡ ಮತ್ತು ಕಂದಾಯ ಇಲಾಖೆ ತಂಡಗಳ ನಡುವೆ ನಡೆಯಿತು. ಅಂತಿಮ ಪಂದ್ಯವು ಸ್ಮರಣೀಯ ಸ್ಪರ್ಧೆಯಾಗಿ ಪರಿಣಮಿಸಿತು. ಎರಡೂ ತಂಡಗಳು ಅಸಾಧಾರಣ ಕೌಶಲ್ಯ, ದೃಢನಿಶ್ಚಯ ಮತ್ತು ಹೋರಾಟದ ಮನೋಭಾವವನ್ನು ಪ್ರದರ್ಶಿಸಿದವು. ಪಂದ್ಯವು ಕೊನೆಯವರೆಗೂ ನಿಕಟ ಪೈಪೋಟಿಯಿಂದ ಕೂಡಿತ್ತು ಮತ್ತು ಅಂತಿಮವಾಗಿ ವಿಜೇತರನ್ನು ನಿರ್ಧರಿಸಲಾಯಿತು. ಕಂದಾಯ ಇಲಾಖೆ ತಂಡವು ಚಾಂಪಿಯನ್ ಆಗಿ ಹೊರಹೊಮ್ಮಿತು ಮತ್ತು ಪವರ್ ಕಪ್ 2026 ಟ್ರೋಫಿ ಎತ್ತಿಹಿಡಿಯಿತು. ಅಂತಿಮ ಪಂದ್ಯಗಳನ್ನು ಸಂತೋಷ ತಿವಾರಿ ಮತ್ತು ಅಧಿಕಾರಿಗಳು, ಗಣ್ಯರು ವೀಕ್ಷಿಸಿದರು.

ನಾಡಗೌಡಗೆ ಸಚಿವ ಸ್ಥಾನ ನೀಡಲು ಆಗ್ರಹ

ನಾಲತವಾಡ: ಶಾಸಕ ಸಿ.ಎಸ್.ನಾಡಗೌಡ ಅವರಿಗೆ 2ನೇ ಹಂತದ ಪಟ್ಟಿಯಲ್ಲಿ ಸಚಿವ ಸ್ಥಾನ ನೀಡಬೇಕು ಎಂದು ಕೆಪಿಸಿಸಿ ಗ್ಯಾರಂಟಿ ಸಮಿತಿಯ ಸದಸ್ಯ ಹಾಗೂ ಮಾಜಿ ಮುದ್ದೇಬಿಹಾಳ ತಾಲೂಕ ಕುರುಬರ ಸಂಘದ ಅಧ್ಯಕ್ಷ ಹನುಮಂತರಾಯ ಕುರಿ ಒತ್ತಾಯಿಸಿದ್ದಾರೆ. ನಾಡಗೌಡ ಅವರನ್ನು ಈ ಸಲ ಸಚಿವ ಸ್ಥಾನ ಕೊಟ್ಟೇ ಕೊಡುತ್ತೇವೆ ಎಂದು ಚುನಾವಣೆಯಲ್ಲಿ ಭರವಸೆ ಕೊಡುತ್ತಲೇ ಬಂದಿದ್ದು, ನಿರಾಶೆ ಮಾಡಿಸುತ್ತಿದೆ, ಮತಕ್ಷೇತ್ರದ ಜನತೆಯ ಸಹನೆ ಪರೀಕ್ಷಿಸಿದಂತಾಗುತ್ತಿದೆ. ಯಾವುದೇ ಒಂದು ಕಪ್ಪು ಚುಕ್ಕೆ ಇಲ್ಲದೇ ಶುದ್ಧ ಹಸ್ತದ ರಾಜಕೀಯ ನೆಲೆ ಕಂಡುಕೊಂಡ ಏಕೈಕ ಕಾಂಗ್ರೆಸ್ ನಾಯಕರಾಗಿದ್ದಾರೆ. ನೀರಾವರಿಗೆ, ಶಿಕ್ಷಣಕ್ಕೆ ಒತ್ತು ಕೊಟ್ಟು ಇನ್ನೂ ಹೆಚ್ಚಿನ ಜನಪರವಾಗಿ ಅಭಿವೃದ್ಧಿಗೆ ಹಸ್ತ ಹಾಕಿ ಕಾಂಗ್ರೆಸ್‌ನ ನಿಷ್ಠಾವಂತರು ಹಿರಿಯ ಶಾಸಕ ನಾಡಗೌಡ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದ್ದಾರೆ.



ಅಗ್ನಿವೀರರಾಗಿ ಆಯ್ಕೆಯಾದ ಅಜಯಗೆ ಸನ್ಮಾನ



ಸಿಂದಗಿ: ತಾಲೂಕಿನ ಮಾಡಬಾಳ ಗ್ರಾಮದ ಯುವಕ ಮಹೇಶ ಸಿದ್ದಣಗೌಡ ಕೋಟಿಖಾನಿ ಹಾಗೂ ಅಜಯ ಜಟ್ಟೆಪ್ಪ ಹುಂಡೇಕಾರ ಅವರು ಗಡಿ ಕಾಯುವ ಅಗ್ನಿವೀರ ಹುದ್ದೆಗೆ ಆಯ್ಕೆಯಾದ ಪ್ರಯುಕ್ತ ಗ್ರಾಮಸ್ಥರು ಶಾಲಾ ಆವರಣದಲ್ಲಿರುವ ಹುತಾತ್ಮ ವೀರಯೋಧ ಸೋಮಯ್ಯನ ಬಗಲಿಯವರ ಪುತ್ಥಳಿಯ ಮುಂದೆ ಸನ್ಮಾನಿಸಿ ಗೌರವಿಸಿ ಬೀಳ್ಕೊಡಲಾಯಿತು. ಮಾಜಿ ಸೈನಿಕ ಶಟ್ಟಾರಪಟೇಲ ಬಿರಾದಾರ ಮಾತನಾಡಿ, ಗಡಿಯಲ್ಲಿ ನಮ್ಮ ಯೋಧರು ಹಗಲು ರಾತ್ರಿಯನ್ನದೇ ರಕ್ಷಣೆ ಮಾಡುತ್ತಿರುವುದರಿಂದ ನಾವೆಲ್ಲ ನೆಮ್ಮದಿಯಿಂದ ಜೀವನ ನಡೆಸುತ್ತಿದ್ದೇವೆ. ದೇಶ ಸೇವೆ ಮಾಡುವುದು ಎಂದರೆ ಆದೇಯಾದ ಜೀವನವಾಗಿದೆ. ದೇಶ ಕಾರ್ಯ ಕಾರಣ ಇಂದಿನ ಯುವಕರು ದುಶ್ಚಟಗಳಿಗೆ ಬಲಿಯಾಗದೇ ಸದೃಢ ಶರೀರದೊಂದಿಗೆ ದೇಶ ಸೇವೆ ಮಾಡಲು ಮುಂದೆ ಬರಬೇಕು ಎಂದು ಕರೆ ನೀಡಿದರು. ಮಾಜಿ ಸೈನಿಕ ಮಾಬುಪಟೇಲ ಬಿರಾದಾರ, ಶಿಕ್ಷಕ ಸಂತೋಷ ಸಂದರಗಿ ಮಾತನಾಡಿ, ದೇಶ ಸೇವೆಗೆ ಗಂಡು ಹೆಣ್ಣು ಬೇದವಿಲ್ಲ ವಿದ್ಯಾರ್ಥಿ ದೆಸೆಯಿಂದಲೇ ದೇಶ ಸೇವೆ ಮಾಡುವ ಗುರಿ ಇಟ್ಟುಕೊಂಡು ಪ್ರಯತ್ನಿಸಬೇಕು. ಒಬ್ಬ ರೈತ ಹಾಗೂ ಒಬ್ಬ ಸೈನಿಕ ಈ ದೇಶಕ್ಕೆ ದೊಡ್ಡ ಶಕ್ತಿ ಇವರಿಬ್ಬರ ನಿಸ್ವಾರ್ಥ ಸೇವೆಯಿಂದ ನಾವೆಲ್ಲ ಸಮೃದ್ಧಿ ಜೀವನ ನಡೆಸಲು ಸಾಧ್ಯವಾಗಿದೆ ಎಂದರು. ಕನ್ನಡ, ಉರ್ದು ಶಾಲೆಯ ಮುಖ್ಯೋಪಾಧ್ಯಾಯರು, ಮಾಜಿ ಸೈನಿಕರಾದ ಕಲ್ಲಪ್ಪ ಹಾರಾರ, ಕಾಶಿನಾಥ ದೇಸಾಯಿ, ಎಸ್‌ಡಿಎಂಸಿ ಅಧ್ಯಕ್ಷ ಸಂಗನಗೌಡ ಪಾಟೀಲ, ಸದಸ್ಯರಾದ ಸಂತೋಷ ಬಗಲಿ, ಸಿದ್ದನಗೌಡ ಅಂಬಳನೂರ, ಮಲ್ಲಿಕಾರ್ಜುನ ಅಲ್ಲಾಪುರ, ಪ್ರಮುಖರಾದ ರಾಜೆಸಾಬ ಬಿರಾದಾರ, ದೇವರಡ್ಡಿ ಚಿಂಚೋಳಿ, ಬೀರಪ್ಪ ಬಗಲಿ, ಭೀಮಾಶಂಕರ ಅಗಸರ, ಸಿದ್ದು ಪೂಜಾರಿ, ಜಟ್ಟೆಪ್ಪ ಹುಂಡೇಕಾರ ಸೇರಿದಂತೆ ಗ್ರಾಮಸ್ಥರು, ಸಿಬ್ಬಂದಿ ಇದ್ದರು.



ಕೊಲ್ಹಾರ: ತಾಲೂಕಿನ ಕೂಡಗಿ ಎನ್‌ಟಿಪಿಸಿಯಲ್ಲಿ ಕ್ರೀಡಾ ಮಂಡಳಿ ಮಂಡಳಿ ಹಾಗೂ ರಾಷ್ಟ್ರೀಯ ಉಷ್ಣ ವಿದ್ಯುತ್ ಘಟಕದ ಸಹಯೋಗದಲ್ಲಿ ಭಾನುವಾರ ಕೃಷ್ಣನ್ ಟೆನಿಸ್ ಕಾಂಪ್ಲೆಕ್ಸ್, ನೇತಾಜಿ ಸುಭಾಷ್ ಚಂದ್ರ ಬೋಸ್ ಕ್ರೀಡಾಂಗಣದಲ್ಲಿ ಪವರ್ ಕಪ್ 2026-ಟೆನಿಸ್ ಟೂರ್ನಮೆಂಟ್'' ಅನ್ನು ಯಶಸ್ವಿಯಾಗಿ ಆಯೋಜಿಸಲಾಗಿತ್ತು.

ಸಿಸಿ ರಸ್ತೆ, ಚರಂಡಿ ನಿರ್ಮಾಣಕ್ಕೆ ಭೂಮಿಪೂಜೆ

ಸಿಂದಗಿ: ಸ್ಥಳೀಯ ನಿವಾಸಿಗಳು ಹಾಗೂ ಯುವಕರು ಸೇರಿಕೊಂಡು ಬಹುಕಾಲದಿಂದ ರಸ್ತೆ, ಚರಂಡಿ ನಿರ್ಮಾಣ ಹಾಗೂ ವಿವಿಧ ಮೂಲ ಸೌಲಭ್ಯಗಳ ಈಡೇರಿಕೆಗಾಗಿ ಬೇಡಿಕೆ ಸಲ್ಲಿಸಿದ್ದರು. ಆ ನಿಟ್ಟಿನಲ್ಲಿ ಅವರ ಮನವಿಗೆ ಸ್ಪಂದಿಸಿ ಪ್ರಥಮ ಹಂತದಲ್ಲಿ ರೂ.50 ಲಕ್ಷ ಅನುದಾನ ಸಿಸಿ ರಸ್ತೆ ಹಾಗೂ ಚರಂಡಿ ನಿರ್ಮಾಣಕ್ಕೆ ನೀಡಲಾಗಿದೆ ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು. ನಗರದ ರೇಣುಕಾ ನಗರದಲ್ಲಿ ನಗರಸಭೆ ವತಿಯಿಂದ 2025-26ನೆಯ ಸಾಲಿನ ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಹಮ್ಮಿಕೊಂಡ ಆಂತರಿಕ ರಸ್ತೆ ನಿರ್ಮಾಣದ ಭೂಮಿಪೂಜಾ ಸಮಾರಂಭವನ್ನು ನೆರವೇರಿಸಿ ಮಾತನಾಡಿದ ಅವರು, ನಗರದ ರೇಣುಕಾ ನಗರ ನಿವಾಸಿಗಳ ಬಹುದಿನಗಳ ಬೇಡಿಕೆಯಾಗಿದ್ದ ಸಿಸಿ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗೆ ರೂ.50 ಲಕ್ಷ ಅನುದಾನದಲ್ಲಿ ಕೈಗೊಳ್ಳಲಾಗುತ್ತಿರುವ ಈ ಅಭಿವೃದ್ಧಿ ಕಾಮಗಾರಿಯಿಂದ ಪ್ರದೇಶದ ಮೂಲಸೌಕರ್ಯ ಸುಧಾರಣೆಯಾಗಲಿದೆ. ಮುಂಬರುವ ದಿನಗಳಲ್ಲಿ ರೇಣುಕಾ ನಗರದ ಸಮಗ್ರ ಅಭಿವೃದ್ಧಿಗಾಗಿ ಹೆಚ್ಚುವರಿಯಾಗಿ ರೂ.1 ಕೋಟಿ ಅನುದಾನವನ್ನು ಮಂಜೂರು ಮಾಡುವುದಾಗಿ ಭರವಸೆ ನೀಡಿದರು. ನಗರಸಭೆ ಪೌರಾಯುಕ್ತ ರವಿ ಸಿರಗುಪ್ಪ, ಜೆಇ ಅಜರ್ ನಾಟಿಕಾರ, ಪುರಸಭೆ ಮಾಜಿ ಉಪಾಧ್ಯಕ್ಷ ಸಂದೀಪ ಚೌರ, ಎಂ.ಎ.ಖತೀಬ, ರಾಜಣ್ಣ ನಾರಾಯಣಕರ, ನಾರಾಯಣ ಕುಲಕರ್ಣಿ, ಕುಮಾರ ದೇಸಾಯಿ, ರಾಮು ಮೋರಟಗಿ, ಶಾಂತು ರಾಣಾಗೋಳ, ರಾಜು ಗೊಲ್ಲರ, ಸುನಂದಾ ಯಂಪುರೆ ಇದ್ದರು.



ಸಿಂದಗಿ: ನಗರದ ರೇಣುಕಾ ನಗರದಲ್ಲಿ ನಗರಸಭೆ ವತಿಯಿಂದ 2025-26ನೆಯ ಸಾಲಿನ ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಹಮ್ಮಿಕೊಂಡ ಆಂತರಿಕ ರಸ್ತೆ ನಿರ್ಮಾಣದ ಕಾಮಗಾರಿಯನ್ನು ಶಾಸಕ ಅಶೋಕ ಮನಗೂಳಿ ಭೂಮಿಪೂಜೆ ಮಾಡಿದರು. ಜಯಶ್ರೀ ಹದನೂರ, ಶಶಿಕಲಾ ಅಂಗಡಿ, ಪ್ರತಿಭಾ ಚೆಳ್ಳಗಿ, ಮಹಾನಂದ ಬಮ್ಮಣ್ಣಿ, ಸೇರಿದಂತೆ ಮುಖಂಡರು ಇದ್ದರು.

ಅಧಿಕಾರಿಗಳಿಗೆ ಸಚಿವ ಡಾ.ಎಂ.ಬಿ.ಪಾಟೀಲ ಸೂಚನೆ

ಮಳೆ ಅಭಾವ ಎದುರಿಸಲು ಸಜ್ಜಾಗಿ

ವಿಜಯಪುರ: ಜಿಲ್ಲೆಯಲ್ಲಿ ಈ ವರ್ಷ ಮಳೆ ಕಡಿಮೆಯಾಗಿರುವುದರಿಂದ ಮುಂದೆ ಉಲ್ಬಣಿಸಬಹುದಾದ ಸಮಸ್ಯೆಗಳನ್ನು ಪರಿಹರಿಸಲು ಅಧಿಕಾರಿಗಳು ಯುದ್ದೋಪಾದಿಯಲ್ಲಿ ಕಾರ್ಯನಿರ್ವಹಿಸಬೇಕು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಕರ್ಯ ಅಭಿವೃದ್ಧಿ ಸಚಿವ ಡಾ.ಎಂ.ಬಿ.ಪಾಟೀಲ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾಗಿ ತಿಳಿಸಿದರು.

ನಗರದ ಜಿಲ್ಲಾ ಪಂಚಾಯತ್ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಜನಜಾನುವಾರುಗಳಿಗೆ ಕುಡಿಯುವ ನೀರು, ಬಿತ್ತನೆ ಬೀಜ, ರಸಗೊಬ್ಬರ ಮೇವು ಎಲ್ಲ ವಿಚಾರ ಬಗ್ಗೆ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಲಾಗಿದ್ದು, ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆಯಾಗದಂತೆ ನೋಡಿಕೊಳ್ಳಲು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾಗಿ ಸಚಿವರು ತಿಳಿಸಿದರು.



ಜುಲೈ ಎರಡನೇ ವಾರ ಮಳೆ ಬರಬಹುದೆಂದು ಹವಾಮಾನ ಇಲಾಖೆ ಹೇಳಿದೆ. ಕುಡಿಯುವ ನೀರಿನ ಸಮಸ್ಯೆಯಾದ ಸಂದರ್ಭದಲ್ಲಿ ಆದಾಗ್ಯೂ ಬೋರ್‌ವೆಲ್ ಕೊರೆಯಿಸಿ, ವಿದ್ಯುತ್ ಅಳವಡಿಸಿ ನೀರು ಪೂರೈಸಲು ಸಮಯ ಬೇಕಾಗುತ್ತದೆ. ಖಾಸಗಿ ಬೋರ್‌ವೆಲ್‌ಗಳನ್ನು ಗುರುತಿಸಿಕೊಟ್ಟುಕೊಳ್ಳಲು ಸೂಚಿಸಿದ್ದಾಗಿ ಸಚಿವರು ತಿಳಿಸಿದರು.

ತಾಜ್ ಬಾವಡಿ ನೀರನ್ನು ಅನ್ಯ ಉದ್ದೇಶಕ್ಕೆ ಬಳಸಿಕೊಳ್ಳಲು ಸೂಚಿಸಲಾಗಿದೆ. ಗ್ರಾಪಂ ಮಟ್ಟದಲ್ಲಿ ಅನಿವಾರ್ಯ ಸಂದರ್ಭದಲ್ಲಿ ಖಾಸಗಿ ಬೋರವೆಲ್ ಗಳಿಂದ ಟ್ಯಾಂಕರ್ ಮೂಲಕ ನೀರು ಪೂರೈಸಲು ಸಿದ್ಧತೆ ಮಾಡಿಕೊಳ್ಳಬೇಕು ಎಂದೂ ಸೂಚಿಸಿದ್ದಾಗಿ ಸಚಿವರು ತಿಳಿಸಿದರು.

ವಿದ್ಯುತ್ ಸಮಸ್ಯೆ ಏನಿಲ್ಲ. ಬೀಜ ರಸಗೊಬ್ಬರ ಸಾಕಷ್ಟು ದಾಸ್ತಾನು ಇದೆ. ಜೋಳಕ್ಕೆ ಜಿಐ ಟ್ಯಾಗ್ ಪಡೆದುಕೊಳ್ಳಲು ಸೂಚಿಸಿದೆ. ಇದರಿಂದ ರೈತರಿಗೆ ಅನುಕೂಲವಾಗಲಿದೆ ಎಂದ ಅವರು, ಈ ವಿಷಯದಲ್ಲಿ ಜಿಲ್ಲಾಧಿಕಾರಿ ಕೆಲಸ ನಿರ್ವಹಿಸುತ್ತಿದ್ದಾರೆ. ಒಣ ದ್ರಾಕ್ಷಿ ಹಾಗೂ ದ್ರಾಕ್ಷಿಗೂ ಟ್ಯಾಕ್ ನೀಡಲು ಸೂಚಿಸಿದ್ದಾಗಿ ತಿಳಿಸಿದರು.

ಕೃಷ್ಣಾ ನದಿಯಿಂದ ನಗರಕ್ಕೆ ಇನ್ನೊಂದು ನೀರು ಸ್ಟೇಜ್ ನಿರ್ಮಾಣಕ್ಕೆ ಡಿಪಿಆರ್ ಸಿದ್ದಪಡಿಸಲು ಸೂಚಿಸಲಾಗಿದೆ ಎಂದರು. ಪ್ರತಿ ಹದಿನೈದು ದಿನಗಳಿಗೊಮ್ಮೆ ನಾನು ಸಭೆ ನಡೆಸಿ ಪರಿಶೀಲನೆ ನಡಸಲಾಗುವುದು ಎಂದರು. ಶಾಸಕರಾದ ವಿಠ್ಠಲ ಕಟಕಧೋಂಡ, ರಾಜುಗೌಡ ಪಾಟೀಲ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಗಂಗಾಧರ ಸಂಬಣ್ಣಿ, ಜಿಲ್ಲಾಧಿಕಾರಿ ಡಾ.ಆನಂದ.ಕೆ, ಜಿಪಂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ರಿಷಿ ಆನಂದ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಉಪಸ್ಥಿತರಿದ್ದರು.

ವ್ಯಸನಮುಕ್ತ ಸಮಾಜ ನಿರ್ಮಾಣಕ್ಕೆ ಕೈಜೋಡಿಸಿ

ದೇವರ ಹಿಪ್ಪರಗಿ: ಮಾದಕ ವಸ್ತುಗಳ ವ್ಯಸನವು ಇಂದಿನ ಯುವ ಪೀಳಿಗೆಯನ್ನು ದಾರಿ ತಪ್ಪಿಸುತ್ತಿದ್ದು, ಇದರ ನಿರ್ಮೂಲನೆಗೆ ಪ್ರತಿಯೊಬ್ಬರೂ ಕೈ ಜೋಡಿಸಬೇಕೆಂದು ಪಿಎಸ್ ಸಚಿನ್ ಆಲಮೇಲಕರ್ ಕರೆ ನೀಡಿದರು.

ಪೊಲೀಸ್ ಇಲಾಖೆ ಹಾಗೂ ಸ್ಥಳೀಯ ಸಿದ್ದೇಶ್ವರ ಶಾಲೆಯ ವಿದ್ಯಾರ್ಥಿಗಳ ಜಂಟಿ ಸಹಯೋಗದೊಂದಿಗೆ ಸೋಮವಾರ ನಡೆದ ಮಾದಕ ವಸ್ತುಗಳ ದುರ್ಬಳಕೆ ಮತ್ತು ಅಕ್ರಮ ಸಾಗಾಣಿಕೆ ವಿರೋಧಿ ದಿನದ ಜಾಗೃತಿ ಜಾಥಾದ ನೇತೃತ್ವ ವಹಿಸಿ ಅವರು ಮಾತನಾಡಿದರು. ಮಾದಕ ವಸ್ತುಗಳ ವ್ಯಸನ ಕೇವಲ ಒಬ್ಬ ವ್ಯಕ್ತಿಯ ಆರೋಗ್ಯವನ್ನು ಮಾತ್ರವಲ್ಲ, ಇಡೀ ಕುಟುಂಬ ಮತ್ತು ಸಮಾಜವನ್ನು ನಾಶಪಡಿಸುವ ಒಂದು ಸಾಮಾಜಿಕ ಪಿಡುಗು. ಮಾದಕ ವಸ್ತುಗಳು ನೇರವಾಗಿ ಮೆದುಳಿನ ಕಾರ್ಯನಿರ್ವಹಣೆಯ ಮೇಲೆ ದಾಳಿ ಮಾಡಿ ಆಲೋಚನಾ ಶಕ್ತಿ, ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯವನ್ನು ಕೊಂಠಿತಗೊಳಿಸುತ್ತದೆ. ಪರಿಣಾಮ ಭೀಕರ ಕಾಯಿಲೆಗಳು, ಮಾನಸಿಕ ಖಿನ್ನತೆ, ಕೌಟುಂಬಿಕ ಕಲಹ ಅಲ್ಲದೆ ಈ ವ್ಯಕ್ತಿಗಳು ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುತ್ತಾರೆ ಇಂತಹ ವ್ಯಸನಕ್ಕೆ ಏಕೈಕ ರಾಮಬಾಣವೆಂದರೆ ಯುವ ಪೀಳಿಗೆಯಲ್ಲಿ ದೃಢವಾದ ಆತ್ಮವಿಶ್ವಾಸ ಮೂಡಿಸುವುದು ಮತ್ತು ವ್ಯಸನಿಗಳನ್ನು ದ್ವೇಷಿಸದೆ ಪ್ರೀತಿಯಿಂದ ಪುನರ್ವಸತಿ ಹಾಗೂ ವೈದ್ಯಕೀಯ ಚಿಕಿತ್ಸೆಗೆ ಒಳಪಡಿಸುವುದು ಎಂದು ಹೇಳಿದರು.

> ಮಾದಕ ಮುಕ್ತ ಸಮಾಜ ನಿರ್ಮಾಣ ಮಾಡುವುದು ಕೇವಲ ಪೊಲೀಸರ ಕರ್ತವ್ಯವಲ್ಲ, ಅದು ಪ್ರತಿಯೊಬ್ಬ ಜವಾಬ್ದಾರಿಯುತ ನಾಗರಿಕನ ಕರ್ತವ್ಯ.. ಸುರಕ್ಷಿತ ಹಾಗೂ ಆರೋಗ್ಯವಂತ ಸಮಾಜಕ್ಕಾಗಿ ಕೈಜೋಡಿಸಿ. ನಿಮ್ಮ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮಾರಾಟ ಅಥವಾ ಸಾಗಾಟ ನಿಮ್ಮ ಗಮನಕ್ಕೆ ಬಂದರೆ ತಕ್ಷಣವೇ ಹತ್ತಿರದ ಪೋಲಿಸ್ ಠಾಣೆಗೆ ಕರೆ ಮಾಡಿ.
>
> ■ ಸಚಿನ್ ಆಲಮೇಲಕರ, ಪಿಎಸ್ಐ

ದೇವರ ಹಿಪ್ಪರಗಿ ಪೊಲೀಸ್ ಠಾಣೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು, ಪಟ್ಟಣದ ಪ್ರಮುಖರು ಹಾಗೂ ಯುವಕರು ಜಾಥಾದಲ್ಲಿ ಪಾಲ್ಗೊಂಡಿದ್ದರು.



ಮತ ಪರಿಷ್ಕರಣೆ ಆಧಾರದ ಮೇಲೆ ಚುನಾವಣೆ: ಶಂಕರಗೌಡ ಪಾಟೀಲ



ಝಳಕಿ: ಎಸ್ಐಆರ್ ಮತಪರಿಷ್ಕರಣೆ ಆಧಾರ ಮೇಲೆ ಚುನಾವಣೆ ಎಂದು ಬಿಎಲ್ಎಒನ್ ಜಿಲ್ಲಾ ಉಪಾಧ್ಯಕ್ಷ ಶಂಕರಗೌಡ ಪಾಟೀಲ ಹೇಳಿದರು. ಸ್ಥಳೀಯ ಪ್ರವಾಸ ಮಂದಿರ ಆವರಣದಲ್ಲಿ ನಡೆದ ಭಾರತೀಯ ಜನತಾ ಪಕ್ಷದ ಭತಗುಣಕಿ ಮಹಾ ಶಕ್ತಿ ಕೇಂದ್ರವತಿಯಿಂದ ಹಮ್ಮಿಕೊಂಡಿದ್ದ ಬಿಎಲ್ಎಟುಗಳಿಗೆ ಮತದಾರರ ಪಟ್ಟಿ ಬಗ್ಗೆ ಮಾಹಿತಿ ಹೇಳಿದರು. ಬಿಜೆಪಿ ಇಂಡಿ ಮಂಡಲ ಅಧ್ಯಕ್ಷ ಹಣಮಂತರಾಯಗೌಡ ಪಾಟೀಲ, ಕಾಸುಗೌಡ ಬಿರಾದಾರ, ರಾಘವೇಂದ್ರ ಕಾಪಸೆ, ವಿಠ್ಠಲ ಕಾಗರ, ಚನ್ನಯ್ಯ ಹಿರೇಮಠ ರಾಜು ಪವಾರ, ಶಿವಾಜಿ ಮಾನೆ ರವಿ ಹೂಗಾರ, ರಾಜುಗೌಡ ಪಾಟೀಲ ರೇವಣಸಿದ್ದ ಮೇಲಿನಮನಿ, ಪವನ ಪಾಟೀಲ್, ಹೊಟಗಾರ, ಸಿದ್ದು ಮೇತ್ರಿ, ಹಾಗೂ ಭತಗುಣಕಿ ಮಾಹಾ ಶಕ್ತಿ ಕೇಂದ್ರದ ಕಾರ್ಯಕರ್ತರು ಉಪಸ್ಥಿತರಿದ್ದರು.

ಗ್ರಾಮೀಣರು ಜಾನಪದ ಸಾಹಿತ್ಯದ ಮಾಲೀಕರು

ಬಸವನಬಾಗೇವಾಡಿ: ಜಾನಪದ ಸಾಹಿತ್ಯದ ಮಾಲಿಕರು ಗ್ರಾಮೀಣರು ಸಮುದಾಯ ಅಂಕು ಡೊಂಕುಗಳನ್ನು ತಿದ್ದುವ ಸಾಮರ್ಥ್ಯ ಜಾನಪದ ಸಾಹಿತ್ಯಕ್ಕೆ ಇದ್ದು ಸರಳ ಭಾಷೆಯಿಂದ ಕೂಡಿದ ಸಾಹಿತ್ಯ ಜಾನಪದ ಎಂದು ಆಲಮೇಲ ವಿರಕ್ತಮಠದ ಜಗದೇವ ಮಲ್ಲಿಬೊಮ್ಮಯ್ಯ ಶ್ರೀ ಹೇಳಿದರು.

ತಾಲೂಕಿನ ಇಂಗಳೇಶ್ವರ ವಚನ ಶಿಲಾಶಾಸನ ಮಂಟಪ ವಿರಕ್ತಮಠದ ಸಿದ್ದಲಿಂಗ ಶಿವಯೋಗಿಗಳ 92ನೇ ಜಾತ್ರಾ ಮಹೋತ್ಸವದಲ್ಲಿ ಜಾನಪದ ಗೋಷ್ಠಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ನಮ್ಮೆಲ್ಲರ ಹಿರಿಯರು ಜಾನಪದ ಸಂಸ್ಕೃತಿಯ ಮೌಲ್ಯಗಳನ್ನು ಪ್ರತಿಪಾದಿಸಿ ಅದರಂತೆ ನಡೆದು ಸುಂದರ ಸೌಹಾರ್ದತೆಯ ಮೂಲಕ ಜೀವನ ಕಟ್ಟಿಕೊಂಡು ಮಾದರಿಯಾಗಿದ್ದಾರೆ ಎಂದು ಹೇಳಿದರು.

ಕಜಾಸಾಪ ಜಿಲ್ಲಾಧ್ಯಕ್ಷ ಬಾಳನಗೌಡ ಪಾಟೀಲ ಅಧ್ಯಕ್ಷತೆ ವಹಿಸಿ ಮಾತನಾಡಿ, ಗ್ರಾಮೀಣರು ಜಾನಪದ ಸಾಹಿತ್ಯ ಬೆಳೆಸಿ ಉಳಿಸಿದರು, ಮೌಖಿಕ ಪರಂಪರೆಯಿಂದ ಬೆಳೆದುಬಂದ ಜನಸಾಮಾನ್ಯರ ಸಾಹಿತ್ಯವಾಗಿದೆ, ಜನಪದ ಹಾಡುಗಳು, ಕಥೆಗಳು. ಗಾದೆಗಳು, ಒಗಟುಗಳು ಪ್ರಖ್ಯಾತಗೊಂಡಿವೆ, ರಾಜ್ಯದಲ್ಲಿ ಜಾನಪದ ವಿಶ್ವವಿದ್ಯಾಲಯ ಸ್ಥಾಪನೆಯಾಗಿದ್ದು ಜನಪದರ ಆಸ್ತಿ ಎಂದರು.

ಸಾಹಿತಿ, ಶಿಕ್ಷಕ ಅಶೋಕ ಹಂಚಲಿ ಜಾನಪದ ಸಾಹಿತ್ಯದಲ್ಲಿ ಜೀವನದ ಮೌಲ್ಯಗಳು ಕುರಿತು ಮಾತನಾಡಿ ಜಾನಪದ ಸಾಹಿತ್ಯ ಸಮಾಜದ ಜೀವನಾಡಿ, ಜಾನಪದ ಹಾಡು ಮತ್ತು ಕಥೆಗಳು ಸಾಂಸ್ಕೃತಿಕ ಪರಂಪರೆಯ ಹಾಗೂ ನೈತಿಕ ಮೌಲ್ಯಗಳು ಹಾಗೂ ಬದುಕಿನ ಅನುಭವಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಮಾಧ್ಯಮವಾಗಿದೆ, ಅನೇಕ ಜಾನಪದ ಹಾಡುಗಳನ್ನು ಹಾಡಿ ರೈತರ ಪ್ರಾಮಾಣಿಕ ಜೀವನದ ಮೇಲೆ ಬೆಳಕನ್ನು ಚಲ್ಲಿದ್ದಾರೆ ಎಂದು ಹೇಳಿದರು.

ತಾ.ಸ.ನೌ.ಸಂಘದ ಅಧ್ಯಕ್ಷ ಶಿವಾನಂದ ಮಂಗಾನವರ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಬಸವರಾಜ ಹಾರಿವಾಳ, ಕಜಾಪ ತಾಲೂಕಾಧ್ಯಕ್ಷ ದೇವೇಂದ್ರ ಗೋನಾಳ, ಜಾನಪದ ಚಿಂತಕ ಬಸವರಾಜ ಸಾರವಾಡ ಜಾನಪದ ಹಾಡುಗಳನ್ನು ಹಾಡಿದರು.

ಕಸಾಪ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲಿಕಾರ ಮಾತನಾಡಿದರು. ಕಸಾಪ ತಾಲೂಕಾಧ್ಯಕ್ಷ ಶಿವಾನಂದ ಡೋಣೂರ, ರೇಖಾ ಕುಂಬಾರ, ಮಮತಾ ಮುಳಸಾವಳಗಿ ನಿರೂಪಿಸಿದರು. ರೂಪಾ ರಜಪೂತ ವಂದಿಸಿದರು. ವಿವೇಕಾನಂದ ಕಲ್ಯಾಣಶೆಟ್ಟಿ, ಬಾಬುರಾವ ಮಹಾರಾಜ, ನಿಂಗಪ್ಪ ಬೊಮ್ಮನಳ್ಳಿ, ಕಾಶಿನಾಥ ಅವಟಿ, ಎಸ್.ಎಲ್.ಓಂಕಾರ, ವೈ.ಎನ್.ಮಿಣಜಗಿ, ವಿಜಯಲಕ್ಷ್ಮೀ ಹಳಕಟ್ಟಿ, ಈರಣ್ಣ ಬೆಕಿನಾಳ, ಸಿ.ಬಿ.ಬಿರಾದಾರ ಇದ್ದರು. ಶಶಿಕಲಾ ನಾಯ್ಕೋಡಿ ಜಾನಪದ ಗೀತಗಾಯನ ಮಾಡಿದರು.



ಮಾದಕ ವ್ಯಸನಿಗಳಾಗದೇ ಉತ್ತಮ ಆರೋಗ್ಯ ಕಾಪಾಡಿಕೊಳ್ಳಿ: ಮಮದಾಪುರ

ಬಾದಾಮಿ: ವಿದ್ಯಾರ್ಥಿ ಜೀವನ ಬಂಗಾರದ ಜೀವನ. ಈ ಸಂದರ್ಭ ಜೀವನ ಬದಲಾಯಿಸುವ ಕ್ಷಣಗಳು. ವಿದ್ಯಾರ್ಥಿಗಳು ಮಾದಕ ವಸ್ತುಗಳ ಬಳಕೆ ಮಾಡದೆ ಸಜ್ಜನರ ಸಂಘದೊಂದಿಗೆ ಓದುವ ಹವ್ಯಾಸ ರೂಡಿಸಿಕೊಂಡು ನಿಮ್ಮ ಬದುಕನ್ನು ರೂಪಿಸಿಕೊಳ್ಳಬೇಕು ಎಂದು ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಮಹಾಂತೇಶ ಮಮದಾಪುರ ಹೇಳಿದರು.

ಮಂಗಳವಾರ ಇಲ್ಲಿಯ ವೀರಪುಲಿಕೇಶಿ ವಿದ್ಯಾ ಸಂಸ್ಥೆಯ ಬಸವ ಮಂಟಪದಲ್ಲಿ ಬಾಗಲಕೋಟ ಎಸ್ಪಿ ಮಾರ್ಗದರ್ಶನದಲ್ಲಿ ಬಾದಾಮಿ ಪೊಲೀಸ್ ಠಾಣೆ ಜೆಎಂಕೆ ಪಿಯು ಕಾಲೇಜು, ಆಯುರ್ವೇದ ಕಾಲೇಜು ಸಹಯೋಗದಲ್ಲಿ ಹಮ್ಮಿಕೊಂಡ ಮಾದಕ ವಸ್ತುಗಳ ಸೇವೆ ಬಳಕೆ ಹಾಗೂ ಮಾರಾಟ ತಡೆ ಅರಿವು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.



ಸಿಪಿಐ ಕರೆಯಪ್ಪ ಬನ್ನೆ ಮಾತನಾಡಿ ಮಾದಕ ವಸ್ತುಗಳ ಸೇವನೆಯಿಂದ ನಿಮ್ಮ ಬದುಕು ದುಸ್ತರ ಸ್ಥಿತಿಗೆ ತಲುಪಲಿದೆ. ವಿದ್ಯಾರ್ಥಿ ಜೀವನವೆಂದರೆ ಭವಿಷ್ಯ ರೂಪಿಸುವ ಸಮಯ. ಮಾದಕ ವಸ್ತುಗಳ ಸೇವನೆ, ಬಳಕೆ ಹಾಗೂ ಮಾರಾಟದಿಂದ ಸಮಾಜದ ಸ್ವಾಸ್ಥ್ಯ ಹಾಳಾಗಲಿದ್ದು, ಈ ಅರಿವು ನಿಮಗಿರಲಿ ಎಂಬುದು ಪೊಲೀಸ್ ಇಲಾಖೆ ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಪಿಎಸ್ಐ ಹನಮಂತ ನರಳೆ ಮಾತನಾಡಿ, ಗ್ರಾಮಗಳಿಂದ ಅತೀ ಹೆಚ್ಚು ವಿದ್ಯಾರ್ಥಿಗಳು ಪಟ್ಟಣ ಪ್ರದೇಶಗಳಿಗೆ ಕಲಿಯಲು ಬರುತ್ತಿದ್ದು, ನೀವುಗಳು ಬಹು ಎಚ್ಚರಿಕೆಯಿಂದ ನಿಮ್ಮ ಗೆಳೆತನದಲ್ಲಿ ಉತ್ತಮರೊಂದಿಗೆ ಬೆರೆಯಬೇಕು. ಇಂದಿನ ಸಣ್ಣ ಮಾದಕ ಹವ್ಯಾಸ ನಿಮ್ಮ ಜೀವನವನ್ನೆ ಹಾಳುಮಾಡಲಿದೆ. ಅಭ್ಯಾಸದ ಕಡೆ ಗಮನ ಹರಿಸಬೇಕು. ಉತ್ತಮ ಹವ್ಯಾಸಗಳ ಮೂಲಕ ನೀವು ದೇಶದ ಉತ್ತಮ ಪ್ರಜೆಗಳಾಗಬೇಕು ಎಂದರು.

ಪಿಯು ಕಾಲೇಜ ಪ್ರಾಚಾರ್ಯ ಪಿ.ಎಸ್.ಜವಳಿ, ಮೆಡಿಕಲ್ ಕಾಲೇಜು ಉಪನ್ಯಾಸಕ ಡಾ.ಗಿರೀಶ ದಾನಪ್ಪಗೌಡರ, ಎಎಸ್ಐ ನಾಗೇಶ ತಳವಾರ, ದಳವಾಯಿ, ಪಿ.ಬಿ.ಲೆಂಕೆನ್ನವರ, ನಾಡಗೌಡ್ರ, ಉಪಸ್ಥಿತರಿದ್ದರು.

ತಪ್ಪದೇ ಪೋಲಿಯೋ ಲಸಿಕೆ ಹಾಕಿಸಿ

ಮುದ್ದೇಬಿಹಾಳ: ತಾಲೂಕಿನಾದ್ಯಂತ ಜೂ.28ರಿಂದ ಜು.1ರವರೆಗೆ ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, 5 ವರ್ಷದೊಳಗಿನ ಮಕ್ಕಳಿಗೆ ತಪ್ಪದೇ ಪೋಲಿಯೋ ಲಸಿಕೆ ಹಾಕಿಸುವಂತೆ ತಹಶೀಲ್ದಾರ್ ಕೀರ್ತಿ ಚಾಲಕ ಪಾಲಕರಲ್ಲಿ ಮನವಿ ಮಾಡಿದರು.

ತಹಶೀಲ್ದಾರ್ ಕಾರ್ಯಾಲಯದಲ್ಲಿ ಸೋಮವಾರ ನಡೆದ ಪಲ್ಸ್ ಪೋಲಿಯೋ ಲಸಿಕೆ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು, ಜೂ.28ರಂದು ಬೂತ್ ಮಟ್ಟದಲ್ಲಿ ಪೋಲಿಯೋ ಲಸಿಕೆ ಹಾಕುತಿದ್ದು, ನಂತರ ಮೂರು ದಿನ ಮನೆ ಮನೆಗೆ ತೆರಳಿ ಪೋಲಿಯೋ ಲಸಿಕೆ ಹಾಕಲಾಗುತ್ತಿದೆ ಎಂದು ತಿಳಿಸಿದರು. ಪೋಲಿಯೋ ಮಾರಕ ರೋಗವಾಗಿದ್ದು, 5 ವರ್ಷದೊಳಗಿನ ಯಾವುದೇ ಮಗು ಎರಡು ಹನಿ ಪೋಲಿಯೋ ಲಸಿಕೆಯಿಂದ ವಂಚಿತರಾಗದಂತೆ ನೋಡಿಕೊಳ್ಳಬೇಕು. ಲಸಿಕಾ ಅಭಿಯಾನದ ಎರಡು ದಿನ ಮುನ್ನ ಎಲ್ಲ ಲಸಿಕಾ ಕೇಂದ್ರಗಳಲ್ಲಿ ವಿದ್ಯುತ್ ವ್ಯತ್ಯಯವಾಗದಂತೆ ಕ್ರಮವಹಿಸಲು ಹೆಸ್ಕಾಂ ಅಧಿಕಾರಿಗಳಿಗೆ ಸೂಚನೆ ನೀಡಿದ ಅವರು, ಪ್ರತಿ ಗ್ರಾಮಗಳಲ್ಲಿ ಕರಪತ್ರ, ಡಂಗೂರ ಸಾರುವ ಮೂಲಕ ಸಾರ್ವಜನಿಕರಿಗೆ ಅರಿವು ಮೂಡಿಸಬೇಕು ಎಂದರು. ಪಲ್ಸ್ ಪೋಲಿಯೊ ಆಂದೋಲನ ಕುರಿತು ತಾಲೂಕ ಆರೋಗ್ಯ ಅಧಿಕಾರಿ ಡಾ.ಸತೀಶ ತಿವಾರಿ ಮಾತನಾಡಿ, ತಾಲ್ಲೂಕಿನಾದ್ಯಂತ 5ವರ್ಷದೊಳಗಿನ ಒಟ್ಟು 39,392 ಮಕ್ಕಳು ಲಸಿಕೆ ಪಡೆಯಲಿದ್ದು, ಒಟ್ಟು 207 ಬೂತ್‌ಗಳನ್ನು ಸ್ಥಾಪಿಸಲಾಗಿದೆ. ಅಲ್ಲದೇ 6 ಮೊಬೈಲ್ ಟೀಮ್‌ಗಳನ್ನೂ ಕೂಡ ಸ್ಥಾಪಿಸಲಾಗಿದೆ. ಪ್ರತಿ ಬೂತ್‌ಗೆ ಇಬ್ಬರು ಸದಸ್ಯರು, ಐದು ತಂಡಕ್ಕೆ ಒಬ್ಬ ಮೇಲ್ವಿಚಾರಕರು ಕಾರ್ಯನಿರ್ವಹಿಸಲಿದ್ದು, ಪ್ರತಿ ಬೂತ್ ಮಟ್ಟದ ವ್ಯಾಪ್ತಿಯ ಮನೆಗಳಿಗೆ ತೆರಳಿ ಪೋಲಿಯೋ ಹನಿ ಹಾಕಲಿದ್ದಾರೆ ಲಸಿಕಾ ಕಾರ್ಯಕ್ರಮಕ್ಕೆ 414 ಸಿಬ್ಬಂದಿ, 40 ಜನ ಮೇಲ್ವಿಚಾರಕರು ಕಾರ್ಯನಿರ್ವಹಿಸಲಿದ್ದಾರೆ ಎಂದು ತಿಳಿಸಿದರು.



ಶಿಕ್ಷಣ ಇಲಾಖೆಯ ಎ.ಜೆ.ದಖನಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಎಸಿಡಿಪಿಒ ಶಿವಲೀಲಾ ಸರಗಣಾಚಾರಿ ಪುರಸಭೆಯ ಕಾರ್ಯಾಲಯದ ಜಾವಿದ್ ನಾಯ್ಕೋಡಿ ಆರೋಗ್ಯ ಇಲಾಖೆಯ ಸಿಬ್ಬಂದಿಗಳಾದ ಅನುಸುಯಾ ತೇರದಾಳ ಎಂ.ಎಸ್.ಗೌಡರ, ಎಸ್‌ಸಿ ರುದ್ರವಾಡಿ, ಪ್ರಶಾಂತ್ ಕಡಿ, ಬಸವರಾಜ ಗೋಲಭಾವಿ. ತಹಶೀಲ್ದಾರ್ ಕಾರ್ಯಾಲಯದ ಸಿಬ್ಬಂದಿ ವಿವಿಧ ಇಲಾಖೆಯ ಅಧಿಕಾರಿ ಸಿಬ್ಬಂದಿ ಹಾಜರಿದ್ದರು.

ನಾಳೆ ವಿವಿಧ ಕಾಮಗಾರಿಗೆ ಭೂಮಿಪೂಜೆ: ಸುಂಬಡ

ಆಲಮೇಲ: ಈ ಭಾಗದ ಜನತೆಯ ಬಹುದಿನಗಳ ಬೇಡಿಕೆ 39.90 ಕೋಟಿ ರೂ ವೆಚ್ಚದ ತೋಟಗಾರಿಕೆ ವಿಶ್ವವಿದ್ಯಾಲಯದ ಹಾಗೂ 44.50 ಕೋಟಿ ರೂ.ಕಡಣಿ ಗ್ರಾಮದ ಭೀಮಾ ನದಿಗೆ ಬ್ರಿಜ್ ನಿರ್ಮಾಣ ಕಾಮಗಾರಿ ಭೂಮಿಪೂಜೆ ಹಾಗೂ 20 ಕೋಟಿ ರೂ ವೆಚ್ಚದ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಪಟ್ಟಣದ ಪ್ರವಾಸಿ ಮಂದಿರದಿಂದ ಕಲ್ಬುರ್ಗಿ ರಸ್ತೆಯ ಬಡದಾಳ ಪಂಪಿನ ವರೆಗೆ ರಸ್ತೆ ಅಗಲೀಕರಣ ಹಾಗೂ ರಸ್ತೆ, ಬೀದಿ ದೀಪ್‌ಗಳ ಉದ್ಘಾಟನೆ ಕಾರ್ಯಕ್ರಮ ಜೂ.25ರಂದು ಗುರುವಾರ ನಡೆಯಲಿದೆ ಎಂದು ಪಪಂ ಅಧ್ಯಕ್ಷ ಸಾಧೀಕ ಸುಂಬಡ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, 1.86 ಕೋಟಿ ರೂ ವೆಚ್ಚದಲ್ಲಿ ಪಟ್ಟಣದ ಕಡಣಿ ಕ್ರಾಸ ನಿಂದ ವಿರಕ್ತಮಠದ ವರೆಗೆ ರಸ್ತೆ ಹಾಗೂ ಚರಂಡಿ ನಿರ್ಮಾಣ, 1.53 ಕೋಟಿ ರೂ ವೆಚ್ಚದಲ್ಲಿ ಪಟ್ಟಣದ ದೇವಣಗಾಂವ ಮುಖ್ಯ ರಸ್ತೆಯಿಂದ ಮೇನ್ ಬಜಾರದ ವರೆಗೆ ಚರಂಡಿ ಹಾಗೂ ರಸ್ತೆ ನಿರ್ಮಾಣ, ಹಾಗೂ 3 ಕೋಟಿ ರೂ ವೆಚ್ಚದ ಪಟ್ಟಣದ ತಾಲೂಕ ಕ್ರೀಡಾಂಗಣ ಕಾರ್ಯಕ್ರಮದ ಭೂಮಿಪೂಜೆ ನರೆವೇರಿಸಲು ಕಾರ್ಯಕ್ರಮಕ್ಕೆ ಸಚಿವರಾದ ಸತೀಶ ಜಾರಕಿಹೊಳಿ,ಡಾ.ಎಂ.ಬಿ.ಪಾಟೀಲ ಹಾಗೂ ಶಾಸಕ ಅಶೋಕ ಮನಗೂಳಿ ಸೇರಿದಂತೆ ಪಕ್ಷದ ಶಾಸಕರು ಹಾಗೂ ಮುಖಂಡರು ಆಗಮಿಸಲ್ಲಿದ್ದಾರೆ. ಅದಕ್ಕಾಗಿ ಪಕ್ಷದ ಕಾರ್ಯಕರ್ತರು, ಮುಖಂಡರು ಹಾಗೂ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದರು.



ಈ ಸಂದರ್ಭದಲ್ಲಿ ನಾಗರೀಕ ವೇದಿಕೆ ಅಧ್ಯಕ್ಷ ರಮೇಶ ಬಂಟನೂರ, ಎಪಿಎಂಸಿ ಮಾಜಿ ಅಧ್ಯಕ್ಷ ಪ್ರಭು ವಾಲೀಕಾರ, ತಾಪಂ ಮಾಜಿ ಸದಸ್ಯ ಬಸವರಾಜ ತೆಲ್ಲೂರ, ಪಪಂ ಸದಸ್ಯ ಭಾಗ್ಯವಂತ ಆಲಮೇಲಕರ, ಮುಖಂಡರಾದ ಭೀಮಶ್ಯಾ ಬಮ್ಮನಹಳ್ಳಿ, ಪ್ರಶಾಂತ ನಾಶಿ, ಶಿವು ರಜಪೂತ ಇದ್ದರು.

ದೇಶ ಸೇವೆ ಪವಿತ್ರ ಕಾರ್ಯ: ರವಳಿ

ಇಂಡಿ: ಗಡಿಯಲ್ಲಿ ನಮ್ಮ ಯೋಧರು ಹಗಲು-ರಾತ್ರಿಯನ್ನದೇ ರಕ್ಷಣೆ ಮಾಡುತ್ತಿರುವುದರಿಂದ ನಾವೆಲ್ಲ ನೆಮ್ಮದಿಯಿಂದ ಜೀವನ ನಡೆಸುತ್ತಿದ್ದೇವೆ. ದೇಶ ಸೇವೆ ಮಾಡೋದು ಪವಿತ್ರವಾದ ಕಾರ್ಯ ಎಂದು ಹಾಲುಮತ ಸಮಾಜದ ತಾಲೂಕು ಅಧ್ಯಕ್ಷ ಜಟ್ಟೆಪ್ಪ ರವಳಿ ಹೇಳಿದರು.

ಪಟ್ಟಣದ ನಿಂಗರಾಯ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಂಡ ಗಡಿ ಕಾಯುವ ಅಗ್ನಿವೀರ ಹುದ್ದೆಗೆ ಆಯ್ಕೆಯಾದ ಯುವಕರಿಗೆ ಸನ್ಮಾನಿಸಿ ಮಾತನಾಡಿದ ಅವರು ದೇಶ ಸೇವೆಗೆ ಗಂಡು ಹೆಣ್ಣು ಬೇಧವಿಲ್ಲ ವಿದ್ಯಾರ್ಥಿ ದೆಸೆಯಿಂದಲೇ ದೇಶ ಸೇವೆ ಮಾಡುವ ಗುರಿ ಇಟ್ಟುಕೊಂಡು ಪ್ರಯತ್ನಿಸಬೇಕು. ಒಬ್ಬ ರೈತ ಹಾಗೂ ಒಬ್ಬ ಸೈನಿಕ ಈ ದೇಶಕ್ಕೆ ದೊಡ್ಡ ಶಕ್ತಿ ಇವರಿಬ್ಬರ ನಿಸ್ವಾರ್ಥ ಸೇವೆಯಿಂದ ನಾವೆಲ್ಲ ಸಮೃದ್ಧಿ ಜೀವನ ನಡೆಸಲು ಸಾಧ್ಯವಾಗಿದೆ. ನಿಷ್ಠೆಯಿಂದ ದೇಶಕ್ಕಾಗಿ ದುಡಿಯಬೇಕು ಎಂದರು.

ಪತ್ರಕರ್ತ ಲಕ್ಷ್ಮಣ ಹಿರೇಕುರಬರ ಮಾತನಾಡಿ 40ವರ್ಷದಿಂದ ಸಮಾಜ ಸೇವೆ ಮಾಡುತಾ ಬಂದಿರುವ ಜಟ್ಟೆಪ್ಪ ರವಳಿಯವರು ಇಂದು ನಿಂಬೆನಾಡಿನ ವೀರಯೋಧರಿಗೆ ಜಾತಿ-ಮತ ಬೇದವಿಲ್ಲದೆ ಎಲ್ಲ ಯುವಕರಿಗೆ ಸನ್ಮಾನಿಸುತ್ತಿರುವದು ಶ್ಲಾಘನಿಯ ಎಂದರು.

ಲಕ್ಕು ಯಳಮೇಲಿ, ರೀಯಾಜ ಭಾಗವಾನ, ಬೀಮು ಪೂಜಾರಿ, ಹಣಮಂತ ಗುಡ್ಲ, ಪರಸುರಾಮ ಪೂಜಾರಿ, ಕೆಂಚಪ್ಪ ಬಂಗಾರಿ, ಸಿದ್ದಪ್ಪ ಬಂಗಾರಿ ಸೇರಿದಂತೆ ಮತ್ತಿತರರು ಇದ್ದರು.



ಮಹಿಳೆಯರ ಪ್ರತಿಭೆಗೆ ಸೂಕ್ತ ವೇದಿಕೆ ಸಿಗಲಿ: ನಡಹಳ್ಳಿ

ತಾಳಿಕೋಟಿ: ಇಂದಿನ ದಿನಗಳಲ್ಲಿ ಮಹಿಳೆಯರು ಪ್ರತಿಯೊಂದು ರಂಗದಲ್ಲೂ ಪುರುಷರನ್ನು ಮೀರಿಸುತ್ತಿದ್ದಾರೆ. ಹೆಣ್ಣುಮಗಳು ಮನಸ್ಸು ಮಾಡಿದರೆ ತನ್ನ ಅಡುಗೆ ಮನೆಯಿಂದಲೇ ಉದ್ಯಮಶೀಲತೆ ಯನ್ನು ಪ್ರಾರಂಭಿಸಬಹುದು. ನಿಮ್ಮ ಅಡುಗೆ ಮನೆಯನ್ನೇ ಕಾರ್ಖಾನೆಯನ್ನಾಗಿ ಪರಿವರ್ತಿಸುವಂತಹ ಅದ್ಭುತ ಶಕ್ತಿ ನಿಮ್ಮಲ್ಲಿದೆ ಎಂದು ಮಾಜಿ ಶಾಸಕ ಎ.ಎಸ್.ಪಾಟೀಲ (ನಡಹಳ್ಳಿ) ಹೇಳಿದರು.

ಪಟ್ಟಣದ ಸ್ಥಳೀಯ ಖಾಸ್ಗತೇಶ್ವರ ಸಭಾಭವನದಲ್ಲಿ ಮಂಗಳವಾರ ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ 'ಅಮ್ಮಾ ಫೌಂಡೇಶನ್(ರಿ)' ಸಂಸ್ಥೆಯ ಉದ್ಘಾಟನಾ ಸಮಾರಂಭ ನೆರವೇರಿಸಿ ಅವರು ಮಾತನಾಡಿದರು. ಪ್ರತಿಯೊಬ್ಬ ಮಹಿಳೆಯಲ್ಲೂ ಒಂದು ಕಲೆಯಿದೆ ಹಾಗೂ ಏನಾದರೂ ಸಾಧಿಸಬೇಕೆಂಬ ಇಚ್ಛಾಶಕ್ತಿಯಿದೆ.



ಅದಕ್ಕೆ ಸೂಕ್ತ ವೇದಿಕೆ ಹಾಗೂ ಪೂರಕವಾದ ವಾತಾವರಣವನ್ನು ನಿರ್ಮಾಣ ಮಾಡುವ ಕೆಲಸವನ್ನು ಅಮ್ಮಾ ಫೌಂಡೇಶನ್ ಮಾಡಬೇಕಾಗಿದೆ. 'ನಾನು ಯಾರು? ನನ್ನಲ್ಲಿ ಏನಿದೆ? ನಾನು ಸಮಾಜಕ್ಕೆ ಏನು ಕೊಡಬಲ್ಲೆ?' ಎನ್ನುವುದರ ಬಗ್ಗೆ ಪ್ರತಿಯೊಬ್ಬ ಮಹಿಳೆಯೂ ಆತ್ಮಾವಲೋಕನ ಹಾಗೂ ಚಿಂತನೆ ಮಾಡಲು ಈ ಫೌಂಡೇಶನ್ ಒಂದು ಉತ್ತಮ ವೇದಿಕೆಯಾಗಬೇಕು. ನಿರಂತರ ಚರ್ಚೆ ಮತ್ತು ಸಂವಾದ ಏರ್ಪಡಿಸಬೇಕು ಎಂದರು. ಮಾಜಿ ಶಾಸಕರಾದ ಶಿವಪುತ್ರಪ್ಪ ಎಂ.ದೇಸಾಯಿ ಹಾಗೂ ಸೋಮನಗೌಡ ಬಿ. ಪಾಟೀಲ (ಸಾಸನೂರ) ಮಾತನಾಡಿದರು. ಖಾಸ್ಗತೇಶ್ವರ ಮಠದ ಆಡಳಿತಾಧಿಕಾರಿ ಮುರಗೇಶ ವೀರಕ್ತಮಠ ದಿವ್ಯ ಸಾನ್ನಿಧ್ಯ ವಹಿಸಿದ್ದರು. ಅಮ್ಮಾ ಫೌಂಡೇಶನ್ ಅಧ್ಯಕ್ಷೆ ಬಿ.ಕೆ.ಮಣ್ಣೂರ, ಅಧ್ಯಕ್ಷತೆ ವಹಿಸಿದ್ದರು. ಎಸ್.ಆರ್. ಬೇನಾಳಮಠ, ಶೇಚಾಚಲ ಹವಾಲ್ದಾರ್, ಡಾ.ಗಂಗಾಬಿಕಾ ಪಾಟೀಲ, ವಿದ್ಯಾ ವೀರಕ್ತಮಠ, ನೂತನ ಪದಾಧಿಕಾರಿಗಳು, ಸದಸ್ಯರು ಹಾಗೂ ಪಟ್ಟಣದ ಮಹಿಳೆಯರು ಇದ್ದರು. ವಿಶಾಲಾಕ್ಷಿ ಬಡಿಗೇರ ಪ್ರಾರ್ಥಿಸಿದರು. ಸುರೇಖಾ ಬಿಳೆಭಾವಿ ಸ್ವಾಗತಿಸಿದರು. ಶ್ರೀಕಾಂತ ಪತ್ತಾರ ಮತ್ತು ಸುಮಂಗಲ ಕೋಳೂರು ನಿರೂಪಿಸಿ, ವಂದಿಸಿದರು.

ಕಿರುಸುದ್ದಿ

ಗಂಗಾದೇವಿ ಪಾದಗಟ್ಟೆ ಪ್ರತಿಷ್ಠಾಪನೆ

ಗಂಗಾವತಿ: ತಾಲೂಕಿನ ಹೊಸಳ್ಳಿ ಗ್ರಾಮದಲ್ಲಿ ಗಂಗಾದೇವಿ ದೇವಸ್ಥಾನದ ನೂತನ ಗಂಗಾದೇವಿ ಪಾದಗಟ್ಟೆ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಪರಣ್ಣ ಮುನವಳ್ಳಿ ಅವರು ಭಾಗವಹಿಸಿದರು. ಕಲ್ಮಠದ ಡಾ.ಕೊಟ್ಟೂರು ಸ್ವಾಮೀಜಿ ಹಾಗೂ ಮಾಜಿ ಶಾಸಕ ಪರಣ್ಣ ಮುನವಳ್ಳಿ ಅವರು ಧ್ವಜಾರೋಹಣದ ಮೂಲಕ ಪ್ರತಿಷ್ಠಾಪಿಸಿದರು.

ಗಂಗಾಮತ ಸಮಾಜದ ಅಧ್ಯಕ್ಷ ಸಿದ್ದಪ್ಪ ಕರಿಕುರಿ, ಡಾಣಿ ಮರಿಯಪ್ಪ, ಚಂದ್ರಪ್ಪ ಕಾಲೇದ್, ಯಂಕಪ್ಪ ಬೋವೇರ್, ಶ್ರೀನಾಥ್, ಚನ್ನಬಸವಸ್ವಾಮಿ ಕಲ್ಮಠ, ಬಸವರಾಜ್ ಉಪ್ಪಾರ್, ಮಹೇಶ್ ವೋಟಿ ಹಾಗೂ ಗಂಗಾಮತ ಸಮಾಜದ ಬಾಂಧವರು ಉಪಸ್ಥಿತರಿದ್ದರು.

ಚೆಕ್‌ಡ್ಯಾಂಗಳ ಕಾಮಗಾರಿ ಅವೈಜ್ಞಾನಿಕ: ಆರೋಪ

ಮಾನ್ವಿ: ಚೆಕ್‌ಡ್ಯಾಂಗಳನ್ನು ಅವೈಜ್ಞಾನಿಕವಾಗಿ, ಕಳಪೆಯಾಗಿ ನಿರ್ಮಾಣ ಮಾಡಿದ್ದಾರೆ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಮಿತಿಯ ಜಿಲ್ಲಾಧ್ಯಕ್ಷರಾದ ಬಸವರಾಜ ನಕ್ಕುಂದಿ ಆರೋಪಿಸಿದರು.

ಪಟ್ಟಣದ ತಾಪಂ ಆವರಣದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಸಾಮಾಜಿಕ ನ್ಯಾಯಕ್ಕಾಗಿ ಚಳವಳಿ ಜಿಲ್ಲಾ ಸಮಿತಿ ರಾಯಚೂರು ಹಾಗೂ ಕರ್ನಾಟಕ ರಾಜ್ಯ ಸುರಕ್ಷಾ ಶ್ರಮಿಕ ವರ್ಗ ಕಟ್ಟಡ ನಿರ್ಮಾಣ ಮತ್ತು ಅಸಂಘಟಿತರ ಕಾರ್ಮಿಕ ಸಂಘ, ದಲಿತ ಸಮರ ಸೇನೆ, ಕರ್ನಾಟಕ ಸ್ಲಮ್ ಜನರ ಕ್ರಿಯಾ ವೇದಿಕೆ, ಕರ್ನಾಟಕ ದಲಿತ ಸಂಘರ್ಷ ಸಮಿತಿ ಭೀಮಬಣ ಸಂಘಟನೆಯಾ ಸಂಯುಕ್ತಾಶ್ರಯದಲ್ಲಿ ಮಾನ್ವಿ ಮತ್ತು ಸಿರವಾರ ತಾಲೂಕುಗಳಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಚೆಕ್‌ಡ್ಯಾಂಗಳನ್ನು ಅವೈಜ್ಞಾನಿಕವಾಗಿ ಕಳಪೆ ಗುಣಮಟ್ಟದಲ್ಲಿ ಕೈಗೊಂಡಿರುವುದನ್ನು ವಿರೋಧಿಸಿ ಅವರು ಮಾತನಾಡಿದರು. ರಾಜ್ಯ ಸರಕಾರವು ಅಂತರ್ಜಲಮಟ್ಟವನ್ನು ವೃದ್ಧಿಸುವುದು, ರೈತರ ಜಮೀನುಗಳಿಗೆ ನೀರು ಹರಿಸುವುದಕ್ಕೆ ಅಗತ್ಯ ನೀರಾವರಿ ಸೌಲಭ್ಯವನ್ನು ಕಲ್ಪಿಸುವ ಉದ್ದೇಶದಿಂದ ಹಳ್ಳಗಳಿಗೆ, ನಾಲೆಗಳಿಗೆ, ಗುಡ್ಡಗಾಡು ಪ್ರದೇಶವಿರುವ ಕಡೆ ಚೆಕ್ ಡ್ಯಾಂ ಗಳನ್ನು ನಿರ್ಮಾಣಮಾಡುವ ಕಾಮಗಾರಿಯನ್ನು ಕೈಗೊಂಡಿದು ಮಾನ್ವಿ ಮತ್ತು ಸಿರವಾರ ತಾಲೂಕುಗಳಲ್ಲಿ 80 ಕ್ಕೂ ಹೆಚ್ಚು ಚೆಕ್ ಡ್ಯಾಂಗಳನ್ನು ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳು ಅತ್ಯಂತ ಅವೈಜ್ಞಾನಿಕವಾಗಿ ಕಳಪೆ ಗುಣಮಟ್ಟದಲ್ಲಿ ಕೈಗೊಂಡಿದ್ದು ನಿಯವದಂತೆ ಎಸ್ ಇಪಿ, ಟಿಎಸ್‌ಪಿ ಯೋಜನೆಯಡಿಯಲ್ಲಿ ದಲಿತರ ಜಮೀನುಗಳಿಗೆ ನೀರವಾರಿಯನ್ನು ಕಲ್ಪಿಸುವುದಕ್ಕಾಗಿ ಪಜಾತಿ, ಪಂಗಡ ಸಮುದಾಯಗಳ ರೈತರ ಜಮೀನಿರುವ ಕಡೆ ಚೆಕ್ ಡ್ಯಾಂಗಳನ್ನು ಕಟ್ಟದೆ ಸಾಮಾನ್ಯ ವರ್ಗಕ್ಕೆ ಸೇರಿದ ರೈತರು ಹೆಚ್ಚಿರುವ ಕಡೆ ಚೆಕೆಡ್ಯಾಂಗಳನ್ನು ನಿರ್ಮಾಣ ಮಾಡಲಾಗಿರುವುದರಿಂದ ಪ.ಜಾತಿ, ಪಂಗಡ ಸಮುದಾಯಗಳ ರೈತರಿಗೆ ಅನ್ಯಾಯವಾಗಿದೆ. ಅದ್ದರಿಂದ ಸರಕಾರದಿಂದ ಚೆಕ್ ಡ್ಯಾಂಗಳ ನಿರ್ಮಾಣದಲ್ಲಿ ನಡೆದಿರುವ ಅವ್ಯಾವಹರವನ್ನು ಸಂಪೂರ್ಣವಾಗಿ ತನಿಖೆಗೆ ಒಳಪಡಿಸಿ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಸೂಕ್ತವಾದ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಕಾರ್ಮಿಕ ಸಂಘದ ಅಧ್ಯಕ್ಷರಾದ ಪರಶುರಾಮ್ ಬಾಗಲವಾಡ, ದಲಿತ ಚಳುವಳಿ ತಾ.ಅಧ್ಯಕ್ಷರಾದ ಚಂದ್ರಶೇಖರ ನಾಯಕ, ದಲಿತ ಸಮರ ಸೇನೆ ತಾ.ಅಧ್ಯಕ್ಷರಾದ ಅನೀಲ್ ಕುಮಾರ, ದಲಿತ ಸಂಘರ್ಷ ಸಮಿತಿ ಜಿಲ್ಲಾ ಪ್ರ.ಕಾರ್ಯದರ್ಶಿ ನರಸರೆಡ್ಡಿ, ವಿದ್ಯಾರ್ಥಿ ಒಕ್ಕೂಟದ ರಾಜ್ಯ ಪ್ರ.ಕಾರ್ಯದರ್ಶಿ ಪ್ರಶಾಂತ್ ಜಾಗೀರ್ ಪನ್ನೂರ್, ದ.ಸಂಘರ್ಷ ಸಮಿತಿ ಕಾರ್ಯದರ್ಶಿ ವೆಂಕಟೇಶ್, ಅಮರೇಶ್ ಜಾಗೀರ್ ಪನ್ನೂರು, ಶಾಂತರಾಜ್ ಪನ್ನೂರ್ ಸೇರಿದಂತೆ ಇನ್ನಿತರರು ಇದ್ದರು.

ಟ್ರಾಫಿಕ್ ಪ್ರಕರಣ: ಶೇ.50 ರಿಯಾಯಿತಿ

ವಿಜಯನಗರ: ಜಿಲ್ಲೆಯ ಟ್ರಾಫಿಕ್ ಪೊಲೀಸ್ ಠಾಣೆಯಲ್ಲಿ ಬಾಕಿ ಇರುವ ವಾಹನಗಳ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಿಗೆ ಸಂಬಂಧಿಸಿದಂತೆ, ಶೇ.50 ರಷ್ಟು ದಂಡ ಪಾವತಿಸಿ ಪ್ರಕರಣ ಇತ್ಯರ್ಥಪಡಿಸಿಕೊಳ್ಳಲು ಸಾರ್ವಜನಿಕರಿಗೆ ಸುವರ್ಣಾವಕಾಶ ಕಲ್ಪಿಸಲಾಗಿದೆ. 1991 ರಿಂದ 2022 ರ ಅವಧಿಯಲ್ಲಿ ದಾಖಲಾಗಿರುವ ಪ್ರಕರಣಗಳಿಗೆ ಮಾತ್ರ ಈ ರಿಯಾಯಿತಿ ಅನ್ವಯವಾಗುತ್ತದೆ. ದಂಡ ಪಾವತಿಸಲು ಜೂ.21ರಿಂದ ಜು.10ರವರೆಗೆ ಅಂದರೆ 20 ದಿನಗಳ ಅವಕಾಶ ನೀಡಲಾಗಿದೆ. ಈ ರಿಯಾಯಿತಿಯಡಿ ದಂಡ ಪಾವತಿಸಿ, ತಮ್ಮ ಪ್ರಕರಣಗಳನ್ನು ಇತ್ಯರ್ಥಗೊಳಿಸಿಕೊಳ್ಳಬಹುದು ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿ ದಾಮೋದರ್ ತಿಳಿಸಿದ್ದಾರೆ.



ಗಂಗಾವತಿ: ತಾಲೂಕಿನ ಹೊಸಳ್ಳಿ ಗ್ರಾಮದಲ್ಲಿ ಗಂಗಾದೇವಿ ದೇವಸ್ಥಾನದ ನೂತನ ಗಂಗಾದೇವಿ ಪಾದಗಟ್ಟೆ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಪರಣ್ಣ ಮುನವಳ್ಳಿ ಅವರು ಭಾಗವಹಿಸಿದರು. ಕಲ್ಮಠದ ಡಾ.ಕೊಟ್ಟೂರು ಸ್ವಾಮೀಜಿ ಹಾಗೂ ಮಾಜಿ ಶಾಸಕ ಪರಣ್ಣ ಮುನವಳ್ಳಿ ಅವರು ಧ್ವಜಾರೋಹಣದ ಮೂಲಕ ಪ್ರತಿಷ್ಠಾಪಿಸಿದರು.


ಬಸವರಾಜ ಪಾಟೀಲ ಗೆಲುವು: ಸನ್ಮಾನ

ಕಲಬುರಗಿ: ಮಹಾರಾಷ್ಟ್ರ ವಿಧಾನ ಪರಿಷತ್ (ಎಂಎಲ್‌ಸಿ) ಚುನಾವಣೆಯ ಉಸ್ಮಾನಾಬಾದ್-ಲಾತೂರ್-ಬೀಡ್ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಬಸವರಾಜ ಪಾಟೀಲ ಭರ್ಜರಿ ಗೆಲುವು ಸಾಧಿಸಿರುವ ಹಿನ್ನೆಲೆಯಲ್ಲಿ ಕಲಬುರಗಿ ಬಿಜೆಪಿ ಹಿರಿಯ ಮುಖಂಡ ಗಿರಿರಾಜ್ ಯಳಮೇಲಿ ಅಭಿನಂದನೆ ಸಲ್ಲಿಸಿದ್ದಾರೆ.

ಮಹಾ ವಿಕಾಸ್ ಅಘಾಡಿ (ಕಾಂಗ್ರೆಸ್) ಅಭ್ಯರ್ಥಿ ಮಹೇಶ್ ದೇಶಮುಖ್ ಅವರನ್ನು 844 ಮತಗಳ ಭಾರೀ ಅಂತರದಿಂದ ಸೋಲಿಸಿ ಬಸವರಾಜ ಪಾಟೀಲ್ ವಿಜಯಶಾಲಿಯಾಗಿರುವುದು ಬಿಜೆಪಿ ಕಾರ್ಯಕರ್ತರಲ್ಲಿ ಉತ್ಸಾಹ ಮೂಡಿಸಿದೆ ಎಂದು ಅವರು ತಿಳಿಸಿದ್ದಾರೆ.

ಬಸವರಾಜ ಪಾಟೀಲ್ ಅವರ ಗೆಲುವು ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವ, ಬಿಜೆಪಿ ಸಂಘಟನೆಯ ಬಲ ಹಾಗೂ ಜನಪರ ಆಡಳಿತಕ್ಕೆ ದೊರೆತ ಬೆಂಬಲದ ಪ್ರತೀಕವಾಗಿದೆ ಎಂದು ಯಳಮೇಲಿ ಅಭಿಪ್ರಾಯಪಟ್ಟಿದ್ದಾರೆ.

ನವ ಆಯ್ಕೆಯಾದ ವಿಧಾನ ಪರಿಷತ್ ಸದಸ್ಯ ಬಸವರಾಜ ಪಾಟೀಲ್ ಅವರು ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಶ್ರಮಿಸಿ ಜನರ ನಿರೀಕ್ಷೆಗಳನ್ನು ಈಡೇರಿಸಲಿದ್ದಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದ ಗಿರಿರಾಜ್ ಯಳಮೇಲಿ, ಅವರ ಮುಂದಿನ ರಾಜಕೀಯ ಪಯಣ ಯಶಸ್ವಿಯಾಗಲಿ ಎಂದು ಶುಭ ಹಾರೈಸಿದ್ದಾರೆ.ಈ ಸಂದರ್ಭದಲ್ಲಿ ಮುಖಂಡರಾದ ಸಂಗಮೇಶ ಕಲ್ಯಾಣಿ, ವಿರೇಂದ್ರ ಭಾಸರೆಡ್ಡಿ, ಪ್ರವೀಣ್ ಸೇರಿದಂತೆ ಇತರೆ ಮುಖಂಡರು ಉಪಸ್ಥಿತರಿದ್ದರು.



ಕಲಬುರಗಿ: ಮಹಾರಾಷ್ಟ್ರ ವಿಧಾನ ಪರಿಷತ್ (ಎಂಎಲ್‌ಸಿ) ಚುನಾವಣೆಯ ಉಸ್ಮಾನಾಬಾದ್-ಲಾತೂರ್-ಬೀಡ್ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಬಸವರಾಜ ಪಾಟೀಲ ಭರ್ಜರಿ ಗೆಲುವು ಸಾಧಿಸಿರುವ ಹಿನ್ನೆಲೆಯಲ್ಲಿ ಕಲಬುರಗಿ ಬಿಜೆಪಿ ಹಿರಿಯ ಮುಖಂಡ ಗಿರಿರಾಜ್ ಯಳಮೇಲಿ ಅಭಿನಂದನೆ ಸಲ್ಲಿಸಿದ್ದಾರೆ.

ಜಿಲ್ಲೆಯ ಕೀರ್ತಿಗೆ ಮತ್ತೊಂದು ಗರಿ

- ಕಲಬುರಗಿ ದಕ್ಷತೆಗೆ ರಾಜ್ಯ ಮಟ್ಟದ ಮಾನ್ಯತೆ
- 6 ಪೊಲೀಸ್ ಅಧಿಕಾರಿಗಳಿಗೆ ಪ್ರತಿಷ್ಠಿತ ಡಿಜಿ-ಐಜಿಪಿ ಪದಕ



ಕಲಬುರಗಿ: ಪೊಲೀಸ್ ಇಲಾಖೆಯಲ್ಲಿನ ಅಪ್ರತಿಮ ಕರ್ತವ್ಯನಿಷ್ಠೆ, ಸಂಕೀರ್ಣ ಅಪರಾಧಗಳ ಪತ್ತೆ ಹಾಗೂ ಸಾರ್ವಜನಿಕ ಸೇವೆಯಲ್ಲಿ ತೋರಿದ ವಿಶಿಷ್ಟ ಕೊಡುಗೆಯನ್ನು ಪರಿಗಣಿಸಿ ಕಲಬುರಗಿ ಜಿಲ್ಲೆಯ ಆರು ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಪ್ರತಿಷ್ಠಿತ 'ಡೈರೆಕ್ಟರ್ ಜನರಲ್ ಹಾಗೂ ಇನ್‌ಸ್ಪೆಕ್ಟರ್ ಜನರಲ್ ಆಫ್ ಪೊಲೀಸ್' (ಡಿಜಿ-ಐಜಿಪಿ) ಪದಕ ಪ್ರಕಟಿಸಲಾಗಿದೆ. ಈ ಗೌರವವು ಜಿಲ್ಲೆಯ ಪೊಲೀಸ್ ಇಲಾಖೆಯ ದಕ್ಷತೆಗೆ ಸಾಕ್ಷಿಯಾಗಿದೆ.

ಐಜಿಪಿ ಶಂತನು ಸಿನ್ಹಾ, ಎಸ್ಪಿ ಅಡ್ಡೂರು ಶ್ರೀನಿವಾಸುಲುಗೆ ಪ್ರಶಸ್ತಿ

ರಾಜ್ಯ ಪೊಲೀಸ್ ಇಲಾಖೆಯ ಅತ್ಯುನ್ನತ ಪುರಸ್ಕಾರಗಳಲ್ಲಿ ಒಂದಾದ ಈ ಪದಕಕ್ಕೆ ಕಲಬುರಗಿ ವಲಯದ ಪೊಲೀಸ್ ಮಹಾನಿರೀಕ್ಷಕ (ಐಜಿಪಿ) ಶಂತನು ಸಿನ್ಹಾ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ (ಎಸ್ಪಿ) ಅಡ್ಡೂರು ಶ್ರೀನಿವಾಸುಲು ಸೇರಿದಂತೆ ವಿವಿಧ ಹಂತಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳು ಆಯ್ಕೆಯಾಗಿದ್ದಾರೆ. ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ವಹಿಸಿದ ದಕ್ಷತೆ ಮತ್ತು ಇಲಾಖೆಯಲ್ಲಿ ತಂದ ಸುಧಾರಣೆಗಳಿಗಾಗಿ ಈ ಮನ್ನಣೆ ಸಿಕ್ಕಿದೆ.

ವಿವಿಧ ಘಟಕಗಳಲ್ಲಿ ಗಮನಾರ್ಹ ಸಾಧನೆ ಮಾಡಿದ ಅಧಿಕಾರಿಗಳು: ಪದಕ ಪುರಸ್ಕೃತರ ಪೈಕಿ ಪ್ರಮುಖ ಅಧಿಕಾರಿಗಳಾದ ಶರಣಬಸಪ್ಪ ಕೋಡ್ಲಿ, ಚಂದ್ರಶೇಖರ ಗುರಿಕಾರ ಹಾಗೂ ಅರುಣಕುಮಾರ ಅವರುಗಳು ಸಹ ತಮ್ಮ ಸೇವಾ ಅವಧಿಯಲ್ಲಿ ವಿವಿಧ ಜಿಲ್ಲೆಗಳು ಮತ್ತು ಪೊಲೀಸ್ ಘಟಕಗಳಲ್ಲಿ ಕಾರ್ಯನಿರ್ವಹಿಸಿ ಗಮನಾರ್ಹ ಸಾಧನೆ ಮಾಡಿದ್ದಾರೆ. ಜಟಿಲ ಅಪರಾಧ ತನಿಖೆ, ಸಾರ್ವಜನಿಕರೊಂದಿಗೆ ಉತ್ತಮ ಬಾಂಧವ್ಯ ಬೆಳೆಸುವ ಮೂಲಕ ಇಲಾಖೆಯ ಕಾರ್ಯಕ್ಷಮತೆಯನ್ನು ಹೆಚ್ಚಿಸುವಲ್ಲಿ ಇವರು ಪ್ರಮುಖ ಪಾತ್ರ ವಹಿಸಿದ್ದಾರೆ. ಪ್ರಾಮಾಣಿಕ ಸೇವೆ ಸಲ್ಲಿಸುವ ಅಧಿಕಾರಿಗಳಿಗೆ ಡಿಜಿ-ಐಜಿಪಿ ಪದಕವು ಸದಾ ದೊಡ್ಡ ಪ್ರೋತ್ಸಾಹ ನೀಡುತ್ತದೆ. ಇದು ಕೇವಲ ಅಧಿಕಾರಿಗಳ ಸಾಧನೆಯಲ್ಲ, ಇಡೀ ಕಲಬುರಗಿ ಜಿಲ್ಲೆಯ ಪೊಲೀಸ್ ಸಿಬ್ಬಂದಿಯ ಸಮರ್ಪಣಾ ಮನೋಭಾವದ ಪ್ರತೀಕವಾಗಿದೆ.

ಗಣ್ಯರಿಂದ ಅಭಿನಂದನೆಗಳ ಸುರಿಮಳೆ

ಪ್ರಶಸ್ತಿ ಲಭಿಸಿದ ಹಿನ್ನೆಲೆಯಲ್ಲಿ ಜಿಲ್ಲೆಯ ವಿವಿಧ ಸಾಮಾಜಿಕ ಸಂಘಟನೆಗಳು, ಸಾರ್ವಜನಿಕರು ಹಾಗೂ ಗಣ್ಯರು ಅಧಿಕಾರಿಗಳಿಗೆ ಹಾರ್ದಿಕ ಅಭಿನಂದನೆ ಸಲ್ಲಿಸಿದ್ದಾರೆ. ಮುಂದಿನ ದಿನಗಳಲ್ಲೂ ಇದೇ ರೀತಿಯ ನಿಷ್ಠೆ ಮತ್ತು ಬದ್ಧತೆಯಿಂದ ಜನಸ್ನೇಹಿ ಸೇವೆ ಮುಂದುವರಿಯಲಿ ಎಂದು ಶುಭ ಹಾರೈಸಿದ್ದಾರೆ. ಈ ಹೆಮ್ಮೆಯ ಸಾಧನೆ ಜಿಲ್ಲೆಯ ಪೊಲೀಸ್ ಇಲಾಖೆಯ ಘನತೆಯನ್ನು ರಾಜ್ಯ ಮಟ್ಟದಲ್ಲಿ ಮತ್ತಷ್ಟು ಎತ್ತರಕ್ಕೇರಿಸಿದೆ.



ಮಾನ್ವಿ: ಚೆಕ್‌ಡ್ಯಾಂಗಳನ್ನು ಅವೈಜ್ಞಾನಿಕವಾಗಿ, ಕಳಪೆ ಕಾಮಗಾರಿ ಖಂಡಿಸಿ ಪಟ್ಟಣದ ತಾಪಂ ಆವರಣದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಸಾಮಾಜಿಕ ನ್ಯಾಯಕ್ಕಾಗಿ ಚಳವಳಿ ಜಿಲ್ಲಾ ಸಮಿತಿ ಸೇರಿದಂತೆ ವಿವಿಧ ಸಂಘಟನೆಗಳ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ

ರಾಯಚೂರು: ಗ್ರಾಮೀಣ ಕ್ಷೇತ್ರದ ಶಾಸಕ ಹಾಗೂ ಕರ್ನಾಟಕ ಶ್ರೀಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸನಗೌಡ ದದ್ದಲ ಕ್ಷೇತ್ರದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ಹಾಗೂ ಉದ್ಘಾಟನೆ ನೆರವೇರಿಸಿದರು.

ಆಶಾಪೂರ ಗ್ರಾಮದಲ್ಲಿ ಕೆಕೆಆರ್‌ಡಿಬಿ ಮೈಕ್ರೋ ಯೋಜನೆಯಡಿ ನಿರ್ಮಿಸಿರುವ ಸ.ಹಿ.ಶಾಲೆಯ ಎರಡು ಶಾಲಾ ಕೊಠಡಿಗಳು, ಗಾರಲದಿನ್ನಿ ಗ್ರಾಮದಲ್ಲಿ ಕೆಕೆಆರ್‌ಡಿಬಿಯ ಮೈಕ್ರೋ ಯೋಜನೆಯಡಿ 2 ಕೋಟಿ 66 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾದ ಸ.ಪ್ರೌ.ಶಾಲೆಯ ನೂತನ ಕಟ್ಟಡದ ಉದ್ಘಾಟನೆಯನ್ನು ನೆರವೇರಿಸಿದರು.

ಗಾರಲದಿನ್ನಿ ಗ್ರಾಮದಲ್ಲಿ 10 ಲಕ್ಷ ರೂ. ಅನುದಾನದಲ್ಲಿ ಶ್ರೀಮಾರೆಮ್ಮವ್ವ ದೇವಸ್ಥಾನ ನಿರ್ಮಾಣ ಕಾರ್ಯದ ಭೂಮಿಪೂಜೆ ನೆರವೇರಿಸಿದರು. ಉಡಮಗಲ್-ಖಾನಾಪೂರ ಗ್ರಾಮದಲ್ಲಿ ಕೆಕೆಕಾರ್‌ಡಿಬಿಯ 3 ಕೋಟಿ ಅನುದಾನದಲ್ಲಿ ಹಿಂದುಳಿದ ವರ್ಗಗಳ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರತವೇರಿಸಿದರು.

ಮಾತನಾಡಿದ ಶಾಸಕ ಬಸನಗೌಡ ದದ್ದಲ, ಕ್ಷೇತ್ರದ ಅಭಿವೃದ್ಧಿಯೇ ನಮ್ಮ ಸಂಕಲ್ಪ, ಜನಸೇವೆಯೇ ನಮ್ಮ ಧ್ಯೇಯವಾಗಿದೆ. ಬಡ, ಹಿಂದುಳಿದ ಹಾಗೂ ರೈತರ ಮಕ್ಕಳು ಶಿಕ್ಷಣವನ್ನು ಪಡೆದು ಸಮಾಜದ ಮುಖ್ಯವಾಹಿನಿಗೆ ಬರುವಂತೆ ಕರೆ ನೀಡಿದರು. ಶಿಕ್ಷಣವನ್ನು ಪಡೆದವರನ್ನು ಸಮಾಜ ಮೇಲು ಕೀಳು ಎನ್ನದೆ ಎಲ್ಲರನ್ನು ಸಮಾನವಾಗಿ ಕಾಣುತ್ತದೆ. 371ಜೆ ಕಲ್ಯಾಣ ಕರ್ನಾಟಕ ಭಾಗದ ವಿದ್ಯಾರ್ಥಿಗಳಿಗೆ ಬಹಳಷ್ಟು ಉದ್ಯೋಗಗಳು ದೊರೆಯುವಂತೆ ಮಾಡಿದೆ. ಅಂದಾಜು 13 ಸರಕಾರಿ ಪ್ರೌಢ ಶಾಲೆಗಳು, 8 ಕೆಪಿಎಸ್ ಶಾಲೆಗಳು ಮಂಜೂರು ಮಾಡಲಾಗಿದೆ. 2 ಬಾರಿ ಶಾಸಕಾಗಿ ಸುಮಾರು 100 ಕೋಟಿ ರೂ. ಹೆಚ್ಚು ಶಿಕ್ಷಣ ಇಲಾಖೆಗೆ ಅನುದಾನವನ್ನು ನೀಡಲಾಗಿದೆ, ಪ್ರತಿ ಗ್ರಾಮೀಣ ಪ್ರದೇಶದ ಹಳ್ಳಿಗಳಲ್ಲಿ ಕೆಲಸ ಕಾರ್ಯಗಳನ್ನು ಮಾಡುವಂತದು ನನ್ನ ಕರ್ತವ್ಯ ಎಂದು ಹೇಳಿದರು. ಗ್ರಾಮದ ಹಿರಿಯ ಮುಖಂಡರುಗಳು, ಸುತ್ತಮುತ್ತಲಿನ ಗ್ರಾಮಗಳ ಮುಖಂಡರುಗಳು, ಗ್ರಾಮಸ್ಥರು, ನಾಮನಿರ್ದೇಶನ ಸದಸ್ಯರುಗಳು, ಅಧಿಕಾರಿಗಳಿದ್ದರು.



ಅಪ್ಪನ ಪ್ರೀತಿ, ತ್ಯಾಗ, ಕಾಳಜಿ ಅಪಾರವಾದದ್ದು

ಶ್ರೀರಾಮನಗರ: ಗಂಗಾವತಿ ತಾಲೂಕಿನ ಶ್ರೀರಾಮನಗರದ ನಮ್ಮ ಶ್ರೀವಿದ್ಯಾನಿಕೇತನ ಪಬ್ಲಿಕ್ ಶಾಲೆಯಲ್ಲಿ ಅಪ್ಪ ಅಂದರೆ ಆಕಾಶ ಎಂಬ ಶೀರ್ಷಿಕೆಯ ಅಡಿಯಲ್ಲಿ ಅಪ್ಪಂದಿರ ದಿನಾಚರಣೆಯನ್ನು ಅತ್ಯಂತ ಅರ್ಥಪೂರ್ಣವಾಗಿ ಸಂಭ್ರಮದಿಂದ ಆಚರಿಸಲಾಯಿತು.

ಈ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಸಂಸ್ಥೆಯ ಅಧ್ಯಕ್ಷ ನೆಕ್ಕಂಟಿ ಸೂರಿಬಾಬು ಅವರು, ಮಕ್ಕಳಲ್ಲಿ ಉತ್ತಮ ಜೀವನ ಮೌಲ್ಯಗಳನ್ನು ಬೆಳೆಸುವಲ್ಲಿ ಪಾಲಕರು ಮಹತ್ವದ ಪಾತ್ರವನ್ನು ವಹಿಸುತ್ತಾರೆ. ಕುಟುಂಬದ ಮುಖ್ಯಸ್ಥನಾಗಿ ತಂದೆಯ ಪಾತ್ರ ಅತ್ಯಂತ ಮಹತ್ವದ್ದಾಗಿದ್ದು, ಮಕ್ಕಳ ಮೇಲೆ ಅತ್ಯಂತ ಪರಿಣಾಮವನ್ನು ಬೀರುವಂತಹ ವ್ಯಕ್ತಿ ತಂದೆಯಾಗಿದ್ದು, ಅಪ್ಪನ ಪ್ರೀತಿ, ತ್ಯಾಗ, ಕಾಳಜಿ ಮತ್ತು ಜವಾಬ್ದಾರಿ ಅಪಾರವಾದದ್ದು, ಆದ್ದರಿಂದ ಮಕ್ಕಳು ತಮ್ಮ ತಂದೆ ತಾಯಿಗಳನ್ನು, ಗುರು ಹಿರಿಯರನ್ನು ಗೌರವ ಭಾವದಿಂದ ಕಾಣಬೇಕು ಎಂದು ತಿಳಿಸಿದರು.

ಶಾಲೆಯ ಉಪಾಧ್ಯಕ್ಷರಾದ ನೆಕ್ಕಂಟಿ ಆದರ್ಶ ಅವರು ಅಪ್ಪಂದಿರ ದಿನಾಚರಣೆಯ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಪಾಲಕರು ಕಾರ್ಯಕ್ರಮದ ಕುರಿತು ಮೆಚ್ಚುಗೆಯನ್ನು ವ್ಯಕ್ತಪಡಿಸಿ ಅಪ್ಪಂದಿರ ದಿನಾಚರಣೆಯ ಕುರಿತು ಮಾತನಾಡಿದರು.

ಮಕ್ಕಳು ತಮ್ಮ ತಂದೆಗೆ ಕಿರೀಟವನ್ನು ತೊಡೆಸಿ ವಿಶೇಷವಾದ ಕಾಣಿಕೆಗಳನ್ನು ನೀಡಿ, ಅಪ್ಪನ ಕುರಿತ ಹಾಡುಗಳಿಗೆ ನೃತ್ಯವನ್ನು ಮಾಡುವ ಮೂಲಕ ಅಪ್ಪನಿಗೆ ತಮ್ಮ ಪ್ರೀತಿಯನ್ನು ಪ್ರಸ್ತುತಪಡಿಸಿದರು.

ಭಾಗವಹಿಸಿದ್ದ ಪಾಲಕರು ತಮ್ಮ ಮಕ್ಕಳೊಂದಿಗೆ ಸಂತೋಷದಿಂದ ನೃತ್ಯವನ್ನು ಮಾಡಿ ಆನಂದಿಸಿದರು.

ಶಾಲೆಯ ಸಿಇಓ ನರೇಶ್, ಶೈಕ್ಷಣಿಕ ನಿರ್ದೇಶಕ ಕೃಷ್ಣವೇಣಿ ಎಸ್., ಕ್ಯಾಂಪಸ್ ಮ್ಯಾನೇಜರ್ ಜಿ.ನಾಗೇಶ್ವರರಾವ್, ಉಪ ಪ್ರಾಂಶುಪಾಲ ಲಕ್ಷ್ಮೀ ಜೆ. ಪಿಆರ್ ಎಂ.ನಿಂಗಪ್ಪ, ಕಾರ್ಯದರ್ಶಿ ಮಂಜುನಾಥ, ವಸತಿ ನಿಲಯದ ಮುಖ್ಯಸ್ಥರಾದ ಕಾಳೇಶ್, ಪಿಆರ್‌ಓ ಮಲ್ಲನಗೌಡ ಪಾಟೀಲ, ಶಾಲೆಯ ಶಿಕ್ಷಕವೃಂದ, ಸಿಬ್ಬಂದಿ, ಪಾಲಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.



ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ

ಸಿಂಧನೂರು: ತಾಲೂಕಿನ ವಿವಿಧ ಗ್ರಾಮಗಳ ಕೃಷಿ ಕೂಲಿಕಾರರ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ಕೃಷಿ ಮತ್ತು ಗ್ರಾಮೀಣ ಕಾರ್ಮಿಕರ ಸಂಘದ ತಾಲೂಕು ಘಟಕದಿಂದ ನಗರದ ಪ್ರವಾಸಿ ಮಂದಿರದಿಂದ ಗಾಂಧಿ ವೃತ್ತದ ಮೂಲಕ ತಾಪಂ ಹಾಗೂ ಮಿನಿವಿಧಾನ ಸೌಧ ಕಚೇರಿಯವರೆಗೆ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.

ಸಂಘದ ರಾಜ್ಯ ಘಟಕದ ಅಧ್ಯಕ್ಷ ಚಂದ್ರಪ್ಪ ಹೊಸಕೆರೆ ಮಾತನಾಡಿ, ವಿರೂಪಾಪುರ ಗ್ರಾಮದ ಕರಿಯಮ್ಮ ಅಯ್ಯಪ್ಪ,ಗಂಗಮ್ಮ ಹನುಮಂತಪ್ಪ ಹರಿಜನ, ತಾಯಮ್ಮ ಟೀಕಪ್ಪ, ದೇವಿಕಮ್ಮ ಕರಿಯಮ್ಮ ಅವರಿಗೆ ಡಿಆರ್‌ಪಿ ಭೂ ಒಡೆತನ ಯೋಜನೆಯಲ್ಲಿ ಗುಂಜಳ್ಳಿ ಸೀಮಾದ ಸರ್ವೆ ನಂ.184/5 ಕ್ಷೇತ್ರ 9.7 ಎಕರೆ ಜಮೀನು ಮಂಜೂರಾಗಿದ್ದು,ಕೂಡಲೇ ಪಟ್ಟಾ ನೀಡಬೇಕು. ವಿರೂಪಾಪುರ ಸೀಮಾದ ಸರ್ವೆ ನಂ.304/★/10 ಕ್ಷೇತ್ರ 1 ಎಕರೆ ಜಮೀನು ವೀರಭದ್ರಗೌಡ ಶಿವನಗೌಡ ಮಲ್ಲದಗುಡ್ಡ ಅವರ ಹೆಸರಿನಲ್ಲಿ ಪಹಣಿ ಪತ್ರಿಕೆ, ಪಟ್ಟಾ ಇದೆ. ಆದರೆ ಕೃಷಿ ಚಟುವಟಿಕೆ ನಡೆಸಲು ಗೌರಮ್ಮ ಬಸವರಾಜ, ಶಂಕ್ರಪ್ಪ ಸೂಗಪ್ಪ, ವೀರಭದ್ರಪ್ಪ ಶಂಕ್ರಪ್ಪ ಹಾಗೂ ಶಿವನಗೌಡ ಚನ್ನಪ್ಪಗೌಡ ಅವರು ಅಡಚಣೆ ಮಾಡುತ್ತಿದ್ದಾರೆ. ಅವರ ವಿರುದ್ಧ ಕಾನೂನು ಕ್ರಮ ಕೈಗೊಂಡು ಉಳುಮೆ ಮಾಡಲು ರೈತರಿಗೆ ಅನುಕೂ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ಮಲ್ಲದಗುಡ್ಡ ಗ್ರಾಮದ ಕಾಲುವೆ ಪಕ್ಕದಲ್ಲಿ ಕಳೆದ 60 ವರ್ಷಗಳಿಂದ 80ಕ್ಕೂ ಹೆಚ್ಚು ಕುಟುಂಬಗಳು ತಗಡಿನ ಶೆಡ್, ಗುಡಿಸಲು ಹಾಕಿಕೊಂಡು ವಾಸಿಸುತ್ತಿದ್ದು



ಅವರಿಗೆ ನಿವೇಶನ ಮಂಜೂರು ಮಾಡಿ ವಸತಿ ಯೋಜನೆಯಡಿ ಮನೆ ನಿರ್ಮಿಸಿ ಕೊಡಬೇಕು ಎಂದರು.

ನಂತರ ಪ್ರಧಾನ ಕಾರ್ಯದರ್ಶಿ ಅಪ್ಪಣ್ಣ ಕಾಂಬಳೆ ಮಾತನಾಡಿ, ಕೆಂಗಲ್ ಗ್ರಾಮದ 110ಕ್ಕೂ ಹೆಚ್ಚು ಫಲಾನುಭವಿಗಳ ಖಾತೆಗೆ ಯೋಜನೆಯ ಹಣ ಪಾವತಿಸಬೇಕು. 150ಕ್ಕೂ ಹೆಚ್ಚು ಫಲಾನುಭವಿಗಳಿಗೆ ಮಾಸಾಶನ ಪಾವತಿಯಾಗಿಲ್ಲ.ಅರಳಹಳ್ಳಿ ಗ್ರಾಮದ ಕೂಲಿಕಾರರಿಗೆ ಸೌಲಭ್ಯಗಳಿಲ್ಲ. ಜನರಿಗೆ ನರೇಗಾ ಯೋಜನೆಯ ಬಗ್ಗೆ ಸರಿಯಾದ ಮಾಹಿತಿ ನೀಡುತ್ತಿಲ್ಲ.ಈ ಬಗ್ಗೆ ತಾಪಂ ಇಒ ಗಮನ ಹರಿಸಿ ಕ್ರಮಕ್ಕೈಗೊಳ್ಳಬೇಕು.

ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಕರಿಯಪ್ಪ ಹಚ್ಚೊಳ್ಳಿ, ಸಿಪಿಐಎಂ ಜಿಲ್ಲಾ ಘಟಕದ ಕಾರ್ಯದರ್ಶಿ ಕೆ.ಜಿ.ವೀರೇಶ, ತಾಲೂಕು ಘಟಕದ ಅಧ್ಯಕ್ಷ ಶಂಕ್ರಪ್ಪ ಕೆಂಗಲ್ ಸೇರಿದಂತೆ ನೂರಾರು ಕಾರ್ಮಿಕರು ಭಾಗವಹಿಸಿದ್ದರು.

ಪಲ್ಸ್ ಪೋಲಿಯೋ ಪೋಸ್ಟರ್ ಬಿಡುಗಡೆ

ವಿಜಯನಗರ: ಹೊಸಪೇಟೆ ತಹಶೀಲ್ದಾರ್ ಕಚೇರಿಯಲ್ಲಿ ತಹಶೀಲ್ದಾರ್ ಶೃತಿ ಮಳ್ಳಪ್ಪಗೌಡ ಅವರು ಜೂ.28ರಂದು ನೆಡೆಯಲಿರುವ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ತಹಶೀಲ್ದಾರ್ ಶೃತಿ ಎಂ., ತಾಲೂಕು ಟಾಸ್ಕ್‌ಫೋರ್ಸ್ ಕಮಿಟಿಯಲ್ಲಿ ನಗರಸಭೆ, ಪುರಸಭೆ, ಮಹಿಳಾ ಮತ್ತು ಮಕ್ಕಳ ಇಲಾಖೆ, ಕೆಇಬಿ, ಸಾರಿಗೆ ಇಲಾಖೆ, ಹೋಮ್ ಗಾರ್ಡ್, ಇಲಾಖೆ ಆರೋಗ್ಯ ಇಲಾಖೆ ಸಮನ್ವಯದಿಂದ 0.5 ವರ್ಷದ ಮಕ್ಕಳಿಗೆ ತಪ್ಪದೇ ಪೋಲಿಯೋ ಹನಿ ಹಾಕಿಸಲು ಕ್ರಮವಹಿಸುವಂತೆ ಸೂಚನೆ ನೀಡಿದರು.

ತಾಲೂಕು ಆರೋಗ್ಯ ಅಧಿಕಾರಿ ಡಾ.ವಿನೋದ್ ಪಲ್ಸ್ ಪೋಲಿಯೋ ಬೂತ್ ಬಗ್ಗೆ ಸಂಪೂರ್ಣ ಮಾಹಿತಿ ನೀಡಿದರು.



ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ.ದೊಡಮನಿ ಟ್ರಾನ್ಸಿಟ್ ಬೂತ್ ಗಳ ಬಗ್ಗೆ ವಿವರಿಸಿದರು. ಆರೋಗ್ಯ ನಿರೀಕ್ಷಣಾಧಿಕಾರಿ ಎಂ.ಧರ್ಮನಗೌಡ ಇದ್ದರು.

ಹುಲಿ, ಅಳ್ಳೊಳ್ಳಿ ಬವ್ವಾ ಬಂತು ಮಕ್ಕಳಿಗೆ ಖುಷಿ ತಂತು

▸ ಶಿವಮೂರ್ತಿ ಇಟಗಿ

ಯಲಬುರ್ಗಾ: ಮೊಹರಂ ಹಬ್ಬಕ್ಕೆ ಹುಲಿ ಮತ್ತು ಅಳ್ಳೊಳ್ಳಿ ಬವ್ವಾ ತಮ್ಮ ವಿಶಿಷ್ಟ ಭಂಗಿಗಳ ಮೂಲಕ ಎಲ್ಲರನ್ನು ಮನರಂಜಿಸುವಲ್ಲಿ ಇವರು ನಿಸ್ಸೀಮರು.



ಹಲಿಗೆ ಬಾರಿಸುವ ಸದ್ದು ಕಿವಿಗೆ ಬೀಳುತ್ತಲೆ ಬಂತು ಹುಲಿ ಎನ್ನುತ್ತಾ ಮಕ್ಕಳು ಮನೆಯಾಚೆ ಬಂದು ಹುಲಿವೇಷಧಾರಿಗಳು ಹಾಕುವ ಹೆಜ್ಜೆಯನ್ನು ಕುತೂಹಲದಿಂದ ನೋಡುತ್ತಿದ್ದರೆ, ಇನ್ನೊಂದಡೆ ಗೆಜ್ಜೆ ಸಪ್ಪಳ ಕೇಳುತ್ತಲೇ ಅಯ್ಯಯೋ ಅಳ್ಳೊಳ್ಳಿ ಬವ್ವಾ ಬಂದಾನ ಎಂದು ಭಯದಿಂದ ಬೀಳುತ್ತಾ ಏಳುತ್ತಾ ಓಡುತ್ತಾರೆ.

ಗ್ರಾಮಗಳಲ್ಲಿ ಇನ್ನೂ ಸಂಭ್ರಮ: ಮೊಹರಂ ಸಂದರ್ಭದಲ್ಲಿ ಹುಲಿ ಮತ್ತು ಅಳ್ಳೊಳ್ಳಿ ಬವ್ವಾ ವೇಷಧಾರಿಗಳು ವೈಶಿಷ್ಟ ಪೂರ್ಣವಾದ ವೇಷ ಹಾಕಿ ದೇವರಿಗೆ ತಮ್ಮ ಹರಕೆ ತೀರಿಸುತ್ತಾರೆ. ಇತ್ತಿಚೀನ ದಿನಗಳಲ್ಲಿ ನಗರ ಪ್ರದೇಶಗಳಲ್ಲಿ ಈ ವೇಷಧಾರಿಗಳ ಸಂಖ್ಯೆ ಕಡಿಮೆಯಾಗಿದ್ದರೂ ಗ್ರಾಮೀಣ ಪ್ರದೇಶಗಳಲ್ಲಿ ಇನ್ನೂ ಇದರ ಸಂಭ್ರಮ ಇದೆ. ಹುಲಿ ಮತ್ತು ಅಳ್ಳೊಳ್ಳಿ ಬವ್ವಾ ವೇಷಧರಿಗಳು ಮುರ್ನಾಲ್ಕು ದಿನಗಳಿಂದ ದೇವರಿಗೆ ಹರಕೆ ತೀರಿಸುತ್ತಾರೆ.

> ಮೊಹರಂ ಹಬ್ಬದಲ್ಲಿ ಅಲ್ಲಾ ದೇವರಿಗೆ ಹರಕೆ ಬೇಡಿಕೊಂಡ ಹಿನ್ನೆಲೆಯಲ್ಲಿ ಒಂದು ವಾರ ಅಳ್ಳೊಳ್ಳಿ ಬವ್ವಾ ವೇಷ ಧರಿಸಿ ಜನರನ್ನು ರಂಜಿಸುತ್ತಾ ಅವರಿಂದ ಕಾಣಿಕೆ ಪಡೆಯುತ್ತೇವೆ. ದಿನಕ್ಕೆ 350ರಿಂದ 500 ರೂ. ವರೆಗೆ ಸಂಗ್ರಹವಾಗುತ್ತದೆ. ಈ ಹಣದಲ್ಲಿ ದೇವರಿಗೆ ಹರಕೆ ತೀರಿಸುತ್ತೇವೆ.
>
> ■ ಯಮನೂರಪ್ಪ, ಯುವಕ ಹುಲಿ ವೇಷಧಾರಿ

ಜನರನ್ನು ರಂಜಿಸುತ್ತಾರೆ: ಹುಲಿ ವೇಷಧರಿಸಿದ ಜನರು ಮೊದಲು ತಮ್ಮ ಮನೆಯ ಸದಸ್ಯರೊಂದಿಗೆ ಮಸೀದಿಗಳಿಗೆ ತೆರಳಿ ಅಲ್ಲಿ ನೃತ್ಯದ ಮೂಲಕ ಹರಕೆ ಸರ್ಮಪಿಸುತ್ತಾರೆ. ನಂತರದಲ್ಲಿ ಹುಲಿ ವೇಷಧಾರಿಗಳು ಮನೆ-ಮನೆಗೆ ತೆರಳಿ ಹೆಜ್ಜೆ ಹಾಕಿ ಜನರನ್ನು ರಂಜಿಸಿ ಅವರಿಂದ ಕಾಣಿಕೆ ಪಡೆಯುತ್ತಾರೆ.

ಮೊಹರಂದ ಸಂಕೇತ: ಹುಲಿ ವೇಷಧಾರಿಗಳು ಮತ್ತು ಮುಖಕ್ಕೆ ಕಪ್ಪು ಮಸಿ ಬಳಿದುಕೊಂಡು ಸೊಂಟಕ್ಕೆ ಗಜ್ಜೆ ಸರ ತಲೆಗೆ ಬಣ್ಣದ ಹಾಳೆಗಳಿಂದ ಕೂಡಿದ ಟೋಪಿಯನ್ನು ಹಾಕಿಕೊಂಡು ಕೈಯಲ್ಲಿ ಮುದ್ದೆ ಮಾಡಿದ ಬಟ್ಟೆಯನ್ನು ಹಿಡಿದು ಜನರನ್ನು ನಗಿಸುತ್ತಾ ಸಾಗುವ ಅಳ್ಳೊಳ್ಳಿ ಬವ್ವಾ ವೇಷಗಳು ಮೊಹರಂ ಹಬ್ಬದ ವಿಶೇಷ ಸಂಕೇತವಾಗಿದೆ.

ಬಸ್ ನಿಲುಗಡೆಗೆ ಆಗ್ರಹಿಸಿ ಮನವಿ

ಕೊಪ್ಪಳ: ತಾಲೂಕಿನ ಕಿನ್ನಾಳ ಗ್ರಾಮದ ಬಸವೇಶ್ವರ ವೃತ್ತದ ಸ್ವಾಮಿ ವಿವೇಕಾನಂದ ಬಸ್ ತಂಗುದಾಣದಲ್ಲಿ ಬಸ್ಸುಗಳನ್ನು ನಿಲ್ಲಿಸಲು ಕೊಪ್ಪಳ ಕೆಎಸ್ ಆರ್‌ಟಿಸಿ ಡಿಪೋ ವ್ಯವಸ್ಥಾಪಕರಿಗೆ ಕೋರುವಂತೆ ಕಿನ್ನಾಳ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಪರಮೇಶ್ವರಯ್ಯ ತೆಳಗಡೆಮಠಗೆ ಗ್ರಾಮಸ್ಥರು ಮನವಿ ಸಲ್ಲಿಸಿದರು. ನಂತರ ಮಾತನಾಡಿದ ಮೌನೇಶ ಕಿನ್ನಾಳ, ಬಸವೇಶ್ವರ ವೃತ್ತ ಸ್ವಾಮಿ ವಿವೇಕಾನಂದ ಬಸ್ ತಂಗುದಾಣದಲ್ಲಿ ಈ ಮೊದಲು ಎಲ್ಲ ಬಸ್‌ಗಳ ನಿಲುಗಡೆ ಇದ್ದು ಕಳೆದ ಆರು ತಿಂಗಳಿಂದ ಬಸ್ಸುಗಳು ನಿಲ್ಲುತ್ತಿಲ್ಲ ಇದರಿಂದ ವಿದ್ಯಾರ್ಥಿಗಳಿಗೆ, ಗ್ರಾಮಸ್ಥರಿಗೆ, ವಯೋವೃದ್ಧರಿಗೆ, ಮಹಿಳೆಯರು ಮತ್ತು ಮಕ್ಕಳಿಗೆ ಸಮಸ್ಯೆ ಉಂಟಾಗುತ್ತಿದೆ ಎಂದರು. ಬಸ್ಸುಗಳನ್ನು ನಿಲ್ಲಿಸಲು ಕೊಪ್ಪಳ ಡಿಪೋ ವ್ಯವಸ್ಥಾಪಕರಿಗೆ ಸೂಚಿಸಬೇಕು. ಈ ಹಿಂದೆ ಮೌಕಿಕವಾಗಿ ಸಂಬಂಧ ಪಟ್ಟ ಅಧಿಕಾರಿಗಳನ್ನು ಸಂಪರ್ಕಿಸಿದರು ಯಾವುದೇ ಪ್ರಯೋಜನವಾಗದ ಕಾರಣ ಈ ಮನವಿಯನ್ನು ಸಲ್ಲಿಸುತ್ತಿದ್ದೇವೆ. ಈ ಕೂಡಲೇ ಸಮಸ್ಯೆಯನ್ನು ಪರಿಹರಿಸದೆ ಇದ್ದಲ್ಲಿ ಮುಂದಿನ ದಿನಗಳಲ್ಲಿ ತೀವ್ರ ಹೋರಾಟವನ್ನು ಕೈಗೊಳ್ಳಲಾಗುವುದು ಎಂದರು. ಗ್ರಾಮದ ಹಿರಿಯರಾದ ಶ್ರೀಧರ್ ಬಾದಾ, ಕೃಷ್ಣಪ್ಪ ಕುದ್ರಿಮೋತಿ, ನಂದರಾಜ್ ಶೇಲ್ಲೆದ್, ಸಂತೋಷ ಕಠಾರೆ, ಉಮೇಶ ಅರಕೇರಿ, ಪ್ರಕಾಶ ಮಡಿವಾಳರ, ನಾರಾಯಣ ಕಡ್ಲಿಬಾಳ ಸೇರಿದಂತೆ ಯುವಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಜ್ಞಾನೋದಯ ಶಿಕ್ಷಣ ಸಂಸ್ಥೆಯಲ್ಲಿ ಯೋಗ ದಿನಾಚರಣೆ

ಹನುಮಸಾಗರ: ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಪಟ್ಟಣದ ಜ್ಞಾನೋದಯ ಶಿಕ್ಷಣ ಸಂಸ್ಥೆಯಲ್ಲಿ ಭಾನುವಾರ ಯೋಗ ಹಾಗೂ ಧ್ಯಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ವಿದ್ಯಾರ್ಥಿಗಳು, ಶಿಕ್ಷಕರು, ಪಾಲಕರು ಮತ್ತು ಸಿಬ್ಬಂದಿ ಉತ್ಸಾಹದಿಂದ ಭಾಗವಹಿಸಿ ಯೋಗದ ಮಹತ್ವವನ್ನು ಅರಿತುಕೊಂಡರು.

ಧ್ಯಾನಪ್ರಚಾರಕರಾದ ಏಕನಾಥ್ ಮೆದಿಕೇರಿ ಮಾತನಾಡಿ, ಇಂದಿನ ಒತ್ತಡಭರಿತ ಜೀವನದಲ್ಲಿ ಯೋಗ ಮತ್ತು ಧ್ಯಾನ ಮಾನಸಿಕ ಶಾಂತಿ, ದೈಹಿಕ ಆರೋಗ್ಯ ಹಾಗೂ ಆತ್ಮವಿಕಾಸಕ್ಕೆ ಅತ್ಯಂತ ಅಗತ್ಯವಾಗಿವೆ ಎಂದು ಹೇಳಿದರು. ಯೋಗವು ಕೇವಲ ದೇಹದ ವ್ಯಾಯಾಮವಲ್ಲ, ಅದು ವ್ಯಕ್ತಿಯ ಜೀವನಶೈಲಿಯನ್ನು ಸುಧಾರಿಸುವ ಸಮಗ್ರ ಸಾಧನೆಯಾಗಿದೆ ಎಂದು ತಿಳಿಸಿದರು.

ವಿದ್ಯಾರ್ಥಿಗಳು ಬಾಲ್ಯದಿಂದಲೇ ಯೋಗ ಮತ್ತು ಧ್ಯಾನದ ಅಭ್ಯಾಸ ಬೆಳೆಸಿಕೊಂಡರೆ ಏಕಾಗ್ರತೆ, ಸ್ಮರಣಶಕ್ತಿ ಹಾಗೂ ಆತ್ಮವಿಶ್ವಾಸ ವೃದ್ಧಿಯಾಗುತ್ತದೆ ಎಂದು ಹೇಳಿದರು. ಸಂಸ್ಥೆಯ ಸಂಸ್ಥಾಪಕ ವಿಷ್ಣು ಪಿ.ರಜಪೂತ ಮಾತನಾಡಿ, ಭಾರತೀಯ ಸಂಸ್ಕೃತಿಯ ಅಮೂಲ್ಯ ಕೊಡುಗೆಯಾದ ಯೋಗವು ಇಂದು ವಿಶ್ವದಾದ್ಯಂತ ಸ್ವೀಕಾರಾರ್ಹತೆಯನ್ನು ಪಡೆದಿದೆ. ಪ್ರತಿಯೊಬ್ಬರೂ ತಮ್ಮ ದಿನನಿತ್ಯದ ಜೀವನದಲ್ಲಿ ಯೋಗವನ್ನು ಅಳವಡಿಸಿಕೊಂಡು ಆರೋಗ್ಯಕರ ಜೀವನ ನಡೆಸಬೇಕು ಎಂದು ಮನವಿ ನೀಡಿದರು.



ವಿದ್ಯಾರ್ಥಿಗಳಿಗೆ ವಿವಿಧ ಯೋಗಾಸನಗಳು, ಪ್ರಾಣಾಯಾಮ ಹಾಗೂ ಧ್ಯಾನದ ವಿಧಾನಗಳನ್ನು ಪ್ರಾಯೋಗಿಕವಾಗಿ ತಿಳಿಸಿಕೊಡಲಾಯಿತು. ವಿಶೇಷವಾಗಿ ಆನಾಪಾನಸತಿ ಧ್ಯಾನವನ್ನು ನಡೆಸಿಕೊಡಲಾಗಿದ್ದು, ವಿದ್ಯಾರ್ಥಿಗಳು ಆಸಕ್ತಿಯಿಂದ ಭಾಗವಹಿಸಿ ಧ್ಯಾನದ ಅನುಭವವನ್ನು ಪಡೆದರು. ಯೋಗಭಂಗಿಗಳ ಪ್ರದರ್ಶನದ ಮೂಲಕ ದೇಹ ಮತ್ತು ಮನಸ್ಸಿನ ಸಮತೋಲನದ ಮಹತ್ವವನ್ನು ವಿವರಿಸಲಾಯಿತು.

ಮುಖ್ಯ ಶಿಕ್ಷಕ ಮಹೇಶ್ ರಜಪೂತ, ಶಿಕ್ಷಕ ಗುರುದೇವ್ ರಜಪೂತ, ಸರೋಜಾ ಮೇಡಂ, ಪಾಲಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದು ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದರು. ಅಂತಿಮವಾಗಿ ಯೋಗ ಮತ್ತು ಧ್ಯಾನದ ಮಹತ್ವವನ್ನು ಪ್ರತಿಯೊಬ್ಬರೂ ಅರಿತು ಜೀವನದಲ್ಲಿ ಅಳವಡಿಸಿಕೊಳ್ಳುವ ಸಂಕಲ್ಪದೊಂದಿಗೆ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಿರುಸುದ್ದಿ

ಆರೋಗ್ಯವಂತ ಸಮಾಜಕ್ಕಾಗಿ ಕೈಜೋಡಿಸಿ: ರವಿಕುಮಾರ

ಗಾದಿಗನೂರು: ಪ್ರತಿನಿತ್ಯ ಎಲ್ಲ ಮಕ್ಕಳು ಯೋಗಭ್ಯಾಸ ಮಾಡುವುದರಿಂದ ಒಳ್ಳೆಯ ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಕೈ ಜೋಡಿಸಬೇಕು ಎಂದು ಶಿಕ್ಷಕ ರವಿಕುಮಾರ ಹೇಳಿದರು. ಗಾದಿಗನೂರು ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಮಕ್ಕಳು ಏಕಾಗ್ರತೆ ಹೆಚ್ಚಿಸಲು ಯೋಗ ಅಭ್ಯಾಸ ಬಹಳ ಮುಖ್ಯ ಮಕ್ಕಳ ದಿನಾಲು ಯೋಗ ಮಾಡುವುದರಿಂದ ಸಂಚಲ ಮನಸ್ಸನ್ನು ನಿಯಂತ್ರಿಸಲು ಸಹಕಾರಿಯಾಗುತ್ತದೆ. ವಿದ್ಯಾರ್ಥಿಗಳು ಸಣ್ಣ ವಯಸ್ಸಿನಿಂದಲೇ ಯೋಗ ಅಭ್ಯಾಸ ಮಾಡುವುದು ಕಲಿತರೆ ದೈಹಿಕವಾಗಿ ಮಾನಸಿಕವಾಗಿ ಉತ್ತಮ ಆರೋಗ್ಯ ವೃದ್ಧಿಯಾಗುತ್ತದೆ. ಪ್ರತಿನಿತ್ಯ ಪಾಠ ಆಟ ಜೊತೆಗೆ ಯೋಗವು ಒಂದು ಅಭ್ಯಾಸ ಮಾಡಿದರೆ ದೈಹಿಕ ಮತ್ತು ಮಾನಸಿಕ ಆರೋಗ್ಯ ಉತ್ತಮವಾಗಿರುತ್ತದೆ ಎಂದರು. ಈ ವೇಳ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಭಾಗವಹಿಸಿದ್ದರು.

ಪ್ರತಿಭಾ ಪುರಸ್ಕಾರ ಜೂ.24ಕ್ಕೆ

ಕೊಟ್ಟೂರು: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ತಾಲೂಕು ಶಾಖೆ, ಕೊಟ್ಟೂರು ವತಿಯಿಂದ ಜೂ.24ರಂದು ಸಂಜೆ 5ಕ್ಕೆ ರೇಣುಕಾ ಸಭಾಂಗಣ, ಕೊಟ್ಟೂರಿನಲ್ಲಿ ಸರ್ವ ಸದಸ್ಯರ ಮಹಾಸಭೆ, ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಶೇ.90ಕ್ಕಿಂತ ಹೆಚ್ಚಿನ ಅಂಕಗಳಿಸಿ ಉತ್ತೀರ್ಣರಾದ ಸರ್ಕಾರಿ ನೌಕರರ ಮಕ್ಕಳಿಗೆ ಪ್ರತಿಭಾ ಪ್ರೋತ್ಸಾಹ ಪುರಸ್ಕಾರ ಸರ್ಕಾರಿ ನೌಕರರ ಸಮರ್ಪಣಾ ಭಾವದ ಸೇವೆಗೆ ಸೇವಾ ರತ್ನ ಪುರಸ್ಕಾರ–2026 ಸನ್ಮಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಸದರಿ ಕಾರ್ಯಕ್ರಮಕ್ಕೆ ಎಲ್ಲ ಸರ್ಕಾರಿ ಅಧಿಕಾರಿ/ನೌಕರರು ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿಕೊಡಬೇಕೆಂದು ಕೊಟ್ಟೂರು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಅಧ್ಯಕ್ಷ ಯೋಗೀಶ್ವರ ದಿನ್ನೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಧುಗೆ ಎಂಬಿಬಿಎಸ್ ಪದವಿ



ಹುಣಸಗಿ: ಪಟ್ಟಣದ ಪ್ರತಿಭಾವಂತ ವಿದ್ಯಾರ್ಥಿನಿ ಮಧು ಬಸವರಾಜ ಸಜ್ಜನ ಎಂಬಿಬಿಎಸ್ ಪದವಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ ಜಿಲ್ಲೆಗೆ ಹೆಮ್ಮೆ ತಂದಿದ್ದಾರೆ. ಪ್ರಾಥಮಿಕ ಶಿಕ್ಷಣವನ್ನು ಶ್ರೀ ಸಾಯಿ ವಿಜ್ಞಾನ ಶಾಲೆ, ಹುಣಸಗಿಯಲ್ಲಿ ಹಾಗೂ ಪ್ರೌಢ, ಪಿಯು ಶಿಕ್ಷಣವನ್ನು ಕವಲಗಿಯ ಸಂಗನಬಸವ ಅಂತಾರಾಷ್ಟ್ರೀಯ ವಸತಿ ಶಾಲೆಯಲ್ಲಿ ಪೂರ್ಣಗೊಳಿಸಿದ ಅವರು, ದ್ವಿತೀಯ ಪಿಯುಸಿಯಲ್ಲಿ ವಿಜಯಪುರ ಜಿಲ್ಲೆಗೆ ದ್ವಿತೀಯ ಸ್ಥಾನ ಪಡೆದಿದ್ದರು. ಬಳಿಕ ಬೀದರ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಎಂಬಿಬಿಎಸ್ ಪದವಿ ಪೂರ್ಣಗೊಳಿಸಿದ್ದು, ಇತ್ತೀಚೆಗೆ ನಡೆದ ಪದವಿ ಪ್ರದಾನ ಸಮಾರಂಭದಲ್ಲಿ ಪದವಿ ಪ್ರಮಾಣಪತ್ರ ಸ್ವೀಕರಿಸಿದರು. ಅವರ ಈ ಸಾಧನೆಗೆ ಕುಟುಂಬಸ್ಥರು, ಗುರುಗಳು, ಸ್ನೇಹಿತರು ಹಾಗೂ ಸಾರ್ವಜನಿಕರು ಅಭಿನಂದನೆ ಸಲ್ಲಿಸಿ, ಮುಂದಿನ ವೈದ್ಯಕೀಯ ವೃತ್ತಿ ಜೀವನಕ್ಕೆ ಶುಭ ಹಾರೈಸಿದ್ದಾರೆ.

ವಿಶೇಷ ಗ್ರಾಮ ಸಭೆ



ಕರೂರ: ಸಮೀಪದ ಊತ್ತನೂರು ಗ್ರಾಮದಲ್ಲಿ ಸೋಮವಾರ ವಿಶೇಷ ಗ್ರಾಮ ಸಭೆಯಲ್ಲಿ ಸಮಗ್ರ ಮತದಾರರ ಪರಿಷ್ಕರಣೆ ಕುರಿತು ಮಾಹಿತಿ ಸಾರ್ವಜನಿಕರಿಗೆ ನೀಡಲಾಯಿತು. ಸಭೆಯಲ್ಲಿ ಪಿಡಿಒ ಶಿವಕುಮಾರ ಕಾರ್ಯದರ್ಶಿ ಕೆ.ಶಿವಮೂರ್ತಿ, ಸಿಬ್ಬಂದಿಗಳು ಮತ್ತು ಎಲ್ಲ ಬಿಎಲ್‌ಒಗಳು ಜೂ.30ರಿಂದ ಜು.29ರವರೆಗೆ 1 ತಿಂಗಳು ಪ್ರತಿ ಮನೆ ಮನೆಗೆ ಭೇಟಿ ನೀಡಿ ಫಾರ್ಂಗಳು ಕೊಟ್ಟು ಸಹಿ ಮಾಡಿಕೊಂಡು ಯಾವುದೇ ಮತದಾರರು ಪಟ್ಟಿ ಬಿಟ್ಟು ಹೋಗದಂತೆ ಸಭೆಯಲ್ಲಿ ತಿಳಿಸಿದರು.

ಮಹಿಳೆ ಕಾಣೆ



ಹಗರಿಬೊಮ್ಮನಹಳ್ಳಿ: ತಾಲೂಕಿನ ಬೆಣಕಲ್ಲು ಗ್ರಾಮದ ರೇಣುಕಮ್ಮ(60) ಭೀಮಪ್ಪ ಹರಾಳು ಎಂಬುವರು ಕಾಣೆಯಾಗಿದಾರೆ ಎಂದು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.ಕಾಣೆಯಾದವರು ಕಳೆದ 5 ವರ್ಷಗಳಿಂದ ಮಾನಸಿಕ ಖಿನ್ನತೆಯಿಂದ ಬಳಲುತ್ತಿದ್ದು, ಜೂ.19ರಂದು ಹಗರಿಬೊಮ್ಮನಹಳ್ಳಿ ತಮ್ಮ ಹಿರಿಯ ಮಗಳು ಉಪ್ಪಾರ ಶರಣ, ಬಸಮ್ಮ ವೆಂಕಟೇಶ ಮನೆಗೆ ಬಂದಿದ್ದರು. ಅದೇ ದಿನ ಮನೆಯಿಂದ ಎಲ್ಲೋ ಹೋಗಿ ಕಾಣೆಯಾಗಿದ್ದಾರೆ.



ಗಾದಿಗನೂರು: ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಶಿಕ್ಷಕ ರವಿಕುಮಾರ ಮಾತನಾಡಿದರು. ಈ ವೇಳ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಭಾಗವಹಿಸಿದ್ದರು.

ಜ್ಞಾನ ವಿಕಾಸ ಬೀದಿ ನಾಟಕ ಪ್ರದರ್ಶನ

ಕೊಟ್ಟೂರು: ತಾಲೂಕಿನ ಉಜ್ಜಯಿನಿಯಲ್ಲಿ ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಅಡಿಯಲ್ಲಿ ವಲಯ ಮಟ್ಟದ ಜಾಗೃತಿ ಮೂಡಿಸುವ ಬೀದಿ ನಾಟಕಗಳ ಪ್ರದರ್ಶನ ಮಂಗಳವಾರ ನಡೆಯಿತು. ಗ್ರಾಮದ ಚಾಮುಂಡೇಶ್ವರಿ, ಕಿತ್ತೂರು ರಾಣಿ ಚನ್ನಮ್ಮ ಜ್ಞಾನ ವಿಕಾಸ ಕೇಂದ್ರದಲ್ಲಿ ನಡೆದ ಕಾರ್ಯಕ್ರಮವನ್ನು ಉದ್ಘಾಟಿಸಿದ ಜನ ಜಾಗೃತಿ ವೇದಿಕೆ ಸದಸ್ಯ ಮಲ್ಲಿಕಾರ್ಜುನ ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಂಸ್ಥೆಯಿಂದ ಮಹಿಳೆಯರಿಗೆ ಸ್ವಾವಲಂಬಿ ಜೀವನ ಕಲ್ಪಿಸುವುದಕ್ಕೆ ನಾನಾ ಯೋಜನೆಗಳನ್ನು ಜಾರಿ ಮಾಡಿದೆ. ಸಂಸ್ಥೆ ಮೂಲಕ ಅನೇಕ ಮಹಿಳೆಯರು ಇಂದು ಉತ್ತಮ ಜೀವನ ನಿರ್ವಹಿಸುತ್ತಿದ್ದಾರೆ. ಇದರೊಂದಿಗೆ ಸಮಾಜದಲ್ಲಿನ ಅಂಕುಡೊಂಕುಗಳನ್ನು, ಕಂದಾಚಾರಗಳನ್ನು ನಿರ್ಮೂಲನೆ ಮಾಡಲು ಹಾಗೂ ಜಾಗೃತರಾಗಿರಲು ಬೀದಿ ನಾಟಕಗಳನ್ನು ಪ್ರದರ್ಶಿಸುತ್ತಿರುವುದು ಶ್ಲಾಘನೀಯ ಎಂದರು. ವಲಯ ಯೋಜನಾಧಿಕಾರಿ ಕಲ್ಪನಾ ಮಾತನಾಡಿ, ಜ್ಞಾನ ವಿಕಾಸ ಕಾರ್ಯಕ್ರಮದ ಮೂಲ ಉದ್ದೇಶ ಹಾಗೂ ಧ್ಯೇಯಗಳನ್ನು ಜನರಿಗೆ ನಾಟಕಗಳ ಮೂಲಕ ತಿಳಿಸಲಾಗುತ್ತಿದೆ. ನಮ್ಮ ಸಂಸ್ಥೆಯ ಸದಸ್ಯರುಗಳು ಮನೆಯಲ್ಲಿ ಶೌಚಾಲಯ ನಿರ್ಮಿಸಿಕೊಂಡು ಸ್ವಚ್ಛತೆಗೆ ಆದ್ಯತೆ ನೀಡಿರುವುದು ಆರೋಗ್ಯ ವೃದ್ಧಿಗೆ ಮುಂದಾಗಿರುವುದು ತೋರಿಸಿದೆ. ಬೀದಿ ನಾಟಕಗಳ ಮೂಲಕ ಜ್ಞಾನ ವಿಕಾಸ ಕಾರ್ಯಕ್ರಮಗಳನ್ನು ಬಿಂಬಿಸಲಾಗುತ್ತಿದೆ ಎಂದರು.

ಒಕ್ಕೂಟದ ಹುಲಿಗೆಮ್ಮ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಜನ ಜಾಗೃತಿ ವೇದಿಕೆ ಸದಸ್ಯರಾದ ನೇತ್ರಾವತಿ, ಸಮನ್ವಯಾಧಿಕಾರಿ ಗಂಗಮ್ಮ, ಮೇಲ್ವಿಚಾರಕಿ ಗೀತಾ, ಸೇವಾ ಪ್ರತಿನಿಧಿ ಕವಿತಾ, ಸರೋಜ ಹಾಗೂ ಇತರರು ಇದ್ದರು.



ಕೊಟ್ಟೂರು: ತಾಲೂಕಿನ ಉಜ್ಜಯಿನಿಯಲ್ಲಿ ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಅಡಿಯಲ್ಲಿ ಗ್ರಾಮದ ಚಾಮುಂಡೇಶ್ವರಿ, ಕಿತ್ತೂರು ರಾಣಿ ಚನ್ನಮ್ಮ ಜ್ಞಾನ ವಿಕಾಸ ಕೇಂದ್ರದಲ್ಲಿ ವಲಯ ಮಟ್ಟದ ಜಾಗೃತಿ ಮೂಡಿಸುವ ಬೀದಿ ನಾಟಕಗಳ ಪ್ರದರ್ಶನ ಮಂಗಳವಾರ ನಡೆಯಿತು. ಜನ ಜಾಗೃತಿ ವೇದಿಕೆ ಸದಸ್ಯರಾದ ನೇತ್ರಾವತಿ, ಸಮನ್ವಯಾಧಿಕಾರಿ ಗಂಗಮ್ಮ, ಮೇಲ್ವಿಚಾರಕಿ ಗೀತಾ, ಸೇವಾ ಪ್ರತಿನಿಧಿ ಕವಿತಾ, ಸರೋಜ ಹಾಗೂ ಇತರರು ಇದ್ದರು.

ಪ್ರಗತಿ ಪರಿಶೀಲನಾ ಸಭೆ | ಜಿಪಂ ಸಿಇಒ ಖಡಕ್ ಸೂಚನೆ

ಕಲುಷಿತ ನೀರು ಸರಬರಾಜು ಆಗದಿರಲಿ

ವಿಜಯನಗರ: ಮಳೆಗಾಲ ಆರಂಭವಾಗಿರುವುದರಿಂದ ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರು ಸರಬರಾಜು ಮಾಡುವ ವೇಳೆ ನೀರು ಕಲುಷಿತಗೊಳ್ಳುವ ಸಂಭವ ಹೆಚ್ಚಿರುತ್ತದೆ. ಅದರಲ್ಲೂ ಮುಖ್ಯವಾಗಿ ಚರಂಡಿ ಪಕ್ಕದ ಮತ್ತು ಹಳೆಯ ಪೈಪ್‌ಲೈನ್‌ಗಳಲ್ಲಿ ಇಂತಹ ಪ್ರಕರಣಗಳು ಹೆಚ್ಚಾಗಿ ಕಂಡುಬರುತ್ತವೆ. ಆದ್ದರಿಂದ ಹಳೆಯ, ಹೊಡೆದು ಹೋಗಿರುವ ಪೈಪ್‌ಲೈನ್‌ಗಳನ್ನು ಮುಂಜಾಗ್ರತಾ ಕ್ರಮವಾಗಿ ತ್ವರಿತವಾಗಿ ದುರಸ್ತಿಗೊಳಿಸಬೇಕು ಎಂದು ಜಿಪಂ ಸಿಇಒ ನೋಂಗ್ಜಾಯ್ ಮೊಹಮದ್ ಅಲಿ ಅಕ್ರಂ ಷಾ ಸೂಚಿಸಿದರು.

ನಗರದ ಜಿಲ್ಲಾ ಪಂಚಾಯತಿ ಕಚೇರಿಯಲ್ಲಿ ಮಂಗಳವಾರ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಜೆಜೆಎಂ ಕಾಮಗಾರಿ, ನರೇಗಾ ಸಮರ್ಪಕ ಅನುಷ್ಠಾನ ಕುರಿತ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕಲುಷಿತ ನೀರು ಸರಬರಾಜು ಆಗದಂತೆ ಮತ್ತು ಇಂತಹ ಗಂಭೀರ ಪ್ರಕರಣಗಳು ಮರುಕಳಿಸದಂತೆ ಅಧಿಕಾರಿಗಳು ಅತ್ಯಂತ ಎಚ್ಚರದಿಂದ ಕೆಲಸ ಮಾಡಬೇಕು. ವಿವಿಧ ತಾಂತ್ರಿಕ ಕಾರಣಗಳಿಂದ ಕೊಳವೆಬಾವಿ ನೀರು ಸರಬರಾಜು ಸಮಸ್ಯೆ ಉಂಟಾದಲ್ಲಿ ತಕ್ಷಣವೇ ಅವುಗಳನ್ನು ಸರಿಪಡಿಸಿ ಶುದ್ಧ ಕುಡಿಯುವ ನೀರು ಒದಗಿಸಬೇಕು. ಒಂದು ವೇಳೆ ತಕ್ಷಣಕ್ಕೆ ದುರಸ್ತಿ ಮಾಡಲು ಸಾಧ್ಯವಾಗದಿದ್ದರೆ, ಆಯಾ ಗ್ರಾಮಗಳಲ್ಲಿ ನೀರಿನ ಸಮಸ್ಯೆ ತಲೆದೋರದಂತೆ ಟ್ಯಾಂಕರ್ ಮೂಲಕ ಪರ್ಯಾಯ ನೀರು ಪೂರೈಕೆಗೆ ಅಗತ್ಯ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದರು.

ಮಳೆಗಾಲದಲ್ಲಿ ಜಲಮೂಲಗಳು ಕಲುಷಿತಗೊಳ್ಳುವ ಸಾಧ್ಯತೆ ಇರುವುದರಿಂದ, ಸಾರ್ವಜನಿಕರು ಕಡ್ಡಾಯವಾಗಿ ಕುಡಿಯುವ ನೀರನ್ನು ಕಾಯಿಸಿ ಆರಿಸಿ ಕುಡಿಯಬೇಕು. ಮತ್ತು ಸಾಧ್ಯವಾದರೆ ಆರ್‌ಒ ಪ್ಲಾಂಟ್‌ಗಳ ಶುದ್ಧ ಕುಡಿಯುವ ನೀರನ್ನು ಸೇವಿಸಬೇಕು. ಈ ಬಗ್ಗೆ ಸ್ಥಳೀಯ ಸಂಸ್ಥೆಗಳು ಮತ್ತು ಗ್ರಾಮ ಪಂಚಾಯತಿಗಳು ಗ್ರಾಮೀಣ ಭಾಗದಲ್ಲಿ ವ್ಯಾಪಕ ಜಾಗೃತಿ ಮೂಡಿಸಬೇಕು ಎಂದರು.

ಜಿಲ್ಲಾದ್ಯಂತ ವಿವಿಧ ಗ್ರಾಮ ಪಂಚಾಯತಿಗಳಲ್ಲಿ ವಿವಿಧ ಕಾಮಗಾರಿ ಯೋಜನೆಗಳು ಸರಿಯಾದ ರೀತಿಯಲ್ಲಿ ಅನುಷ್ಠಾನವಾಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ ಸಿಇಒ, ಮುಂದಿನ 10 ದಿನಗಳಲ್ಲಿ ಎಲ್ಲ ಕಾಮಗಾರಿಗಳು ಕಡ್ಡಾಯವಾಗಿ ನಿರೀಕ್ಷಿತ ಪ್ರಗತಿ ಸಾಧಿಸಬೇಕು. ಇಲ್ಲವಾದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಶಿಸ್ತುಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಗ್ರಾಮೀಣ ಮಟ್ಟದಲ್ಲಿ ನೀರಿನ ಗುಣಮಟ್ಟವನ್ನು ಪರೀಕ್ಷಿಸಲು ಫೀಲ್ಡ್ ಟೆಸ್ಟಿಂಗ್ ಕಿಟ್ ಅಭಿಯಾನ ಮತ್ತಷ್ಟು ಪರಿಣಾಮಕಾರಿಯಾಗಿ ನಡೆಸಬೇಕು. ಓವರ್ ಹೆಡ್ ಟ್ಯಾಂಕ್ ಹಾಗೂ ಬೋರ್‌ವೆಲ್‌ಗಳ ಸುತ್ತಮುತ್ತ ಸ್ವಚ್ಛತೆ ಕಾಪಾಡಬೇಕು. ನಿಯಮಿತವಾಗಿ ಕಾಲ ಕಾಲಕ್ಕೆ ನೀರಿನ ಕ್ಲೋರಿನೇಶನ್ ಪ್ರಕ್ರಿಯೆ ನಡೆಸಬೇಕು. ಸ್ವಚ್ಛ ಭಾರತ ಮಿಷನ್ ಹಾಗೂ ಜಲ ಜೀವನ್ ಮಿಷನ್ ಅಡಿಯಲ್ಲಿ ಹಮ್ಮಿಕೊಳ್ಳಲಾಗಿರುವ 100 ದಿನಗಳ ವಿಶೇಷ ಅಭಿಯಾನದ ಗುರಿಗಳನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ಅಧಿಕಾರಿಗಳು ಸಮನ್ವಯತೆಯಿಂದ ಕೆಲಸ ಮಾಡಬೇಕೆಂದು ಸಿಇಒ ಸೂಚಿಸಿದರು.

ಜಿಪಂ ಉಪ ಕಾರ್ಯದರ್ಶಿ ಕೆ.ತಿಮ್ಮಪ್ಪ, ಮುಖ್ಯ ಯೋಜನಾಧಿಕಾರಿ ಅನ್ನದಾನಸ್ವಾಮಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಕಾರ್ಯಪಾಲಕ ಇಂಜಿನಿಯರ್ ದೀಪಾ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.



ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲೂಕಿನ ನೆಲ್ಕುದುರೆ ಗ್ರಾಮವನ್ನು 24★7 ಶುದ್ಧ ಕುಡಿಯುವ ನೀರು ಪೂರೈಕೆ ಗ್ರಾಮ ಎಂದು ಘೋಷಿಸಲಾಗಿದೆ. ಅದರಂತೆ ಎಲ್ಲ ಮನೆಗಳಿಗೂ ನಳದ ಸಂಪರ್ಕ ಕಲ್ಪಿಸುವ ಕುರಿತು ಸಮೀಕ್ಷೆಯನ್ನು ಶೀಘ್ರವಾಗಿ ಪೂರ್ಣಗೊಳಿಸಿ, 24★7 ನೀರು ಪೂರೈಕೆ ಗ್ರಾಮಗಳು ಎಂದು ಘೋಷಿಸಲು ಕ್ರಮ ಕೈಗೊಳ್ಳಬೇಕು.

■ ನೋಂಗ್ಜಾಯ್ ಮೊಹಮದ್ ಅಲಿ ಅಕ್ರಂ ಷಾ, ಜಿಪಂ ಸಿಇಒ

ಸಾವಯವ ಕೃಷಿಗೆ ಆದ್ಯತೆ ನೀಡಿ

ಬಳ್ಳಾರಿ: ಪ್ರಸ್ತುತ ದಿನಗಳಲ್ಲಿ ಮಣ್ಣಿನ ಆರೋಗ್ಯ ಕಾಪಾಡುವುದು ಅತ್ಯಂತ ಅಗತ್ಯವಾಗಿದೆ. ರೈತರು ಅತಿಯಾಗಿ ರಾಸಾಯನಿಕ ಗೊಬ್ಬರಗಳ ಬಳಕೆ ಕಡಿಮೆ ಮಾಡಬೇಕು. ಭೂಮಿಯ ಫಲವತ್ತತೆ ಹೆಚ್ಚಿಸಲು ಸಾವಯವ ಕೃಷಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಜಂಟಿ ಕೃಷಿ ನಿರ್ದೇಶಕ ಸೋಮಸುಂದರ ಹೇಳಿದರು.

ಸಮೀಪದ ಕೋಳೂರು ಹೋಬಳಿಯ ದಮ್ಮೂರು ಗ್ರಾಮದ ಪ್ರಾಥಮಿಕ ಪತ್ತಿನ ಸಹಕಾರಿ ಸಂಘದ ಆವರಣದಲ್ಲಿ ಇತ್ತೀಚೆಗೆ ಕೃಷಿ ಇಲಾಖೆ, ಬಳ್ಳಾರಿ ಹಾಗೂ ಕೃಷಿ ವಿಜ್ಞಾನ ಕೇಂದ್ರ (ಕೆ.ವಿ.ಕೆ) ಹಗರಿ ಆಶ್ರಯದಲ್ಲಿ ಆಯೋಜಿಸಿದ್ದ 'ಖೇತ್ ಬಚಾವೋ ಅಭಿಯಾನ, ಧರ್ತಿ ಮಾತಾ ಬಚಾವೋ' ಅಭಿಯಾನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕೆವಿಕೆ ಹಗರಿಯ ಕೃಷಿ ವಿಜ್ಞಾನಿ ಡಾ.ರವಿ ಮಾತನಾಡಿ, ಸಸ್ಯಗಳ ಸಮೃದ್ಧ ಬೆಳವಣಿಗೆಗೆ ಒಟ್ಟು 16 ಅತ್ಯಗತ್ಯ ಪೋಷಕಾಂಶಗಳ ಅವಶ್ಯಕತೆಯಿರುತ್ತದೆ. ರೈತರು ಕಡ್ಡಾಯವಾಗಿ ಮಣ್ಣು ಪರೀಕ್ಷೆ ಮಾಡಿಸಿ, ಅದ್ದರಿಂದ ಬರುವ ಫಲಿತಾಂಶದ ಆಧಾರದ ಮೇಲೆಯೇ ರಸಗೊಬ್ಬರಗಳನ್ನು ಸಮರ್ಪಕವಾಗಿ ಬಳಸಬೇಕು ಎಂದರು.

ವಿಜ್ಞಾನಿ ಡಾ.ನವೀನ ಮಾತನಾಡಿ, ಮನೆಯಲ್ಲೇ ತಯಾರಿಸಬಹುದಾದ ಪಂಚಗವ್ಯ, ಜೀವಾಮೃತ ಹಾಗೂ ಬೀಜಾಮೃತದಂತಹ ಸಾವಯವ ಕೃಷಿ ಪರಿಕರಗಳನ್ನು ಬಳಸುವುದರಿಂದ ಕೃಷಿ ವೆಚ್ಚ ಗಣನೀಯವಾಗಿ ತಗ್ಗಿಸಬಹುದು ಎಂದರು.

ಕೃಷಿ ಅಧಿಕಾರಿ ಬಸವರಾಜ, ರೈತ ಸಂಪರ್ಕ ಕೇಂದ್ರದ ಅಧಿಕಾರಿ ಡಾ.ಅರುಣಾ ಮಾತನಾಡಿದರು.

ಈ ವೇಳೆ ಸಹಾಯಕ ಕೃಷಿ ನಿರ್ದೇಶಕ ಗರ್ಜಪ್ಪ, ಅಧಿಕಾರಿಗಳಾದ ದಯಾನಂದ, ಉಮೇಶ, ಕೃಷಿ ಅಧಿಕಾರಿ ಯೇಸುಬಾಬು, ಆತ್ಮ ಸಂಸ್ಥೆಯ ಸಿಬ್ಬಂದಿಗಳಾದ ಕವಿತಾ, ರೇಣುಕಾರಾಧ್ಯ, ರೈತರಾದ ಆದಿನಾರಾಯಣ ರೆಡ್ಡಿ, ಶಂಕರ ಗೌಡ, ಜೆ. ನಾರಾಯಣ ರೆಡ್ಡಿ, ರೇವಣಸಿದ್ಧಯ್ಯ ಸ್ವಾಮಿ, ಮಾಣಿಕ್ಯ ರೆಡ್ಡಿ ಹಾಗೂ ಸ್ಥಳೀಯ ಕೃಷಿ ಸಖಿಯರು ಉಪಸ್ಥಿತರಿದ್ದರು.

ದಮ್ಮೂರು ಮತ್ತು ಕೋಳೂರು ಗ್ರಾಮದ ನೂರಾರು ಪ್ರಗತಿಪರ ರೈತರು ಭಾಗವಹಿಸಿ, ಕೃಷಿ ತಜ್ಞರಿಂದ ಸೂಕ್ತ ಮಾಹಿತಿ, ಮಾರ್ಗದರ್ಶನ ಪಡೆದರು.



ಟಾಸ್ಕ್‌ಫೋರ್ಸ್ ಸಮಿತಿ ದಾಳಿ: 5 ಮಕ್ಕಳ ರಕ್ಷಣೆ

ಬಳ್ಳಾರಿ: ನಗರದ ವಿವಿಧ ರಸ್ತೆಗಳು ಹಾಗೂ ಅಂಗಡಿ ಮುಂಗಟ್ಟುಗಳ ಮೇಲೆ ಸೋಮವಾರ ಟಾಸ್ಕ್‌ಫೋರ್ಸ್ ಸಮಿತಿ ಅಧಿಕಾರಿಗಳು ಜಂಟಿಯಾಗಿ ಆಕಸ್ಮಿಕ ದಾಳಿ ನಡೆಸಿ, ಒಟ್ಟು ಐದು ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕರನ್ನು ರಕ್ಷಿಸಲಾಗಿದೆ.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ಬಾಲಕಾರ್ಮಿಕ ಯೋಜನೆ, ಕಂದಾಯ ಇಲಾಖೆ, ಕಾರ್ಮಿಕ ಇಲಾಖೆ, ಶಿಕ್ಷಣ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಪೊಲೀಸ್ ಇಲಾಖೆ ಹಾಗೂ ಚೈಲ್ಡ್ ಲೈನ್ ಸಂಘಟನೆ ಜಂಟಿ ಸಹಯೋಗದೊಂದಿಗೆ ಈ ಕಾರ್ಯಾಚರಣೆ ಕೈಗೊಳ್ಳಲಾಗಿತ್ತು.

ಬಳ್ಳಾರಿ ನಗರದ ಪ್ರಮುಖ ವಲಯಗಳಾದ ಸಂಗಮ್ ಸರ್ಕಲ್, ರಾಧಿಕಾ ಟಾಕೀಸ್ ರಸ್ತೆ, ವಡ್ಡರ ಬಂಡೆ ಏರಿಯಾ, ಕಣೇಕಲ್ ಬಸ್ ನಿಲ್ದಾಣ ಹಾಗೂ ಆಂದ್ರಾಳ ಭಾಗಗಳಲ್ಲಿರುವ ಪಂಚರ್ ಶಾಪ್, ಟಿಂಕರಿಂಗ್ ಶಾಪ್, ಗ್ಯಾರೇಜ್, ವುಡ್ ವರ್ಕ್ಸ್ ಮತ್ತು ಮೆಕ್ಯಾನಿಕ್ ಶಾಪ್‌ಗಳ ಮೇಲೆ ಅಧಿಕಾರಿಗಳ ತಂಡ ದಾಳಿ ನಡೆಸಿತು. ತಾಲೂಕು ಮಟ್ಟದ ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಕಾಯ್ದೆ 1986ರ ಅಡಿಯಲ್ಲಿ ನೇಮಕವಾಗಿರುವ ನಿರೀಕ್ಷಕರ ಟಾಸ್ಕ್ ಫೋರ್ಸ್ ಸಮಿತಿ ನೇತೃತ್ವದಲ್ಲಿ ಈ ಕ್ರಮ ಜರುಗಿಸಲಾಗಿದೆ. ದಾಳಿಯ ವೇಳೆ ಕೆಲಸದಲ್ಲಿ ತೊಡಗಿದ್ದ ಐದು ಮಕ್ಕಳನ್ನು ರಕ್ಷಿಸಿ, ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರುಪಡಿಸಲಾಗಿದೆ. ಮಕ್ಕಳ ವಯಸ್ಸಿನ ಅಧಿಕೃತ ದಾಖಲಾತಿ ಪರಿಶೀಲಿಸಿದ ನಂತರ, ಬಾಲಕಾರ್ಮಿಕರನ್ನು ಕೆಲಸಕ್ಕೆ ಇಟ್ಟುಕೊಂಡಿದ್ದ ಮಾಲೀಕರ ವಿರುದ್ಧ ಆಯಾ ವ್ಯಾಪ್ತಿಯ ಪೊಲೀಸ್ ಠಾಣೆಗಳಲ್ಲಿ ಕಾಯ್ದೆಯನ್ವಯ ಪ್ರಕರಣ ದಾಖಲಿಸಲು ಕ್ರಮ ಕೈಗೊಳ್ಳಲಾಗಿದೆ. ಈ ವೇಳೆ ಅಂಗಡಿ ಮತ್ತು ಉದ್ದಿಮೆಗಳ ಮಾಲೀಕರಿಗೆ ಬಾಲಕಾರ್ಮಿಕರನ್ನು ನೇಮಿಸಿಕೊಳ್ಳದಂತೆ ಎಚ್ಚರಿಕೆ ನೀಡಿ, ಜಾಗೃತಿ ಪೋಸ್ಟರ್‌ಗಳನ್ನು ವಿತರಿಸಲಾಯಿತು.

ಈ ಕಾರ್ಯಾಚರಣೆಯಲ್ಲಿ ಉಪ ತಹಶೀಲ್ದಾರ್ ಮಂಜುನಾಥ, ಕಾರ್ಮಿಕ ನಿರೀಕ್ಷಕ (2ನೇ ವೃತ್ತ) ರಮೇಶ, ಜಿಲ್ಲಾ ಬಾಲಕಾರ್ಮಿಕ ಯೋಜನೆಯ ಯೋಜನಾ ನಿರ್ದೇಶಕ ಎ.ಮೌನೇಶ, ಎಸ್.ಜೆ.ಪಿ.ಯು ನ ಲಲಿತಮ್ಮ, ಮಕ್ಕಳ ರಕ್ಷಣಾಧಿಕಾರಿಗಳಾದ ವಲಿಬಾಷಾ ಮತ್ತು ಹೊನ್ನೂರಪ್ಪ, ಕಂದಾಯ ಇಲಾಖೆಯ ಆಡಳಿತಾಧಿಕಾರಿ ಮಧುಸೂದನ್, ಆರೋಗ್ಯ ಇಲಾಖೆಯ ಮುಸ್ತಾಖ್ ಅಹಮ್ಮದ್, ಚೈಲ್ಡ್‌ಲೈನ್ ಸಿಬ್ಬಂದಿ ಸುಶೀಲ ಹಾಗೂ ರೀಚ್ ಸಂಸ್ಥೆ ಹನುಮಂತಪ್ಪ ಇತರರಿದ್ದರು.



ಒತ್ತಡದ ಬದುಕಿನಿಂದ ದೂರವಿರಲು ಯೋಗಾಭ್ಯಾಸ ಸಹಾಯಕ

ಕೊಟ್ಟೂರು: ಸರ್ಕಾರಿ ಪದವಿ ಪೂರ್ವ ಕಾಲೇಜ್ ಕೊಟ್ಟೂರು ಹಾಗೂ ರಾಷ್ಟ್ರೀಯ ಸೇವಾ ಯೋಜನೆ ಘಟಕದ ವತಿಯಿಂದ ಕಾಲೇಜಿನ ಸಭಾಂಗಣದಲ್ಲಿ ವಿಶ್ವ ಯೋಗ ದಿನಾಚರಣೆಯನ್ನು ಆಚರಿಸಲಾಯಿತು. ಪತಂಜಲಿಯ ಯೋಗ ಸಮಿತಿಯ ಅಧ್ಯಕ್ಷ ರಾಮಣ್ಣನವರು ಮತ್ತು ಕಾಲೇಜಿನ ಅಭಿವೃದ್ಧಿ ಸಮಿತಿ ಸದಸ್ಯ ಪ್ರಕಾಶ ಕಾಲೇಜಿನ ವಿದ್ಯಾರ್ಥಿಗಳಿಗೆ ಯೋಗಭ್ಯಾಸ ಮಾಡಿಸಿದರು.

ಯೋಗಪಟು ರಾಮಣ್ಣನವರು ಮಾತನಾಡಿ, ಯೋಗ ಪ್ರತಿಯೊಬ್ಬರ ಜೀವನಾಡಿ ಪ್ರತಿಯೊಬ್ಬರು ಬದುಕಿನಲ್ಲಿ ಒತ್ತಡದ ಬದುಕಿನಿಂದ ದೂರವಿರಬೇಕಾದರೆ ಯೋಗ ನಿರಂತರ ಅಭ್ಯಾಸ ಮಾಡಬೇಕು ಎಂದರು.

ಪ್ರಾಚಾರ್ಯ ಡಾ.ಜಿ.ಸೋಮಶೇಖರಪ್ಪ ಮಾತನಾಡಿ, ಪ್ರತಿಯೊಬ್ಬರು ಆರೋಗ್ಯ ಪೂರ್ಣ ಜೀವನ ನಡೆಸಬೇಕಾದರೆ ದೈನಂದಿನ ಬದುಕಿನಲ್ಲಿ ಯೋಗ ಅವಶ್ಯಕ ಎಂದು ತಿಳಿಸಿದರು.

ಪ್ರಾಚೀನ ಭಾರತೀಯ ಅಭ್ಯಾಸವಾದ ಯೋಗ ವೈಯಕ್ತಿಕ ಆರೋಗ್ಯ ಮತ್ತು ಸಮತೋಲಿತ ಜೀವನವನ್ನು ಕಾಯ್ದುಕೊಳ್ಳಲು ಸಹಾಯ ಮಾಡುತ್ತದೆ ಹಾಗೂ ಮಾನಸಿಕ ಆರೋಗ್ಯದ ಮೂಲಕ ದೈಹಿಕ ಸಾಮರ್ಥ್ಯವನ್ನು ಸದೃಢ ಪಡಿಸುತ್ತದೆ ಎಂದು ತಿಳಿಸಿದರು.

ರಾಷ್ಟ್ರೀಯ ಸೇವಾ ಯೋಜನೆ ಘಟಕದ ಕಾರ್ಯಕ್ರಮದ ಅಧಿಕಾರಿ ಅಂಜಿನಪ್ಪ ಡಿ ಇವರು ಮಾತನಾಡಿ, ಇಂದಿನ ಯುವ ಪೀಳಿಗೆಗೆ ಯೋಗ ಶಿಕ್ಷಣ ಅತ್ಯವಶ್ಯಕವಾಗಿದ್ದು, ಪ್ರತಿಯೊಬ್ಬರು ಜೀವನದಲ್ಲಿ ಆರೋಗ್ಯ ಪೂರ್ಣವಾಗಿ ಬದುಕಬೇಕೆಂದರೆಯೋಗ ಅತ್ಯವಶ್ಯಕ, ಯೋಗದ ಮುಖಾಂತರವೇ ಭಾರತ ದೇಶ ವಿಶ್ವಕ್ಕೆ ಶಾಂತಿ ಸಂದೇಶ ನೀಡಿದೆ ಎಂದರು.

ಉಪನ್ಯಾಸಕರಾದ ಜಿ.ಶಿವರಾಜ, ಎಚ್.ಎಂ.ನಾಗಯ್ಯ, ಗುರಪ್ಪ ನಾಯಕ್, ಸಕ್ರಪ್ಪ ರಡ್ಡಿ ಇತರರಿದ್ದರು.



ಶಿವಛತ್ರಪತಿ ಚೇತನಾ ಯಾತ್ರೆ ಆ.17ಕ್ಕೆ

ಬೀದರ್: ಆಗಸ್ಟ್ 17ರಂದು ಉತ್ತರ ಪ್ರದೇಶದ ಆಗ್ರಾದಲ್ಲಿ ಅಲ್ಲಿಯ ಎಂ.ಜಿ ರಸ್ತೆಯಲ್ಲಿರುವ ಸುರಸದನದಲ್ಲಿ ವಿಶ್ವಭೂಷಣ ರಾಜೆ ಶಿವಛತ್ರಪತಿ ಚೇತನ ಯಾತ್ರೆ ಹಾಗೂ ವಿಶ್ವಗುರು ಬಸವದರ್ಶನ ಸಮಾವೇಶ ಜರುಗಲಿದೆ ಎಂದು ಕಾರ್ಯಕ್ರಮದ ಪ್ರಮುಖ ಸಂಘಟಕರು ಹಾಗೂ ವಿಶ್ವಭೂಷಣರಾಜೆ ಶಿವಛತ್ರಪತಿ ವಿಶೇಷ ಪರಿಷತ್‌ನ ಮುಖ್ಯ ವಕ್ತಾರ ಜನಾರ್ಧನ ಪಾಟೀಲ ತಿಳಿಸಿದರು.

ಶನಿವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ತಾನು ಈಗಾಗಲೇ 7 ರಾಜ್ಯಗಳನ್ನು ಸಂಚರಿಸಿ ಛತ್ರಪತಿ ಶಿವಾಜಿ ಮಹಾರಾಜರ ಪ್ರಚಾರ ಹಾಗೂ ಪ್ರಸಾರ ಕಾರ್ಯ ಕೈಗೊಳ್ಳಲಾಗಿದೆ. ಜುಲೈ ಅಂತ್ಯದ ವರೆಗೆ ಇನ್ನು ಅನೇಕ ರಾಜ್ಯಗಳನ್ನು ಸಂಚರಿಸಿ ಅಲ್ಲಿ ಅಲ್ಲಿ ಶಿವಾಜಿ ಮಹಾರಾಜರ ತ್ಯಾಗಮಯ ವಿಚಾರಗಳನ್ನು ಪರಿಚಯಿಸಲಾಗುತ್ತದೆ. ವಿಶೇಷವಾಗಿ ಅವರು ಸ್ಥಾಪಿಸಿದ ಹಿಂದವಿ ಸ್ವರಾಜ್ಯ ಸ್ಥಾಪನಾ ವಿಷಯವನ್ನು ಯುವ ಸಮೂಹಕ್ಕೆ ಪರಿಚಯಿಸಿ ಅವರಲ್ಲಿ ದೇಶಪ್ರೇಮ ಹಾಗೂ ಮಹಾತ್ಮರ ಬಗ್ಗೆ ಗೌರವ ಹೆಚ್ಚಿಸುವ ಮೂಲ ಉದ್ದೇಶ ಹೊಂದಿದ್ದೇವೆ ಎಂದರು.ಇದು ಸಂಪೂರ್ಣ ರಾಜಕೀಯ ರಹಿತ ಕಾರ್ಯಕ್ರಮ ಆಗಿರುತ್ತದೆ. ಕೇವಲ ದೇಶದ ಬುದ್ಧಿಜೀವಿಗಳಿಗೆ ಇಲ್ಲಿ ಆಹ್ವಾನ ಇರುತ್ತದೆ. ಜಾತಿ, ಮತ, ಪಂಥ, ಪಂಗಡ ಎಂಬ ಭೇದ ಭಾವ ಇರದೆ ಎಲ್ಲ ಜನಾಂಗದವರಿಗೆ ಇಲ್ಲಿ ಮುಕ್ತ ಅವಕಾಶ ಇರುತ್ತದೆ ಎಂದರು. ವಿಧಾನ ಪರಿಷತ್ ಸದಸ್ಯರಾದ ಎಂ.ಜಿ ಮುಳೆ, ಮರಾಠಾ ಸಮಾಜದ ಪ್ರಮುಖರಾದ ವೆಂಕಟ ಮೆಯಿಂದೆ, ಲಿಂಗಾಯತ ಸಮಾಜದ ಮುಖಂಡರಾದ ಚಂದ್ರಶೇಖರ ಹೆಬ್ಬಾಳೆ ಮಾತನಾಡಿದರು. ಜೈರಾಜ ಖಂಡ್ರೆ, ಕಂಟೆಪ್ಪ ಗಂದಿಗುಡೆ ಹಾಗೂ ಇತರರು ಇದ್ದರು.



ಸಮಸ್ಯೆಗಳ ಪರಿಹಾರಕ್ಕೆ ಅಗತ್ಯ ಕ್ರಮ ಕೈಗೊಳ್ಳಿ: ಪ್ರಭು

ಬೀದರ: ಪ್ರಧಾನಿ ನರೇಂದ್ರ ಮೋದಿಯವರು ದೇಶದ ಅತೀ ಹೆಚ್ಚುಕಾಲ ಸೇವೆ ಸಲ್ಲಿಸಿದ ಚುನಾಯಿತ ಪ್ರಧಾನಿಯಾಗಿ ಹೊಸ ದಾಖಲೆ ನಿರ್ಮಿಸಿರುವ ಹಿನ್ನೆಲೆಯಲ್ಲಿ, ಮಾಜಿ ಸಚಿವರು ಹಾಗೂ ಶಾಸಕ ಪ್ರಭು ಬಿ.ಚವ್ಹಾಣ ರಾಮುನಾಯಕ ತಾಂಡಾ ಬೋಂತಿಯಲ್ಲಿ ಇತ್ತೀಚಿಗೆ ಗ್ರಾಮ ವಾಸ್ತವ್ಯ ನಡೆಸಿದರು.

ಸಂಜೆ ವೇಳೆ ಗ್ರಾಮಕ್ಕೆ ಭೇಟಿ ನೀಡಿದ ಶಾಸಕರು, ಮನೆಯೊಂದರ ಮುಂದೆ ಹೊರಸಿನ ಮೇಲೆ ಕುಳಿತು ಜನರ ಸಮಸ್ಯೆಗಳನ್ನು ಆಲಿಸಿದರು. ಸ್ಥಳೀಯರು ಒಬ್ಬೊಬ್ಬರಾಗಿ ಗ್ರಾಮದ ಸಮಸ್ಯೆಗಳು ಹಾಗೂ ಕೈಗೊಳ್ಳಬೇಕಾದ ಅಭಿವೃದ್ಧಿ ಕಾಮಗಾರಿಗಳ ಕುರಿತು ಶಾಸಕರ ಗಮನಕ್ಕೆ ತಂದರು. ಕುಡಿಯುವ ನೀರಿನ ಪೂರೈಕೆಯಾಗುತ್ತಿದೆಯೇ?, ಶಾಲೆಗೆ ಶಿಕ್ಷಕರು ಸಮಯಕ್ಕೆ ಬರುತ್ತಿದ್ದಾರೆಯೇ?, ಸರಿಯಾಗಿ ಪಾಠ ಮಾಡುತ್ತಿದ್ದಾರೆಯೇ?, ಅಂಗನವಾಡಿ ಕೇಂದ್ರ ಸರಿಯಾಗಿ ನಡೆಯುತ್ತಿದೆಯೇ? ಎಂದು ನಾನಾ ರೀತಿಯ ಪ್ರಶ್ನೆಗಳನ್ನು ಕೇಳುವ ಮೂಲಕ ಗ್ರಾಮದಲ್ಲಿರುವ ಮೂಲ ಸೌಕರ್ಯಗಳ ಬಗ್ಗೆ ಮಾಹಿತಿ ಪಡೆದರು. ಗ್ರಾಮಸ್ಥರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರವಾಣಿ ಮೂಲಕ ಸಂಪರ್ಕಿಸಿ, ಸಮಸ್ಯೆಗಳ ಪರಿಹಾರಕ್ಕೆ ಅಗತ್ಯ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿದರು.

ಈ ವೇಳೆ ತಾಂಡಾವನ್ನು ಕಂದಾಯ ಗ್ರಾಮವನ್ನಾಗಿ ಘೋಷಿಸುವಂತೆ ಸ್ಥಳೀಯರು ಮನವಿ ಸಲ್ಲಿಸಿದರು. ಇದಕ್ಕೆ ಸ್ಪಂದಿಸಿದ ಶಾಸಕ ಪ್ರಭು ಚವ್ಹಾಣ ಅವರು, ಕ್ಷೇತ್ರದ ಹಲವು ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡುವ ಕಾರ್ಯ ಈಗಾಗಲೇ ಪ್ರಗತಿಯಲ್ಲಿದ್ದು, ಮುಂದಿನ ದಿನಗಳಲ್ಲಿ ರಾಮುನಾಯಕತಾಂಡಾವನ್ನೂ ಕಂದಾಯ ಗ್ರಾಮವನ್ನಾಗಿ ಪರಿವರ್ತಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಈ ವೇಳೆ ತಹಸೀಲ್ದಾರರಾದ ಮಹೇಶ ಪಾಟೀಲ, ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಕಿರಣ ಪಾಟೀಲ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಮುಖಂಡರು, ಗ್ರಾಮ ಪಂಚಾಯಿತಿ ಪ್ರತಿನಿಧಿಗಳು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು. ನಂತರ ಹಿರಿಯರಾದ ದೇವು ನಾಯಕ ಅವರ ಮನೆಯಲ್ಲಿ ವಾಸ್ತವ್ಯ ಮಾಡಿದರು.



ಎಸ್‌ಐಆರ್ ಕುರಿತು ವಿದ್ಯಾರ್ಥಿಗಳಿಗೆ ಜಾಗೃತಿ

ಬಳ್ಳಾರಿ: ನಗರದ ಸರಳಾದೇವಿ ಸತೀಶ್ಚಂದ್ರ ಅಗರವಾಲ್ ಸರ್ಕಾರಿ ಪ್ರಥಮ ದರ್ಜೆ (ಸ್ವಾಯತ್ತ) ಕಾಲೇಜಿನಲ್ಲಿ ಮಂಗಳವಾರ ವಿದ್ಯಾರ್ಥಿಗಳಿಗಾಗಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ 'ಎಸ್‌ಐಆರ್' ಕುರಿತು ವಿಶೇಷ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಇತಿಹಾಸ ವಿಭಾಗದ ಸಹಾಯಕ ಪ್ರಾಧ್ಯಾಪಕ ಕೆ.ಬಸಪ್ಪ ಅವರು ಮಾತನಾಡಿ, ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸಲು ಪ್ರತಿಯೊಬ್ಬ ಅರ್ಹ ಯುವಕ-ಯುವತಿಯರು ಮತದಾರರ ಪಟ್ಟಿಗೆ ಹೆಸರು ನೋಂದಾಯಿಸಿಕೊಳ್ಳುವುದು ಅತ್ಯಗತ್ಯ ಎಂದರು.

18 ವರ್ಷ ತುಂಬುವ ಎಲ್ಲ ಪದವಿ ವಿದ್ಯಾರ್ಥಿಗಳು ಮತದಾರರ ಪಟ್ಟಿಗೆ ಹೆಸರು ಸೇರಿಸಲು ಮುಂಗಡವಾಗಿ ಅರ್ಜಿ ಸಲ್ಲಿಸಬಹುದು. ವಿದ್ಯಾರ್ಥಿಗಳು ಕಚೇರಿಗಳಿಗೆ ಅಲೆಯುವ ಅಗತ್ಯವಿಲ್ಲದೆ, ತಮ್ಮ ಮೊಬೈಲ್ ಮೂಲಕವೇ 'ವೋಟರ್ ಹೆಲ್ಪ್ ಲೈನ್' ಆ್ಯಪ್ ಅಥವಾ ರಾಷ್ಟ್ರೀಯ ಮತದಾರರ ಸೇವಾ ಪೋರ್ಟಲ್ ವೆಬ್‌ಸೈಟ್ ಬಳಸಿ ಸುಲಭವಾಗಿ ಹೆಸರು ನೋಂದಾಯಿಸಿ ಕೊಳ್ಳಬಹುದು ಎಂದರು.

ಈ ವೇಳೆ ಅತಿಥಿ ಉಪನ್ಯಾಸಕ ಡಾ.ತಿರುಮಲ ಅವರು ವಿದ್ಯಾರ್ಥಿಗಳಿಗೆ ಅಗತ್ಯ ಮಾರ್ಗದರ್ಶನ ನೀಡಿದರು. ಈ ವೇಳೆ ಕಾಲೇಜಿನ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಈ ಜಾಗೃತಿ ಅಭಿಯಾನದಲ್ಲಿ ಭಾಗವಹಿಸಿದ್ದರು.



ಮೊಹರಂ ಶಾಂತಿ ಸೌಹಾರ್ದತೆಯಿಂದ ಆಚರಿಸಿ



ಕುರುಗೋಡು: ಠಾಣೆ ಆವರಣದಲ್ಲಿ ಪಟ್ಟಣದ ಹಾಗೂ ಗ್ರಾಮೀಣ ಪ್ರದೇಶದ ಹಿಂದೂ ಮುಸ್ಲಿಂ ಮುಖಂಡರು ಹಾಗೂ ಯುವ ಮುಖಂಡರ ಸಮುಖದಲ್ಲಿ ಮೊಹರಂ ಹಬ್ಬದ ಅಂಗವಾಗಿ ಶಾಂತಿ ಸಭೆ ಜರುಗಿತು.

ಸಭೆಯಲ್ಲಿ ಮಾತನಾಡಿದ ಡಿವೈಎಸ್ಪಿ ಪ್ರಸಾದಗೋಖಲೆ ಅವರು ಹಿಂದೂ-ಮುಸ್ಲಿಂ ಜನಾಂಗಕ್ಕೆ ಸೌಹಾರ್ದಕ್ಕೆ ಹೆಸರುವಾಸಿಯಾಗಿರುವ ಮೊಹರಂ ಹಬ್ಬವನ್ನು ಪಟ್ಟಣ ಮತ್ತು ಹಳ್ಳಿಗಳ ಎಲ್ಲ ಜನಾಂಗದ ಜನರು ಭೇದ-ಭಾವ ಇಲ್ಲದೆ ಶಾಂತಿಯುತವಾಗಿ ಆಚರಿಸಬೇಕು. ಪ್ರತಿವರ್ಷದಂತೆ ಈ ವರ್ಷವೂ ಸಹ ಮೊಹರಂ ಹಬ್ಬವನ್ನು ಶಾಂತತೆಯಿಂದ ಆಚರಣೆ ಮಾಡಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ಮೂಲಕ ಯಾವುದೇ ಗ್ರಾಮಗಳಲ್ಲಿ ಅಹಿತಕರ ಘಟನೆ ಸಂಭವಿಸದಂತೆ ಶಾಂತ ರೀತಿಯಲ್ಲಿ ನಡೆದುಕೊಂಡು ಮೊಹರಂ ಆಚರಣೆ ಮಾಡುವಂತೆ ಜನತೆಗೆ ತಿಳಿಸಿ ಹೇಳಿದರು.

ಸಿಪಿಐ ಬಾಳನಗೌಡ ಮಾನಶೆಟ್ಟಿ ಮಾತನಾಡಿ, ನಮ್ಮ ದೇಶದಲ್ಲಿ ಹಬ್ಬಗಳು ಭಾವೈಕ್ಯತೆಯ ಸಂಕೇತವಾಗಿವೆ. ಎಲ್ಲರೂ ಸೇರಿ ಸಮಸ್ಯೆಯಾಗದಂತೆ ಹಬ್ಬವನ್ನು ಸರ್ವಧರ್ಮೀಯರು ಸೌಹಾರ್ದತೆಯಿಂದ ಆಚರಿಸಬೇಕು ಎಂದರು.

ಹಿಂದೂ-ಮುಸ್ಲಿಂ ಸೌಹಾರ್ದಕ್ಕೆ ಹೆಸರಾಗಿರುವ ಮೊಹರಂ ಹಬ್ಬವನ್ನು ಎಲ್ಲರೂ ಶಾಂತಿಯುತವಾಗಿ ಆಚರಿಸಬೇಕು' ಎಂದು ಪಿಎಸ್ಐ ಸುಪ್ರೀತ್ ವಿರುಪಕ್ಷಪ್ಪ ತಿಳಿಸಿದರು.

ಪುರಸಭೆ ಅಧ್ಯಕ್ಷ ಮಂಜುನಾಥ ಉಪಾಧ್ಯಕ್ಷರು, ಅಪರಾಧ ವಿಭಾಗದ ಪೋಲೀಸ್ ಅಧಿಕಾರಿಗಳು ಕುರುಗೋಡು ಪಟ್ಟಣದ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಹಿಂದೂ-ಮುಸ್ಲಿಂ ಸಮಾಜದ ಮುಖಂಡರು, ಯುವ ಮುಖಂಡರು ಭಾಗಿಯಾಗಿದ್ದರು.